ಅರಿವುಬರಹ

6

1994

ಅರಿವು ಬರಹ

6

1994

ಅರಿವು ಬರಹ - ಅರಿವು ಬರಹ ಟ್ರಸ್ಟ್(ರಿ.)ೀನಿಂದ ಪ್ರಕಟವಾಗುವ ಪತ್ರಿಕೆ

- ಸಂಚಿಕೆ ಬೇಕಾದವರು ವಾರ್ಷಿಕ ಹಣ ರೂ 75/- (ವೈಯಕ್ತಿಕ 1 ವರ್ಷ)ಅಥವಾ ರೂ. 200/- (ವೈಯಕ್ತಿಕ 3 ವರ್ಷ) ಸಲ್ಲಿಸಿ ನೋಂದಾಯಿಸಿಕೊಳ್ಳಬಹುದು. ವಿಳಾಸಕ್ಕೆ ಈ ಪತ್ರಿಕೆಯ ಹೊದಿಕೆಯ ಹಿಂಬದಿ ನೋಡಿ. ನಿಮ್ಮ ವಿಳಾಸ ಬದಲಾದಲ್ಲಿ ದಯವಿಟ್ಟು ಕಾಗದ ಬರೆದು ತಿಳಿಸಿ.

- ಸಂಘ ಸಂಸ್ಥೆಗಳಿಗೆ - ಒಂದು ವರ್ಷ 150/-, 3 ವರ್ಷ 400/-.

- ಅರಿವು ಬರಹ ಎಡಪಂಥೀಯ ಒಲವಿನ ಲೇಖನಗಳನ್ನು ಸ್ವಾಗತಿಸುತ್ತದೆ.
ಎಲ್ಲಾ ಲೇಖನಗಳಿಗೂ ಅಡಿಟಿಪ್ಪಣಿ ಹಾಗೂ ಇತರ ನಿಬಂಧನೆಗಳಿರಬೇಕು.
ಸ್ವೀಕೃವಾದರೆ 2 ತಿಂಗಳಿನೊಳಗೆ ತಿಳಿಸಲಾಗುವುದು.
ಸ್ವೀಕೃತವಾಗದ ಲೇಖನಗಳನ್ನು ವಾಪಸ್ಸು ಪಡೆಯಲು ಸಾಕಷ್ಟು ಅಂಚೆ ಚೀಟಿ ಲಗತ್ತಿಸಿ.

- ಖಾಸಗಿ ಪ್ರಸಾರಕ್ಕಾಗಿ ಮಾತ್ರ.

ಅರಿವು ಬರಹ

6 ಅನುಕ್ರಮಣಿಕೆ 1994

ಪ್ರಸ್ತಾವನೆ

ಈ ಸಂಚಿಕೆಯಲ್ಲಿ ತೇಜಸ್ವಿನಿ ನಿರಂಜನ ಅವರು ಮಂಗಳೂರು ವಿಶ್ವವಿದ್ಯಾಲಯದ ಆಂಗ್ಲಸಾಹಿತ್ಯ ವಿಭಾಗದಲ್ಲಿ ಮಾಡಿದ ಭಾಷಣದ ತುರ್ಜುಮೆಯನ್ನು ಪ್ರಕಟಿಸುತ್ತಿದ್ದೇವೆ. ತೇಜಸ್ವಿನಿ ನಿರಂಜನ ಅವರು ಅಂದು ಸ್ತ್ರೀವಾದದ ಬಗ್ಗೆ ಮಾತನಾಡಿದರು. ಸ್ತ್ರೀವಾದದ ಬಗ್ಗೆ ನಿರಂಜನರು ತಿಳುವಳಿಕೆಯಿಂದ ಮಾತನಾಡಬಲ್ಲವರಾದರೂ ಅವರ ಈ ಭಾಷಣ ಲಘುವಾದದ್ದು. ಆದರೂ ಅದನ್ನು ಪ್ರಕಟಿಸಲು ಕೆಲವು ಕಾರಣಗಳಿವೆ.

ಕನ್ನಡಕ್ಕೆ ಇತ್ತೀಚೆಗೆ ಬರುತ್ತಿರುವ ತಾತ್ತ್ವಿಕ ನಿಲುವುಗಳಲ್ಲಿ ಸ್ತ್ರೀವಾದ ಹಾಗೂ ಪೂರ್ವ-ಪಶ್ಚಿಮ ಸಂಬಂಧ ಮುಖ್ಯವಾದವು. ಎಡಪಂಥೀಯ ನಿಲುವುಗಳಿಗೆ ಸಹಾನುಭೂತಿ ತೋರುವ *ಅರಿವುಬರಹ* ಸ್ತ್ರೀವಾದವನ್ನು ಸ್ವಾಭಾವಿಕವಾಗಿಯೇ ಸ್ವಾಗತಿಸುತ್ತದೆ ಎಂದು ಪ್ರತ್ಯೇಕ ಹೇಳುವ ಅಗತ್ಯವಿಲ್ಲ. ಆದ್ದರಿಂದ ಸ್ತ್ರೀವಾದದಂಥ ಹೊಸ ತಿಳುವಳಿಕೆಗಳು ನಮ್ಮಲ್ಲಿ ಸರಿಯಾಗಿ ಚಿಗುರುವಂತೆ ನೋಡಿಕೊಳ್ಳುವ ಅಗತ್ಯ ಅರಿವುಬರಹಕ್ಕಿದೆ. ಏಕೆಂದರೆ ಸ್ತ್ರೀವಾದ, ಪರಿಸರವಾದ ಮುಂತಾದ ಪುರೋಗಾಮಿ ಬೆಳವಣಿಗೆಗಳನ್ನು ಒಳಹಾಕಿಕೊಳ್ಳುವ ಹಣಾಹಣಿ ಸದಾ ನಡೆಯುತ್ತಿರುತ್ತದೆ. ಬಂಡವಾಳಶಾಹಿ ಹಾಗೂ ಅದರ ವಕ್ತಾರರು ಜನಪ್ರಿಯ ಪುರೋಗಾಮಿ ನಿಲುವುಗಳನ್ನು ದರೋಡೆ ಹೊಡೆಯುವ ಅವಕಾಶವನ್ನು ಎಂದಿಗೂ ಕಳೆದುಕೊಳ್ಳುವುದಿಲ್ಲ.

ಉದಾಹರಣೆಗೆ ಮೇಲೆ ಹೇಳಿದ ಸ್ತ್ರೀವಾದ ಹಾಗೂ ಪೂರ್ವ – ಪಶ್ಚಿಮ ಸಂಬಂಧಗಳನ್ನೇ ತೆಗೆದುಕೊಳ್ಳಿ. "ಪರಂಪರೆ" ರೋಗದಿಂದ ಬಳಲುವ ನಮ್ಮದ ಬರಹಗಾರರು ಈ ತಾತ್ವಿಕ ನಿಲುವುಗಳನ್ನು ಬಳಸಿಕೊಳ್ಳುವ ರೀತಿನೀತಿಗಳು ಬಹಳ ಕುತೂಹಲಕಾರಿಯಾದವು. ಸ್ತ್ರೀವಾದವನ್ನು ಆಂಶಿಕವಾಗಿ ಪರಿಗಣಿಸಿ ಅದು ಹೇಳುವ ವಿಷಯಗಳು ಅಕ್ಕಮಹಾದೇವಿ ಅಥವ ಅಂಥ ಮಧ್ಯಕಾಲೀನ ಬರಹಗಾರರಲ್ಲಿ ಇದೆ ಎಂದು ನಮ್ಮದಿಂದ ಬರುವ ಬರಹಗಾರರು ಕೊನೆಗೂ ತಮ್ಮದೇ "ಪರಂಪರೆ"ಯನ್ನು ಬೆಳೆಸಿಕೊಳ್ಳುತ್ತಾರೆ. ಅಕ್ಕಮಹಾದೇವಿ ಬಹಳ ಕ್ರಾಂತಿಕಾರಿ ನಿಲುವನ್ನು ಪ್ರತಿಪಾದಿಸುತ್ತಾಳೆ ಎಂದೇ ಇಟ್ಟುಕೊಳ್ಳೋಣ ಅಥವಾ ಅವಳು ಆಧುನಿಕ ಸ್ತ್ರೀವಾದಿಗಳು ಹೇಳುವ ವಿಷಯಗಳನ್ನು ಕೆಲವು ಕಡೆ ಹೇಳುತ್ತಾಳೆ ಎಂದೇ ಇಟ್ಟುಕೊಳ್ಳೋಣ. ಆದರೆ ಮುಖ್ಯ ವಿಷಯ ಅದಲ್ಲ. ಅಕ್ಕ ಮಹಾದೇವಿಯನ್ನು ನಾವು ಹೇಗೆ ಗ್ರಹಿಸುತ್ತೇವೆ ಎನ್ನುವುದು ಇಲ್ಲಿ ಮುಖ್ಯ ಪ್ರಶ್ನೆ. ಸ್ತ್ರೀವಾದದ ಎಳೆ ನಮ್ಮ "ಪರಂಪರೆ"ಯಲ್ಲಿಯೂ ಇದೆ ಎಂದು ಪುರುಷಪ್ರಧಾನ, ವೈದಿಕ ಪರಂಪರೆಯನ್ನು ಬಿಗಿಗೊಳಿಸಲು ನಾವು ಅಕ್ಕಮಹಾದೇವಿಯನ್ನು ಬಳಸಿಕೊಳ್ಳುತ್ತೇವೆಯೋ? ಅಥವಾ ಅಕ್ಕಮಹಾದೇವಿಯಂಥವರೂ ಪುರುಷಪ್ರಧಾನ, ವೈದಿಕ ಪರಂಪರೆಯ ಭಾರದಡಿ ಹೇಗೆ "ಹೊಂದಿಕೊಳ್ಳುತ್ತಾರೆ" ಎಂದು ಕಂಡುಕೊಳ್ಳುತ್ತೇವೆಯೋ?

"ಪರಂಪರೆ"ಯ ಪ್ರಶ್ನೆ ನಮ್ಮನ್ನು ಪೂರ್ವ – ಪಶ್ಚಿಮಗಳ ಸಂಬಂಧದ ಪ್ರಶ್ನೆಗೂ ತಲುಪಿಸುತ್ತದೆ. 1977ರಲ್ಲಿ ಪ್ರಕಟಗೊಂಡ ಎಡ್ವರ್ಡ್ ಸೈಯೀದ್‌ನ ಪುಸ್ತಕ *ಓರಿಯಂಟಲಿಸಂ* ಪೂರ್ವ-ಪಶ್ಚಿಮಗಳ ಸಂಬಂಧದ ಬಗ್ಗೆ ಮೂಲಭೂತ ಪ್ರಶ್ನೆಗಳನ್ನು ಕೇಳುತ್ತದೆ. ಸೈಯೀದ್ ಪಾಲೇಸ್ತೀನ್‌ನಲ್ಲಿ ಹುಟ್ಟಿ ಅಮೇರಿಕಾದಲ್ಲಿ ಜೀವಿಸುವ ಇಸ್ಲಾಂ ಮತದವನು. ಇವನು ಫ್ರೆಂಚ್ ಬರಹಗಾರ ಮಿಷೆಲ್ ಫ್ರುಕೂ ಮತ್ತು ಇಂಗ್ಲೆಂಡಿನ ರೇಮಂಡ್ ವಿಲ್ಲಿಯಮ್ಸ್‌ರ ನಿಲುವುಗಳನ್ನು ಬಳಸಿ ಕೆಲವು ಸ್ವಾರಸ್ಯಕರ ನಿಲುವುಗಳನ್ನು ಪ್ರತಿಪಾದಿಸುತ್ತಾನೆ. ಸೈಯೀದ್‌ನ ಪ್ರಕಾರ ಪಾಶ್ಚಾತ್ಯರು ಪೌರಾತ್ಯ ದೇಶಗಳನ್ನು ಸಮುದ್ರದ ಮೂಲಕ ಹುಡುಕಿದ್ದು ಮಾತ್ರವಲ್ಲ, ನಂತರದ ಶತಮಾನಗಳಲ್ಲಿ ಅವರು "ಪೂರ್ವ"ವನ್ನು ನಿರ್ದಿಷ್ಟ ರೀತಿಗಳಲ್ಲಿ "ರಚಿಸಿದರು" ಕೂಡ. ಹೀಗೆ ತಾತ್ತ್ವಿಕವಾಗಿ,

ಚಾರಿತ್ರಿಕವಾಗಿ, ಸಾಮಾಜಿಕವಾಗಿ "ಪೌರಾತ್ಯ"ವನ್ನು ಚಿತ್ರಿಸುವಲ್ಲಿ ಅವರು ಪೌರಾತ್ಯವನ್ನು ತಮ್ಮದೇ ವಾಸ್ತವದ "ಅನ್ಯ"ಆವೃತ್ತಿಯಾಗಿ ಕಂಡುಕೊಂಡರು: ಪಶ್ಚಿಮ "ವ್ಯಕ್ತ" ವಾದರೆ ಪೂರ್ವ "ಅವ್ಯಕ್ತ" ಹಾಗೂ ತನ್ನ ಅಭಿವ್ಯಕ್ತಿಗೆ ಪಶ್ಚಿಮದ ವಾಙ್ಮಯವನ್ನು ಅವಲಂಬಿಸಿ ಕೊಂಡಿರುವಂತದ್ದು. ಅಂದರೆ ಪೌರಾತ್ಯ ಸ್ವಪ್ರಜ್ಞೆಯಿಲ್ಲದ, ತನ್ನನ್ನು ತಾನು ಅಭಿವ್ಯಕ್ತಿಸಿಕೊಳ್ಳಲಾರದ ಒಂದು ಅನಾದಿ ಅಂಶ; ಹಾಗೆಯೇ ಪಾಶ್ಚಾತ್ಯ ಐಹಿಕ ಹಾಗೂ ಶಾಕ್ತವಾದದ್ದಾದರೆ ಪೌರಾತ್ಯ ಪರ ಮತ್ತು ಆಧ್ಯಾತ್ಮಿಕ ಅಂಶ. ಪಶ್ಚಿಮ ಚರಿತ್ರೆಯುಳ್ಳದ್ದು, ಆದ್ದರಿಂದ ಚಾರಿತ್ರಿಕ ಪ್ರಜ್ಞೆಯಿಂದ ಕೂಡಿದ್ದು; ಪೂರ್ವ ಚರಿತ್ರಾಹೀನ ಹಾಗೂ ಅನಾದಿ ಪ್ರಜ್ಞೆಯುಳ್ಳದ್ದು. ಪಶ್ಚಿಮ ನಾಗರೀಕ ಸಮಾಜ ಕಟ್ಟಿಕೊಂಡ ಸಮಾಜ; ಪೌರಾತ್ಯ ನಿರಂಕುಶ ಪ್ರಭುತ್ವದ ಹಿಂಸೆ ಹಾಗೂ ವೈಭವಗಳಿಂದ ಮೆರೆಯುವಂತದ್ದು. ಹೀಗೆ ಪಶ್ಚಿಮ, ಪೂರ್ವವನ್ನು ಕ್ರಮಬದ್ಧವಾಗಿ ಅಲ್ಲಲ್ಲಿ ವೈಭವೀಕರಿಸುತ್ತಾ, ಅಲ್ಲಲ್ಲಿ ಹೀಗಳೆಯುತ್ತ ರಚಿಸಿದೆ.

ಸಂಕ್ಷೇಪವಾಗಿ ಹೇಳುವುದಾದರೆ ಸೈಯೀದ್‌ನ ವಾದ ಇಷ್ಟು : ಬಿಳಿಯ ಮನುಷ್ಯ ಪೌರಾತ್ಯ ದೇಶಗಳನ್ನು ತಲುಪಿ ಅವುಗಳನ್ನು ತಟಸ್ಥವಾಗಿ, ವಸ್ತುನಿಷ್ಠವಾಗಿ ವಿವರಿಸಿಲ್ಲ. ಆತ ಪೌರಾತ್ಯ ದೇಶಗಳನ್ನು ತನ್ನ ವಾಙ್ಮಯದಲ್ಲಿ "ಸೃಷ್ಟಿಸಿದ್ದಾನೆ". ಪೌರಾತ್ಯ ದೇಶಗಳ ಚರಿತ್ರೆ, ಸಮಾಜಶಾಸ್ತ್ರ, ತತ್ತ್ವಶಾಸ್ತ್ರಗಳನ್ನು ಬರೆಯುವಾಗ ಬಿಳಿಯ ಮನನುಷ್ಯ ತನ್ನ ಸ್ವಂತ ತಿಳುವಳಿಕೆಯಲ್ಲಿ ತಾನು ವಸ್ತುನಿಷ್ಠವಾಗಿ "ದಾಖಲಿಸುತ್ತಿದ್ದೇನೆ" ಎಂದು ತಿಳಿಯುತ್ತಾನೆ. ಆದರೆ ನಿಜವಾಗಿಯೂ ಆತ ನಮ್ಮನ್ನು ಅವನದ್ದೇ ಆದ ತಿಳುವಳಿಕೆಗಳ ಪರಾವೃತ್ತಿ (" the other")ಯಾಗಿ ಸೃಷ್ಟಿಸುತ್ತಾನೆ.

ಇಷ್ಟರ ಮಟ್ಟಿಗಿನ ವಾದಕ್ಕೆ ಸೈಯೀದ್, ರೇಮಂಡ್ ವಿಲ್ಲಿಯಮ್ಸ್‌ನನ್ನು ಅನುಸರಿಸುತ್ತಾನೆ. ವಿಲ್ಲಿಯಮ್ಸ್‌ನು ಸಂಸ್ಕೃತಿಯನ್ನು ವಿವರಿಸುವ ಕ್ರಮ ಸೈಯೀದ್‌ನಿಗೆ ಸರಿಯೆನಿಸುತ್ತದೆ. ವಿಲ್ಲಿಯಮ್ಸ್‌ನಿಗೆ ಸಂಸ್ಕೃತಿಯೆಂದರೆ ಒಂದು ಸಂವಹನದ ಪ್ರಕ್ರಿಯೆ. ಈ ಸಂವಹನದಲ್ಲಿ ಮನುಷ್ಯ ತನ್ನ ವಾಸ್ತವವನ್ನು ಅಭಿವ್ಯಕ್ತಿಸಲು ಕಲಿಯುತ್ತಾನೆ. ವಾಸ್ತವವನ್ನು ಅಭಿವ್ಯಕ್ತಿಸುವ ಅಭ್ಯಾಸ ಕೇವಲ ತತ್ತ್ವಶಾಸ್ತ್ರೀಯ ತಾಲೀಮು ಎಂದು ವಿಲ್ಲಿಯಮ್ಸ್ ತಿಳಿಯುವುದಿಲ್ಲ. ಅವನ ಪ್ರಕಾರ ವಾಸ್ತವವನ್ನು ಅಭಿವ್ಯಕ್ತಿಸುವುದೆಂದರೆ ಅದನ್ನು ನಿರ್ದಿಷ್ಟ ರೀತಿಗಳಲ್ಲಿ ತಿಳಿದುಕೊಳ್ಳುವುದು; ನಿರ್ದಿಷ್ಟ ರೀತಿಗಳಲ್ಲಿ ತಿಳಿದುಕೊಳ್ಳುವುದೆಂದರೆ ವಾಸ್ತವವನ್ನು ನಿರ್ದಿಷ್ಟ ರೀತಿಗಳಲ್ಲಿ ಗ್ರಹಿಸಲು,"ನೋಡಲು"ಕಲಿಯುವುದೆಂದೇ ಅರ್ಥ.

ಸಂಸ್ಕೃತಿಯೆಂದರೆ ವಾಸ್ತವವನ್ನು ನಿರ್ದಿಷ್ಟ ರೀತಿಗಳಲ್ಲಿ ಗ್ರಹಿಸುವುದು; ಅದನ್ನು ಸನ್ನಿವೇಶ ನಿರ್ದಿಷ್ಟವಾಗಿ ನೋಡಲು ಕಲಿಯುವುದು; ಹೀಗೆ ಗ್ರಹಿಸಲು, ನೋಡಲು ಕಲಿತ ರೀತಿನೀತಿಗಳಿಂದ ವಾಸ್ತವವನ್ನು ಅಭಿವ್ಯಕ್ತಿಸುವುದು ಎನ್ನುವ ವ್ಯಾಖ್ಯೆಯನ್ನು ಸೈಯೀದ್ ತನ್ನ *ಓರಿಯಂಟಲಿಸಂ* ಎನ್ನುವ ಪುಸ್ತಕದಲ್ಲಿ ಪರಿಣಾಮಕಾರಿಯಾಗಿಯೂ ಬಳಸುತ್ತಾನೆ. ಈಗ ಸೈಯೀದ್ ವಾದವನ್ನು ಬೇರೆಯದೇ ರೀತಿ ಇಡಬಹುದು. ವಸಾಹತುಷಾಹಿ ನಮಗೆ ಕೊಟ್ಟಿರುವ ಐರೋಪ್ಯ ಕೇಂದ್ರೀತವಾದ ವಿದ್ಯಾಭ್ಯಾಸವು ನಮ್ಮ ಸಂಸ್ಕೃತಿಯ ಬಗ್ಗೆ ಹೇಳುವ ವಿಷಯಗಳು ಸರ್ವವಿದಿತ ಎಂದು ನಾವು ತಿಳಿಯಬೇಕಿಲ್ಲ. ಈ ವಸಾಹತುಷಾಹಿ ವಿದ್ಯೆಯ ಹಿಂದೆ ಸಾಕಷ್ಟು ವೈಯಕ್ತಿಕ ಪಾಂಡಿತ್ಯವಿರುವುದು ನಿಜ. ಆದರೆ ಈ ವೈಯಕ್ತಿಕ ಪಾಂಡಿತ್ಯಗಳೆಲ್ಲವೂ ಐರೋಪ್ಯ ಸಂಸ್ಕೃತಿಯ ವಾಸ್ತವವನ್ನು ಗ್ರಹಿಸಲು ಹಾಕಿಕೊಟ್ಟ ಗೆರೆಯ ಇತಿ-ಮಿತಿಯೊಳಗೇ ರೂಪುಗೊಂಡವು. ಅಂದರೆ ನಾವು ಕಲಿಯುವ ನಮ್ಮದೇ ಚರಿತ್ರೆ, ಸಮಾಜಶಾಸ್ತ್ರ, ತತ್ತ್ವಶಾಸ್ತ್ರಗಳೆಲ್ಲವೂ ಐರೋಪ್ಯ ಸಂಸ್ಕೃತಿಯ ಗ್ರಹೀತಗಳೊಳಗಿಂದ ಹಾದು ಬಂದವು. ಇದನ್ನು ಸ್ತ್ರೀವಾದದ ಬಗೆಗೂ ಹೇಳಬಹುದು.

ಇಷ್ಟು ಬರೆದ ಮೇಲೆ ಮುಂದುವರಿಯುವುದಕ್ಕಿಂತ ಮೊದಲು ಎರಡು ಸಂಗತಿಗಳನ್ನು ಸ್ಪಷ್ಟಪಡಿಸಬೇಕು: (1) ನಮ್ಮನ್ನು ನಾವು ಐರೋಪ್ಯ ಅಭಿವ್ಯಕ್ತಿಗಳ ಗೃಹೀತಗಳೊಳಗಿಂದ ಕಂಡುಕೊಳ್ಳುತ್ತಿದ್ದೇವೆ ಎನ್ನುವ ವಾದವೂ ನಮಗೆ ಯುರೋಪಿನಿಂದಲೇ ಬರುತ್ತಿದೆ! ಆದ್ದರಿಂದ ಸೈಯೀದ್‌ನ ಬರಹವನ್ನು ಪೂರ್ವ-ಪಶ್ಚಿಮಗಳ ನಡುವೆ ಅವುಗಳನ್ನು ಶುದ್ಧವಾಗಿ ಬೇರ್ಪಡಿಸುವಂಥ ಗೆರೆಯೆಳೆಯಲಾಗುವುದಿಲ್ಲ. (2) ಎರಡನೆಯ ಸಂಗತಿ ಅತ್ಯಂತ ಮುಖ್ಯವಾದುದು. ಅದೇನೆಂದರೆ, ನಮ್ಮ ವಾಸ್ತವವನ್ನು ನಾವು ಐರೋಪ್ಯ ಸಂಸ್ಕೃತಿಯ ಅಭಿವ್ಯಕ್ತಿಯ ಸಾಧನೆ-ಸಲಕರಣೆಗಳ ಮೂಲಕ ತಿಳಿಯಲು ಪ್ರಯತ್ನ ಪಡುತ್ತಿದ್ದೇವೆ ಎನ್ನುವ ಅರಿವು ನಮ್ಮಲ್ಲಿ ಹುಟ್ಟಿಸಬಹುದಾದ ದಿಗಿಲು ನಮ್ಮನ್ನು ಇನ್ನೊಂದು ಅತಿರೇಕದೆಡೆಗೆ ತಲುಪಿಸಲು ನಾವು ಬಿಡಬಾರದು. ನಮಗೆ ಇಷ್ಟವಿರಲಿ, ಇರದೇಯಿರಲಿ, ವಸಾಹತುಷಾಹಿ ಆಗಿಹೋದ ಹಾಗೂ ಈಗಲೂ ಆಗುತ್ತಲೇ ಇರುವ ಪ್ರಕ್ರಿಯೆ. ಈಗ ಮುಖ್ಯವಾದದ್ದೆಂದರೆ ನಾವು ಈ ಪ್ರಕ್ರಿಯೆಯನ್ನು ಜವಾಬ್ದಾರಿಯುತವಾಗಿ ಎದುರಿಸಲು, ಗ್ರಹಿಸಲು ಕಲಿಯುವುದು.

ಈ ಜವಾಬ್ದಾರಿ ಇಲ್ಲದಾಗಲೇ ನಿನ್ನೆಯ ವೈಭವಗಳ ನವ್ಯದವರ ಎಡೆಬಿಡಂಗಿತನ ನಮಗೆ ಕಂಡುಬರುತ್ತದೆ. ಬಿಡಿ ಪದ್ಯಗಳ ಶಾಬ್ದಿಕ ಗರ್ಭಗುಡಿಯಲ್ಲಿ ಅರ್ಥಗಳ ದಳಗಳನ್ನು ಕೋಮಲವಾಗಿ ಬಿಡಿಸುತ್ತಾ ಅನುಭವದ ಮೂರ್ತಿಗೆ ಪೂಜೆ ಸಲ್ಲಿಸುತ್ತಿದ್ದ ಈ ವೈದಿಕ ಮಂದಿಗೆ ಸಂಸ್ಕೃತಿಯ ನಿಜವಾದ ಪರಿಚಯ ಎಂದೂ ಇರಲಿಲ್ಲ. ಸಂಸ್ಕೃತಿಯ ಆಯಾಮವೆಲ್ಲವನ್ನೂ ಸಾಹಿತ್ಯ ಮುಖೇನವೇ ತಿಳಿಯುತ್ತೇನೆ ಎಂದು ಲೀವಸ್-ಎಲ್ಲಿಯೆಟ್‌ರ ಬಾಡಿಗೆ ಹಠವನ್ನು ಇಲ್ಲಿಯೂ ಮಾಡಿದರೆ ಪ್ರಾರಂಭದಲ್ಲೇ ನಾವು ಸೋತುಬಿಡುತ್ತೇವೆ. ಸ್ತ್ರೀವಾದದ ಸಂದರ್ಭದಲ್ಲಿ ಮಾಡಬಹುದಾದ ತಪ್ಪುಗಳಿಗಿಂತ ತೀವ್ರವಾದ ತಪ್ಪುಗಳನ್ನು ಈ "ಪದ್ಯ ಬಗೆದ" ಮಂದಿ ಪೂರ್ವ-ಪಶ್ಚಿಮ ಸಂಬಂಧಗಳ ಬಗ್ಗೆ ಈಗ ಎಸಗುತ್ತಿದ್ದಾರೆ. ಗ್ಯಾಟ್ ಮುಂತಾದವುಗಳಿಂದ ತೀವ್ರಗೊಂಡು ನಮ್ಮ ಸರ್ವಸ್ವವನ್ನೂ ಕೊಳ್ಳೆಹೊಡೆಯುತ್ತಿರುವ ವಸಾಹತುಷಾಹಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾರದ ಈ ಜನ ವಸಾಹತುಷಾಹಿ ಪೂರ್ವದಲ್ಲಿ ಇತ್ತು ಎಂದು ಇವರು ಅಂದುಕೊಳ್ಳುವ ಒಂದು ಶುದ್ಧ ಭಾರತೀಯ ಸಂಸ್ಕೃತಿಯ ಮೂಲಕ್ಕೆ ನಮ್ಮನ್ನು ಕರೆದೊಯ್ಯಲು ಪ್ರಯತ್ನ ಪಡುತ್ತಿದ್ದಾರೆ. ಐರೋಪ್ಯರು ತಮ್ಮ ವಾಙ್ಮಯದಲ್ಲಿ ನಮ್ಮ ಸಂಸ್ಕೃತಿಗಳನ್ನು ಸೃಷ್ಟಿಸಿಕೊಂಡದ್ದನ್ನೇ ನಾವು ನಮ್ಮದೆಂದು ಕೊಂಡಿದ್ದೇವೆ ಎಂಥಾದರೆ ನಂತರದ ಹೆಜ್ಜೆ ಬಹಳ ಸುಲಭದ್ದು: ಐರೋಪ್ಯ ವಾಙ್ಮಯಕ್ಕೂ ಹಿಂದೆ ಹೋಗಿ ನಮ್ಮ ಪೂರ್ವಜರ ಅಭಿವ್ಯಕ್ತಿಗಳನ್ನು ಹುಡುಕಿಕೊಳ್ಳುವುದು. ಈ ಶುದ್ಧ ಮೂಲದ ಶೋಧದಲ್ಲಿ ಸಿಗಬಹುದಾದ ಚಡ್ಡಿ ಸಂಸ್ಕೃತಿಯಲ್ಲಿ ಹರಿಜನ-ಗಿರಿಜನರಿಗೆ, ಹಿಂದುಳಿದವರು ಹಾಗೂ ಸ್ತ್ರೀಯರಿಗೆ ವಿಶೇಷ ಸ್ಥಾನಮಾನವಿರಲಿಲ್ಲ ಎನ್ನುವುದನ್ನು ನಾವು ಎಂದಿಗೂ ಮರೆಯಬಾರದು.

ಸೈಯೀದ್‌ನ *ಓರಿಯಂಟಲಿಸಂ* ಚಿಂತನೆಯಲ್ಲೂ ವಸಾಹತುಷಾಹಿ ಇದೆ ಎನ್ನುವುದನ್ನು ಒತ್ತಿ ಹೇಳುತ್ತದೆ. ಪಶ್ಚಿಮದ ಐರೋಪ್ಯ ಕೇಂದ್ರಿತ ಚಿಂತನೆ ಪೌರಾತ್ಯ ಸಂಸ್ಕೃತಿಗಳನ್ನು ತನ್ನ ಪರಾವೃತ್ತಿಯಾಗಿ ಕಾಣುವುದು ಪಾಂಡಿತ್ಯದ ದೋಷ ಮಾತ್ರವಾಗಿದ್ದರೆ ಅದನ್ನು ಸರಿಪಡಿಸುವುದು ಸುಲಭವಾಗುತ್ತಿತ್ತು. ಪೌರಾತ್ಯವಾದ-ಪೌರಾತ್ಯ ಸಂಸ್ಕೃತಿಗಳನ್ನು ಐರೋಪ್ಯ ಸಂಸ್ಕೃತಿ ಕೇಂದ್ರಿತವಾಗಿ ಅಧ್ಯಯನ ಮಾಡುವುದು - ಕೇವಲ ಪಾಂಡಿತ್ಯ ದೋಷವಲ್ಲ ಎನ್ನುವಲ್ಲಿ ಸೈಯೀದ್ ಫ್ರೆಂಚ್ ಚಿಂತಕ ಮಿಷೆಲ್ ಫುಕೂವನ್ನು ಬಳಸುತ್ತಾನೆ. ಫುಕೂವಿನ ಪ್ರಕಾರ "ಜ್ಞಾನ"ಕ್ಕೂ "ಅಧಿಕಾರ"ಕ್ಕೂ ಅನನ್ಯ ಸಂಬಂಧವಿದೆ. "ಜ್ಞಾನ" ಇದು ಸರಿ, ಇದು ಸರಿಯಲ್ಲ ಎಂದು ಒಂದು ರೀತಿಯ ವಾಸ್ತವವನ್ನು "ಅಧಿಕೃತ" ಗೊಳಿಸುತ್ತದೆ. ಈ ಅಧಿಕೃತ ವಾಸ್ತವದಿಂದ ಹೊಮ್ಮುವ "ಅಧಿಕಾರ" ಮಾತ್ರ ನಂತರ ಕಾನೂನು ಬದ್ಧ, ವಿಧಿವತ್ತಾದದ್ದು ಎಂದು ತಿಳಿಯಲ್ಪಡುತ್ತದೆ. ಹಾಗೆ ವಿಧ್ಯುಕ್ತವೆಂದು ಪರಿಗಣಿಸಲ್ಪಟ್ಟ ಅಧಿಕಾರ ಹಿಂದಿರುಗಿ ತನ್ನನ್ನು ಅಭಿಷಿಕ್ತವೆಂದು ಘೋಷಿಸಿದ ಜ್ಞಾನವನ್ನೂ, ಅದು ಉತ್ಪಾದಿಸುವ ಸಂಘಸಂಸ್ಥೆಗಳನ್ನೂ

ಪೋಷಿಸಿಕೊಂಡು ಬರುತ್ತದೆ. "ಧರ್ಮೋ ರಕ್ಷತಿ ರಕ್ಷಿತಃ"ಎನ್ನುವುದರ ಅರ್ಥ ಇಷ್ಟೇ ಅಲ್ಲವೆ! ನೀವು ವರ್ಣಧರ್ಮವನ್ನು ರಕ್ಷಿಸಿದರೆ ಆ ವರ್ಣಧರ್ಮದ ಜ್ಞಾನಿಕ ಸಂಘಸಂಸ್ಥೆಗಳು ನೀವು ಕೈಗೊಂಡ ಕ್ರಮಗಳೆಲ್ಲವನ್ನೂ ಅಧಿಕೃತಗೊಳಿಸುತ್ತದೆ.ಹಾಗಾಗಿ ವಿಶ್ವಾಮಿತ್ರ ನಾಯಿ ತಿಂದದ್ದೂ ಸರಿಯೆನಿಸುತ್ತದೆ; ರಾಮ ಶಂಭೂಕನ ಶಿರಚ್ಛೇದ ಮಾಡಿದ್ದೂ ಸರಿಯೆನಿಸುತ್ತದೆ.

ಪೌರಾತ್ಯವಾದ ಕೆಲವು ಪಶ್ಚಿಮದ ಪಂಡಿತರ ದೋಷಯುಕ್ತ ಚಿಂತನೆ ಮಾತ್ರವಲ್ಲ. ಅದನ್ನು ಹಾಗೇ ಪೋಷಿಸಿಕೊಂಡು ಬರುವ ಶಕ್ತಿಯುತವಾದ ಪಟ್ಟಭದ್ರ ಹಿತಾಸಕ್ತಿಗಳುಳ್ಳ ಸಂಘಸಂಸ್ಥೆಗಳೂ ಇವೆ. ಇರೇನಿಯನ್ನರು ಏಕೆ "ಧರ್ಮಾಂಧರಾಗುತ್ತಾರೆ" ಎಂದು ನೀವು ಪಿ.ಎಚ್.ಡಿ. ಮಾಡಿದರೆ ನಿಮಗೆ ಧನಸಹಾಯ ಮಾಡುವ ಶ್ರೀಮಂತ ಅಮೇರಿಕನ್ ಸಂಘಸಂಸ್ಥೆಗಳು ನೆರವಾಗುತ್ತವೆ. ನಂತರ ನಿಮಗೆ ಅಮೇರಿಕಾದ ಅಧ್ಯಕ್ಷೀಯ ಸಲಹಾ ಮಂಡಳಿಯಲ್ಲಿ ಲಾಭದಾಯಕ ಹುದ್ದೆಗಳೂ ಸಿಗಬಹುದು. ಬದಲಾಗಿ ಇರೇನಿಯನ್ನರು ಅಮೇರಿಕಾದ ದಬ್ಬಾಳಿಕೆಯನ್ನು ಏಕೆ ವಿರೋಧಿಸುತ್ತಾರೆ ಎಂದು ನೀವು ಅಧ್ಯಯನ ನಡೆಸಲು ಮುಂದಾದರೆ ನೀವು ಯಕಶ್ಚಿತ್ ಕಮ್ಯೂನಿಸ್ಟರಾಗುತ್ತೀರಿ.

ವಸಾಹತುಶಾಹಿ ನಮಗೆ ಕೇವಲ ದೋಷಯುಕ್ತ ಅರಿವನ್ನು ಮಾತ್ರ ಕೊಟ್ಟಿಲ್ಲ. ಅದಕ್ಕಿಂತ ಅಪಾಯಕಾರಿಯಾಗಿ ಅಂಥ ಅರಿವನ್ನು ನಿರಂತರ ಪ್ರತ್ಯುತ್ಪಾದಿಸುವ ಸಂಘಸಂಸ್ಥೆಗಳನ್ನು ಕೊಟ್ಟು ಹೋಗಿದೆ. ಈ ಜ್ಞಾನಿಕ ಸಂಘಸಂಸ್ಥೆಗಳನ್ನು ನಾವು ಆಮೂಲಾಗ್ರವಾಗಿ ಪರಿವರ್ತಿಸಿಕೊಳ್ಳುವ ತನಕ ವಸಾಹತುಶಾಹಿ ನಮ್ಮಲ್ಲಿ ಮುಂದುವರಿಯುತ್ತದೆ. ಈ ಮಾತುಗಳನ್ನೇ ಬೇರೆಯ ರೀತಿಯಲ್ಲಿ ಹೇಳಬಹುದು. ವಸಾಹತುಶಾಹಿ ಪ್ರತ್ಯಕ್ಷವಾಗಿ, ಚಿಂತನೆಯ ಅಂಶಗಳ ಮಟ್ಟದಲ್ಲಿ ಮಾತ್ರ ನಮ್ಮೊಳಗೆ ಇರುವುದಿಲ್ಲ. ಅದು ಪರೋಕ್ಷವಾಗಿಯೂ ನಮ್ಮ ಇಡೀ ವಾಸ್ತವದಲ್ಲೂ, ಆ ವಾಸ್ತವವನ್ನು ನಾವು ಗ್ರಹಿಸುವ ರೀತಿಯಲ್ಲೂ ಇರುತ್ತದೆ. ಅಂದರೆ ಜ್ಞಾನಿಕ ಸಂಘಸಂಸ್ಥೆಗಳು ನಮ್ಮನ್ನು ಸತತವಾಗಿ ಒಂದು ಬಗೆಯಲ್ಲಿ ನಿರೂಪಿಸುತ್ತಿರುತ್ತವೆ.

ಸ್ತ್ರೀವಾದವನ್ನು ನಾವು ಈ ಆಯಾಮಗಳಲ್ಲಿ ತಿಳಿದುಕೊಳ್ಳಬೇಕು. ಅಕ್ಕಮಹಾದೇವಿಯಂಥವರು ಅಲ್ಲಲ್ಲಿ ಹೇಳಿರುವುದು ಬಹಳ ಮುಖ್ಯವೇ ಆದ ಚಿಂತನಾಂಶಗಳು ಎಂದುಕೊಳ್ಳೋಣ. ಆದರೆ ಭಾರತೀಯ ಸ್ತ್ರೀ ಇಂದು ಭಕ್ತಿ ಚಳುವಳಿಯ ಸಂದರ್ಭದಲ್ಲಿ ಬದುಕುತ್ತಿಲ್ಲ. ಅವಳ"ಹೆಣ್ಣುತನ"ವಸಾಹತುಶಾಹಿಯ ಸಂದರ್ಭದಲ್ಲಿ ವ್ಯಾಖ್ಯೆಗೊಂಡಿದೆ. ಅವಳನ್ನು ಇಂದಿಗೂ ಆ ರೀತಿಗಳಲ್ಲಿ ಸೃಷ್ಟಿಸುತ್ತಿರುವ ವಸಾಹತುಶಾಹಿಯ ಜ್ಞಾನಿಕ ಸಂಘಸಂಸ್ಥೆಗಳ್ಯಾವುವು? ಅಂಥ ವಿಧ್ಯುಕ್ತ ಸಂಘಸಂಸ್ಥೆಗಳು ಹೆಣ್ಣನ್ನು ಆ ರೀತಿಗಳಲ್ಲೇ ಸೃಷ್ಟಿಸುವಲ್ಲಿ ಯಾರ್ಯಾರ ಹಿತಾಸಕ್ತಿಗಳು ಅಡಗಿವೆ? ಈ ರೀತಿಯ ಚಾರಿತ್ರಿಕ ಅಡೆತಡೆಗಳನ್ನು ದಾಟಿ ಬರಲು ಹೆಣ್ಣಿಗೆ ಯಾವ ಬಗೆಯ ಹೋರಾಟದ ಅಗತ್ಯವಿದೆ?ಇಂಥ ಪ್ರಶ್ನೆಗಳು ಬಹಳ ಮುಖ್ಯವಾದವು. ಈ ನಿಟ್ಟಿನಲ್ಲಿ *ಅರಿವು ಬರಹ* ಲೇಖನಗಳನ್ನು ಪ್ರಕಟಿಸಲು ಬಯಸುತ್ತದೆ.

* * * *

ಈ ಸಂಚಿಕೆಯಲ್ಲಿ ತೇಜಸ್ವಿನಿ ನಿರಂಜನ ಅವರ ಅನುವಾದಿತ ಲೇಖನದ ಜೊತೆಗೇ ವಲೇರಿಯನ್ ರೊಡ್ರಿಗಸ್ ಅವರ ದಕ್ಷಿಣ ಕನ್ನಡ ಜಿಲ್ಲೆಯ ಆಗುಹೋಗುಗಳ ಬಗೆಗಿನ ಲೇಖನ ಮತ್ತು ಎಂ. ಮುರಳೀಧರನ್ ಅವರ ಹಿಂದೂ ಮೂಲಭೂತವಾದದ ಬಗೆಗಿನ ಲೇಖನಗಳೂ ಇವೆ. ಜೊತೆಯಲ್ಲಿ ಜೆ. ಎಸ್. ಸದಾನಂದ ಅವರ ಮೀಸಲಾತಿಯ ಬಗೆಗಿನ ಬರವಣಿಗೆ ಹಾಗೂ ಧನಾಗರೆಯವರ ರೈತ ಹೋರಾಟದ ಕುರಿತ ಅನುವಾದ ಇವುಗಳು ಹಿಂದಿನ ಸಂಚಿಕೆಯಿಂದ ಮುಂದುವರಿದಿವೆ.

“ಭಾರತೀಯ ಸಂಸ್ಕೃತಿ” ಮತ್ತು ಮಹಿಳಾ ಪ್ರಶ್ನೆ.*

ತೇಜಸ್ವಿನಿ ನಿರಂಜನ

ಅನುವಾದ : ನಯನ

ಮಹಾಭಾರತದ ಸ್ತ್ರೀಪಾತ್ರಗಳಲ್ಲಿ ಒಬ್ಬಳಾದ ಮಾಧವಿಯ ಕತೆಯಿಂದ ಆರಂಭಿಸುತ್ತೇನೆ. ಶ್ರೀಮತಿ ಅನುಪಮಾ ನಿರಂಜನ 1976ರಲ್ಲಿ ಪ್ರಕಟಿಸಿದ ಕಾದಂಬರಿಯ ಕತೆಯಿದು. ಮಹಾಭಾರತದ ಯಾವ ಆವೃತ್ತಿಯಲ್ಲೂ ನಾನು ಮಾಧವಿಯ ಕತೆ ಕೇಳಿಯೇ ಇರಲಿಲ್ಲ. ಈ ಬಗ್ಗೆ ನನಗೀಗ ಆಶ್ಚರ್ಯವಾಗುತ್ತಿದೆ. ಬಹುತೇಕ ಭಾರತೀಯ ಹಿಂದೂ ಮಹಿಳೆಯರಂತೆ ನನಗೂ ಕೂಡ ಪರಮ ಸಹಿಷ್ಣುವಾದ, ವಿಧಿಗೆ ಹಾಗೂ ಪತಿಗೆ ವಿಧೇಯಳಾದ ರಾಮಾಯಣದ ಸೀತೆಯೇ ನಮ್ಮ ಮಹಾಕಾವ್ಯಗಳಲ್ಲೆಲ್ಲ ಅತಿ ಮುಖ್ಯ ಸ್ತ್ರೀ ಪಾತ್ರವಾಗಿದ್ದಳು. ನನ್ನ ಕುಟುಂಬದ ಹಿರಿಯ ಮಹಿಳೆಯರೆಲ್ಲ ಸೀತೆ ಒಬ್ಬ ಒಳ್ಳೆಯ ಸ್ತ್ರೀ, ತನ್ನೆಲ್ಲ ಕಷ್ಟಗಳನ್ನು ಉದಾತ್ತವಾಗಿ ಮತ್ತು ಕಿಂಚಿತ್ ದೂರಿಲ್ಲದೆ ಸಹಿಸಿದವಳು ಎಂದೂ ಮಾತ್ರವಲ್ಲ, ಅವಳು ನಿಜವಾದ, ಅಪ್ಪಟ ಸ್ತ್ರೀ ಎಂದೂ ಹೇಳುತ್ತಿದ್ದರು. ನಂತರ, ನಾನು ಓದಿದ ಪುಸ್ತಕಗಳಿಂದ (ಭಾರತೀಯರಿಂದ ಹಾಗೂ ಪಾಶ್ಚಿಮಾತ್ಯರಿಂದ ಹಾಗೂ ಬಹುತೇಕ ಪುರುಷರಿಂದ ಬರೆಯಲ್ಪಟ್ಟವು) ಮತ್ತು ಕಲಿತ ಪಾಠಗಳಿಂದ ಸೀತೆ ಒಬ್ಬ ಮಾದರಿ ಭಾರತೀಯ ಮಹಿಳೆ ಕೂಡ ಎಂದು ನಾನು ಗ್ರಹಿಸಿಕೊಂಡೆ.

ಆದರೆ ಮಾಧವಿಯ ಕತೆ? ಅದು ಹೀಗಿದೆ: ವಿಶ್ವಾಮಿತ್ರ ತನ್ನಲ್ಲಿ ಪಂಡಿತ ಶಿಕ್ಷಣವನ್ನು ಮುಗಿಸಿದ ಗಾಲವನೆಂಬ ಶಿಷ್ಯನಿಂದ ಒಂದು ಕಪ್ಪು ಕಿವಿಯಿರುವ ಎಂಟುನೂರು ಅಶ್ವಗಳನ್ನು ಗುರುದಕ್ಷಿಣೆಯಾಗಿ ಕೇಳುತ್ತಾನೆ. ಏನು ಮಾಡುವುದೆಂದು ತೋಚದ ಗಾಲವ ಅಶ್ವಗಳಿಗಾಗಿ ರಾಜಾ ಯಯಾತಿಯ ಬಳಿ ಸಾರುತ್ತಾನೆ. ಅಶ್ವಗಳಿಗೆ ಬದಲು ಯಯಾತಿ ತನ್ನ ಸುಂದರ ಪುತ್ರಿ ಮಾಧವಿಯನ್ನು ಅವನಿಗೆ ನೀಡಿ, ಅವಳನ್ನು ಬಳಸಿ ಅಶ್ವಗಳನ್ನು ಪಡೆದುಕೊಳ್ಳಲು ಸೂಚಿಸುತ್ತಾನೆ. ಗಾಲವ ಆಕೆಯನ್ನು ಒಬ್ಬನಾದ ಮೇಲೊಬ್ಬ ರಾಜನ ಬಳಿಗೊಯ್ಯುತ್ತಾನೆ. ಪ್ರತಿಯೊಬ್ಬ ರಾಜನಿಗೂ ಆಕೆ ಒಬ್ಬ ಪುತ್ರನನ್ನು ಹಡೆದುಕೊಡುತ್ತಾಳೆ. ತನ್ನ ಪರ್ಯಟನಾಂತ್ಯದಲ್ಲಿ ಗಾಲವನಿಗೆ ಸಂಗ್ರಹಿಸಲು ಸಾಧ್ಯವಾದದ್ದು ಕೇವಲ ಆರುನೂರು ಕುದುರೆಗಳನ್ನು ಮಾತ್ರ. ಹತಾಶನಾದ ಆತ ಮಾಧವಿ ಹಾಗೂ ಅಶ್ವಗಳೊಂದಿಗೆ ಗುರುವಿನ ಬಳಿಗೆ ಮರಳುತ್ತಾನೆ. ಮೊದಲೇ ಆಕೆಯನ್ನು ಇಲ್ಲಿಗೆ ಏಕೆ ತರಲಿಲ್ಲವೆಂದು ಗುರುವಿನ ಆಕ್ಷೇಪ. ಮಾಧವಿ ಅವನಿಗೂ ಬಸಿರಾಗಿ ಒಬ್ಬ ಪುತ್ರನನ್ನು ಹಡೆಯುತ್ತಾಳೆ. ವರ್ಷ ಕೊನೆಯಾಗುತ್ತಲೂ ಗಾಲವ ಅವಳನ್ನು ಯಯಾತಿ ರಾಜನಿಗೆ ಕೃತಜ್ಞತಾಪೂರ್ವಕ ಹಿಂದಿರುಗಿಸುತ್ತಾನೆ. ಯಯಾತಿ ತನ್ನ ಅವಿವಾಹಿತ ಪುತ್ರಿಗೆ ಸ್ವಯಂವರ ಏರ್ಪಡಿಸಿ ನಾಡುನಾಡುಗಳಿಂದ ನೂರಾರು ರಾಜರನ್ನು, ರಾಜಕುವರರನ್ನು ಆಮಂತ್ರಿಸುತ್ತಾನೆ. ಕೈಯಲ್ಲಿ ಹೂಮಾಲೆ ಹಿಡಿದು ನೆರೆದ ಪುರುಷರನ್ನೆಲ್ಲ ನೋಡುತ್ತಾ ಸಭೆಗೆ ಸುತ್ತು ಬಂದ ಮಾಧವಿ, ಕೊನೆಗೆ ಹಾರವನ್ನು ಬಿಸುಟು ಇನ್ನೆಂದೂ ಮರಳದಂತೆ ಕಾಡಿಗೆ ನಡೆದುಬಿಡುತ್ತಾಳೆ.

ಈ ಕಾದಂಬರಿ ಮಾಧವಿ ಸುಮಾರು ಹದಿನೈದು ವರ್ಷಗಳ ಹಿಂದೆಯೇ ಪ್ರಕಟವಾಗಿದ್ದರೂ, ಸಾಹಿತ್ಯಲೋಕದ ಪಟ್ಟಭದ್ರರಿಂದ ಬಹಳ ಅಲಕ್ಷಿಸಲ್ಪಟ್ಟಿತು. ಯಾರೂ ಇದನ್ನು ಗಂಭೀರ ವಿಮರ್ಶೆಗೆ ಯೋಗ್ಯವೆಂದು ಪರಿಗಣಿಸಲೇ

---

* ಈ ಲೇಖನ ತೇಜಸ್ವಿನಿ ನಿರಂಜನ ಅವರು ಮಂಗಳೂರು ವಿಶ್ವವಿದ್ಯಾಲಯದ ಆಂಗ್ಲಸಾಹಿತ್ಯ ವಿಭಾಗದಲ್ಲಿ ಮಾಡಿದ ಒಂದು ಲಘು ಉಪನ್ಯಾಸದ ರೂಪಾಂತರ. ಇದನ್ನು ತರ್ಜುಮೆ ಮಾಡಿದ ನಯನ, ಮಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ಸ್ನಾತಕೋತ್ತರ ಪದವೀಧರೆ ಮತ್ತು ಈಗ ಅಲ್ಲಿಯೇ ತಮ್ಮ ಎಂ.ಫಿಲ್. ಮಾಡುತ್ತಿದ್ದಾರೆ.

ಇಲ್ಲ. ಅನೇಕರು ಅದನ್ನು ಓದಿದರೇನೋ ಹೌದು, ಆದರೆ ಮಾಧವಿಯ ಕುರಿತು ಬರೆದಿರುವುದಕ್ಕೆ ಲೇಖಕಿಯನ್ನು ಕಟುವಾಗಿ ಟೀಕಿಸಿದರು. ಮಾಧವಿ ಬದುಕುವುದಾದರೂ ಹೇಗೆ ಸಾಧ್ಯವಿತ್ತು ಎಂಬುದು ಅವರ ಪ್ರಶ್ನೆ. ಅಂಥವಳೊಬ್ಬಳ ಕಲ್ಪನೆಯೇ ನಮ್ಮ ಸಂಸ್ಕೃತಿಗೆ ವಿರುದ್ಧವಾದದ್ದು ಎಂದು ಅವರು ವಾದಿಸಿದರು. ಮಾಧವಿಯ ಕತೆಯ ಮರುವ್ಯಾಖ್ಯಾನ ಇಂತಹ ಒಂದು ಪ್ರತಿಕ್ರಿಯೆಗೆ ಯಾಕೆ ಎಡೆಮಾಡಿಕೊಟ್ಟಿತು ಎಂದು ನಾವು ಕೇಳಬಹುದು. ಈ ಹಿಂದೆ ಇತರ ಮಹಿಳಾ ಬರಹಗಾರರೂ ಸಾಂಪ್ರದಾಯಿಕ ಕತೆಗಳನ್ನು ಬಳಸಿಕೊಂಡಿದ್ದರು. ಆದರೆ, ಅವರಲ್ಲನೇಕರಿಗೆ ಸಂಪ್ರದಾಯವೆಂಬುದು 'ಹೀಗೆ' ಎಂದು ನಿಶ್ಚಿತವಾಗಿದ್ದು, ಯಾವ ಬಗೆಯಲ್ಲೂ ಪ್ರಶ್ನಾರ್ಹವಲ್ಲ ಎಂದೆನಿಸಿತು. ಇದಕ್ಕೆ ಬದಲಾಗಿ ಮಾಧವಿ ಸಂಪ್ರದಾಯವನ್ನು ಟೀಕಿಸುವ ಸಂಜ್ಞೆಯಾಯ್ತು. ನಮ್ಮ ಸಂಸ್ಕೃತಿಯಲ್ಲಿನ ಪರಿಗಣಿತ ಮೌಲ್ಯಕ್ಕೆ ಸವಾಲೆಸೆಯುವ ಮೂಲಕ ಮಾಧವಿಯ ಚಿತ್ರ ಸೀತೆಗೆ ತದ್ವಿರುದ್ಧವೆಂಬಂತೆ ಅನೇಕ ಓದುಗರಿಗೆ ಕಾಣತೊಡಗಿತು. ಪ್ರಾಯಶಃ ಆದ್ದರಿಂದಲೇ ಅವಳ ಬಗ್ಗೆ ಭೀತಿ ಹುಟ್ಟಿದ್ದು; ಅದಕ್ಕಾಗಿಯೇ ಅವಳ ಅಸ್ತಿತ್ವವೇ ಅಸಾಧ್ಯವೆನಿಸಿದ್ದು.

ಇವತ್ತು ಸಿನೆಮಾ, ದೂರದರ್ಶನ, ಪತ್ರಿಕಾ ಬರಹ, ವ್ಯಂಗ್ಯಚಿತ್ರ, ಹಾಗೂ ಸಾಹಿತ್ಯದಲ್ಲಿನ ಎದ್ದು ಕಾಣುವ ಜನಪ್ರಿಯ ಕಲ್ಪನೆಯಲ್ಲಿ ಮಹಿಳೆ ಯಾವುದನ್ನು ಪ್ರತಿನಿಧಿಸಬೇಕು ಎಂಬುದರ ಬಗ್ಗೆ ಸಾಮಾನ್ಯ ಪ್ರಜ್ಞೆಯ ಹೆಸರಿನಲ್ಲಿ, ರಾಶಿ ರಾಶಿ ಪೂರ್ವಗ್ರಹಗಳಿರುವಂತೆ ಕಾಣುತ್ತದೆ. ನಾನಿಲ್ಲಿ ನಿಸ್ಸಂಶಯವಾಗಿಯೂ, ಭಯಹುಟ್ಟಿಸುವ (ಹಾಗೂ ಚಡಪಡಿಕೆಯ ಛೇಡಿಕೆಗೊಳಗಾದ) ಸ್ತ್ರೀವಾದಿಯ ಮತ್ತು ಅವಳು ನಂಬುವ "ಸ್ತ್ರೀವಾದ" ಎಂಬ ಪದದ ಕುರಿತೇ ಮಾತನಾಡುತ್ತಿದ್ದೇನೆ. ಸ್ತ್ರೀವಾದದ ವಿರುದ್ಧವಿರುವ ಪೂರ್ವಗ್ರಹಗಳೆಲ್ಲ ಸ್ತ್ರೀವಾದ "ಪಾಶ್ಚಾತ್ಯ" ವಾದದ್ದು, "ನಮ್ಮ ಸಂಸ್ಕೃತಿ"ಯ ಅಂಗವಲ್ಲದ್ದು, ನಮ್ಮ ಸಂಸ್ಕೃತಿಯ ನಮ್ಮ ಮೌಲ್ಯಗಳ ಅವನತಿಯ ಸಂಕೇತವಾಗಿರುವಂಥದ್ದು ಎಂಬುದರ ಸುತ್ತವೇ ಗಿಡಿದುಕೊಂಡಂತಿವೆ. ಭಾರತೀಯ ಮಹಿಳೆಗೆ ಯೋಗ್ಯವೆನಿಸಿಕೊಂಡ ನಡವಳಿಕೆಯ ಮಿತಿಗಳನ್ನು ಉಲ್ಲಂಘಿಸಿ ನಡೆಯುವ ಹಾಗೆ ಸ್ತ್ರೀವಾದಿಗಳು ಕಾಣಿಸುತ್ತಾರೆ.

ಸ್ತ್ರೀವಾದಿಯ ವಿರುದ್ಧದ ಮೇಲಿನ ದೂರುಗಳನ್ನು ಒಂದೊಂದಾಗಿ ತೆಗೆದುಕೊಳ್ಳಿ. ಮೊದಲಿಗೆ, ಸ್ತ್ರೀವಾದ "ಪಾಶ್ಚಾತ್ಯ" ಎಂಬುದು. ತೀರ ಸರಳ ಸ್ತರದಲ್ಲೇ ಈ ಪೂರ್ವಗ್ರಹವನ್ನು ಪ್ರಶ್ನಿಸಬಹುದು: ಯಾರು ಹೀಗೆ ವರ್ಣಿಸುತ್ತಿರುವವರು?ಯಾವ ಸುಖಕ್ಕಾಗಿ? ಯಾವುದು ಪಾಶ್ಚಾತ್ಯ, ಯಾವುದು ಅಲ್ಲವೆಂದು ನಿರ್ಧರಿಸುವವರು ಯಾರು?ಹಾಗಾದರೆ ಬಹುತೇಕ ನಗರವಾಸೀ ಭಾರತೀಯನ ಉಡುಗೆ ತೊಡುಗೆಯ ಬಗ್ಗೆ ಏನೆನ್ನಬೇಕು? ನಾವು ಓದುವ ಪುಸ್ತಕಗಳು, ಕೈಗೆತ್ತಿಕೊಳ್ಳುವ ಅಧ್ಯಯನ ವಿಚಾರಗಳು, ನಮ್ಮ ಉನ್ನತ ಶಿಕ್ಷಣದ ಭಾಷೆ, ನಮ್ಮ ವಿಶ್ವವಿದ್ಯಾಲಯಗಳ ಮೂಲ ರಚನೆ - ಎಲ್ಲ ಯಾವ ಬಗೆಯದು? ನಮ್ಮ ಕಂಪ್ಯೂಟರ್‌ಗಳು, ಪ್ರಯೋಗಾಲಯಗಳೆಲ್ಲ ಏನು? ನಮ್ಮ ಬಸ್ಸು, ರೈಲು, ಮೋಟಾರ್ ಸೈಕಲ್‌ಗಳು? ರೇಡಿಯೋ, ಸಿನೆಮಾ, ದೂರದರ್ಶನ, ಮುದ್ರಣಾಲಯ, ಮೈಕ್ರೋಫೋನ್, ವಿದ್ಯುತ್‌ತಂತಿ, ನೀರಿನ ಕೊಳವೆಗಳು? "ಮಹಿಳೆಯರು" ಮಾತ್ರ ನಮ್ಮ ರಾಷ್ಟ್ರೀಯ ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕು, ನಮ್ಮ ಸಂಸ್ಕೃತಿಯ ಮಾದರಿ ಹರಿಕಾರರಾಗಿ ಉಳಿಯಬೇಕು – ಯಾಕೆ?

ಚರ್ಚೆಯ ಸಲುವಾಗಿ ಸ್ತ್ರೀವಾದದ ಒಂದು ವಿಶಾಲ ವ್ಯಾಖ್ಯಾನವನ್ನು ಇಲ್ಲಿ ನೀಡಿದರೆ ಅಪ್ರಸ್ತುತವಾಗಲಿಕ್ಕಿಲ್ಲ. ಸದ್ಯದ ಸ್ಥಿತಿಯ ಬದಲಾವಣೆಗಾಗಿ ಪುರುಷ ಪ್ರಧಾನ ಸಿದ್ಧಾಂತ ಮತ್ತು ಚೌಕಟ್ಟುಗಳ ವಿಮರ್ಶೆಯೇ ಸ್ತ್ರೀವಾದದ ಇಂಗಿತವೆಂದರೆ ಹೆಚ್ಚಿನ ಸ್ತ್ರೀವಾದಿಗಳು ಒಪ್ಪಬಹುದೇನೋ. ವಸ್ತುಸ್ಥಿತಿಯೆಂಬುದು ಸಹಜ ಸ್ಥಿತಿಯಾಗಿರದೆ, ಐತಿಹಾಸಿಕ ಸಂದರ್ಭಗಳ ಉತ್ಪನ್ನವಾಗಿರುವುದರಿಂದ ಅದನ್ನು ಬದಲಿಸುವುದು ಸಾಧ್ಯ ಎಂಬುದು ಈ ವಾದದ ಮೂಲದಲ್ಲಿರುವ ನಂಬಿಕೆ. ಸ್ತ್ರೀವಾದವನ್ನು ಪಾಶ್ಚಾತ್ಯ ಮತ್ತು ಪರಕೀಯ ಎಂದು ವಾದಿಸುವವರು ಪರೋಕ್ಷವಾಗಿ ಪುರುಷ ಪ್ರಧಾನತೆ

ಇವತ್ತಿನ ಭಾರತೀಯ ಸಮಾಜದ ಲಕ್ಷಣವಲ್ಲ ಎಂದೂ ಎಂತಿದ್ದರೂ ಭಾರತೀಯ ಮಹಿಳೆಯರು ಪಶ್ಚಿಮದ ಹಾಗೆ ತುಳಿತಕ್ಕೆ ಒಳಗಾಗಿಲ್ಲ ಎಂದೂ ಹಿಂದೆಂದೂ ಆಗಿರಲಿಲ್ಲ ಎಂದೂ ಉಸುರುತ್ತಾರೆ ("ವೇದಕಾಲದ ಭಾರತದ ಮಹಿಳೆಯರ ಸ್ಥಾನಮಾನ ಗಮನಿಸಿ" ಎಂದು ಯಾವತ್ತಿನ ವಾದ ಹೇಳುತ್ತದೆ. ಈ ವಿಷಯಕ್ಕೆ ಮುಂದೆ ಬರೋಣ). ಐರೋಪ್ಯರ ಮತ್ತು ಭಾರತೀಯ ರಾಷ್ಟ್ರೀಯವಾದಿಗಳ ಐತಿಹಾಸಿಕ ಬರಹಗಳನ್ನು ನೋಡಿದರೆ ಭಾರತೀಯ ಮಹಿಳೆಯರ ಕಲ್ಪನೆಯ ಕುರಿತು ಸ್ವಾರಸ್ಯಕರ ಪ್ರತಿಧ್ವನಿಗಳನ್ನು ಕಾಣುತ್ತೇವೆ. ಅಲ್ಲಿ "ಭಾರತೀಯ ಸಂಸ್ಕೃತಿ" ಅಥವಾ "ಪರಂಪರೆ"ಗೆ "ನಮ್ಮ ಮಹಿಳೆ"ಯರನ್ನು ತಳಕು ಹಾಕಿರುವುದನ್ನು ಕಾಣುತ್ತೇವೆ. ಈ ಬರಹಗಳಲ್ಲಿ ಮಹಿಳೆ ಮತ್ತು ಸಂಸ್ಕೃತಿಯ ಕುರಿತು ಮಾತಾಡುವ ವೈಖರಿ ಹೇಗಿದೆಯೆಂದರೆ, ಇವೆರಡೂ ಬದಲಾಗುವಂಥದಲ್ಲ ಮತ್ತು ಇತಿಹಾಸಕ್ಕೂ ಕಾಲದ ಹಿಡಿತಕ್ಕೂ ಇವು ಒಳಪಡುವುದಿಲ್ಲ ಎಂಬಂತೆ. ಬಾಹ್ಯ ಇತಿಹಾಸಕ್ಕೆ ಮೀರಿ ನಿಲ್ಲುವ ಯಾವುದೂ, ಎಂದಿಗೂ ಬದಲಾಗುವುದಿಲ್ಲ ಎಂದೇ ಅರ್ಥ. ನಮ್ಮ ಸಮಾಜದಲ್ಲಿ ಮಹಿಳೆಯರು ಲಿಂಗ ಭೇದದ ಆಧಾರದ ಮೇಲೆ ತುಳಿತಕ್ಕೊಳಗಾಗಿದ್ದಾರೆ ಎಂದು ನಂಬುವ, ಹಾಗೂ ಬದಲಾವಣೆಗಾಗಿ ದುಡಿಯಲು ಈ ನಂಬಿಕೆಯನ್ನೇ ಪ್ರೇರಕ ಶಕ್ತಿಯಾಗಿಟ್ಟುಕೊಂಡಿರುವ ನಮ್ಮಂಥವರು ಮಹಿಳೆಯರ ಕುರಿತು ನಾವಿವತ್ತು ಆಡುವ ಮಾತಿನ ರೀತಿಗೆ ಒಂದು ಇತಿಹಾಸವಿದೆ. ಭಾರತೀಯ ಸಂಸ್ಕೃತಿ ಹಾಗೂ ಮಹಿಳೆಯರ ಸಮಸ್ಯೆ – ಇವೆರಡನ್ನೂ ಇತಿಹಾಸಕ್ಕೆ ಜೋಡಿಸಿ ಕೊಳ್ಳುವುದರ ಮೂಲಕ ನಮ್ಮ ವಿಶ್ಲೇಷಣೆಯನ್ನು ಆರಂಭಿಸುವುದು ಹೆಚ್ಚು ಸೂಕ್ತ ಎಂಬುದನ್ನು ನಮ್ಮಂಥವರು ಅರಿಯಬೇಕು.

ವಿಲಿಯಂ ಜೋನ್ಸ್ ಮುಂತಾದ ಮೊದಲ ಬ್ರಿಟಿಷ್ ಓರಿಯಂಟಲಿಸ್ಟರು ತಾವು ಇಂಡೋ-ಆರ್ಯನ್ ಎಂದು ಕರೆದ ಭಾಷೆಗಳ ಮೂಲ ಸಂಸ್ಕೃತವೆಂದು ಕಂಡುಕೊಂಡರು. ಪ್ರಾಚೀನ ಭಾರತದ ಸಾರವೆಲ್ಲ ಮೂರು ಸಾವಿರದ ಐನೂರು ವರ್ಷ ಪುರಾತನವಾದ ಋಗ್ವೇದದಲ್ಲಿ ಅಡಗಿದೆ ಎಂದು ನಂಬಿದರು. ಅವರ ಪ್ರಕಾರ ಹಿಂದೆ ಭಾರತದಲ್ಲಿ ಸುವರ್ಣಯುಗವಿತ್ತು, ಈಗ ಅದು ಅವನತಿ ಗೊಂಡಿದೆ; ವಸಾಹತು ಶಾಹಿಗಳ ನೆರವಿನಿಂದ ಮಾತ್ರ ಅದು ತನ್ನ ಹಿಂದಿನ ವೈಭವಕ್ಕೆ ಮರಳಲು ಸಾಧ್ಯ; ಸಹನಶೀಲತೆ, ಶ್ರದ್ಧೆ, ಧೀರತೆ ಹಾಗೂ ಧಾರಣಶೀಲತೆಯೇ ಮೂರ್ತಿವೆತ್ತಂತಿರುವ ಆರ್ಯಮಹಿಳೆ ಭಾರತದ ಗತಕಾಲದ ಭವ್ಯತೆಗೆ ಸ್ಪಷ್ಟ ಸಾಕ್ಷಿ.

ಹತ್ತೊಂಭತ್ತನೇ ಶತಮಾನದ ಆದಿ ಭಾಗದಲ್ಲಿ, ಜೆ. ಎಸ್. ಮಿಲ್‌ನಂತಹ ಬ್ರಿಟಿಷ್ ಮಿಶನರಿಗಳು ಮತ್ತು ಇತಿಹಾಸಕಾರರು ಮಹಿಳೆಯ ಸ್ಥಾನಮಾನವನ್ನು ಒಂದು ದೇಶದ ನಾಗರಿಕತೆಯ ಮಟ್ಟಕ್ಕೆ ಕೊಂಡಿಹಾಕಿದರು. ಮಿಲ್‌ನಂಥವರು ಭಾರತಕ್ಕೆ ಎಂದೂ ಕೂಡ ಸುವರ್ಣ ಇತಿಹಾಸವಿರಲಿಲ್ಲ; ಭಾರತೀಯರು ಸದಾ ಅನಾಗರಿಕ ಮತ್ತು ಆದಿಮ ಮನುಷ್ಯರಾಗಿದ್ದರು ಎಂದು ವಾದಿಸಿದರು. ಇದಕ್ಕೆ ಭಾರತೀಯರು ಮಹಿಳೆಯರನ್ನು ನಡೆಸಿಕೊಂಡ ಕೆಟ್ಟ ರೀತಿಯೇ ಪುರಾವೆ ಎಂದು ಓರಿಯೆಂಟಲಿಸ್ಟರಿಗೆ ಪ್ರತಿಯಾಗಿ ಮಿಲ್‌ನಂಥವರು ವಾದಿಸಿದರು. ಸತಿ, ಬಾಲ್ಯವಿವಾಹ, ಶಿಶುಹತ್ಯೆ ಮುಂತಾದ ಪದ್ಧತಿಗಳತ್ತ ಅವರು ಬೆಟ್ಟು ಮಾಡಿದರು. ಆದ್ದರಿಂದ, ಅವರ ಅಭಿಪ್ರಾಯದಲ್ಲಿ, ಭಾರತೀಯ ಮಹಿಳೆಯರನ್ನು ರಕ್ಷಿಸಿ ಉಳಿಸಲು ವಸಾಹತು ಪ್ರಭುತ್ವ ಮಧ್ಯೆ ಪ್ರವೇಶಿಸಲೇಬೇಕಿತ್ತು.

ಭಾರತದ ಸಮರ್ಥಕರಾಗಿದ್ದ ಮ್ಯಾಕ್ಸ್‌ಮುಲ್ಲರ್ ಮತ್ತವನ ಶಿಷ್ಯರಂಥವರು ಅಥವಾ ಮೊದಲ ರಾಷ್ಟ್ರೀಯವಾದಿಗಳಾದ ರೊಮೇಶ್‌ಚಂದ್ರದತ್‌ರಂಥವರೂ ಕೂಡ ಇದೇ ನಿಟ್ಟಿನಲ್ಲಿ ಚಿಂತಿಸಲೇಬೇಕಾಯ್ತು. ಮಿಲ್‌ನ ಟೀಕೆಗೆ ಪ್ರತಿಕ್ರಿಯಿಸುತ್ತಾ ಅವರು ವೇದಕಾಲದ ಮಹಿಳೆ ಹಿಂದೂ ಸ್ತ್ರೀತ್ವದ ಪರಮೋನ್ನತ ಸಂಕೇತ ಎಂದರು. ಈ ಆರ್ಯ ಮಹಿಳೆ ಅಪರಿಮಿತ ಶ್ರದ್ಧೆ ಹಾಗೂ ನಂಬಲಸದಳವೆಂಬಷ್ಟು ಧೈರ್ಯ ಹೊಂದಿದ್ದ ನಿರಾಸಕ್ತೆ, ಧೈವಭಕ್ತೆ,

ಪರಿಶುದ್ಧೆ (ಆಕೆಯ ಸತಿ ಹೋಗುವ ಸಾಮರ್ಥ್ಯವೇ ಇದಕ್ಕೆ ಸಾಕ್ಷಿ). ಹಾಗಾಗಿ, ವಸಾಹತುಪೂರ್ವ ಭಾರತ ವೇದಕಾಲದ ಭಾರತವಾಯ್ತು, ಮತ್ತು ನಿಜವಾದ ಭಾರತೀಯ ಮಹಿಳೆಯೆಂದರೆ ಈ ಆದರ್ಶೀಕರಿಸಿದ ಆರ್ಯಕಾಲದ ಕಲ್ಪನೆಯಾದಳು.

ನಮ್ಮ ಸಂಸ್ಕೃತಿಯನ್ನು ಶುದ್ಧೀಕರಿಸಿಕೊಳ್ಳಬಲ್ಲ ಅತ್ಯಂತ ನಾಗರಿಕ ಜನರು ನಾವು ಎಂದು ವಸಾಹತುಶಾಹಿಗೆ ತೋರಿಸಿಕೊಡಬೇಕೆಂಬುದನ್ನು ತನ್ನ ಹಂಬಲದ ಒಂದು ಭಾಗವಾಗಿಟ್ಟುಕೊಂಡದ್ದರಿಂದ ನಮ್ಮ ಸಮಾಜ ಸುಧಾರಣಾ ಚಳವಳಿ ಮಹಿಳಾ ಸಮಸ್ಯೆಯನ್ನು ತನ್ನ ಕೇಂದ್ರಸ್ಥಾನದಲ್ಲಿರಿಸಿಕೊಂಡಿತು. ಜಾತಿ ಮತ್ತು ವರ್ಗದ ಕುರಿತ ಕೆಲವು ಕಲ್ಪನೆಗಳೊಂದಿಗೇ ಭಾರತೀಯ ಮಹಿಳೆಯ ಕುರಿತ ಕಲ್ಪನೆಯನ್ನು ಮತ್ತೊಮ್ಮೆ ಪುನರ್ರೂಪಿಸಿ, ಪುನರ್ರಚಿಸಲಾಯಿತು. ಬಹುಮಂದಿ ಸಮಾಜ ಸುಧಾರಕರು ಸತೀ ಪದ್ಧತಿಯನ್ನು ಸಂಸ್ಕೃತಿ ಅಧಃಪತನದ ದ್ಯೋತಕವೆಂದು ಮನಗಂಡು ವಿರೋಧಿಸಿದರೂ, ವಾಸ್ತವವಾಗಿ ಸತೀ ಪ್ರಕರಣಗಳು ಹೆಚ್ಚಾಗತೊಡಗಿದ್ದು ಬ್ರಿಟಿಷರು ಅದನ್ನು ಕಾನೂನುಬಾಹಿರಗೊಳಿಸಿದಾಗ. ನಿಚ್ಚಳವಾಗಿ, ಸತಿ ಕೂಡ ಈಗ ಮೇಲ್ಜಾತಿಯ ಅಂತಸ್ತಿನ ಕುರುಹಾಗಿ, ಹಿಂದೂ ಮಹಿಳೆಯ, ಎಂತಲೇ "ಭಾರತೀಯ ಸಂಸ್ಕೃತಿ"ಯ ಹಿರಿಮೆಯನ್ನು ಪ್ರದರ್ಶಿಸಿತು. ರಾಷ್ಟ್ರೀಯತಾ ಚಳವಳಿ ಬಲಗೊಳ್ಳುತ್ತಾ ಹೋದಂತೆಯೂ ಮಹಿಳೆಯರು ನಿಜವಾದ ಭಾರತೀಯತೆಯ ರಕ್ಷಕರಾಗಿ ಕಾಣತೊಡಗಿದರು. ಪಾರ್ಥ ಚಟರ್ಜಿ ವಾದಿಸುವ ಪ್ರಕಾರ, ರಾಷ್ಟ್ರೀಯತಾ ವಾದಿಗಳು ಸಾಂಸ್ಕೃತಿಕ ವಲಯವನ್ನು ಎರಡು ಖಂಡಗಳನ್ನಾಗಿ ಬೇರ್ಪಡಿಸಿದರು – ಆಧ್ಯಾತ್ಮಿಕ ಮತ್ತು ಭೌತಿಕ, ಮನೆ ಮತ್ತು ಪ್ರಪಂಚ, ಆಂತರಿಕ ಮತ್ತು ಬಾಹ್ಯ. ಈ ವಿಂಗಡಣೆಯ ಪ್ರತಿ ಮೊದಲ ವಿಭಾಗದಲ್ಲಿಯೂ ಪಾಶ್ಚಾತ್ಯಕ್ಕಿಂತ ಪೌರಾತ್ಯ ಮೇಲು ಎಂದರು. ಮಹಿಳೆಯೆಂದರೆ ಮನೆ ಮತ್ತು ಆ ಆಂತರಿಕ ಜಗತ್ತು ಪಶ್ಚಿಮದ ಅಳತೆಗೋಲಿನಲ್ಲಿ ಕರಗಿ ಕಳೆದು ಹೋಗದಂತೆ ತಡೆಯುವ ಪ್ರತಿನಿಧಿಯಾದಳು. ಈ ಹೊಸ ಮಧ್ಯಮ ವರ್ಗದ ಭಾರತೀಯ ಮಹಿಳೆಯನ್ನು ಕೆಳಜಾತಿ, ಕೆಳ ವರ್ಗದ ಮಹಿಳೆ (ಗಯ್ಯಾಳಿ, ಕೀಳು, ಜಗಳಗಂಟಿ ಎನಿಸಿಕೊಂಡವಳು) ಮತ್ತು ಪಶ್ಚಿಮೀಕರಣಗೊಂಡ ಮಹಿಳೆ (ನೀತಿಗೆಟ್ಟ, ಪರಂಪರೆಯ ವಿನಾಶಕಿ ಎನಿಸಿಕೊಂಡವಳು) ಯರಿಗೆ ವಿರುದ್ಧವಾಗಿ ವ್ಯಾಖ್ಯಾನಿಸಲಾಯಿತು. ವಸಾಹತು ಆಡಳಿತಕ್ಕೆ ಹೊಂದಿಕೊಳ್ಳಬೇಕಾಗಿದ್ದರಿಂದ ಪುರುಷರು ತಮ್ಮ ಉಡುಗೆ-ತೊಡುಗೆ, ಆಹಾರಾಭ್ಯಾಸ, ಧಾರ್ಮಿಕ ಆಚರಣೆ–ಎಲ್ಲವನ್ನೂ ಬದಲಾಯಿಸಿಕೊಂಡರು. ಇದಕ್ಕೆ ಪರಿಹಾರವೆಂಬಂತೆ, ಹೆಂಗಸರು ಗಂಡಸರ ಹಾಗೆ ತಿನ್ನುವುದು, ಕುಡಿತ, ಧೂಮಪಾನ ಇತ್ಯಾದಿ ಮಾಡತಕ್ಕದ್ದಲ್ಲ ಅಂತಾಯಿತು. ಹೀಗೆ ರಾಷ್ಟ್ರೀಯತಾವಾದ, ಮಹಿಳೆಯರನ್ನು ಉನ್ನತ ಆಧ್ಯಾತ್ಮಿಕ ನೆಲೆ ಮತ್ತು ಕೆಳ ಭೌತಿಕ ಮಟ್ಟಗಳೆರಡೂ ಕೂಡಿದ ಹೊಸದೊಂದು ಬಗೆಯ ದಾಸ್ಯಕ್ಕೆ ತಂದಿಟ್ಟಿತು. ಇದರರ್ಥ ಮಹಿಳೆಯರು ಈ ದಾಸ್ಯವನ್ನು ಎಂದೂ ಪ್ರಶ್ನಿಸಲಿಲ್ಲವೆಂದಲ್ಲ. ದನಿಯೆತ್ತಿ ಪ್ರತಿಭಟಿಸಿದವರ ಉದಾಹರಣೆಗಳೆಂದರೆ ಪಂಡಿತಾ ರಮಾಬಾಯಿ ಮತ್ತು ತಾರಾಬಾಯಿ ಶಿಂಧೆ–ಇಬ್ಬರದೇ. ಇವರ ಕಥೆಯನ್ನು ಇನ್ನೆಲ್ಲಾದರೂ ಹೇಳೋಣ.

ಭಾರತದ ಇಂದಿನ ಸ್ತ್ರೀವಾದಿಗಳು ನಮ್ಮ ಸಮಾಜದ ಸಮಕಾಲೀನ ವಿಮರ್ಶೆಗೆ ಈ ಮತ್ತು ಇಂತಹ ಮಹಿಳೆಯರನ್ನು ಆದ್ಯರನ್ನಾಗಿ ಪರಿಗಣಿಸುತ್ತಾರೆ. ಹಾಗಾದರೆ ಅವರು ಯಾವುದೇ ಸರಳ ಅರ್ಥದಲ್ಲಿ "ಪಾಶ್ಚಾತ್ಯ"ರಾಗಿದ್ದರೇ? ಸ್ತ್ರೀವಾದದ ಕುರಿತು ಇರುವ ಭೀತಿ, ನಮ್ಮ ಸಂಸ್ಕೃತಿಯನ್ನು ಅದು ಟೀಕಿಸುತ್ತದೆ ಎಂಬ ಕಾರಣಕ್ಕಾಗಿ ಇರಬಹುದೇ ಎಂದು ಅಚ್ಚರಿಯಾಗುತ್ತದೆ. ಸ್ತ್ರೀವಾದ ನಮ್ಮ ನೆಲದ್ದಲ್ಲ ಎಂದು ತೀರ್ಮಾನಿಸುತ್ತೇವಾದರೆ, ನಮ್ಮ ಸಂಸ್ಕೃತಿಯ ಸ್ಥಳೀಯ ಟೀಕೆ ಇರಲು ಸಾಧ್ಯವಿಲ್ಲ ಎಂದು ನಮ್ಮ ಅರ್ಥವೇ? ಹಾಗಾದರೆ ಮೂಲತಃ ಉನ್ನತ ಜಾತಿ ಉನ್ನತ ವರ್ಗದವರಿಂದಲ್ಲದೆ, ಪುರುಷರಿಂದಲ್ಲದೆ (ಭಕ್ತಿ ಚಳವಳಿಗಳಂತೆ) ನಡೆದದ್ದು ಎಂದು ಒಪ್ಪಲೇಬೇಕಾದ ಸಂಸ್ಕೃತಿಯ ವಿಮರ್ಶೆಯ ದೀರ್ಘ ಪರಂಪರೆಯನ್ನು ನಾವು ಏನೆಂದು ಗಣಿಸಬೇಕು? ನಮ್ಮ ಪರಂಪರೆಯ

ಪರಿಶುದ್ಧತೆಯ ಸಮರ್ಥಕರಿಗೆ, ಸಂಸ್ಕೃತಿಯ " ಅವನತಿ" ಕಂಡು ಸಿಡಿದೇಳುವವರಿಗೆ ನಮ್ಮ ಪ್ರಶ್ನೆ: ಯಾರ ಸಂಸ್ಕೃತಿಯ ಬಗ್ಗೆ ನೀವು ಮಾತಾಡುತ್ತಿದ್ದೀರಿ? ಲಿಂಗ, ವರ್ಗ ಮತ್ತು ಜಾತಿಗಳ ಆಧಾರದ ಮೇಲೆ ಜನಸಮುದಾಯದ ಕೆಲ ಭಾಗಗಳನ್ನು ಹೊರತುಪಡಿಸಿದ ತಳಹದಿಯ ಮೇಲೆ ಒಂದು ಸಂಸ್ಕೃತಿ ನಿಂತಿದ್ದರೆ, ಆ ಹೊರತಾದವರು ತಮ್ಮದಲ್ಲದ ಸಂಸ್ಕೃತಿಯನ್ನು ಎತ್ತಿಹಿಡಿದು ಮುನ್ನಡೆಸಿಕೊಂಡು ಹೋಗಬೇಕೇ ಅಥವಾ ಅದನ್ನು ಪರಿವರ್ತಿಸಿಕೊಳ್ಳಲು ಬಯಸಬೇಕೆ?

ಸ್ತ್ರೀವಾದ ಪಾಶ್ಚಾತ್ಯವಾದದ್ದು ಎಂಬ ದೂರಿಗೆ ನಮ್ಮ ಪ್ರತಿಕ್ರಿಯೆ ಅದು ಪಾಶ್ಚಾತ್ಯ ಅಲ್ಲ ಎನ್ನುವುದಲ್ಲ. ಆದರೆ ಅದು ಪಾಶ್ಚಾತ್ಯ ಮಾತ್ರ ಅಲ್ಲ ಎನ್ನುವುದು. ಜಗತ್ತಿನಾದ್ಯಂತ ನಡೆದ ಅನೇಕ ವಿಮೋಚನಾ ಚಳವಳಿಗಳ ಇತಿಹಾಸಗಳು ಚೀನ, ಗಿನೀ-ಬಿಸಾ, ನಿಕಾರಾಗುವಾ ಮತ್ತು ಅಲ್ಜೀರಿಯಾದಂತಹ ವಿಭಿನ್ನ ದೇಶಗಳಲ್ಲಿ ವಿವಿಧ ಬಗೆಯ ಮಹಿಳಾ ಆಂದೋಲನಗಳು ನಡೆದಿರುವುದನ್ನು ತೋರಿಸಿಕೊಟ್ಟಿವೆ. ಹಾಗೆ ನೋಡಿದರೆ, ಪಶ್ಚಿಮದಲ್ಲಿ ನಡೆದ ಸ್ತ್ರೀವಾದಿ ಚಳವಳಿಯ ದ್ವಿತೀಯ ಅಲೆಯ ಕೆಲ ಯೋಜನೆಗಳು ಚೀನೀ ಮಹಿಳೆಯರು ಈ ಶತಮಾನದ ಮೊದಲ ದಶಕಗಳಲ್ಲಿ ಮಾಡಿದ "ಕಟು ನುಡಿ" ಮತ್ತು "ಪ್ರಜ್ಞಾ ಜಾಗೃತಿ" ತಂತ್ರಗಳ ಮೂಲಕ ವೈಯಕ್ತಿಕವಾದದ್ದನ್ನು ರಾಜಕೀಯಗೊಳಿಸುವ ಚಳವಳಿಗಳಿಂದ 1960ರ ದಶಕದಲ್ಲಿ ಕಲಿತಂತೆ ಕಾಣುತ್ತದೆ. [ರೆಡ್ ಆರ್ಮಿ ಚೀನೀ ರೈತಾಪಿ ಜನರನ್ನು ಕ್ರಿಯಾಶೀಲಗೊಳಿಸಿದ ಸಂದರ್ಭದಲ್ಲಿ ಹಳ್ಳಿಯ ಹೆಂಗಸರು, ಇತರೆಲ್ಲ ಹೆಂಗಸರಿಗೂ ಇದು ತಮ್ಮ ಮತ್ತು ಎಲ್ಲ ಮಹಿಳೆಯರ ಸಮಾನ ಬವಣೆ ಎಂದು ಅರಿವಾಗುವ ರೀತಿಯಲ್ಲಿ, ತಮ್ಮ ಬದುಕು ಬವಣೆಗಳ ಬಗ್ಗೆ ಸತ್ಯ ಸಂಗತಿ ಮಾತಾಡಿಕೊಳ್ಳಲು ಸಾರ್ವಜನಿಕ ಸ್ಥಳಗಳಲ್ಲಿ ನೆರೆಯುತ್ತಿದ್ದರು. ಹೀಗೆ ಸಾರ್ವಜನಿಕವಾಗಿ ತಮ್ಮ ಅನುಭವಗಳ ಬಗ್ಗೆ ದನಿ ಎತ್ತುವುದಕ್ಕೆ "ಕಟು ನುಡಿಯುವಿಕೆ" ಎಂದು ಹೆಸರು ಬಂತು. ಸಮಾನ ಅನುಭವಗಳ ಬಗ್ಗೆ ಪರಸ್ಪರ ಜಾಗೃತಿ ಹೆಚ್ಚಿಸಿಕೊಳ್ಳಲು ಪಾಶ್ಚಾತ್ಯ ಸ್ತ್ರೀವಾದಿಗಳು ಈ ಬಗೆಯ ತಂತ್ರವನ್ನು ತಮ್ಮ ಗುಂಪು ಚರ್ಚೆಗಳಲ್ಲಿ ಅಳವಡಿಸಿಕೊಂಡರು.]

ಬೇರೆ ಯಾವುದೇ ವಲಯದಲ್ಲಿನ ಹಾಗೆ ಇಲ್ಲಿ ಕೂಡ ಪಾಶ್ಚಾತ್ಯ ಚಿಂತನೆಗಳನ್ನು ಅಂತಂತೆಯೇ ಸೀದಾ ಎತ್ತಿಕೊಳ್ಳಲು ಬರುವುದಿಲ್ಲ ಅಥವಾ ಅಮಾಯಕರ ಮೇಲೆ ಅವುಗಳನ್ನು ಹೇರಲೂ ಸಾಧ್ಯವಿಲ್ಲ ಎಂದು ಭಾರತೀಯ ಮಹಿಳೆಯರ ಚಳವಳಿಯನ್ನು ಗಂಭೀರವಾಗಿ ಗಮನಿಸುವ ಯಾವ ಪ್ರಯತ್ನವೂ ತೋರಿಸಿಕೊಟ್ಟೀತು. ನಿರ್ದಿಷ್ಟ ಬಗೆಯ ಸಾಮಾಜಿಕ ಪರಿವರ್ತನೆಯನ್ನು ಸಾಧಿಸುವ ಗುರಿಯೊಂದಿಗೆ ಭಾರತೀಯ ಸ್ತ್ರೀವಾದಿಗಳು ಇವತ್ತು ತಮ್ಮ ಅನುಭವ ಹಾಗೂ ತಮ್ಮ ಇತಿಹಾಸಗಳ ಅರ್ಥವಿಶ್ಲೇಷಣೆಯ ಮೂಲಕ ತಮ್ಮ ಸಂಸ್ಕೃತಿಯ ವಿಮರ್ಶೆ ಮಾಡುತ್ತಿದ್ದಾರೆ. ಮತದಾನದ ಹಕ್ಕಿಗಾಗಿ ಹೋರಾಡಿದ 19ನೇ ಶತಮಾನದ ಬ್ರಿಟಿಷ್ ಮಹಿಳೆಯರಿಗಿಂತ, ಸಮಾನ ವೇತನ ಮತ್ತು ಸಮಾನ ಉದ್ಯೋಗಾವಕಾಶಗಳ ಬೇಡಿಕೆ ಹೊಂದಿದ್ದ 20ನೇ ಶತಮಾನದ ಚೀನೀ ಮಹಿಳೆಯರಿಗಿಂತ ಅಥವಾ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಪಾತ್ರವನ್ನು ಗುರುತಿಸಿಕೊಳ್ಳಬೇಕೆಂದು ಬಯಸಿದ ಭಾರತೀಯ ರಾಷ್ಟ್ರೀಯತಾ ವಾದಿ ಮಹಿಳೆಯರಿಗಿಂತಲೂ, ಇವರ ವ್ಯಾಖ್ಯಾನಗಳು ಅಗತ್ಯವಾಗಿಯೂ ಭಿನ್ನವಿರುತ್ತವೆ.

ಎಂತಲೇ, ಸಾರ್ವತ್ರಿಕ ಪುರುಷ ದಬ್ಬಾಳಿಕೆಯ ವಿರುದ್ಧ ಇಂಥದೇ ಎಂಬಂಥ ಸ್ತ್ರೀ ಪ್ರಕೃತಿಯೊಂದು ಹೋರಾಡುತ್ತಿದೆ ಎಂದು ನಾವು ವಾದಿಸಬಯಸುವುದಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ, ಸ್ತ್ರೀವಾದದೊಳಗಿನ ವೈವಿಧ್ಯ ಮತ್ತು ಅಸಮಾನತೆಯ ಬಗ್ಗೆ; ಯಾವೆಲ್ಲ ಬಗೆಯಲ್ಲಿ ಜಾತಿ, ವರ್ಗ, ಮತ್ತು ವಸಾಹತುಶಾಹಿಗಳೊಡನೆ ಲಿಂಗವೆಂಬುದು ಪರಸ್ಪರ ಹೆಣೆದುಕೊಂಡಿದೆ ಎನ್ನುವುದರ ಬಗ್ಗೆ; ಹಾಗೂ ಲಿಂಗಾಧಾರಿತ ಶೋಷಣೆಗೂ, ಅನ್ಯ ಬಗೆಯ ಶೋಷಣೆ ಗಳಿಗೂ ಇರುವ ಸಂಬಂಧ—ಇವೆಲ್ಲದರ ಕುರಿತು ಚಿಂತಿಸಲು ಮತ್ತು ಗ್ರಹಿಸಲು ನಾವು ಬಯಸುತ್ತೇವೆ. ನಮ್ಮ ಮಟ್ಟಿಗೆ

ಸ್ತ್ರೀವಾದ ಕೇವಲ ಶೈಕ್ಷಣಿಕ ವಿಷಯವಾಗಲೀ ಅಥವಾ ಕೇವಲ ಸಮರ್ಥನೆಗಾಗಿ ಮಾಡುವ ವಾಗ್ವಾದವಾಗಲೀ ಅಲ್ಲ; ನಮ್ಮ ನಿತ್ಯ ಜೀವನದ ಅರ್ಥವಿಶ್ಲೇಷಣೆಗಾಗಿ, ನಮ್ಮ ಸಂಸ್ಕೃತಿಯನ್ನು ಹೆಚ್ಚು ಸಮಾನವನ್ನಾಗಿ ಮಾಡಬಲ್ಲ ಪರಿವರ್ತನಶೀಲ ವಿಮರ್ಶೆ ಸಾಧ್ಯವಾಗುವಂತಹ ವಾತಾವರಣಕ್ಕಾಗಿ ನಡೆಸುವ ಹೋರಾಟ.

ಹೆಚ್ಚಿನ ಓದಿಗೆ :

ಸಂಗಾರಿ, ಕುಂಕುಮ್ ಮತ್ತು ಸುದೇಶ್ ವೈದ್ (ಸಂ.), *ರೀಕಾಸ್ಟಿಂಗ್ ವಿಮೆನ್.*

ಕಾಲಿ ಫಾರ್ ವಿಮೆನ್ : ದೆಹಲಿ, 1989, ಮುಖ್ಯವಾಗಿ ಪಾರ್ಥಚಟರ್ಜಿಯವರ "*ದ ನ್ಯಾಷನಲಿಸ್ಟ್ ರೆಸೊಲ್ಯೂಷನ್ ಆಫ್ ದ ವಿಮೆನ್ಸ್ ಕ್ವೆಸ್ಚನ್*";

ಲತಾಮಣಿಯವರ "*ಕನ್‌ಟೆನ್ಶಿಯಸ್ ಟ್ರೆಡಿಷನ್ಸ್ : ದ ಡಿಬೇಟ್ ಆನ್ ಸತಿ ಇನ್ ಕಲೋನಿಯಲ್ ಇಂಡಿಯಾ*", ಮತ್ತು ಉಮಾ ಚಕ್ರವರ್ತಿಯವರ "*ವ್ಹಾಟೆವರ್ ಹ್ಯಾಪನ್ಡ್ ಟು ದ ವೇದಿಕ್ ದಾಸಿ? ಓರಿಯೆಂಟಲಿಸ್ಮ್, ನ್ಯಾಷನಲಿಸ್ಮ್ ಎಂಡ್ ಆ ಸ್ಕ್ರಿಪ್ಟ್ ಫಾರ್ ದ ಪಾಸ್ಟ್*".

ತಾರು, ಸೂಸಿ ಮತ್ತು ಕೆ. ಲಲಿತಾ (ಸಂ), *ವಿಮೆನ್ ರೈಟಿಂಗ್ ಇನ್ ಇಂಡಿಯಾ.* ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ : ದೆಹಲಿ, 1991 ಮತ್ತು 1993.

ಮೀಸಲಾತಿ ಒಂದು ಸಮೀಕ್ಷೆ : ಭಾಗ – 3

ಜಾತಿ ರಾಜಕೀಯ ಮತ್ತು ಮೀಸಲಾತಿ, 1947 ರಿಂದ 1970

ಡಾ। ಜೆ. ಎಸ್. ಸದಾನಂದ

ನನ್ನ ಲೇಖನದ ಮೊದಲಿನ ಎರಡು ಭಾಗಗಳಲ್ಲಿ (*ಅರಿವು ಬರಹ* 2 ಮತ್ತು 4) ಸಾಂಪ್ರದಾಯಿಕ ಜಾತಿ ಪದ್ಧತಿಯ ಸಮಾಜಕ್ಕೂ ಮತ್ತು 'ಆಧುನಿಕ' ಪ್ರಜಾಪ್ರಭುತ್ವವಾದಿ ರಾಜಕೀಯಕ್ಕೂ ಆದ ಹೊಂದಾಣಿಕೆಯ ಫಲವಾಗಿ ಮೀಸಲಾತಿ ಹೇಗೆ ಒಂದು ಅನಿವಾರ್ಯ ರಾಜಕೀಯ ನೀತಿಯಾಯಿತು ಎನ್ನುವುದನ್ನು ವಿವರಿಸಲು ಪ್ರಯತ್ನಪಟ್ಟಿದ್ದೇನೆ. ಲೇಖನದ ಮೊದಲನೆಯ ಭಾಗದಲ್ಲಿ ಮೈಸೂರು ಸಂಸ್ಥಾನದ ವ್ಯಾಪ್ತಿಯಲ್ಲಿ ಬಂದ ಸಮಾಜದ ಸಂರಚನೆಯನ್ನು ಮತ್ತು ಅದಕ್ಕೆ ಸ್ಪಂದಿಸುವ ಮಹಾರಾಜರ ರಾಜಕೀಯವನ್ನು ವಿವರಿಸಿದ್ದೇನೆ. ಲೇಖನದ ಎರಡನೆಯ ಭಾಗದಲ್ಲಿ ಅಸಮಾನತೆಯ ತತ್ವದ ಆಧಾರದ ಮೇಲೆ ನಿಂತ ವಿವಿಧ ಕೋಮು/ಜಾತಿಗಳ ಪ್ರತಿನಿಧಿಗಳನ್ನು ಒಳಹಾಕಿಕೊಳ್ಳುವ ರಾಜಕೀಯ ಹೇಗೆ ಮಿಲ್ಲರ್ ವರದಿಯ ಅನುಷ್ಠಾನಕ್ಕೆ ಕಾರಣವಾಯಿತು ಮತ್ತು ಅಂತಹ ರಾಜಕೀಯ ವಿವಿಧ ಕೋಮು/ಜಾತಿಗಳನ್ನು ರಾಜಕೀಯ ಒತ್ತಡದ ಗುಂಪುಗಳಾಗಿ (ಪ್ರೆಷರ್ ಗ್ರೂಪ್ಸ್) ಪರಿವರ್ತಿಸಿದ ಪ್ರಕ್ರಿಯೆಯನ್ನು ಗುರುತಿಸಿದ್ದೇನೆ. ಲೇಖನದ ಪ್ರಸ್ತುತ ಭಾಗದಲ್ಲಿ ಸ್ವಾತಂತ್ರ್ಯಾನಂತರ ಮೀಸಲಾತಿಯು ನ್ಯಾಯಸಮ್ಮತ ರಾಜಕೀಯ ನೀತಿಯಾಗಿ ಮುಂದುವರಿದ ಮತ್ತು ಪ್ರಜಾಪ್ರಭುತ್ವ ರಾಜಕೀಯ, ಸಾಮಾಜಿಕ ಸಂರಚನೆಯ ಮೇಲೆ ಬೀರಿದ ಪ್ರಭಾವವನ್ನು ವಿವರಿಸುವ ಪ್ರಯತ್ನ ಮಾಡುತ್ತೇನೆ.

ಸ್ವಾತಂತ್ರ್ಯಾನಂತರ ಭಾರತವು ಹೊಸ ಸಾಂವಿಧಾನಿಕ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಪ್ಪಿಕೊಂಡಿತು. ಒಬ್ಬ ವ್ಯಕ್ತಿ, ಒಂದು ಮತ ಹಾಗೂ ಜಾತಿ ಕಾನೂನಿನ ಮುಂದೆ ಸಮಾನ – ಇವು ಈ ರಾಜಕೀಯದ ಮೂಲತತ್ವಗಳಾಗಿದ್ದವು. ಇಲ್ಲಿ ಉದ್ಭವವಾದ ಮೂಲಭೂತ ಸಮಸ್ಯೆಯೆಂದರೆ ಅಸಮಾನತೆಯು ಮೂಲಭೂತ ತತ್ವವಾಗಿರುವ ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ರಾಜಕೀಯ ಸಮಾನತೆಯನ್ನು ಸಾಧಿಸುವುದಾದರೂ ಹೇಗೆ ಎಂಬುದು. ವಿವಿಧ ಕೋಮು, ಜಾತಿಗಳಿಗೆ ಸೇರಿದ ಜನರನ್ನು ಒಂದು ರಾಷ್ಟ್ರದ ಪ್ರಜೆಗಳನ್ನಾಗಿ ಮಾಡುವಲ್ಲಿ ಇರುವ ಕಷ್ಟಗಳನ್ನು ಡಾ। ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಸಂವಿಧಾನ ಕರಡು ಸಮಿತಿಯನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಹೀಗೆ ವಿವರಿಸಿದ್ದಾರೆ :

"ನಾವು ರಾಜಕೀಯ ಪ್ರಜಾಪ್ರಭುತ್ವವನ್ನು ಸಾಮಾಜಿಕ ಪ್ರಜಾಪ್ರಭುತ್ವವನ್ನಾಗಿ ಕೂಡ ಮಾಡಬೇಕು. ಸಾಮಾಜಿಕ ಪ್ರಜಾಪ್ರಭುತ್ವದ ಅಡಿಪಾಯವಿಲ್ಲದೆ ರಾಜಕೀಯ ಪ್ರಜಾಪ್ರಭುತ್ವ ರೂಪುಗೊಳ್ಳುವುದಿಲ್ಲ. ಸಾಮಾಜಿಕ ಪ್ರಜಾಪ್ರಭುತ್ವ ಎಂದರೇನು? ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಒಂದು ತತ್ವವನ್ನಾಗಿ ಜೀವನ ವಿಧಾನದಲ್ಲಿ ಗುರುತಿಸುವುದೆಂದೇ ಇದರರ್ಥ."

ಸಾಮಾಜಿಕ ಪ್ರಜಾಪ್ರಭುತ್ವವನ್ನು ಭಾರತೀಯ ಸನ್ನಿವೇಶದಲ್ಲಿ ಸಾಧಿಸುವುದು ಪ್ರಜಾಪ್ರಭುತ್ವದ ಉಳಿವಿಗೆ ಎಷ್ಟು ಅಗತ್ಯ ಎನ್ನುವುದನ್ನು ಅವರು ಹೀಗೆ ತಿಳಿಯುತ್ತಾರೆ :

"ಭಾರತೀಯ ಸಮಾಜದಲ್ಲಿ ಎರಡು ಅಂಶಗಳು ಇಲ್ಲದಿರುವ ವಾಸ್ತವವನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಸಮಾನತೆ ಅದರಲ್ಲೊಂದು. ಸಾಮಾಜಿಕ ಸ್ತರದಲ್ಲಿ, ಕೆಲವರನ್ನು ಮೇಲಕ್ಕೆತ್ತುವ ಮತ್ತೆ ಕೆಲವರನ್ನು ಕೆಳಕ್ಕೆ ತುಳಿಯುವ ಸಮಾಜ ನಮ್ಮ ಭಾರತದಲ್ಲಿದೆ. ಆರ್ಥಿಕ ಸ್ತರದಲ್ಲಿ ಕೆಲವರು ಭಾರಿ ಸಂಪತ್ತು ಹೊಂದಿರುವ ಮತ್ತು ಇನ್ನುಳಿದವರು ಅತ್ಯಂತ ಬಡತನದಲ್ಲಿರುವ ಸಮಾಜ ನಮ್ಮಲ್ಲಿದೆ. ಜನವರಿ 26, 1956ರಂದು ವೈರುಧ್ಯದ ಬದುಕನ್ನು ನಾವು ಪ್ರವೇಶಿಸುತ್ತಿದ್ದೇವೆ. ರಾಜಕೀಯದಲ್ಲಿ ನಾವು ಸಮಾನತೆಯನ್ನು ಪಡೆಯುತ್ತೇವೆ. ರಾಜಕೀಯವಾಗಿ 'ಒಬ್ಬ ವ್ಯಕ್ತಿ

ಒಂದು ಮತ'ದ ತತ್ವವನ್ನು ನಾವು ಗುರುತಿಸುತ್ತಿದ್ದೇವೆ. ಆರ್ಥಿಕ ಮತ್ತು ಸಾಮಾಜಿಕ ರಚನೆಯಲ್ಲಿ 'ಒಬ್ಬ ವ್ಯಕ್ತಿ ಒಂದು ಮೌಲ್ಯ'ದ ತತ್ವವನ್ನು ನಾವು ಅಲ್ಲಗಳೆಯುತ್ತಿದ್ದೇವೆ. ಎಷ್ಟು ಕಾಲ ನಾವು ಇಂತಹ ವೈರುಧ್ಯದ ಬದುಕನ್ನು ಬದುಕಬೇಕು? ಎಷ್ಟು ಕಾಲ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಸಮಾನತೆಯನ್ನು ನಾವು ಅಲ್ಲಗಳೆಯಬೇಕು? ಬಹಳ ಕಾಲ ಇದನ್ನು ಅಲ್ಲಗಳೆದರೆ, ರಾಜಕೀಯ ಪ್ರಜಾಪ್ರಭುತ್ವವನ್ನು ಗಂಡಾಂತರದಲ್ಲಿ ಸಿಲುಕಿಸಬೇಕಾಗುತ್ತದೆ. ಆದಷ್ಟು ಶೀಘ್ರವಾಗಿ ಈ ವೈರುಧ್ಯವನ್ನು ಕೊನೆಗಾಣಿಸಬೇಕಾಗುತ್ತದೆ. ಇಲ್ಲದಿದ್ದಲ್ಲಿ ಅಸಮಾನತೆಯಿಂದ ಬಳಲುತ್ತಿರುವವರೆಲ್ಲರೂ ಈ ಸಮಿತಿ ಕಷ್ಟಪಟ್ಟು ಕಟ್ಟಿರುವ ರಾಜಕೀಯ ಪ್ರಜಾಪ್ರಭುತ್ವವನ್ನು ನಾಶಮಾಡಿ ಬಿಡುತ್ತಾರೆ.''

ಹೀಗೆ ಅಂಬೇಡ್ಕರ್‌ರವರು ರಾಜಕೀಯ ಪ್ರಜಾಪ್ರಭುತ್ವದ ತತ್ವ ಮತ್ತು ಭಾರತೀಯ ಸಮಾಜದ ರಚನೆಯ ವೈರುಧ್ಯವನ್ನು ಸ್ಪಷ್ಟವಾಗಿ ಗುರುತಿಸಿದ್ದರು. ಇದರ ಪರಿಣಾಮದಿಂದಲೇ ನಮ್ಮ ಸಂವಿಧಾನದಲ್ಲಿ 15(4), 16(4) ಮತ್ತು 46ನೇ ವಿಧಿಗಳಲ್ಲಿ ಮೀಸಲಾತಿಯು ಅಧಿಕೃತವಾಗಿ ಸೇರ್ಪಡೆಯಾಯಿತು. ಸಂವಿಧಾನದಲ್ಲಿ ಇದನ್ನು ಅಳವಡಿಸಿ ಕೊಂಡಿರುವ ಮಾತು ಹಾಗಿರಲಿ' ಪ್ರಸ್ತುತದಲ್ಲಿ ನಮಗೆ ಮುಖ್ಯವಾಗಿರುವುದು ಸ್ವಾತಂತ್ರ್ಯಾನಂತರದ ಮೈಸೂರು ಹಾಗೂ ನಂತರದ ಕರ್ನಾಟಕದ ರಾಜಕೀಯ ಅಂಬೇಡ್ಕರ್‌ರವರ ಭವಿಷ್ಯವಾಣಿಯನ್ನು ಹೇಗೆ ಪುಷ್ಟೀಕರಿಸುತ್ತದೆ ಎನ್ನುವುದು.

ಮಿಲ್ಲರ್ ವರದಿ ಜಾರಿಯಾದ ಇಪ್ಪತ್ತು ವರ್ಷಗಳ ನಂತರವೂ ಸರಕಾರಿ ನೌಕರಿಯಲ್ಲಿ ಬ್ರಾಹ್ಮಣೇತರರಿಗೆ ಪ್ರಾತಿನಿಧ್ಯ ಸಾಕಷ್ಟು ಸಿಗಲಿಲ್ಲ. ಮಿಲ್ಲರ್ ವರದಿ ಇಟ್ಟುಕೊಂಡ ಗುರಿಯಂತೆ1921ರಿಂದ ಏಳು ವರ್ಷಗಳ ಅವಧಿಯಲ್ಲಿ ಉನ್ನತ ಹುದ್ದೆಯ ಶೇಕಡಾ 50 ಭಾಗ ಮತ್ತು ಕೆಳಗಿನ ಹುದ್ದೆಗಳಲ್ಲಿ ಮೂರನೆ ಎರಡರಷ್ಟು ಹುದ್ದೆಗಳು ಬ್ರಾಹ್ಮಣೇತರರಿಗೆ ಸಿಗಬೇಕಿತ್ತು. 1941ರ ಅಂಕಿ ಅಂಶಗಳಂತೆ ಶೇಕಡಾ 34.45 ಗೆಜೆಟೆಡ್ ಹುದ್ದೆಗಳು ಮತ್ತು ಶೇಕಡ 49.36 ಗೆಜೆಟೆಡ್ ಅಲ್ಲದ ಹುದ್ದೆಗಳು ಬ್ರಾಹ್ಮಣರ ಪಾಲಾಗಿದ್ದವು. ಈ ಕೆಳಗೆ ಕೊಟ್ಟಿರುವ ಅಂಕಿ ಅಂಶಗಳು 1941ರಲ್ಲಿದ್ದ ವಿವಿಧ ಜಾತಿ/ಕೋಮುಗಳ ಪ್ರಾತಿನಿಧ್ಯವನ್ನು ಸ್ಪಷ್ಟಪಡಿಸುತ್ತವೆ :

ಕೋಷ್ಟಕ 1.

ರಾಜ್ಯ ಸರ್ಕಾರದ ಸೇವೆಯಲ್ಲಿ ವಿವಿಧ ಜಾತಿ ಕೋಮುಗಳ ಪ್ರಾತಿನಿಧ್ಯ (1941ರಲ್ಲಿ ಶೇಕಡಾವಾರು)

ಜಾತಿ/ಕೋಮುಗಳು	ಹುದ್ದೆಗಳು	
	ಗೆಜೆಟೆಡ್	ಗೆಜೆಟೆಡ್ ಅಲ್ಲದವುಗಳು
ಬ್ರಾಹ್ಮಣರು	34.45	49.36
ಒಕ್ಕಲಿಗರು	8.08	5.50
ಲಿಂಗಾಯಿತರು	10.63	7.40
ಕುರುಬರು	1.63	0.80
ಬೇಡರು	0.85	0.16
ಶೋಷಿತ ಜನಾಂಗ (ಡಿಪ್ರೆಸ್ಡ್ ಕ್ಲಾಸಸ್)	4.58	6.95
ಮುಸಲ್ಮಾನರು	10.52	7.95

ಮೂಲ : ಎಸ್. ಚಂದ್ರಶೇಖರ್, *ಡೈಮೆನ್‌ಷನ್ಸ್ ಆಫ್ ಸೋಷಿಯೋ-ಪೊಲಿಟಿಕಲ್ ಛೇಂಜ್ ಇನ್ ಮೈಸೂರ್*, 1918-80, ನ್ಯೂ ಡೆಲ್ಲಿ, ಆಶಿಶ್ ಪಬ್ಲಿಷಿಂಗ್ ಹೌಸ್,1985, ಪುಟ 81.

ಬ್ರಾಹ್ಮಣೇತರರಿಗೆ ಸಾಕಷ್ಟು ಪ್ರಾತಿನಿಧ್ಯ ದೊರೆಯದಿರುವ ಅಸಮಾಧಾನ ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಕಾಣಿಸಿಕೊಳ್ಳದಿದ್ದರೂ ನಂತರ ಹೋರಾಡುವಂತೆ ಅವರನ್ನು ಪ್ರೇರೇಪಿಸಿತು. ಬ್ರಾಹ್ಮಣೇತರರೆಂದು ಗುರುತಿಸಲ್ಪಟ್ಟ ಎಲ್ಲ ಜಾತಿಗಳೂ ಮೀಸಲಾತಿಯ ಲಾಭವನ್ನು ಪಡೆಯಲಿಲ್ಲ. ಇವರಲ್ಲಿ ಹೆಚ್ಚು ಲಾಭವನ್ನು ಪಡೆದವರು ಲಿಂಗಾಯಿತರು. ಇದಕ್ಕೆ ಪ್ರಮುಖ ಕಾರಣಗಳು ಎರಡು: ಒಂದು, ಆರ್ಥಿಕವಾಗಿ ಅವರು ಉಳಿದವರಿಗಿಂತ ಪ್ರಬಲರಾಗಿದ್ದುದು ಮತ್ತು ಎರಡು, ವೀರಶೈವ ಮಠಗಳು ಶಿಕ್ಷಣ ಸಂಸ್ಥೆಗಳನ್ನು ರಾಜ್ಯಾದ್ಯಂತ ಸ್ಥಾಪಿಸಿ ವಿದ್ಯಾಭ್ಯಾಸಕ್ಕೆ ಅವಕಾಶ ಮಾಡಿಕೊಟ್ಟಿದ್ದುದು. ಇದೇ ಕಾರಣದಿಂದ ಕ್ರಮೇಣ ಸ್ವಾತಂತ್ರ್ಯಾನಂತರ ಬ್ರಾಹ್ಮಣೇತರ ರಾಜಕೀಯ ಗುಂಪು ಒಡೆದು ಹಿಂದುಳಿದ ವರ್ಗದ ರಾಜಕೀಯಕ್ಕೆಡೆ ಮಾಡಿಕೊಟ್ಟಿತು. ಅದೇನೆ ಇರಲಿ, ಸರಕಾರಿ ಸೇವೆಯಲ್ಲಿ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಅಸಮ ಪ್ರಮಾಣದ ಪ್ರಾತಿನಿಧ್ಯವು ಮೀಸಲಾತಿ ರಾಜಕೀಯದ ಮುಂದುವರಿಕೆಗೆ ಸಾಕಷ್ಟು ಸಮರ್ಥನೆ ಮಾಡಿಕೊಟ್ಟಿತು.

ಸ್ವಾತಂತ್ರ್ಯಾನಂತರ ಬ್ರಾಹ್ಮಣೇತರರ ಗುಂಪು ತನ್ನ ಸುಸಂಬದ್ಧತೆಯನ್ನು ಕಾಯ್ದುಕೊಳ್ಳಲಾಗಲಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಬ್ರಾಹ್ಮಣೇತರರೆಂದು ಕರೆದುಕೊಂಡ ಜಾತಿಗಳು ಸಮಾನ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿತಾಸಕ್ತಿಗಳನ್ನು ಹೊಂದಿರಲಿಲ್ಲ. ಒಕ್ಕಲಿಗ ಮತ್ತು ಲಿಂಗಾಯಿತರು ಮೀಸಲಾತಿಯ ಬಹುಪಾಲು ಲಾಭವನ್ನು ಪಡೆದುಕೊಂಡಿದ್ದು ಇದನ್ನು ಸ್ಪಷ್ಟಪಡಿಸುತ್ತದೆ. ಈ ಎರಡು ಕೋಮುಗಳು ಜನಸಂಖ್ಯೆಯ ಬಹುಪಾಲನ್ನು ಒಳಗೊಂಡಿರುವ ಗ್ರಾಮೀಣ ಪ್ರದೇಶದಲ್ಲಿ ಬಹಳ ಪ್ರಬಲ ಕೋಮುಗಳಾಗಿದ್ದವು.[1] 1830ರಲ್ಲಿ ಮಹಾರಾಜರ ಆಳ್ವಿಕೆಯ ವಿರುದ್ಧ ಪ್ರಾದೇಶಿಕ ಮಟ್ಟದಲ್ಲಿ ಎದ್ದ ದಂಗೆಗೆ ಪ್ರಮುಖ ಕಾರಣ ರಾಜಪ್ರಭುತ್ವವು ಗ್ರಾಮೀಣ ಪ್ರದೇಶದ ಅಧಿಕಾರದಲ್ಲಿ ಪ್ರವೇಶ ಮಾಡಿದ್ದು ಮತ್ತು ರಾಜ್ಯದ ಆದಾಯಕ್ಕೆ ತೆರಿಗೆಯನ್ನು ವಸೂಲಿ ಮಾಡಲು ಮಾಡಿದ ಪ್ರಯತ್ನ ಎಂದು ಹೇಳಲಾಗಿದೆ.[2] ಇದರಿಂದ ಕಲಿತ ಪಾಠದಿಂದಾಗಿ ಮೈಸೂರು ಸರ್ಕಾರ ಮುಂದೆಂದೂ ಗ್ರಾಮೀಣ ಮಟ್ಟದ ವ್ಯವಹಾರದಲ್ಲಿ ಕೈ ಹಾಕದೆ ಇರಲು ನಿರ್ಧರಿಸಿತು. ಅತ್ಯಂತ ಮಿತವಾದ ತೆರಿಗೆಯನ್ನು ವಿಧಿಸಿ ಗ್ರಾಮೀಣ ಅಧಿಕಾರದ ಸ್ವಾಯತ್ತತೆಯನ್ನು ಹಾಗೆಯೇ ಉಳಿಸಿಕೊಂಡಿತು. ಇದರಿಂದಾಗಿ ಗ್ರಾಮೀಣ ಮಟ್ಟದ ರಾಜಕೀಯಕ್ಕೂ ರಾಜ್ಯ ಮಟ್ಟದ (ನಗರ ಕೇಂದ್ರೀಕೃತ) ರಾಜಕೀಯಕ್ಕೂ ಹೊಂದಾಣಿಕೆ ಇರಲಿಲ್ಲ. ಗ್ರಾಮೀಣ ಮಟ್ಟದಲ್ಲಿ ಲಿಂಗಾಯಿತರು ಮತ್ತು ಒಕ್ಕಲಿಗರು ತಮ್ಮ ಸಾಂಪ್ರದಾಯಿಕ ಸವಲತ್ತು ಮತ್ತು ಅಧಿಕಾರವನ್ನು ಮುಂದುವರೆಸಿಕೊಂಡು ಹೋಗುವ ಅಲಿಖಿತ ವಾಗ್ದಾನವನ್ನು ಮಹಾರಾಜರಿಂದ ಪಡೆದುಕೊಂಡರು. ಗ್ರಾಮೀಣ ರಾಜಕೀಯವನ್ನು ಅವರು ತಮ್ಮ ಸಂಪೂರ್ಣ ಹತೋಟಿಗೆ ತೆಗೆದುಕೊಳ್ಳಲಾಗದಿರುವುದಕ್ಕೆ ಮಹಾರಾಜರು ಅಲ್ಲಿಯ ಯಾವ ಜಾತಿಯ ಜೊತೆಗೂ ರಕ್ತಸಂಬಂಧ ಹೊಂದಿಲ್ಲದೆ ಇದ್ದುದೂ ಒಂದು ಕಾರಣ. ಅವರು ಯಾದವ ಜಾತಿಗೆ ಸೇರಿದವರಾಗಿದ್ದು ಮೈಸೂರಿನ ಜಾತಿ

---

1. ಪ್ರಾಬಲ್ಯತೆ ಹಲವಾರು ಸ್ತರಗಳಿಂದ ಕೂಡಿದ್ದು ಬರೀ ಆರ್ಥಿಕವಾಗಿ ಪ್ರಾಬಲ್ಯ ಮಾತ್ರವಾಗಿರಲಿಲ್ಲ. ಎಂ. ಎನ್. ಶ್ರೀನಿವಾಸ್‌ರು ಪ್ರಬಲ ಕೋಮಿನ ಲಕ್ಷಣಗಳನ್ನು ಹೀಗೆ ಪಟ್ಟಿ ಮಾಡುತ್ತಾರೆ. (1) ಗ್ರಾಮದ ಬಹುಪಾಲು ಭೂಮಿಯ ಒಡೆತನವನ್ನು ಹೊಂದಿರುವುದು, (2) ಜನಸಂಖ್ಯಾ ಬಲ, (3) ಗ್ರಾಮ ಮುಖ್ಯಸ್ಥನ ಅಧಿಕಾರ ಹೊಂದಿರುವುದು, (4) ಲೇವಾದೇವಿ ವ್ಯವಹಾರದ ಆಧಾರದ ಮೇಲೆ ನಿಂತ ಪೋಷಕ - ಆಶ್ರಿತ ಸಂಬಂಧದ ನಾಯಕತ್ವವನ್ನು ಪಡೆದಿರುವುದು, (5) ಸಾಂಪ್ರದಾಯಿಕ ಜಾತಿ ವ್ಯವಸ್ಥೆಯಲ್ಲಿ ತುಲನಾತ್ಮಕವಾಗಿ ಉನ್ನತ ಸ್ಥಾನ ಮಾನದ ಗಳಿಕೆ. (ವಿವರಗಳಿಗೆ ನೋಡಿ : ಶ್ರೀನಿವಾಸ ಎಂ. ಎಸ್. *ದಿ ಡಾಮಿನೆಂಟ್ ಕಾಸ್ಟ್ ಇನ್ ರಾಂಪುರ ಅಮೇರಿಕನ್ ಅಂಥ್ರಾಪಾಲಿಟಿಸ್ಟ್, ವಾಷಿಂಗ್ಟನ್,* 1-16, 1959.

2. *ರಿಪೋರ್ಟ್ ಆನ್ ದಿ ಇನ್‌ಸರೆಕ್ಷನ್ ಇನ್ ಮೈಸೂರು,* ಡಿಸೆಂಬರ್, 1833, ಗವರ್ನ್‌ಮೆಂಟ್ ಆಫ್, ಮೈಸೂರು, 1856.

ವ್ಯವಸ್ಥೆಯಲ್ಲಿ ಯಾವುದೇ ನಿರ್ದಿಷ್ಟ ಸ್ಥಾನವನ್ನು ಆ ಜಾತಿ ಹೊಂದಿರಲಿಲ್ಲ. ಇನ್ನು ಕೆಲವರ ಪ್ರಕಾರ ಮಹಾರಾಜರು ಕುಂಬಾರ ಅಥವಾ ಅದಕ್ಕಿಂತಲೂ ಕೆಳಜಾತಿಗೆ ಸೇರಿದವರಾಗಿದ್ದು ಕ್ರಮೇಣ ಕ್ಷತ್ರಿಯರ ಸ್ಥಾನವನ್ನು ಪಡೆದವರು. ಅದು ಏನೇ ಇರಲಿ, ಈ ಹಿನ್ನೆಲೆಯಿಂದಾಗಿ ಪ್ರಾದೇಶಿಕ ರಾಜಕೀಯದಲ್ಲಿ ನಿರ್ಣಾಯಕವಾಗಿ ಪ್ರವೇಶ ಮಾಡಲು ಅವರಿಗೆ ಸಾಧ್ಯವಾಗಲಿಲ್ಲ.[3]

ಗ್ರಾಮೀಣ ಪ್ರದೇಶದ ಈ ಪ್ರಾಬಲ್ಯವನ್ನು ಹಾಗೆಯೇ ಉಳಿಸಿಕೊಂಡು ಬರುವ ಪಟ್ಟಭದ್ರ ಹಿತಾಸಕ್ತಿ ಲಿಂಗಾಯಿತ, ಒಕ್ಕಲಿಗರ ಕೋಮುಗಳಲ್ಲಿ ಬೆಳೆದಿದ್ದು ಅತ್ಯಂತ ಸಹಜವಾದ ಬೆಳವಣಿಗೆಯಾಗಿತ್ತು ಎಂದು ಹೇಳಬಹುದು. ಜೇಮ್ಸ್ ಮನೋರ್ ಅವರು ಕರ್ನಾಟಕ ಗ್ರಾಮೀಣ ಪ್ರದೇಶದ ಜಾತಿ/ಕೋಮುಗಳ ಪ್ರಾಬಲ್ಯದ ಮೂರು ಸ್ವರೂಪಗಳನ್ನು ಗುರುತಿಸುತ್ತಾರೆ.

ಮೊದಲನೆಯದಾಗಿ, ರಾಷ್ಟ್ರಮಟ್ಟದ ರಾಜಕೀಯ ಆರ್ಥಿಕ, ಸಾಮಾಜಿಕ ಸುಧಾರಣೆಗಳನ್ನು ಜಾರಿಗೆ ತರುವ ಉದ್ದೇಶ ಹೊಂದಿದ್ದರೂ ಪ್ರಾದೇಶಿಕ ಮಟ್ಟದಲ್ಲಿ ರಾಜಕೀಯ ಎಂದರೆ ಗ್ರಾಮಗಳಲ್ಲಿನ ವಿವಿಧ ಜಾತಿ ಗುಂಪುಗಳ ನಡುವಿನ ಅಧಿಕಾರ ಸಂಬಂಧವೇ ಆಗಿತ್ತು. ಆಧುನಿಕ ರಾಜಪ್ರಭುತ್ವ ಈ ದೃಷ್ಟಿಯಿಂದ ಗ್ರಾಮೀಣ ರಾಜಕೀಯದ ವ್ಯಾಪ್ತಿಯ ಒಳಗೆ ಬರಲಿಲ್ಲ. ಪ್ರಜಾಪ್ರಭುತ್ವದ ಚುನಾವಣಾ ಪದ್ಧತಿಯಲ್ಲಿ ಯಾವ ಪ್ರತಿನಿಧಿಯನ್ನಾದರೂ ಆರಿಸುವ ಹಕ್ಕಿನ ಪ್ರಜ್ಞೆ ಜನರಿಗೆ ಬಂದದ್ದೇನೋ ನಿಜ. ಆದರೆ ಅಂತಹ ಪ್ರಜ್ಞೆ ಸಾಂಪ್ರದಾಯಿಕ ಸಮಾಜ ಮತ್ತು ಅದರ ಅಡಿಪಾಯವಾದ ಜಾತಿಗಳ ನಡುವಿನ ಅಧಿಕಾರ ಸಂಬಂಧವನ್ನು ಬದಲಿಸುವಲ್ಲಿ ಸಹಕಾರಿಯಾಗಿರಲಿಲ್ಲ. ಈ ಕಾರಣದಿಂದಲೇ ಬಡವ, ಶ್ರೀಮಂತರ ನಡುವಿನ ಕಂದರವನ್ನು ಮುಚ್ಚುವ ರಾಜಕೀಯ ಸುಧಾರಣೆಗಳು ಫಲಕಾರಿಯಾಗಲಿಲ್ಲ.

ಎರಡನೆಯದಾಗಿ, ಗ್ರಾಮೀಣ ಮಟ್ಟದಲ್ಲಿ ಪ್ರಬಲ ಕೋಮುಗಳ ಪ್ರಾಬಲ್ಯ ಹಾಗೇ ಉಳಿದುಕೊಂಡು ಬಂದುದಕ್ಕೆ ಕಾರಣ ಅವು ಆರ್ಥಿಕವಾಗಿ ಪ್ರಬಲವಾಗಿದ್ದುದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಕೆಲಮಟ್ಟಿಗಾದರೂ ಜಾತಿ ಮತ್ತು ವರ್ಗಗಳು ಸಮಾನಾರ್ಥಕವಾಗಿದ್ದುದು. ಹೀಗೆ ಹೇಳುವಾಗ ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಿಕೊಂಡಿದ್ದ ಜಾತಿಗಳು ಇಡಿಯಾಗಿಯೇ ಒಂದು ವರ್ಗಕ್ಕೆ ಸೇರಿದವು ಎಂದು ಸರಳೀಕರಿಸುವುದು ಸರಿಯಲ್ಲ. ಇಲ್ಲಿ 'ವರ್ಗ'ವನ್ನು ಸಮಾನ ಕಾರ್ಯಗಳನ್ನು ನಿರ್ವಹಿಸುವ ತಾವೆಲ್ಲ ಒಂದೇ ಗುಂಪಿಗೆ ಸೇರಿದ್ದೇವೆ ಎನ್ನುವ ಪ್ರಜ್ಞೆಯನ್ನು ಹೊಂದಿರುವ ಗುಂಪು ಎಂದು ವ್ಯಾಖ್ಯಾನಿಸಬಹುದು. ಹೀಗೆ ವ್ಯಾಖ್ಯಾನಿಸುವಲ್ಲಿ ತೊಂದರೆಯೂ ಇದೆ. ಏಕೆಂದರೆ ಒಂದು ಜಾತಿಗೆ ಸೇರಿದವರೆಲ್ಲರಿಗೂ ವರ್ಗ ಪ್ರಜ್ಞೆ ಇರುವುದಿಲ್ಲ. ಜಾತಿಪ್ರಜ್ಞೆ ವರ್ಗಪ್ರಜ್ಞೆಗಿಂತಲೂ ಪ್ರಬಲವಾಗಿರುವುದನ್ನು ನಾವು ಕಾಣುತ್ತೇವೆ. ಆರ್ಥಿಕವಾಗಿ ಸಮಾನ ಸ್ಥಾನದಲ್ಲಿರುವವರನ್ನು ಜಾತಿ ಬೇರ್ಪಡಿಸುತ್ತದೆ. ಇಷ್ಟೆಲ್ಲಾ ಆದರೂ ಜಾತಿ

---

3. ಕುಮಾರ್, ರವೀಂದ್ರ, *ದಿ ಟ್ರಾನ್ಸ್‌ಫಾರ್ಮೆಷನ್ ಆಫ್ ರೂರಲ್ ಪ್ರೊಟೆಸ್ಟ್ ಇನ್ ಇಂಡಿಯಾ*. ಎಸ್. ಸಿ. ಮಾಲಿಕ್ (ಸಂ.), *ಡಿಸೆಂಟ್, ಪ್ರೊಟೆಸ್ಟ್ ಅಂಡ್ ರಿಫಾರ್ಮ್ ಇನ್ ಇಂಡಿಯನ್ ಸಿವಿಲೀಜಸನ್*, ಶಿಮ್ಲಾ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡಿ, 1977, ಪುಟ 1, 5-8. ಮತ್ತು

   ಮನೋರ್, ಜೇಮ್ಸ್, *ಕರ್ನಾಟಕ ಕಾಸ್ಟ್, ಕ್ಲಾಸ್, ಡಾಮಿನೆನ್ಸ್ ಎಂಡ್ ಪೊಲಿಟಿಕ್ಸ್ ಇನ್ ಎ ಕೊಹಿಸಿವ್ ಸೊಸೈಟಿ* ಫ್ರಾಂಕೆಲ್, ರಾವ್ (ಸಂ.) *ಡಾಮಿನೆನ್ಸ್ ಎಂಡ್ ಸ್ಟೇಟ್ ಪವರ್ ಇನ್ ಮಾಡರ್ನ್ ಇಂಡಿಯಾ-ಡಿಕ್ಲೈನ್ ಆಫ್ ಎ ಸೋಷಿಯಲ್ ಆರ್ಡರ್*. ಸಂಪುಟ-1 ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ದೆಹಲಿ, 1989, ಪುಟ 332-33.

ಎನ್ನುವುದು ಕೇವಲ ಚಿಂತನೆಯ ಮಟ್ಟದಲ್ಲಿ, ಮತ ಶಾಸ್ತ್ರೀಯವಾಗಿ ಮಾತ್ರ ಅಸ್ತಿತ್ವದಲ್ಲಿರುತ್ತದೆ ಎಂದು ಹೇಳಲಾಗುವುದಿಲ್ಲವೆನ್ನುವುದನ್ನು ನೆನಪಿಡಬೇಕು. ಜಾತಿ ಎನ್ನುವುದು ಭೌತಿಕ ನೆಲೆಯನ್ನು ಹೊಂದಿದ್ದು ಮೂರ್ತ ಸ್ವರೂಪದ್ದಾಗಿದೆ.

ಬಡ ಒಕ್ಕಲಿಗರನ್ನು ಶೋಷಿಸುವ ಶ್ರೀಮಂತ ಒಕ್ಕಲಿಗರು ಹಾಗೆಯೇ ತಮ್ಮ ಜಾತಿಯ ಬಡವರನ್ನೇ ಶೋಷಿಸುವ ಶ್ರೀಮಂತ ಲಿಂಗಾಯಿತರು ಇರುವ ಗ್ರಾಮಗಳನ್ನು ನಾವು ಕಾಣುತ್ತೇವೆ. ಹೀಗಿದ್ದೂ ಒಂದು ಗ್ರಾಮವನ್ನು ಒಕ್ಕಲಿಗರ ಪ್ರಾಬಲ್ಯವಿರುವ ಗ್ರಾಮವೆಂದೋ, ಲಿಂಗಾಯಿತರು ಪ್ರಬಲರಾಗಿರುವ ಗ್ರಾಮವೆಂದೋ ಗುರುತಿಸುವುದು ಸಾಧ್ಯವಾಗುತ್ತದೆ. ಇಂತಹ ಗ್ರಾಮಗಳಲ್ಲಿರುವ ಬಡ ಒಕ್ಕಲಿಗ ಅಥವಾ ಲಿಂಗಾಯಿತರಿಗೆ ತಾವು ಶೋಷಣೆಗೆ ಒಳಗಾದವರು ಎನ್ನುವ ಪ್ರಜ್ಞೆ ಇರುತ್ತದೆ. ಆದರೆ ಅದಕ್ಕೆ ಪರಿಹಾರ ಕಂಡು ಕೊಳ್ಳಲು ಅವರು ಮಾಡುವ ಹೋರಾಟ ಜಾತಿಯ ರೂಪವನ್ನೇ ಪಡೆಯುತ್ತದೆ ಮತ್ತು ಅದು ವ್ಯಕ್ತವಾಗುವ ಭಾಷೆಯೂ ಜಾತಿಯೆ. ಇದರ ಪರಿಣಾಮದಿಂದ ಜಾತಿ ವ್ಯವಸ್ಥೆ ಭದ್ರವಾಗಿಯೇ ಉಳಿಯುತ್ತದೆ. ಈ ಸಂಕೀರ್ಣ ಅರ್ಥದಲ್ಲಿ ಕೆಲಮಟ್ಟಿಗೆ ಜಾತಿ ಮತ್ತು ವರ್ಗ ಒಂದೇ ಎಂದು ಹೇಳಬಹುದೇನೋ.

ಮೂರನೆಯದಾಗಿ, ಕರ್ನಾಟಕದಲ್ಲಿ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಪ್ರಬಲ ಕೋಮುಗಳ ದಬ್ಬಾಳಿಕೆ ಅಷ್ಟು ತೀವ್ರವಾದುದಾಗಿರಲಿಲ್ಲ. ಇದು ಒಂದು ರೀತಿಯಿಂದ ಆ ಕೋಮುಗಳ ಪ್ರಾಬಲ್ಯವನ್ನು ಸಮರ್ಥನೆ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟಿತೆಂದೇ ಹೇಳಬಹುದು. ದಬ್ಬಾಳಿಕೆ ಅಷ್ಟು ತೀವ್ರವಾಗಿಲ್ಲದಿರುವುದಕ್ಕೆ ಕೆಲವು ಕಾರಣಗಳಿವೆ. ಒಂದು, ಪ್ರಬಲ ಕೋಮುಗಳ್ಯಾವುವೂ ಸಾಂಪ್ರದಾಯಿಕ ಸಮಾಜದ ಶ್ರೇಣಿಯಲ್ಲಿ ಶಾಸ್ತ್ರೀಯವಾಗಿ ಉನ್ನತಸ್ಥಾನದಲ್ಲಿರಲಿಲ್ಲ. ಹಳ್ಳಿಗಳಲ್ಲಿ ಪೌರೋಹಿತ್ಯಕ್ಕೆ, ಶಾಸ್ತ್ರ, ಸಂಪ್ರದಾಯಗಳಿಗೆ, ಒಕ್ಕಲಿಗರು ಬ್ರಾಹ್ಮಣರನ್ನೇ ಅವಲಂಬಿಸಿರುವುದನ್ನೂ ಮತ್ತು ಲಿಂಗಾಯಿತರಲ್ಲೂ ಸಹ ಆರ್ಥಿಕವಾಗಿ ಪ್ರಬಲರಾದ ಲಿಂಗಾಯಿತ ಗುಂಪುಗಳು ಅಷ್ಟೇನು ಪ್ರಬಲರಲ್ಲದ ಜಂಗಮರನ್ನು ಆಶ್ರಯಿಸಿರುವುದನ್ನೂ ನಾವು ಕಾಣಬಹುದು. ಎರಡು, ಪ್ರಬಲ ಕೋಮುಗಳು ಬ್ರಾಹ್ಮಣರಂತೆ 'ದ್ವಿಜ'ರ ಸ್ಥಾನವನ್ನು ಹೊಂದದೆ ಇರುವುದು. ಈ ದೃಷ್ಟಿಯಿಂದ ಪ್ರಬಲ ಕೋಮುಗಳೂ ಸಹ ಉಳಿದ ಜಾತಿಗಳಂತೆ ಅಂದರೆ ಶೂದ್ರರಂತೇ ಪರಿಗಣಿಸಲ್ಪಟ್ಟು ಅವರ ನಡುವೆ ಶಾಸ್ತ್ರೀಯವಾದ ವರ್ಣಭೇದ ಎಂಬುದು ಉಳಿದಿರುವುದಿಲ್ಲ. ಮೂರು, ಕರ್ನಾಟಕದ ಬಹಳಷ್ಟು ಮಂದಿ ಕೃಷಿ ಕಾರ್ಮಿಕರು ಭೂ ಒಡೆತನವನ್ನು ಕನಿಷ್ಟ ಮಟ್ಟದಲ್ಲಾದರೂ ಹೊಂದಿರುವುದು. 1950ರ ಹೊತ್ತಿಗೆ ಹಳೆ ಮೈಸೂರಿನ ಶೇಕಡ 62.5ರಷ್ಟು ಕೃಷಿ ಕಾರ್ಮಿಕರು ಸ್ವಲ್ಪ ಮಟ್ಟಿಗಾದರೂ ಭೂಮಿಯ ಒಡೆತನ ಹೊಂದಿದ್ದು ಅವರ ಆದಾಯದ ಮೂರನೇ ಒಂದು ಭಾಗ ಈ ಜಮೀನಿನಿಂದಲೇ ಬರುತ್ತಿತ್ತು. ಇದರಿಂದಾಗಿ ಭಾರತದ ಉಳಿದ ರಾಜ್ಯಗಳಲ್ಲಿರುವಷ್ಟು ಪ್ರಬಲ ಕೋಮುಗಳ ದಬ್ಬಾಳಿಕೆ ಕರ್ನಾಟಕದಲ್ಲಿರಲಿಲ್ಲ. ಭಾರತದ ಇತರ ರಾಜ್ಯಗಳ ಸರಾಸರಿ ತೆಗೆದುಕೊಂಡರೆ ಅದರ ಎರಡರಷ್ಟು ಕೃಷಿ ಕಾರ್ಮಿಕರು ಮೈಸೂರಿನಲ್ಲಿ ಸ್ವಉದ್ಯೋಗ ಹೊಂದಿರುವುದನ್ನು ನಾವು ಕಾಣುತ್ತೇವೆ. ಮೈಸೂರು ಸಂಸ್ಥಾನಕ್ಕೆ ಹೋಲಿಸಿದರೆ ಬಾಂಬೆ ಕರ್ನಾಟಕದಲ್ಲಿ ಭೂಹೀನ ಕಾರ್ಮಿಕರ ಸಂಖ್ಯೆ ಹೆಚ್ಚು ಇದ್ದುದು ನಿಜವಾದರೂ ಬಾಂಬೆ ಸಂಸ್ಥಾನದ ಉಳಿದ ಪ್ರದೇಶಕ್ಕಿಂತ ಇದು ಖಂಡಿತವಾಗಿಯೂ ಕಡಿಮೆಯಾಗಿತ್ತು. ಐದು, ಪ್ರಬಲ ಕೋಮುಗಳಲ್ಲೊಂದಾದ ಲಿಂಗಾಯಿತರು ಒಂದು ಸುಸಂಬದ್ಧ ಗುಂಪಾಗಿರಲಿಲ್ಲ. (ಇದನ್ನು ನನ್ನ ಲೇಖನದ ಮೊದಲ ಭಾಗದಲ್ಲಿ ಉಲ್ಲೇಖಿಸಿದ್ದೇನೆ) ಉದಾಹರಣೆಗೆ, ಹಳ್ಳಿಯಲ್ಲಿ ಲೇವಾದೇವಿ ವ್ಯವಹಾರವಿಟ್ಟುಕೊಂಡ ಲಿಂಗಾಯಿತರು ವ್ಯಾಪಾರ ನಿರತ ಬಣಜಿಗರು ಇವರಿಗೂ ಹಳ್ಳಿಯಲ್ಲಿ ಬಹುಸಂಖ್ಯಾತರಾಗಿದ್ದ ಮತ್ತು ಭಾರೀ ಭೂ ಒಡೆತನವನ್ನು ಹೊಂದಿದ್ದ ಸಾದರು ಮತ್ತು ಇತರ ಲಿಂಗಾಯಿತ ಜಾತಿಯವರಿಗೂ ಸಾಮರಸ್ಯವಿರಲಿಲ್ಲ.

ಈ ಮೇಲೆ ಹೇಳಿದ ಅಂಶಗಳಿಂದ ನಮಗೆ ಸ್ಪಷ್ಟವಾಗುವುದೇನೆಂದರೆ ಪ್ರಬಲ ಕೋಮುಗಳು ಇತರೆ ಕೆಳಜಾತಿಗಳಿಗೆ ಸೇರಿದವರ ಮೇಲೆ ಕ್ರೂರ ದಬ್ಬಾಳಿಕೆ (ಭಾರತದ ಇತರ ರಾಜ್ಯಗಳಲ್ಲಿ ಕಂಡುಬರುವಂತೆ) ನಡೆಸಲು 'ಸಮರ್ಥ'ವಾಗಿರಲಿಲ್ಲ. ಕರ್ನಾಟಕದಲ್ಲಿ ಮೀಸಲಾತಿಯ ವಿರುದ್ಧ ತೀವ್ರ ಪ್ರತಿಭಟನೆ ಪ್ರಬಲ ಕೋಮುಗಳಿಂದ ಬರದೆ ಇದ್ದುದಕ್ಕೆ ಇದೂ ಒಂದು ಪ್ರಮುಖ ಕಾರಣವೆನ್ನಬಹುದು. ಈ ಹಿನ್ನೆಲೆಯಲ್ಲಿಯೇ ಕರ್ನಾಟಕದ ಮೀಸಲಾತಿ ರಾಜಕೀಯವನ್ನು ನಾವು ಅರ್ಥಮಾಡಿಕೊಳ್ಳಬೇಕು.

ಸ್ವಾತಂತ್ರ್ಯಾನಂತರದ ರಾಜಕೀಯ : 1947ರಿಂದ 1956ರವರೆಗೆ

ಸ್ವಾತಂತ್ರ್ಯಾನಂತರ ಮೈಸೂರಿನ ಜಾತಿ ರಾಜಕೀಯದಲ್ಲಿ ರಾಜ್ಯ ಪುನರ್ವಿಂಗಡನೆಯಾಗುವವರೆಗೆ ಅಂದರೆ 1956ರವರೆಗೆ ಯಾವ ಮಹತ್ವದ ಬದಲಾವಣೆಯೂ ಆಗಲಿಲ್ಲ. ಮೈಸೂರು ರಾಜ್ಯದಲ್ಲಿ ಮಿಲ್ಲರ್ ವರದಿಯ ಶಿಫಾರಸ್ಸು ಜಾರಿಯಲ್ಲಿತ್ತು. ಈ ಕಾಲದಲ್ಲಿ ಬ್ರಾಹ್ಮಣರ ರಾಜಕೀಯ ಪ್ರಾಬಲ್ಯ ಇನ್ನಷ್ಟು ಕಡಿಮೆಯಾಯಿತು. ಇದಕ್ಕೆ ಮುಖ್ಯ ಕಾರಣಗಳೆಂದರೆ ಒಂದು, ಬ್ರಾಹ್ಮಣೇತರರ ಸಂಘಟನೆಯಾದರೆ, ಎರಡು, ಮತ್ತು ಬಹಳ ಮುಖ್ಯವಾದದ್ದು ಹೊಸ ಸಂಸದೀಯ ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ ಯಾರು ಹೆಚ್ಚಿನ ಸಂಖ್ಯೆಯಲ್ಲಿ ಸಂಘಟಿತರಾಗುತ್ತಾರೋ ಅವರಿಗೆ ಅಧಿಕಾರದ ಪಾಲು ಸಿಗುತ್ತಿದ್ದುದು. ಜನಸಂಖ್ಯಾ ದೃಷ್ಟಿಯಿಂದ ಬಹಳ ಕಡಿಮೆಯಿದ್ದ ಬ್ರಾಹ್ಮಣರಿಗೆ ಇದು ಅನುಕೂಲಕರವಾದ ಬೆಳವಣಿಗೆಯಾಗಿರಲಿಲ್ಲ. ಜೊತೆಗೆ ಬ್ರಾಹ್ಮಣೇತರ ಚಳುವಳಿ ಹೆಚ್ಚು ಜನ ಸಂಖ್ಯೆಯುಳ್ಳ ಲಿಂಗಾಯಿತ ಮತ್ತು ಒಕ್ಕಲಿಗರನ್ನು ಸಂಘಟಿತರಾಗುವಂತೆ ಮಾಡಿತ್ತು. 1947ರ ಹೊತ್ತಿಗಾಗಲೇ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದ ಲಿಂಗಾಯಿತ ಮತ್ತು ಒಕ್ಕಲಿಗರು ಕಾಂಗ್ರೆಸ್ಸನ್ನು ಸಂಪೂರ್ಣ ತಮ್ಮ ಹತೋಟಿಯಲ್ಲಿಟ್ಟುಕೊಂಡಿದ್ದರು. ಕಾಂಗ್ರೆಸ್ ಪಕ್ಷ ಅಧಿಕಾರ ರೂಢವಾಗಲು ಈ ಸಂಬಂಧ ಸಹಾಯಕವಾಯಿತು. ಈ ಸಂಬಂಧದಿಂದಲೇ ಪಕ್ಷ ರಾಜ್ಯಾದ್ಯಂತ ಜಿಲ್ಲಾ ಮತ್ತು ತಾಲ್ಲೂಕ್ ಮಟ್ಟದಲ್ಲಿ ಬೇರುಬಿಡಲು ಸಾಧ್ಯವಾದದ್ದು. ಈ ತರ್ಕದಿಂದಲೇ ಲಿಂಗಾಯಿತರು ಮತ್ತು ಒಕ್ಕಲಿಗರು ರಾಜಕೀಯ ಅಧಿಕಾರ ಪಡೆಯಲು ಸಾಧ್ಯವಾಯಿತು ಎಂದು ಮತ್ತೆ ಹೇಳಬೇಕಾದ ಅಗತ್ಯವಿಲ್ಲ. ಹೀಗೆ ಅಧಿಕಾರಗಳಿಸಿಕೊಂಡ ರಾಷ್ಟ್ರಮಟ್ಟದ ನಾಯಕರು ತಮ್ಮನ್ನು ಬೆಂಬಲಿಸಿದ ತಮ್ಮ ಜಾತಿಗೆ ಸೇರಿದ ಜಿಲ್ಲಾ, ತಾಲ್ಲೂಕ್ ಮತ್ತು ಗ್ರಾಮ ಮಟ್ಟದ ನಾಯಕರುಗಳಿಗೆ ಅಧಿಕಾರ ಲಾಭದ ಪಾಲನ್ನು ಹಂಚುವುದರ ಮೂಲಕ ತಮ್ಮ ಜಾತಿ ಪ್ರಾದೇಶಿಕ ಮಟ್ಟದಲ್ಲಿ ಪ್ರಾಬಲ್ಯ ಉಳಿಸಿಕೊಂಡುಬರಲು ಅನುವುಮಾಡಿಕೊಟ್ಟರು. ಇದಕ್ಕೆ ಪ್ರತಿಕ್ರಿಯೆಯಾಗಿ ಗ್ರಾಮೀಣ ಜನರು ಚುನಾವಣೆಯಲ್ಲಿ ತಮ್ಮ ಜಾತಿಯವರನ್ನೇ ಬೆಂಬಲಿಸುವುದು ಈ ಹೊಸ ರಾಜಕೀಯ ವ್ಯವಸ್ಥೆಯ ತರ್ಕಬದ್ಧ ಬೆಳವಣಿಗೆಯಾಯಿತು. 1956ರವರೆಗೆ (ಒಕ್ಕಲಿಗರು ಹೆಚ್ಚು ಸಂಖ್ಯೆಯಲ್ಲಿದ್ದಾಗ) ಪ್ರತಿಯೊಬ್ಬ ಮುಖ್ಯಮಂತ್ರಿಯೂ ಒಕ್ಕಲಿಗರೆ ಆಗಿದ್ದುದು ಮತ್ತು 1956ರಿಂದ 1972ರವರೆಗೆ (ಲಿಂಗಾಯಿತರ ಸಂಖ್ಯೆ ಹೆಚ್ಚಿದಾಗ) ಲಿಂಗಾಯಿತರೇ ಮುಖ್ಯಮಂತ್ರಿಯಾಗಿದ್ದುದು ಜಾತಿ ಆಧಾರಿತ ಸಂಸದೀಯ ಪ್ರಜಾಪ್ರಭುತ್ವದ ಈ ಬೆಳವಣಿಗೆಯಿಂದಲೇ ಎನ್ನುವುದು ಸ್ಪಷ್ಟ. ಹೀಗೆ ಹೇಳುವಾಗ ಒಂದು ವಿಷಯವನ್ನು ನೆನಪಿಡಬೇಕು. ಒಂದು ಜಾತಿಗೆ ಸೇರಿದ ವ್ಯಕ್ತಿ ಮುಖ್ಯಮಂತ್ರಿಯಾದರೆ ಅವನ ಜಾತಿಯ ಎಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ಲಾಭವಾಗುತ್ತದೆ ಎನ್ನುವುದು ಸರಿಯಲ್ಲ. ಆದರೆ ಬ್ರಾಹ್ಮಣೇತರ ಚಳುವಳಿಯಲ್ಲಿ ಹುಟ್ಟಿದ ಜಾತಿ ಪ್ರಜ್ಞೆ ಪ್ರತಿಯೊಬ್ಬ ವ್ಯಕ್ತಿಯಲ್ಲೂ ತನಗೆ ನೇರವಾಗಿ ಯಾವುದೇ ಲಾಭವಿಲ್ಲದಿದ್ದರೂ ತನ್ನ ಜಾತಿಯವನು ಅಧಿಕಾರದಲ್ಲಿದ್ದರೆ ಜಾತಿಗೆ ಮತ್ತು ಆ ಮೂಲಕ ತನಗೆ ಯಾವುದೋ ಒಂದು ರೀತಿಯಲ್ಲಿ

ಲಾಭವಾಗುತ್ತದೆ, ಕೊನೆಯ ಪಕ್ಷ ಪ್ರತಿಷ್ಠೆಗಾದರೂ, ಎಂದು ನಂಬುವಂತೆ ಮಾಡಿತ್ತು. ಈ ಲಾಭದ ಗ್ರಹಿಕೆ ಅವನ ಜಾತಿ ಪ್ರಜ್ಞೆಯನ್ನು ಮತ್ತಷ್ಟು ಗಟ್ಟಿಮಾಡುತ್ತಿತ್ತು.

ಕಾಂಗ್ರೆಸ್ ಪಕ್ಷದ ನಾಯಕರ ದೃಷ್ಟಿಯಿಂದ ಹೇಳುವುದಾದರೆ ಅವರೆಲ್ಲರೂ ಪ್ರಜ್ಞಾಪೂರ್ವಕವಾಗಿ ಜಾತಿಯನ್ನು ಉಪಯೋಗಿಸಿಕೊಂಡೇ ಅಧಿಕಾರಕ್ಕೆ ಬರಲು ಪ್ರಯತ್ನಿಸಿದವರಲ್ಲ. ಶ್ರೀ ಕೆಂಗಲ್ ಹನುಮಂತಯ್ಯ, ಸಿದ್ಧವನಹಳ್ಳಿ ನಿಜಲಿಂಗಪ್ಪ ಮೊದಲಾದ ನಾಯಕರು ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದವರು ಮತ್ತು ಸಂಕುಚಿತ ಜಾತಿ ರಾಜಕೀಯದಿಂದ ಮೇಲೆ ನಿಂತವರಾಗಿದ್ದರು. ಆದರೆ ಸ್ವಾತಂತ್ರ್ಯ ಪೂರ್ವ ರಾಜಕೀಯದಲ್ಲಿ ಸರಕಾರಕ್ಕೆ ಸಲ್ಲಿಸಿದ ಬೇಡಿಕೆಗಳು ಜನರನ್ನು ಹಿತಾಸಕ್ತಿ ಗುಂಪುಗಳಾಗಿ ಕ್ರೋಢೀಕರಿಸಿದ್ದು ಜಾತಿ ಮೂಲಕವೆ ಆಗಿದ್ದುದರಿಂದ, ಆಗ ಒದಗಿಸಲ್ಪಟ್ಟ ರಾಜಕೀಯದ ಸಾಮಾಜಿಕ ನೆಲೆಗಟ್ಟು ಹಾಗೆಯೇ ಉಳಿದುಕೊಂಡು ಬಂದಿತ್ತು. ಈಗಲೂ ಜನರ ಬೇಡಿಕೆಗಳ ಕ್ರೋಢೀಕರಣ ಮತ್ತು ಹಿತಾಸಕ್ತಿಗಳನ್ನು ವ್ಯಕ್ತಗೊಳಿಸುವ ಪ್ರಕ್ರಿಯೆಗೆ ಜಾತಿ ಪ್ರಮುಖ ವಾಹಕವಾಗಿತ್ತು. ಈ ಮೊದಲೇ ಹೇಳಿದಂತೆ ಕಾಂಗ್ರೆಸ್ ಪಕ್ಷದ ರಚನೆಯೂ ಇದಕ್ಕೆ ಪೂರಕವಾಗಿಯೇ ಇರುವುದು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅನಿವಾರ್ಯವಾಯಿತು. ಇದರಿಂದಾಗಿಯೇ ರಾಜ್ಯ ಮಟ್ಟದಲ್ಲಿ ಜಾರಿಗೆ ತರಬೇಕೆಂದು ನಿರ್ಧರಿಸಿದ ಭೂ ಸುಧಾರಣೆ ಮುಂತಾದ ಜಾತ್ಯಾತೀತ ಸುಧಾರಣಾ ನೀತಿಗಳು ಜಿಲ್ಲಾ ಮತ್ತು ಗ್ರಾಮ ಮಟ್ಟದಲ್ಲಿ ಜಾತಿಯ ರೂಪವನ್ನೇ ಪಡೆಯುತ್ತಿದ್ದವು. ಉದಾಹರಣೆಗೆ, 1954ರಲ್ಲಿ ಸರ್ಕಾರ ಜಾರಿಗೆ ತಂದ ಗೇಣಿ ಪದ್ಧತಿಯನ್ನು ರದ್ದುಗೊಳಿಸುವ ಶಾಸನವನ್ನು ಬ್ರಾಹ್ಮಣೇತರರು ಬ್ರಾಹ್ಮಣರಿಂದ ಇನಾಂ ಭೂಮಿಯನ್ನು ಕಸಿದುಕೊಳ್ಳಲು ಹೂಡಿದ ತಂತ್ರ ಎಂದು ವ್ಯಾಖ್ಯಾನಿಸಲಾಗಿದೆ.[4] ಹೀಗೆ ಹೇಳುವುದಕ್ಕೆ ಸಾಂದರ್ಭಿಕ ಕಾರಣವೂ ಇದೆ. ಮೈಸೂರು ಸಂಸ್ಥಾನದಲ್ಲಿ ಭೂಮಿಯನ್ನು ಹೊಂದಿದ್ದ ಬಹುಪಾಲು ಬ್ರಾಹ್ಮಣರು (ಹವ್ಯಕ ಬ್ರಾಹ್ಮಣರನ್ನು ಹೊರತು ಪಡಿಸಿ) ಕೃಷಿಯಲ್ಲಿ ತೊಡಗಿರಲಿಲ್ಲ. ತಮ್ಮ ಭೂಮಿಯನ್ನು ಗೇಣಿ ಪದ್ಧತಿಯಂತೆ ಗೇಣಿದಾರರಿಗೆ ವಹಿಸಿಕೊಟ್ಟಿದ್ದರು. ಆ ಗೇಣಿದಾರರಲ್ಲಿ ಬಹುಪಾಲು ಪ್ರಬಲ ಕೋಮಿಗೆ ಸೇರಿದವರಾಗಿದ್ದರಿಂದ (ಕೆಲವು ಕಡೆ ಪರಿಶಿಷ್ಟ ಜಾತಿಯವರೂ ಗೇಣಿದಾರರಾಗಿದ್ದರು) ಅಧಿಕಾರಕ್ಕೆ ಬಂದ ಪ್ರಬಲ ಕೋಮಿನವರು ಗೇಣಿ ನಿರ್ಮೂಲನಾ ಶಾಸನದ ಮೂಲಕ ಬ್ರಾಹ್ಮಣರಿಂದ ಭೂಮಿಯನ್ನು ಕಸಿದುಕೊಳ್ಳಲು ಮಾಡಿದ ಪ್ರಯತ್ನದಂತೆ ಇದು ಕಾಣಲು ಸಾಧ್ಯವಿದೆ.

ಇನ್ನೊಂದು ಉದಾಹರಣೆ ಇಲ್ಲಿ ಸಮಂಜಸವೆನಿಸುತ್ತದೆ. ರಾಜ್ಯ ಪುನರ್ವಿಂಗಡಣೆಯ ಸಮಯದಲ್ಲಿ ಕಾಂಗ್ರೆಸ್ ಪಕ್ಷ ತನ್ನ ರಾಷ್ಟ್ರೀಯ ನೀತಿಗೆ ಅನುಸಾರವಾಗಿ ಎಲ್ಲಾ ಕನ್ನಡ ಮಾತನಾಡುವ ಪ್ರದೇಶವನ್ನು ಒಟ್ಟಿಗೆ ತರಲು ಸಂಪೂರ್ಣ ತೊಡಗಿಕೊಳ್ಳಬೇಕಿತ್ತು. ಪ್ರಾರಂಭದಲ್ಲಿ ಹಾಗೆ ಮಾಡಿತ್ತು ಕೂಡ.[5] ಆದರೆ ಇಲ್ಲಿ ಬಂದ ಮುಖ್ಯ ತೊಂದರೆ ಎಂದರೆ ಹಳೆಯ ಮೈಸೂರು ಸಂಸ್ಥಾನದಲ್ಲಿ ಒಕ್ಕಲಿಗರ ಸಂಖ್ಯೆ ಜಾಸ್ತಿ ಇದ್ದು ಪುನರ್ವಿಂಗಡಣೆಯ ನಂತರ ಅವರಿಗಿಂತ ಲಿಂಗಾಯಿತರ ಸಂಖ್ಯೆ ಜಾಸ್ತಿಯಾಗುವ ಸಂಭವವಿದ್ದು, ಅದರ ಪರಿಣಾಮದಿಂದ ತಮ್ಮ ರಾಜಕೀಯ ಅಧಿಕಾರಕ್ಕೆ

---

4. ವಿವರಗಳಿಗೆ ನೋಡಿ:- ತಮ್ಮಯ್ಯ ಜಿ ಅಂಡ್ ಅಬ್ದುಲ್ ಅಜೀಜ್, *ದಿ ಪೊಲಿಟಿಕಲ್ ಎಕಾನಮಿ ಆಫ್ ಲ್ಯಾಂಡ್ ರಿಫಾರ್ಮ್ಸ್*, ನ್ಯೂ ಡೆಲ್ಲಿ ಆಷಿಸ್ ಪಬ್ಲಿಷಿಂಗ್ ಹೌಸ್, 1985.

5. *ದಿ ಹಿಂದೂ*, 24 ಮೇ, 1948.

ಕುತ್ತು ಬರಬಹುದೆಂಬ ಸಂದೇಹ ಹಲವು ಒಕ್ಕಲಿಗ ನಾಯಕರಿಗೆ ಬಂದಿತ್ತು.[6] ಒಕ್ಕಲಿಗರ ಈ ಭಾವನೆಯನ್ನರಿತ ಕಾಂಗ್ರೆಸ್ ಸಹ ರಾಜ್ಯ ಪುನರ್ವಿಂಗಡಣೆಯನ್ನು ವಿರೋಧಿಸಿದ್ದನ್ನು ನಾವು ಕಾಣಬಹುದು. ಈ ಸಮಯದಲ್ಲಿ ಮೌಲ್ಯಾಧಾರಿತ ನಿಲುವನ್ನು ತೆಗೆದುಕೊಂಡವರು ಒಕ್ಕಲಿಗರಾಗಿದ್ದ ಶ್ರೀ ಕೆಂಗಲ್ ಹನುಮಂತಯ್ಯನವರು. ತನ್ನ ಜಾತಿಯವರಿಂದಲೇ ಬಂದ ವಿರೋಧವನ್ನು ಲೆಕ್ಕಿಸದೆ ಭಾಷಾವಾರು ಪ್ರಾಂತ್ಯದ ನೀತಿಯನ್ನು ಅವರು ಬೆಂಬಲಿಸಿ ಕರ್ನಾಟಕ ಏಕೀಕರಣಕ್ಕೆ ಕಾರಣಕರ್ತರಾದರು. ಒಂದು ಜಾತ್ಯಾತೀತ ರಾಜ್ಯದಲ್ಲಿ ಇಂತಹ ನಿಲುವು ಅವರಿಗೆ ಕೀರ್ತಿ ಮತ್ತು ಅಧಿಕಾರವನ್ನು ಗಳಿಸಿಕೊಡಬೇಕಿತ್ತು. ಆದರೆ ಕರ್ನಾಟಕದ ಜಾತಿ ರಾಜಕೀಯದಲ್ಲಿ ಹಾಗಾಗಲು ಶಕ್ಯವಿರಲಿಲ್ಲ. ಶ್ರೀ ಕೆಂಗಲ್ ಹನುಮಂತಯ್ಯನವರು ನಂತರ ನಡೆದ ಚುನಾವಣೆಯಲ್ಲಿ ಸೋಲನ್ನನುಭವಿಸಬೇಕಾಯಿತು. ಒಕ್ಕಲಿಗರಿಗೆ ಇವರ ಜಾತಿ ವಿರೋಧಿ ನಿಲುವು ಒಪ್ಪಿಗೆಯಾಗಲಿಲ್ಲ. ಲಿಂಗಾಯಿತರು ಇವರು ಲಿಂಗಾಯಿತರಲ್ಲವಾದುದರಿಂದ ತಮ್ಮ ನಾಯಕನನ್ನಾಗಿ ಒಪ್ಪಿಕೊಳ್ಳಲಿಲ್ಲ. ಹನುಮಂತಯ್ಯನವರ ಸೋಲಿಗೆ ಅವರ ಈ ಜಾತ್ಯಾತೀತ ನಿಲುವು ಒಂದು ಪ್ರಮುಖ ಕಾರಣ ಎನಿಸುತ್ತದೆ. ಜಾತಿಪ್ರಜ್ಞೆ ಹೇಗೆ ಕೆಲಸ ಮಾಡುತ್ತಿತ್ತು ಎನ್ನುವ ವಿಷಯ ಹಾಗಿರಲಿ. ಒಟ್ಟಿನಲ್ಲಿ, 1956ರ ವರೆಗೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷ ಪ್ರಬಲ ಕೋಮುಗಳ ಹಿಡಿತದಲ್ಲಿತ್ತು. ಬ್ರಾಹ್ಮಣರ ಪ್ರಾಬಲ್ಯ ನಗರದಲ್ಲಿ ಮುಂದುವರೆದರೂ ಅದು ಸರಕಾರಿ ಸೇವೆಯಲ್ಲಿ ಹೆಚ್ಚು ಪ್ರಾತಿನಿಧ್ಯ ಪಡೆದುಕೊಂಡು ಬರುವುದಕ್ಕೆ ಮಾತ್ರ ಸೀಮಿತವಾಗಿತ್ತು. ಪ್ರಬಲ ಕೋಮುಗಳಲ್ಲದ ಜಾತಿ, ಪಂಗಡಗಳು ಇನ್ನೂ ಸಂಘಟಿತರಾಗಿರಲಿಲ್ಲ. ಜಾತಿ ಯಾ ಕೋಮಿನ ರಾಜಕೀಯ ಪ್ರಾಬಲ್ಯ ಆ ಜಾತಿಗೆ ಸೇರಿದವರೆ ಮುಖ್ಯಮಂತ್ರಿಯಾಗುವುದರಿಂದ ಮಾತ್ರ ನಿರ್ಧಾರವಾಗುವಂತಹುದಲ್ಲ. ಬದಲಾಗಿ ಜಿಲ್ಲಾ ಮತ್ತು ತಾಲ್ಲೂಕ್ ಮಟ್ಟದಲ್ಲಿ ಆ ಜಾತಿಯ ಜನರು ಎಷ್ಟು ಸಂಘಟಿತರಾಗಿದ್ದರು, ಹಾಗೆ ಸಂಘಟಿತರಾಗುವುದಕ್ಕೆ ಅವರಿಗೆ ಲಭ್ಯವಿದ್ದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸಂಪನ್ಮೂಲಗಳು (ಭೂ ಒಡೆತನ, ಮೇಲ್ಜಾತಿಯ ಸವಲತ್ತು, ಮಠ ಮೊದಲಾದ ಸಂಸ್ಥೆಗಳು ಇತ್ಯಾದಿ) ಮತ್ತು ರಾಜಕೀಯ ಅಧಿಕಾರದ ಫಲ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಹೇಗೆ ವಿತರಣೆಯಾಗುತ್ತಿತ್ತು ಎನ್ನುವುದರಿಂದಲೂ ನಿರ್ಧಾರವಾಗುತ್ತದೆ. ಹೀಗೆ ಸಂಪನ್ಮೂಲಗಳನ್ನು ಹೊಂದಿರದ ಜಾತಿಗೆ ಸೇರಿದ ವ್ಯಕ್ತಿ ಉನ್ನತ ರಾಜಕೀಯ ಸ್ಥಾನವನ್ನು ಪಡೆದರೂ ಆ ಜಾತಿ ರಾಜಕೀಯವಾಗಿ ಪ್ರಬಲ ಎನಿಸಿಕೊಳ್ಳುವುದಿಲ್ಲ.

1956ರಿಂದ 1972ರವರೆಗಿನ ರಾಜಕೀಯ, ಜಾತಿ ಸಂಘಟನೆಗಳು ಮತ್ತು ಮೀಸಲಾತಿ

1956ರಿಂದ 1972ರವರೆಗಿನ ಕರ್ನಾಟಕದ ರಾಜಕೀಯದಲ್ಲಿ ಪ್ರಬಲ ಕೋಮುಗಳ ರಾಜಕೀಯ ಮುಂದುವರೆಯಿತು. ಆದರೆ ಹೀಗೆ ಹೇಳುವುದರ ಜೊತೆಗೆ ಈ ಕೋಮುಗಳ ಪ್ರಾಬಲ್ಯದ ಸ್ವರೂಪದಲ್ಲಿ ಆದ ಬದಲಾವಣೆಯನ್ನು ಮತ್ತು ರಾಜ್ಯ ಮಟ್ಟದ ಸುಧಾರಣ ನೀತಿಗಳು ಇತರೆ ಕೆಳ ಜಾತಿಯವರು ಸಂಘಟಿತರಾಗುವಂತೆ ಮಾಡಿದ ಪ್ರಕ್ರಿಯೆಯನ್ನು ನಾವು ಗುರುತಿಸಬೇಕು. ಇಲ್ಲದೆ ಹೋದಲ್ಲಿ 1972ರ ನಂತರ ಜಾತಿ ರಾಜಕೀಯದ ಸ್ವರೂಪದಲ್ಲಾದ ಬದಲಾವಣೆಯ ಬೀಜ ಈ ಕಾಲದಲ್ಲಿ ಹೇಗೆ ಅಂಕುರವಾಯಿತು ಎಂಬುದು ನಮಗೆ ಗೋಚರವಾಗುವುದಿಲ್ಲ.

---

6. *ಡೆಕ್ಕನ್ ಹೆರಾಲ್ಡ್*, ಸೆಪ್ಟೆಂಬರ್ 6, 1949.

ರಾಜ್ಯ ಪುನರ್ವಿಂಗಡಣೆಯ ನಂತರ ಅಸ್ತಿತ್ವಕ್ಕೆ ಬಂದ ಹೊಸ ರಾಜ್ಯಕ್ಕೆ ಹೈದರಾಬಾದ್, ಬಾಂಬೆ, ಮದ್ರಾಸ್ ಸಂಸ್ಥಾನಗಳ ಕನ್ನಡ ಮಾತನಾಡುವ ಜನರಿದ್ದ ಪ್ರದೇಶ ಮತ್ತು ಕೊಡಗು ಜಿಲ್ಲೆ ಸೇರ್ಪಡೆಯಾಯಿತು. ಇದರ ಪರಿಣಾಮವಾಗಿ ವಿವಿಧ ಜಾತಿ, ಕೋಮುಗಳ ಪುನರ್‌ಸಂಘಟನೆ ಅನಿವಾರ್ಯವಾಯಿತು. ಮಿಲ್ಲರ್ ವರದಿ ಆಧಾರಿತ ಮೀಸಲಾತಿ ಹೊಸದಾಗಿ ಉದಯವಾದ ರಾಜ್ಯಕ್ಕೆ ಅನ್ವಯವಾಗುವಂತಿರಲಿಲ್ಲ. ಸೇರ್ಪಡೆಯಾದ ಪ್ರತಿ ಹೊಸ ಪ್ರದೇಶಗಳಲ್ಲೂ ಅವುಗಳದ್ದೇ ಆದ ಹಿಂದುಳಿದ ವರ್ಗಗಳ ಪಟ್ಟಿಯಿದ್ದುದರಿಂದ ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಒಂದು ಹೊಸ ಹಿಂದುಳಿದ ವರ್ಗಗಳ ಪಟ್ಟಿಯನ್ನು ತಯಾರಿಸುವ ಅನಿವಾರ್ಯತೆ ಇದರಿಂದುಂಟಾಯಿತು. ಈ ಸಮಸ್ಯೆಯನ್ನು ತುರ್ತಾಗಿ ಬಗೆಹರಿಸುವ ಉದ್ದೇಶದಿಂದ ಆಗಿನ ಮೈಸೂರು ಸರಕಾರ 1958ರಲ್ಲಿ ಒಂದು ಹೊಸ ಆಜ್ಞೆಯನ್ನು ಹೊರಡಿಸಿತು. ಆದರೆ ಈ ಆಜ್ಞೆ ಹಿಂದುಳಿದ ವರ್ಗಗಳನ್ನು ನಿರ್ಧರಿಸುವಲ್ಲಿ ಇರಬೇಕಾದ ಆಧಾರದ ಬಗ್ಗೆ ಹೊಸತೇನನ್ನೂ ಹೇಳಲಿಲ್ಲ. ಬದಲಾಗಿ ಮಿಲ್ಲರ್ ವರದಿ ಯಾವ ಆಧಾರದ ಮೇಲೆ ಹಿಂದುಳಿದಿರುವಿಕೆಯನ್ನು ನಿರ್ಧರಿಸಿತ್ತೊ, ಸದರಿ ಸರ್ಕಾರಿ ಆಜ್ಞೆಯೂ ಅದನ್ನೇ ಆಧಾರವಾಗಿಟ್ಟುಕೊಂಡಿತು. ಅದರಂತೆ ಬ್ರಾಹ್ಮಣರಲ್ಲದ ಎಲ್ಲಾ ಜಾತಿಯವರೂ ಹಿಂದುಳಿದವರು ಎಂದು ತೀರ್ಮಾನಿಸಲಾಯಿತು. (ಕ್ರೈಸ್ತರು, ಮತ್ತು ಮುಸಲ್ಮಾನರನ್ನು ಹೊರತುಪಡಿಸಿ ಇದೊಂದು ಸಣ್ಣ ಬದಲಾವಣೆ). ಈ ಆಜ್ಞೆಯಂತೆ ಗರಿಷ್ಠ ಶೇಕಡಾ 57ರಷ್ಟು ಮೀಸಲಾತಿಯನ್ನು ಹಿಂದುಳಿದ ವರ್ಗಗಳಿಗೆ ಕೊಡಲಾಯಿತು. ಈ ಶೇಕಡಾ 57 ಮತ್ತು ಪರಿಶಿಷ್ಟ ಜಾತಿ ಪಂಗಡಗಳಿಗೆ ಶೇಕಡಾ 18 (ಈ ಮೀಸಲಾತಿ ಸಂವಿಧಾನದಲ್ಲಿಯೆ ಕೊಡಲ್ಪಟ್ಟು ಇಡೀ ರಾಷ್ಟ್ರಕ್ಕೆ ಅನ್ವಯಿಸುವಂತಹದ್ದು) ಸೇರಿ ಕರ್ನಾಟಕದಲ್ಲಿ ಒಟ್ಟು ಮೀಸಲಾತಿ ಶೇಕಡಾ 75ರಷ್ಟು ಆಯಿತು. ಈ ಸರಕಾರಿ ಆಜ್ಞೆಯನ್ನು ನ್ಯಾಯಾಲಯ ಒಪ್ಪಲಿಲ್ಲ. ಅಲ್ಲದೆ ಕೇಂದ್ರ ಸರಕಾರದ ಅಭಿಪ್ರಾಯವು ಸಹ ಜಾತಿ ಆದಾರಿತ ಹಿಂದುಳಿದ ವರ್ಗಗಳನ್ನು ಗುರುತಿಸುವುದಕ್ಕೆ ವ್ಯತಿರಿಕ್ತವಾಗಿತ್ತು.

ಪ್ರಾದೇಶಿಕ/ರಾಜ್ಯಮಟ್ಟದ ರಾಜಕೀಯ ನೀತಿಯನ್ನು ರೂಪಿಸುವಲ್ಲಿ ಜಾತಿ/ಕೋಮುಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾದ ಅನಿವಾರ್ಯತೆ ರಾಜ್ಯದ ನಾಯಕರುಗಳಿಗೆ ಕಂಡರೂ ಅವರ ರಾಷ್ಟ್ರಮಟ್ಟದ ರಾಜಕೀಯದೊಡನಿದ್ದ ಸಂಪರ್ಕ ಅವರನ್ನು ಮತ್ತೊಂದು ಸಂದಿಗ್ಧಕ್ಕೆ ಸಿಲುಕಿಸಿತ್ತು. ಈ ಸಂದಿಗ್ಧತೆಯನ್ನು ಸಂವಿಧಾನ ರಚನೆಯಲ್ಲೂ ಕಾಣಬಹುದು. ಅದೆಂದರೆ, ಭಾರತವನ್ನು ಜಾತಿರಹಿತ, ವರ್ಗರಹಿತ ಸಮಾಜವನ್ನಾಗಿಸುವುದನ್ನು ಮೂಲಧ್ಯೇಯವಾಗಿ ಒಪ್ಪಿಕೊಂಡ ಸಂವಿಧಾನ ರಚನಾಕಾರರು ಅದರ ಜೊತೆಗೆ ಹಿಂದುಳಿದ ಜಾತಿಗಳಿಗೆ ವಿಶೇಷ ಸವಲತ್ತುಗಳನ್ನು ನೀಡುವ ಅಗತ್ಯವನ್ನು ಒಪ್ಪಿಕೊಂಡಿದ್ದು. ಇದು ಒಂದು ರೀತಿಯಲ್ಲಿ ಭಾರತೀಯ ಸಮಾಜದ ಪರಂಪರಾಗತ ರಚನೆಗೂ ಸ್ವಯಂತಂತ್ರವಾದಿ (ಲಿಬರಲ್) ಪ್ರಜಾಪ್ರಭುತ್ವಕ್ಕೂ ನಡುವೆ ನಡೆದ ಘರ್ಷಣೆ. ಮತ್ತೊಂದು ರೀತಿಯಲ್ಲಿ ಇದು ಜಾತಿ ವ್ಯವಸ್ಥೆಯ ಮಿತಿಯೊಳಗೆ ರಾಜಕೀಯ ಪ್ರಕ್ರಿಯೆಯಲ್ಲಿ ತೊಡಗಬೇಕಾದ ಅನಿವಾರ್ಯತೆಯನ್ನು ಕಂಡ ಗ್ರಾಮೀಣ ಪ್ರದೇಶದ ಜನರಿಗೂ, ರಾಜಕೀಯ ಜಾತಿ ವ್ಯವಸ್ಥೆಯನ್ನು ಮೀರಿ ನಿಲ್ಲಬೇಕೆಂಬ ನಗರದ ವಿದ್ಯಾವಂತರ ನಿಲುವಿಗೂ ನಡೆದ ಘರ್ಷಣೆ. ಗ್ರಾಮೀಣ ಪ್ರದೇಶದ ಬಹುಸಂಖ್ಯಾತರು ಕೆಳಜಾತಿಗೆ ಸೇರಿದವರಾಗಿದ್ದು ನಗರದ ವಿದ್ಯಾವಂತರು (ಆಗ ಶೇಕಡಾ 90ಕ್ಕೂ ಹೆಚ್ಚು) ಮೇಲ್ಜಾತಿಗೆ ಸೇರಿದವರಾಗಿದ್ದುದು ಚಾರಿತ್ರಿಕ ಕಾಕತಾಳೀಯ. 1953ರಲ್ಲಿ ನೇಮಕವಾದ ಭಾರತದ ಮೊದಲನೆ ಹಿಂದುಳಿದ ವರ್ಗಗಳ ಸಮಿತಿಯೂ ಸಹ ಈ ಇಕ್ಕಟ್ಟಿನಲ್ಲಿ ಸಿಲುಕಿದ್ದನ್ನು ನಾವು ಕಾಣುತ್ತೇವೆ. ಭಾರತದಲ್ಲಿ ಹಿಂದುಳಿದಿರುವಿಕೆಯನ್ನು ನಿರ್ಧರಿಸುವಲ್ಲಿ ವ್ಯಕ್ತಿಯನ್ನು ಆಧಾರವಾಗಿಟ್ಟುಕೊಳ್ಳುವುದು ಸಾಧ್ಯವಿಲ್ಲವಾದ್ದರಿಂದ ಜಾತಿ, ಕೋಮುಗಳೆ ಆಧಾರವಿರಬೇಕೆಂದು ಅಭಿಪ್ರಾಯಪಟ್ಟ ಸಮಿತಿ ನಂತರ ತನ್ನ ಶಿಫಾರಸ್ಸಿನಲ್ಲಿ ಜಾತಿಯನ್ನು ಗಣನೆಗೆ

ತೆಗೆದುಕೊಳ್ಳುವುದು ರಾಷ್ಟ್ರದ ಒಗ್ಗಟ್ಟಿನ ದೃಷ್ಟಿಯಿಂದ ಅಪಾಯಕರ ಎಂದೂ ಹೇಳಿತು.[7] ರಾಜ್ಯಮಟ್ಟದ ನಾಯಕರುಗಳ ಮೇಲೆ ಬಹಳ ಪ್ರಭಾವ ಬೀರಿದ್ದ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರೂ ಕೂಡ ಜಾತಿಯನ್ನು ರಾಜಕೀಯ ನೀತಿಯಲ್ಲಿ ಬಳಸುವುದನ್ನು ವಿರೋಧಿಸಿದ್ದನ್ನು ನಾವು ಕಾಣುತ್ತೇವೆ. ಮೊದಲನೆ ಹಿಂದುಳಿದ ವರ್ಗಗಳ ಸಮಿತಿಯ ಉದ್ಘಾಟನೆಯ ಸಮಯದಲ್ಲಿ ಅವರು ಭಾರತದಲ್ಲಿ ಶೇಕಡಾ 90 ಭಾಗ ಜನರು ಬಡವರು ಮತ್ತು ಹಿಂದುಳಿದವರು ಆಗಿರುವುದರಿಂದ ಹಿಂದುಳಿದ ವರ್ಗಗಳು ಎಂದು ಕೆಲವರನ್ನು ಮಾತ್ರ ಪಟ್ಟಿಮಾಡುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರೆಂದು ಹೇಳಲಾಗಿದೆ.[8] ನೆಹರೂರವರ ಈ ನಿಲುವು ಸಂವಿಧಾನ ರಚನೆಯ ಸಮಯದಲ್ಲಿ ಅವರು ತೆಗೆದುಕೊಂಡ ನಿಲುವಿಗಿಂತ ಭಿನ್ನವಾಗಿರುವುದನ್ನು ಇಲ್ಲಿ ಗಮನಿಸಬೇಕು. ಸಂವಿಧಾನದ 15ನೇ ವಿಧಿಗೆ 4ನೇ ಉಪ ವಿಧಿಯ ಸೇರ್ಪಡೆಗೆ ಸಮರ್ಥನೆ ನೀಡುತ್ತಾ ಅವರು ಹಿಂದುಳಿದ ವರ್ಗಗಳನ್ನು ಗುರುತಿಸಿ ವಿಶೇಷ ಸವಲತ್ತನ್ನು ನೀಡುವ ಅಗತ್ಯವನ್ನು ಒತ್ತಿ ಹೇಳಿದ್ದರು.1951ರ ಜನಗಣತಿಯಲ್ಲಿ ಜಾತಿಯನ್ನು ಗುರುತಿಸದಿರಲು ತೆಗೆದುಕೊಂಡ ನಿರ್ಧಾರವೂ ಸಹ ಕೇಂದ್ರ ಸರ್ಕಾರದ ಧೋರಣೆಯನ್ನು ತೋರಿಸುತ್ತದೆ. ಭಾರತದ ಇತರ ರಾಜ್ಯಗಳಲ್ಲೂ ಹಿಂದುಳಿದ ವರ್ಗಗಳ ಪಟ್ಟಿಯನ್ನು ತಯಾರಿಸುವಲ್ಲಿ ಒಮ್ಮತದ ಅಭಿಪ್ರಾಯವಿರಲಿಲ್ಲ. ಪ್ರತಿ ರಾಜ್ಯದಲ್ಲೂ ಮೈಸೂರಿನಂತೆ ವಿವಿಧ ಜಾತಿ, ಕೋಮುಗಳ ಪ್ರಾಬಲ್ಯ, ರಾಜಕೀಯ ಸಂಘಟನೆ, ಮೊದಲಾದವುಗಳ ಆಧಾರದ ಮೇಲೆ ಇದನ್ನು ನಿರ್ಧರಿಸಬೇಕಾಗಿತ್ತು. ಹೀಗಾಗಿ ಇಡೀ ರಾಷ್ಟ್ರಕ್ಕೆ ಅನ್ವಯವಾಗುವಂತಹ ಹಿಂದುಳಿದಿರುವಿಕೆಯನ್ನು ನಿರ್ಧರಿಸುವ ಮಾನದಂಡವನ್ನು ರಚಿಸುವುದು ಸಾಧ್ಯವಾಗಲಿಲ್ಲ.

1960ರ ಸಮಯದ ಹೊತ್ತಿಗೆ ನಗರ ಕೇಂದ್ರೀಕೃತ ರಾಜಕೀಯದಲ್ಲಿ ಜಾತಿ/ಕೋಮು ಆಧಾರದ ಮೇಲೆ ಹಿಂದುಳಿದಿರುವಿಕೆಯನ್ನು ನಿರ್ಧರಿಸುವ ಹಾಗೂ ಆ ಆಧಾರದ ಮೇಲೆ ಹಿಂದುಳಿದ ವರ್ಗಗಳ ಪಟ್ಟಿ ಮಾಡಿ ಅವರಿಗೆ ನೌಕರಿಯಲ್ಲಿ, ಶೈಕ್ಷಣಿಕ ಕ್ಷೇತ್ರದಲ್ಲಿ ಮೀಸಲಾತಿಯ ಸೌಲಭ್ಯವನ್ನು ನೀಡುವ ನೀತಿಯ ವಿರುದ್ಧ ಪಂಡಿತರು (ಅಕಾಡೆಮಿಶಿಯೆನ್ಸ್), ರಾಷ್ಟ್ರೀಯ ಪತ್ರಿಕೆಗಳು ಜನಾಭಿಪ್ರಾಯವನ್ನು ರೂಪಿಸುವ ಪ್ರಯತ್ನ ಮಾಡುತ್ತಿದ್ದವು. 1957ರ ಭಾರತೀಯ ವಿಜ್ಞಾನ ಕಾಂಗ್ರೆಸ್ಸಿನ ಮಾನವ ಶಾಸ್ತ್ರ ಘಟಕದ ಅಧ್ಯಕ್ಷೀಯ ಭಾಷಣದಲ್ಲಿ ಪ್ರೊ. ಎಂ. ಎಸ್. ಶ್ರೀನಿವಾಸ್‌ರವರು ವಿದ್ಯಾರ್ಹತೆ, ಭೂಒಡೆತನ, ಹಣ ಮತ್ತು ಇತರೆ ಕೃಷಿ ಆದಾಯವನ್ನು ಆಧಾರವಾಗಿಟ್ಟುಕೊಂಡು ಹಿಂದುಳಿದಿರುವಿಕೆಯನ್ನು ನಿರ್ಧರಿಸಬೇಕಾದ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು. ಇನ್ನುಳಿದ ಕೆಲವರು ಹಿಂದುಳಿದಿರುವಿಕೆಯಲ್ಲಿ ಪಟ್ಟಭದ್ರಾ ಹಿತಾಸಕ್ತಿಯು ಬೆಳೆಯುತ್ತಿದೆಯೆಂದು ಅಭಿಪ್ರಾಯಪಟ್ಟರು. ಅಲ್ಲಿದ್ದ ಕೆಲವರು ಮಾತ್ರ ಜಾತಿ ಆಧಾರವನ್ನು ಸಮರ್ಥಿಸಿದರು.[9] ರಾಷ್ಟ್ರಮಟ್ಟದಲ್ಲಿ ಈ ರೀತಿಯ ಚಿಂತನೆ ಪ್ರಬಲವಾಗುತ್ತಿದ್ದ ಕಾಲದಲ್ಲೆ, ಅಂದರೆ 1958ರಲ್ಲಿ, ಮೈಸೂರು ಸರ್ಕಾರ ಜಾತಿಯನ್ನು ಆಧಾರವಾಗಿಟ್ಟುಕೊಂಡು ಮಾಡಿದ ಹಿಂದುಳಿದ ವರ್ಗಗಳ

---

7. ಸಮಿತಿಯ ಅಧ್ಯಕ್ಷರಾದ ಶ್ರೀ ಕಾಕಾ ಕಾಲೇಲ್ಕರ್ ಹಿಂದುಳಿದಿರುವಿಕೆಗೆ ಜಾತಿ ಆಧಾರವಾಗಿರುವುದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದುದು ಮತ್ತು ಜಾತಿರಹಿತ ವರ್ಗರಹಿತ ಸಮಾಜ ನಿರ್ಮಾಣಕ್ಕೆ ಕಂಟಕಪ್ರಾಯವಾದುದು ಎಂದು ಕೊನೆಗಳಿಗೆಯಲ್ಲಿ ಬರೆದಿದ್ದಾರೆ. ನೋಡಿ:-ಮೊದಲನೆ ಹಿಂದುಳಿದ ವರ್ಗಗಳ ಸಮಿತಿಯ ವರದಿ ಭಾರತ ಸರಕಾರ, 1956.

8 ಗಲಾಂತರ್, ಮಾರ್ಕ್, *ಕಾಂಪಿಟಿಂಗ್ ಇಕ್ವಾಲಿಟೀಸ್*, ಓ ಯು ಪಿ, 1984 ಪುಟ 169.

9. ವಿವರಗಳಿಗೆ ನೋಡಿ :- ಬಾರ್ನ್‌ಬಾಸ್ ಎ ಪಿ. ಅಂಡ್ ಸುಭಾಷ್ ಸಿ ಮೆಹ್ತಾ, *ಕಾಸ್ಟ್ ಇನ್ ಚೇಂಜಿಂಗ್ ಇಂಡಿಯಾ*, ನ್ಯೂಡೆಲ್ಲಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್, 1965.

ಪಟ್ಟಿಯನ್ನು ಮತ್ತು ಮೀಸಲಾತಿ ನೀತಿಯನ್ನು ಮೈಸೂರಿನ ಉಚ್ಚ ನ್ಯಾಯಾಲಯ ತಿರಸ್ಕರಿಸಿತು.[10] *ಟೈಮ್ಸ್ ಆಫ್ ಇಂಡಿಯಾ* ಪತ್ರಿಕೆ ಉಚ್ಚ ನ್ಯಾಯಾಲಯದ ಈ ತೀರ್ಮಾನವನ್ನು ಸ್ವಾಗತಿಸಿ "ಸಿಕ್ಕಿದವರೆಲ್ಲ ಶೈಕ್ಷಣಿಕ ಸವಲತ್ತುಗಳನ್ನು ಪಡೆಯುವುದಕ್ಕೆ ತಡೆಹಾಕಿ ಮೈಸೂರಿನ ನ್ಯಾಯಾಲಯ ಈ ರಾಜ್ಯದ ಯಾವ ರಾಜಕಾರಣಿಯೂ ಮಾಡಲಾಗದ ಕೆಲಸವನ್ನು ಮಾಡಿದೆ" ಎಂದು ಬರೆಯಿತು. ತನ್ನ ಮರುದಿನದ ಸಂಪಾದಕೀಯದಲ್ಲಿ ಅದೇ ಪತ್ರಿಕೆ "ಮೈಸೂರು ಮತ್ತು ಇತರ ರಾಜ್ಯಗಳಲ್ಲಿ ತರಲಾದ ಈ ತರದ ಆಜ್ಞೆಗಳು ಹೊರಗೆ ಯಾವ ರೀತಿ ತೋರ್ಪಡಿಸಿಕೊಂಡರೂ ಕಾಂಗ್ರೆಸ್ ನಿಜವಾಗಿ ಎಷ್ಟರ ಮಟ್ಟಿಗೆ ಜಾತಿವಾದಿಯಾಗಿದೆ ಎಂದು ತೋರಿಸುತ್ತದೆ" ಎಂದು ಅಭಿಪ್ರಾಯಪಟ್ಟಿತು.[11]

ಬುದ್ಧಿಜೀವಿಗಳ ನ್ಯಾಯಾಲಯದ ಆಶಯ ಜಾತಿಯನ್ನು ಕಡೆಗಣಿಸುವುದರ ಮೂಲಕ ಜಾತಿರಹಿತ ಸಮಾಜವನ್ನು ನಿರ್ಮಿಸುವುದಾಗಿದ್ದರೂ ವಾಸ್ತವ ಬೇರೆಯೇ ಆಗಿತ್ತು. ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕವಾಗಿ ತುಳಿತಕ್ಕೆ ಒಳಗಾದ ಜನರಿಗೆ ಜಾತಿಯ ಮೂರ್ತ ಅಸ್ತಿತ್ವದ ಅನುಭವವಿತ್ತು ಮತ್ತು ಅದನ್ನು ಗುರುತಿಸದ ಯಾವ ಸುಧಾರಣಾ ನೀತಿಯೂ ತಮ್ಮ ಸಂಕಷ್ಟವನ್ನು ಕೊನೆಗಾಣಿಸುವುದಿಲ್ಲವೆಂದು ಅವರು ನಂಬಿದ್ದರು. ಅಲ್ಲದೆ ಪ್ರಜಾಪ್ರಭುತ್ವ ರಾಜಕೀಯದಲ್ಲಿ ತಮ್ಮ ಹಿತಾಸಕ್ತಿಯನ್ನು ಕಾಯ್ದುಕೊಳ್ಳಲು ಸಂಘಟಿತರಾಗುವ ಅಗತ್ಯವನ್ನೂ ಅವರು ಕಂಡುಕೊಂಡರು. ನೆಹರೂ ಒಳಗೊಂಡಂತೆ ಇತರ ಯಾವ ಕಾಂಗ್ರೆಸ್ ನಾಯಕರೂ - ಅವರ ವೈಯಕ್ತಿಕ ಆಶಯ, ಅಭಿಪ್ರಾಯಗಳು ಏನೇ ಇರಲಿ – ಈ ಸಂಘಟನೆಯನ್ನು ಕಡೆಗಣಿಸುವಂತಿರಲಿಲ್ಲ. ಈ ಸಂದರ್ಭದಲ್ಲಿ ಅಖಿಲ ಭಾರತ ಹಿಂದುಳಿದ ವರ್ಗಗಳ ಫೆಡರೇಷನ್ ಅಸ್ತಿತ್ವಕ್ಕೆ ಬಂತು. ಹಿಂದುಳಿದಿರುವಿಕೆಯನ್ನು ನಿರ್ಧರಿಸುವಲ್ಲಿ ಜಾತಿ ಆಧಾರವಾಗಿರಬೇಕೆಂದು ನಿರ್ಣಯ ಮಂಡಿಸಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯ ಸೌಲಭ್ಯವನ್ನು ನೀಡುವಂತೆ ಅದು ಒತ್ತಾಯಿಸಿತು. ಕಾಂಗ್ರೆಸ್‌ನ ರಾಜಕೀಯ ನಾಯಕರುಗಳನೇಕರಿಗೆ ವೈಚಾರಿಕವಾಗಿ ಜಾತಿಯನ್ನು ಕಡೆಗಣಿಸುವ ನೀತಿ ಒಪ್ಪಿತವಾದರೂ ಚುನಾವಣಾ ರಾಜಕೀಯದಲ್ಲಿ ಬಹುಸಂಖ್ಯಾತರಾದ 'ಹಿಂದುಳಿದ ವರ್ಗ'ಗಳ ಬೇಡಿಕೆಯನ್ನು ಕಡೆಗಣಿಸುವಂತಿರಲಿಲ್ಲ. ಅಧಿಕಾರದಲ್ಲಿದ್ದ ರಾಷ್ಟ್ರಮಟ್ಟದ ನಾಯಕರುಗಳ ಹೇಳಿಕೆಗಳೇನೆ ಇರಲಿ, ಸರ್ಕಾರಿ ನೀತಿಯನ್ನು ರೂಪಿಸುವಾಗ ಈ ವಾಸ್ತವವನ್ನು ಗುರುತಿಸಲೇಬೇಕಿತ್ತು. 1957ರ ಪ್ರಾರಂಭದಲ್ಲಿ ಭಾರತ ಸರ್ಕಾರದ ಗೃಹ ಸಚಿವಾಲಯ ಪರಿಶಿಷ್ಟ ಜಾತಿ, ಬುಡಕಟ್ಟುಗಳಿಗೆ ಮೀಸಲಿದ್ದ ಖಾಲಿ ಹುದ್ದೆಗಳನ್ನು ಹಿಂದುಳಿದ ವರ್ಗಗಳವರಿಂದ ಭರ್ತಿ ಮಾಡಬೇಕೆಂದು ಎಲ್ಲಾ ರಾಜ್ಯಗಳಿಗೆ ಸುತ್ತೋಲೆಯನ್ನು ಕಳುಹಿಸಿತು.[12] 'ಹಿಂದುಳಿದ ವರ್ಗಗಳ' ಈ ಒತ್ತಡ ರಾಜ್ಯ ಮಟ್ಟದಲ್ಲಿ ಇನ್ನೂ ಜಾಸ್ತಿಯಿತ್ತು. ಮೈಸೂರು ರಾಜಕೀಯದಲ್ಲಿ ಹಿಂದುಳಿದ ವರ್ಗಗಳು ಯಾವ ರೀತಿಯಲ್ಲಿ ಸಂಘಟಿತವಾಗುತ್ತಿದ್ದವು ಮತ್ತು ನಾಯಕರುಗಳ ಮೇಲೆ ಹೇಗೆ ಒತ್ತಡ ತರುತ್ತಿದ್ದವು ಎಂಬುದನ್ನು ಈ ಹಿನ್ನೆಲೆಯಲ್ಲಿ ನೋಡುವುದು ಹೆಚ್ಚು ಸಮಂಜಸ.

---

10. ರಾಮಕೃಷ್ಣ ಎದುರು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, 1960, ಮೈಸೂರು. 338.

11. *ಟೈಮ್ಸ್ ಆಫ್ ಇಂಡಿಯಾ,* ಸೆಪ್ಟೆಂಬರ್ 23 ಮತ್ತು 24, 1959.

12. ಗೃಹ ಕಾರ್ಯದರ್ಶಿಯವರ ಪತ್ರ ಸಂಖ್ಯೆ : 10:41:57, ಜುಲೈ 30, 1957 ಪತ್ರ ಸಂಖ್ಯೆ : 10:32:57, ಜುಲೈ 11, 1958, ನಂತರ ಅಖಿಲ ಭಾರತ ಹಿಂದುಳಿದ ವರ್ಗಗಳ ಪಟ್ಟಿಯನ್ನು ಮಾಡದಿರುವ ನಿರ್ಧಾರ ಮಾಡಿದ ನಂತರ ಈ ಸುತ್ತೋಲೆಯನ್ನು ಹಿಂತೆಗೆದುಕೊಳ್ಳಲಾಯಿತು. ಪತ್ರ ಸಂಖ್ಯೆ : 28:6:61, ಜನವರಿ 4, 1962.

1970ರ ದಶಕದವರೆಗೂ ಪ್ರಬಲ ಜಾತಿಗಳ ಮುಖ್ಯಮಂತ್ರಿಗಳೇ ಆಡಳಿತ ನಡೆಸಿದರು ಎನ್ನುವುದು ಆ ಜಾತಿಯ ರಾಜಕೀಯ ಪ್ರಾಬಲ್ಯವನ್ನು ತೋರಿಸಿದರೂ ಆಗಿನ ಎಲ್ಲಾ ಸರಕಾರಿ ಧೋರಣೆಗಳೂ ಆ ಜಾತಿಯವರ ಪರವಾಗಿಯೆ ಇದ್ದವು ಎಂದು ಹೇಳಲಾಗುವುದಿಲ್ಲ. ದುರ್ಬಲ ವರ್ಗದವರಿಗೆ ಅನುಕೂಲವಾಗುವ ಸುಧಾರಣಾ ನೀತಿಗಳನ್ನೂ ಸರಕಾರ ಕಾಲದಿಂದ ಕಾಲಕ್ಕೆ ಜಾರಿಗೆ ತರಬೇಕಾಗುತ್ತಿತ್ತು. ಇದಕ್ಕೆ ಮತ ರಾಜಕೀಯ (ಲಿಂಗಾಯಿತರು ಮತ್ತು ಒಕ್ಕಲಿಗರ ಒಟ್ಟು ಜನಸಂಖ್ಯೆ ಶೇಕಡ 32ರಷ್ಟು ಮಾತ್ರ ಇತ್ತು) ಒಂದು ಕಾರಣವಾದರೆ, ಆಗಿನ ಮುಖ್ಯ ಮಂತ್ರಿಗಳಾದ ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ, ನಿಜಲಿಂಗಪ್ಪ (ನಿಜಲಿಂಗಪ್ಪನವರು ತಮ್ಮ ಅವಧಿಯ ಕೊನೆಯ ಹಂತದಲ್ಲಿ ಜಾತಿಯ ಒತ್ತಡಕ್ಕೆ ಮಣಿದರು ಎಂಬ ಆರೋಪವಿದ್ದರೂ) ಇವರುಗಳು ರಾಷ್ಟ್ರೀಯ ಚಳುವಳಿಯಲ್ಲಿ ಮೈಗೂಡಿಸಿಕೊಂಡ ರಾಷ್ಟ್ರಪ್ರಜ್ಞೆ, ಸ್ವಯಂತಂತ್ರವಾದಿ (ಲಿಬರಲ್) ರಾಜಕೀಯ ಧೋರಣೆ ಜಾತಿರಾಜಕೀಯವನ್ನು ಮೀರಿದ ದೃಷ್ಟಿಕೋನವನ್ನು ಹೊಂದುವಂತೆ ಮಾಡಿತ್ತು. ಇವರ ಸುಧಾರಣಾ ನೀತಿ ದುರ್ಬಲ ವರ್ಗದವರ ಉದ್ಧಾರವನ್ನು ಉದ್ದೇಶವಾಗಿಟ್ಟುಕೊಂಡಿತ್ತೇನೋ ನಿಜ; ಆದರೆ ಪರಿಣಾಮ ಮಾತ್ರ ಕೇವಲ ಸಾಂಕೇತಿಕವಾಗಿದ್ದುದು ಕಂಡು ಬರುತ್ತದೆ. ಈ ನಿಟ್ಟಿನಲ್ಲಿ ಸರಕಾರ ದುರ್ಬಲ ವರ್ಗದವರಿಗೆಂದು (ಹೆಚ್ಚಿನವರು ಕೆಳಜಾತಿಯವರು) ವ್ಯಯಿಸಿದ ಸಂಪನ್ಮೂಲಗಳು ಲಿಂಗಾಯಿತ ಮತ್ತು ಒಕ್ಕಲಿಗ ಮಧ್ಯವರ್ತಿಗಳಿಂದ ಆ ವರ್ಗದವರಿಗೆ ಸಂಪೂರ್ಣವಾಗಿ ತಲುಪದಂತಹ ಸ್ಥಿತಿ ಏರ್ಪಟ್ಟಿತ್ತು. ವಾಸ್ತವತೆ ಹೀಗಿದ್ದರೂ ತಮ್ಮ ಏಳಿಗೆ ಸರಕಾರದ ಹೊಣೆ ಹಾಗೂ ಅಂತಹ ಹೊಣೆಯನ್ನು ಸರಕಾರ ಜವಾಬ್ದಾರಿಯಿಂದ ನಿರ್ವಹಿಸುವಂತೆ ತಾವು ಒತ್ತಡ ತರಬಹುದು ಎನ್ನುವ ಅರಿವು ದುರ್ಬಲ ವರ್ಗದವರಿಗೆ (ಕೆಳಜಾತಿಯವರಿಗೆ) ಮೂಡುತ್ತಿದ್ದುದನ್ನು ನಾವು ಕಾಣುತ್ತೇವೆ. ಕಡಿದಾಳ್ ಮಂಜಪ್ಪನವರು ಮುಖ್ಯಮಂತ್ರಿಯಾಗಿದ್ದಾಗ, ಅಂದರೆ 1961ರಲ್ಲಿ ಜಾರಿಗೆ ಬಂದ ಭೂ ಸುಧಾರಣೆ ದುರ್ಬಲ ವರ್ಗದವರ ಈ ಪ್ರಜ್ಞೆಯನ್ನು ಹೆಚ್ಚಿಸಲು ಸಹಕಾರಿಯಾಯಿತು. ಈ ಸುಧಾರಣೆ ಕ್ರಮೇಣ ಈ ನಿಟ್ಟಿನಲ್ಲಿ ಮತ್ತಷ್ಟು ತೀವ್ರವಾದ ನೀತಿಯನ್ನು 1972ರಲ್ಲಿ ದೇವರಾಜ ಅರಸುರವರ ಸರಕಾರ ಜಾರಿಗೆ ತರಲು ಒತ್ತಡ ತಂದಿತು ಎಂದು ಹೇಳಿದರೆ ತಪ್ಪಾಗುವುದಿಲ್ಲ.

1961ರ ಭೂ ಸುಧಾರಣೆ ಮೈಸೂರು ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ನಿಜವಾದ ಬದಲಾವಣೆಯನ್ನು ತಂದಿತು ಎಂದು ಹೇಳಲಾಗದಿದ್ದರೂ ಇದರ ಮಹತ್ವವನ್ನು ಸಂಪೂರ್ಣವಾಗಿ ತಳ್ಳಿಹಾಕುವಂತಿಲ್ಲ. ಎ. ಆರ್. ರಾಜಪುರೋಹಿತ್ ಅವರ ಪ್ರಕಾರ 1960ರ ದಶಕದಲ್ಲಿ ರಾಜ್ಯದ ಭೂ ಹಿಡುವಳಿದಾರರ ಸರಾಸರಿ ಗಣನೀಯವಾಗಿ ಏರಿದ್ದನ್ನೂ ಮತ್ತು ಗೇಣಿದಾರರ ಸಂಖ್ಯೆ ಕಡಿಮೆಯಾದದ್ದನ್ನೂ ನಾವು ಕಾಣಬಹುದು.[13] ರಾಜಪುರೋಹಿತ್‌ರವರ ಸಂಶೋಧನೆಯಲ್ಲಿ ನಾವು ಕಾಣುವ ಅಂಕಿ ಅಂಶಗಳ ಪ್ರಕಾರ 1961ರಲ್ಲಿ ಶೇಕಡಾ 70.2ರಷ್ಟಿದ್ದ ಸ್ವಂತ ಹಿಡುವಳಿದಾರರ ಸಂಖ್ಯೆ 1971ರಲ್ಲಿ ಶೇಕಡಾ 88.8ಕ್ಕೆ ಏರಿತ್ತು. ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ ಮೊದಲಾದ ರಾಜ್ಯದ ದಕ್ಷಿಣ ಜಿಲ್ಲೆಗಳಲ್ಲಿ 1971ರ ಹೊತ್ತಿಗೆ ಭೂಮಿಯನ್ನು ಹೊಂದಿದ್ದವರ ಸಂಖ್ಯೆ ಶೇಕಡಾ 90 ಆದರೆ, ಉತ್ತರ ಕರ್ನಾಟಕದಲ್ಲಿ ಅದಕ್ಕಿಂತ ಸ್ವಲ್ಪ ಕಡಿಮೆಯಿದ್ದುದಾಗಿ ಕಂಡು ಬರುತ್ತದೆ. ಈ ಅಂಕಿ ಅಂಶಗಳು ಸ್ವಲ್ಪ ಮಟ್ಟಿಗೆ ಉತ್ಪ್ರೇಕ್ಷಿತ ಎನಿಸಿದರೂ ಈ ಮೊದಲೇ ಹೇಳಿದಂತೆ ಬದಲಾವಣೆಯ ದಿಕ್ಕನ್ನು ತೋರಿಸುವಲ್ಲಿ ಉಪಯುಕ್ತವಾಗುತ್ತವೆ.

---

13. ವಿವರಗಳಿಗೆ ನೋಡಿ :- ರಾಜಪುರೋಹಿತ್ ಎ ಆರ್. *"ಲ್ಯಾಂಡ್ ರಿಫಾರ್ಮ್ ಎಂಡ್ ಚೇಂಜಿಂಗ್ ಆಗ್ರೇರಿಯನ್ ಸ್ಟ್ರಕ್ಚರ್ ಇನ್ ಕರ್ನಾಟಕ"* ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಅಂಡ್ ಎಕಾನಮಿಕ್ ಚೇಂಜ್, ಬೆಂಗಳೂರು, 1982.

ಕೋಷ್ಟಕ 2.

1961 ಮತ್ತು 1971ರ ಸ್ವಂತ ಹಿಡುವಳಿದಾರರ ಭೂ ಒಡೆತನದ ಶೇಕಡಾವಾರು ವಿವರ ಈ ರೀತಿ ಇದೆ :-

ಜಿಲ್ಲೆ	1961	1971
ದಕ್ಷಿಣ ಕನ್ನಡ	22.3	45.6
ಉತ್ತರ ಕನ್ನಡ	25.9	31.8
ಶಿವಮೊಗ್ಗ	49.7	78.5
ಬೆಂಗಳೂರು	66.3	94.9
ಬಳ್ಳಾರಿ	77.0	94.2
ಬೀದರ್	84.9	97.2
ಬಿಜಾಪುರ	76.5	90.1
ಚಿಕ್ಕಮಗಳೂರು	66.7	91.8
ಚಿತ್ರದುರ್ಗ	82.8	98.5
ಹಾಸನ	77.9	96.5
ಕೊಡಗು	63.2	98.5 **
ಕೋಲಾರ	74.7	93.8
ಮಂಡ್ಯ	84.4	98.0
ಮೈಸೂರು	74.6	96.4
ರಾಯಚೂರು	77.0	96.3
ತುಮಕೂರು	84.5	98.3
ಬೆಳಗಾಂ	66.5	84.1
ಧಾರವಾಡ	65.6	81.7
ಗುಲ್ಬರ್ಗ	71.3	89.4
ಕರ್ನಾಟಕ	70.2	88.8

ಈ ಅಂಕಿ ಅಂಶಗಳು ಸಣ್ಣ ಹಿಡುವಳಿದಾರರ ಸಂಖ್ಯೆ ಏರಿದ್ದನ್ನು ತೋರಿಸಿದರೂ ಆರ್ಥಿಕವಾಗಿ ಲಾಭದಾಯಕವಲ್ಲದ ಈ ಹಿಡುವಳಿಯಿಂದ ಕೃಷಿಕರ ಜೀವನ ಮಟ್ಟ ಮತ್ತಷ್ಟು ಕೆಳಗೆ ಹೋಗುವುದಿಲ್ಲವೆ ಎನ್ನುವ ಪ್ರಶ್ನೆ ಎದುರಾಗುತ್ತದೆ. ಆದರೆ ದೇಶದ ಬೇರೆಡೆಯಲ್ಲಿ ಭೂಹಿಡುವಳಿಯ ಗಾತ್ರಕ್ಕೂ ಉತ್ಪಾದನೆಗೂ ವಿಲೋಮ ಸಂಬಂಧ ಕಂಡು ಬಂದರೆ ಕರ್ನಾಟಕದಲ್ಲಿ ಹಾಗಾಗಲಿಲ್ಲ. ಬದಲಾಗಿ ಸಣ್ಣ ಹಿಡುವಳಿದಾರರ ಸಂಖ್ಯೆ ಹೆಚ್ಚಾದಂತೆ

** ಇದರಲ್ಲಿ ಪ್ಲಾಂಟೇಷನನ್ನು ಗಣನೆಗೆ ತೆಗೆದುಕೊಂಡಿಲ್ಲ. 1961ರ ಭೂಸುಧಾರಣೆ ಪ್ಲಾಂಟೇಷನ್ ಭೂಮಿಯನ್ನು ತನ್ನ ವ್ಯಾಪ್ತಿಯಿಂದ ಹೊರಗಿಟ್ಟಿತ್ತು.

ಮೂಲ :- ಭಾರತದ ಜನಗಣತಿ, 1961x1ಮೈಸೂರು ಭಾಗ-3, ಕೋಷ್ಟಕ ಬಿ-x1, ಉಲ್ಲೇಖ, ಮನೋರ್. ಜೇಮ್ಸ್, *ಕರ್ನಾಟಕ ಕಾಸ್ಟ್ ಕ್ಲಾಸ್, ಡಾಮಿನನ್ಸ್ ಅಂಡ್ ಪಾಲಿಟಿಕ್ಸ್* ಫ್ರಾಂಕೆಲ್ ಅಂಡ್ ಎಂ ಎಸ್ ಎ ರಾವ್ 1989 (ಉಲ್ಲೇಖಿತ) ಪುಟ 34.

ಉತ್ಪಾದನೆಯೂ ಹೆಚ್ಚಾದುದನ್ನು ನಾವು ಕಾಣುತ್ತೇವೆ. [14] ಇಲ್ಲಿ ಭೂ ಸುಧಾರಣೆಯ ಲಾಭ ಪಡೆದ ಬಹಳಷ್ಟು ಜನರು ಪ್ರಬಲ ಕೋಮುಗಳಿಗೆ ಸೇರದ ಕೆಳಜಾತಿಯವರಾದುದರಿಂದ (ಯಾವ ಯಾವ ಜಾತಿಯವರು ಇದರ ಲಾಭ ಪಡೆದರು ಎಂದು ತಿಳಿಸುವ ಅಂಕಿ ಅಂಶಗಳು ಲಭ್ಯವಿಲ್ಲ) ಅವರ ಆರ್ಥಿಕ ಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸಿ, ಜೊತೆಗೆ ವಿದ್ಯಾಭ್ಯಾಸದ ಮಹತ್ವ ಅವರಿಗೆ ಅರಿವಾದಂತೆ ಆ ಜಾತಿಗಳ ವಿದ್ಯಾವಂತರ ಸಂಖ್ಯೆ ಹೆಚ್ಚಾಗುತ್ತಾ ಹೋಯಿತು. ಸರಕಾರಿ ನೌಕರಿಯ ಅಧಿಕಾರ, ಪ್ರತಿಷ್ಠೆ ಇವರನ್ನು ಆಕರ್ಷಿಸುತ್ತಾ ಹೋದಂತೆ ಶೈಕ್ಷಣಿಕ ಮತ್ತು ಸರಕಾರಿ ಹುದ್ದೆಗಳಲ್ಲಿ ಮೀಸಲಾತಿಯ ಬೇಡಿಕೆ ಈ ಜಾತಿಗಳ ಜನರಿಂದ ಹೆಚ್ಚಾಗಿ ಬರಲಾರಂಭಿಸಿತು. ಇದರೊಟ್ಟಿಗೆ ಸರಕಾರ ಒಂದು ಪೋಷಕ ಸಂಸ್ಥೆಯಾಗಿ ಬೆಳೆಯುತ್ತಾ ಸರಕಾರಕ್ಕೂ ಜನರಿಗೂ ಪೋಷಕ - ಆಶ್ರಿತ (ಪ್ಯಾಟ್ರನ್ - ಕ್ಲಯೆಂಟ್) ಸಂಬಂಧ ಬೆಳೆದು ಬಂದಿತು. ಇದರ ಪರಿಣಾಮದಿಂದ ಉಂಟಾದ ಒತ್ತಡಕ್ಕೆ ಮಣಿದ ರಾಜ್ಯ ಸರಕಾರ 1962ರಲ್ಲಿ ಹಿಂದುಳಿದ ವರ್ಗಗಳ ಸಮಿತಿಯನ್ನು ರಚಿಸಿತು.

ಹಿಂದುಳಿದ ವರ್ಗಗಳ ಪಟ್ಟಿಯನ್ನು ಮಾಡುವ ಬಗ್ಗೆ ಕೇಂದ್ರ ಸರಕಾರಕ್ಕೂ ರಾಜ್ಯ ಸರಕಾರಗಳಿಗೂ ಇರುವ ಸಂಬಂಧವನ್ನು ಇಲ್ಲಿ ಸ್ಪಷ್ಟಪಡಿಸಬೇಕು. ಪರಿಶಿಷ್ಟ ಜಾತಿ : ಪಂಗಡಗಳಿಗೆ ಮೀಸಲಾತಿಯನ್ನು ಕೊಡುವ ಬಗ್ಗೆ ಯಾವ ಗೊಂದಲವೂ ಇಲ್ಲದಿದ್ದರೂ (ಇಲ್ಲಿ ಇಡೀ ಜಾತಿ : ಪಂಗಡಗಳು ಎಲ್ಲಾ ವಿಧದಲ್ಲಿಯೂ ಹಿಂದುಳಿದಿರುವುದು ವೈಜ್ಞಾನಿಕವಾಗಿ ಸಾಬೀತಾದ್ದರಿಂದ) ಹಿಂದುಳಿದ ವರ್ಗಗಳಿಗೂ ಈ ಸೌಲಭ್ಯವನ್ನು ಕೊಡುವಲ್ಲಿ ಭಾರೀ ಗೊಂದಲವಿತ್ತು. 1953ರಲ್ಲಿ ರಾಷ್ಟ್ರಪತಿಯವರ ಸಂವಿಧಾನದ 340ನೇ ವಿಧಿಯಂತೆ ನೇಮಕಗೊಂಡ ಹಿಂದುಳಿದ ವರ್ಗಗಳ ಸಮಿತಿ ತನ್ನ ವರದಿಯಲ್ಲಿ ಹಿಂದುಳಿದ ವರ್ಗಗಳ ಪಟ್ಟಿ ಮಾಡಿತ್ತು. ಆದರೆ ಈ ಪಟ್ಟಿ ಇಡೀ ರಾಷ್ಟ್ರಕ್ಕೆ ಅನ್ವಯವಾಗುವಂತಿರಲಿಲ್ಲ. ಪ್ರತಿ ರಾಜ್ಯವೂ ಜಾತಿಗಳ ಸ್ಥಾನಮಾನಗಳಿಗೆ ಸಂಬಂಧಿಸಿದಂತೆ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದುತ್ತಾದ್ದರಿಂದ ರಾಜ್ಯದಲ್ಲಿ ಯಾರು ಹಿಂದುಳಿದವರು ಎಂದು ತೀರ್ಮಾನಿಸುವುದು ಸಂಬಂದಪಟ್ಟ ರಾಜ್ಯವೆ ಮಾಡಬೇಕಿತ್ತು. ನ್ಯಾಯಾಲಯವೂ ಇದೇ ಅಭಿಪ್ರಾಯವನ್ನು ಹೊಂದಿರುವುದನ್ನು ನಾವು ಕಾಣುತ್ತೇವೆ. ನ್ಯಾಯಾಲಯದ ಪ್ರಕಾರ ಹಿಂದುಳಿದಿರುವಿಕೆಯನ್ನು ನಿರ್ಧರಿಸುವುದು ಕೇಂದ್ರ ಸರಕಾರದ ಸಂವಿಧಾನಾತ್ಮಕ ಹಕ್ಕೇನಲ್ಲ. ರಾಮಕೃಷ್ಣ ಸಿಂಗ್ ಎದುರು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮೊಕದ್ದಮೆಯಲ್ಲಿ ನ್ಯಾಯಾಲಯವು ಕೇಂದ್ರ ಹಿಂದುಳಿದ ವರ್ಗಗಳ ಸಮಿತಿ ತಯಾರಿಸಿದ ಪಟ್ಟಿಯಲ್ಲಿದ್ದವರಿಗೆ ಮಾತ್ರ ರಾಜ್ಯ ಸರಕಾರ ಮೀಸಲಾತಿ ನೀಡಬೇಕು ಎಂಬ ನಿಬಂಧನೆಯಿಲ್ಲ ಎಂದು ಅಭಿಪ್ರಾಯಪಟ್ಟಿದೆ. ನ್ಯಾಯಾಲಯದ ತೀರ್ಪಿನ ಪ್ರಕಾರ ಕೇಂದ್ರದ ಪಟ್ಟಿಯಲ್ಲಿಲ್ಲದ ಜಾತಿ : ಕೋಮುಗಳಿಗೂ ರಾಜ್ಯ ಸರಕಾರ ಮೀಸಲಾತಿ ನೀಡಬಹುದಾಗಿದೆ ಮತ್ತು ಹಿಂದುಳಿದಿರುವಿಕೆಯನ್ನು ನಿರ್ಧರಿಸುವುದು ಹೆಚ್ಚಿನ ಮಟ್ಟಿಗೆ ರಾಜ್ಯದ್ದೇ ಹೊಣೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ.[15] ಕೇಂದ್ರ, ಹೀಗೆ ಇಡೀ ರಾಷ್ಟ್ರಕ್ಕೆ ಅನ್ವಯವಾಗುವ ಹಿಂದುಳಿದ ವರ್ಗಗಳ ಪಟ್ಟಿಯನ್ನು ತಯಾರಿಸಲು ವಿಫಲವಾದುದರಿಂದ ರಾಜ್ಯ ಸರಕಾರಗಳು ತಮ್ಮದೇ ಆದ ಹಿಂದುಳಿದ ವರ್ಗಗಳ ಸಮಿತಿಯನ್ನು ರಚಿಸುವುದು ಅನಿವಾರ್ಯವಾಯಿತು. ಮೈಸೂರಿನ ಹಿಂದುಳಿದ ವರ್ಗಗಳ ಸಮಿತಿ 1960ರಲ್ಲಿ ರಚಿತವಾಗುವುದಕ್ಕೆ ಇದೂ ಒಂದು ಕಾರಣ.

---

14. ರಾಜಪುರೋಹಿತ್ ಎ ಆರ್, 1982, ಉಲ್ಲೇಖಿತ, ಪುಟ 289 ಇಲ್ಲಿ ಕರ್ನಾಟಕದ ಬಗೆಗೆ ನಡೆದ ಅನೇಕ ಅಧ್ಯಯನಗಳನ್ನು ರಾಜಪುರೋಹಿತ್ ಉದ್ಧರಿಸುತ್ತಾರೆ.

15. ರಾಮಕೃಷ್ಣ ಸಿಂಗ್ ಎದುರು ಸ್ಟೇಟ್ ಆಫ್ ಮೈಸೂರು, ಎ ಐ ಆರ್, 1960 ಪುಟ 342-43. ಇದಲ್ಲದೆ ನಂತರ ಬಾಲಾಜಿ ಎದುರು ಸ್ಟೇಟ್ ಆಫ್ ಮೈಸೂರು ಮತ್ತು ಪ್ರದೀಪ್ ಟಂಡನ್ ಎದುರು ಸ್ಟೇಟ್ ಆಫ್ ಯು ಪಿ ಮೊಕದ್ದಮೆಗಳಲ್ಲೂ ನ್ಯಾಯಾಲಯ ಇದೇ ಅಭಿಪ್ರಾಯವನ್ನು

ಡಾ. ನಾಗನಗೌಡ ಸಮಿತಿಯ ನೇಮಕ, 1960

1958ರ ಮೀಸಲಾತಿ ಆಜ್ಞೆಯನ್ನು ನ್ಯಾಯಾಲಯ ತಳ್ಳಿಹಾಕಿದ ನಂತರ ಮೈಸೂರು ಸರಕಾರ 1959ರಲ್ಲಿ ಸಮಿತಿಯೊಂದನ್ನು ರಚಿಸಿ ಆಜ್ಞೆಯ ನ್ಯೂನತೆಗಳನ್ನು ಸರಿಪಡಿಸಲು ಯತ್ನಿಸಿತು. ಈ ಸಮಿತಿಯ ಶಿಫಾರಸ್ಸಿನಂತೆ 1959ರಲ್ಲಿ ಮತ್ತೊಂದು ಆಜ್ಞೆಯನ್ನು ಹೊರಡಿಸಲಾಯಿತು. ಇದರ ಪ್ರಕಾರ ಬ್ರಾಹ್ಮಣ, ಬನಿಯ ಮತ್ತು ಕಾಯಸ್ಥರನ್ನು ಹೊರತುಪಡಿಸಿ ಉಳಿದೆಲ್ಲರನ್ನು ಹಿಂದುಳಿದವರು ಎಂದು ನಿರ್ಧರಿಸಲಾಯಿತು. ಈ ಆಜ್ಞೆಯೂ ನ್ಯಾಯಾಲಯದಲ್ಲಿ ಪ್ರಶ್ನಿತವಾಗಿ ಅದೇ ವರ್ಷ ಹೊರಡಿಸಲಾದ ಮತ್ತೊಂದು ಸರಕಾರಿ ಆಜ್ಞೆ ಇಡೀ ರಾಜ್ಯವನ್ನು 14 ಗುಂಪುಗಳಾಗಿ ವಿಂಗಡಿಸಿ ಪ್ರತಿ ಗುಂಪಿಗೂ ಪ್ರತ್ಯೇಕ ಮೀಸಲಾತಿಯನ್ನು ಜಾರಿಗೆ ತಂದಿತು. ಶೈಕ್ಷಣಿಕ ಸಂಸ್ಥೆಗಳ ಪ್ರವೇಶಾತಿಗೆ ಶೇಕಡಾ 67, ಮತ್ತು ಸರಕಾರಿ ಹುದ್ದೆಗೆ ಶೇಕಡಾ 57 ಮೀಸಲಾತಿಯನ್ನು ಇದು ನಿಗದಿಪಡಿಸಿತು.[16] ಆದರೆ ಇದೂ ಸಹ ನ್ಯಾಯಾಲಯದಿಂದ ತಿರಸ್ಕೃತವಾದಾಗ ಸರಕಾರ ಹಿಂದುಳಿದ ವರ್ಗಗಳ ಸಮಿತಿಯನ್ನು ರಚಿಸದೆ ಗತ್ಯಂತರವಿರಲಿಲ್ಲ.1960ರಲ್ಲಿ ಹಿಂದುಳಿದ ಜಾತಿಗೆ ಸೇರಿದ ರಾಜಕೀಯ ನಾಯಕರಾದ ಡಾ. ನಾಗನ ಗೌಡರ ನೇತೃತ್ವದಲ್ಲಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ವರ್ಗಗಳನ್ನು ಗುರುತಿಸಿ ಅವುಗಳಿಗೆ ಎಷ್ಟರಮಟ್ಟಿಗೆ ಮೀಸಲಾತಿ ನೀಡಬೇಕು ಎಂಬುದನ್ನು ನಿರ್ಧರಿಸಲು ಹಿಂದುಳಿದ ವರ್ಗಗಳ ಸಮಿತಿಯನ್ನು ರಚಿಸಲಾಯಿತು. ಸ್ವಾತಂತ್ರ್ಯಾನಂತರದ ಕರ್ನಾಟಕದ ಮೊದಲ ಹಿಂದುಳಿದ ವರ್ಗಗಳ ಸಮಿತಿ ಇದು.

ಸಮಿತಿಯ ರಚನೆಯನ್ನು ನೋಡಿದರೆ ಮಿಲ್ಲರ್ ಸಮಿತಿಯಂತೆ ಇದರಲ್ಲೂ ಬ್ರಾಹ್ಮಣರ ಪ್ರಾಬಲ್ಯವನ್ನು ನಾವು ಕಾಣಬಹುದು.** ಆದರೆ ಬ್ರಾಹ್ಮಣ ಸದಸ್ಯರು ವರದಿಯ ಬಗ್ಗೆ ಭಿನ್ನಮತವನ್ನು ವ್ಯಕ್ತಪಡಿಸಲಿಲ್ಲ. ಹಾಗೆ ಭಿನ್ನಮತವನ್ನು ವ್ಯಕ್ತಪಡಿಸಿದ ಸದಸ್ಯರೆಂದರೆ ಲಿಂಗಾಯಿತರಾದ ಎಂ. ಎಸ್. ಪಾಟೀಲ್. ಇದು ಸ್ವತಂತ್ರ

---

16. ತಿಮ್ಮಯ್ಯ ಜಿ. *ಪವರ್ ಪಾಲಿಟಿಕ್ಸ್ ಅಂಡ್ ಸೋಷಿಯಲ್ ಜಸ್ಟೀಸ್, ಬ್ಯಾಕ್‌ವರ್ಡ್ ಕಾಸ್ಟ್ ಇನ್ ಕರ್ನಾಟಕ, ಸೇಜ್ ಪಬ್ಲಿಕೇಶನ್ಸ್*, 1993, ಪುಟ 81.

** ಸಮಿತಿಯ ಉಳಿದ ಸದಸ್ಯರುಗಳೆಂದರೆ :-

01. ಎಂ. ಎಸ್. ಪಾಟೀಲ್, - ಲಿಂಗಾಯಿತ
ನಿವೃತ್ತ ಜಿಲ್ಲಾ ನ್ಯಾಯಾಧೀಶರು

02. ಬಿ. ಕೊರಗಪ್ಪ - ಜಾತಿ ಗೊತ್ತಿಲ್ಲ
ನಿವೃತ್ತ ಜಿಲ್ಲಾ ನ್ಯಾಯಾಧೀಶರು

03. ಎ. ಭೀಮಪ್ಪ - ನಾಯಕ
ಶಾಸಕರು

04. ರಾಮಚಂದ್ರ ರಾವ್ ಜುಂಗ - ಬ್ರಾಹ್ಮಣ
ಶಾಸಕರು (ಮೇಲ್ಮನೆ)

05. ಕೆ. ಪುಟ್ಟಸ್ವಾಮಿ - ಒಕ್ಕಲಿಗ

06. ಎಫ್. ಡಿ. ಗೋಡ್ಕೆ - ಬ್ರಾಹ್ಮಣ
ಮಾಜಿ ಶಾಸಕರು

07. ಮಹಮದ್ ಷರೀಫ್ - ಮುಸಲ್ಮಾನ್
ಶಾಸಕರು

08. ಎಂ. ಬಿ. ಶೆಟ್ಟಿ, ಉಪಕಾರ್ಯದರ್ಶಿ - ಬಂಟ

ಪೂರ್ವದಿಂದ ಬಂದ ಹಿಂದುಳಿದ ಗುಂಪಿನಲ್ಲಿ ಒಡಕುಂಟಾಗಿರುವುದನ್ನು ತೋರಿಸುತ್ತದೆ. ಬ್ರಾಹ್ಮಣೇತರರಲ್ಲಿ ಹಿಂದುಳಿದವರನ್ನು ಗುರುತಿಸುವ ಕಾರ್ಯಕ್ಕೆ ಮೊದಲ ಬಾರಿ ಈ ಸಮಿತಿ ಕೈಹಾಕಿತು. ಅದರ ಪರಿಣಾಮವನ್ನು ನಂತರ ನೋಡೋಣ. ಈಗ ಸಮಿತಿ ಯಾವ ಆಧಾರದ ಮೇಲೆ ಹಿಂದುಳಿದಿರುವಿಕೆಯನ್ನು ನಿರ್ಧರಿಸಿತು ಎಂಬುದನ್ನು ಪರಿಶೀಲಿಸುವುದು ಅಗತ್ಯ.

ನಾಗನ ಗೌಡ ಸಮಿತಿಗೆ ವಹಿಸಿದ ಕಾರ್ಯವೆಂದರೆ :-

01. ರಾಜ್ಯ ಜನತೆಯಲ್ಲಿ ಯಾರನ್ನು ಮತ್ತು ಯಾವ ಆಧಾರದ ಮೇಲೆ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ ಎಂದು ನಿರ್ಧರಿಸಲು ಉಪಯೋಗಿಸುವ ಮಾನದಂಡದ ಬಗ್ಗೆ ಸಲಹೆ ನೀಡುವುದು ಮತ್ತು

02. ಹಾಗೆ ನಿರ್ಧರಿಸಿದ ಮಾನದಂಡವನ್ನು ಉಪಯೋಗಿಸಿ ರಾಜ್ಯ ಸರಕಾರ ತಾಂತ್ರಿಕ ಸಂಸ್ಥೆಗಳಿಗೆ (ಶೈಕ್ಷಣಿಕ) ಪ್ರವೇಶಾವಕಾಶ ಮತ್ತು ಸರಕಾರಿ ಹುದ್ದೆಗಳಿಗೆ ನೇಮಕಾತಿಯಲ್ಲಿ ಮೀಸಲಾತಿಯನ್ನು ನಿರ್ದಿಷ್ಟವಾಗಿ ಕೊಡುವುದರ ಬಗ್ಗೆ ಸಲಹೆ ಕೊಡುವುದು.

ನಾಗನ ಗೌಡ ಸಮಿತಿ ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದವರನ್ನು ಗುರುತಿಸಲು ಪ್ರಮುಖವಾಗಿ ಮೂರು ಮಾನದಂಡಗಳನ್ನು ಉಪಯೋಗಿಸಿತು.

01. ಸಾಮಾಜಿಕವಾಗಿ ಶ್ರೇಣಿಯಲ್ಲಿ ಒಂದು ಜಾತಿ ಯಾ ಕೋಮಿನ ಸ್ಥಾನ ಮಾನಗಳ (ವ್ಯಕ್ತಿಗಳನ್ನಲ್ಲದೆ) ಆಧಾರದ ಮೇಲೆ ಸಾಮಾಜಿಕ ಹಿಂದುಳಿದಿರುವಿಕೆಯನ್ನು ನಿರ್ಧರಿಸುವುದು.

02. ಒಂದು ನಿಶ್ಚಿತ ಶೈಕ್ಷಣಿಕ ಮಟ್ಟದ ಆಧಾರದ ಮೇಲೆ ಜಾತಿ ಮತ್ತು ಕೋಮಿನ ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ತೀರ್ಮಾನಿಸುವುದು.

03. ಸರಕಾರಿ ಹುದ್ದೆಯಲ್ಲಿ ಯಾವ ಯಾವ ಜಾತಿಗಳಿಗೆ ಎಷ್ಟು ಪ್ರಾತಿನಿಧ್ಯ ಇದೆ ಎನ್ನುವುದರ ಆಧಾರ.[17]

ಸಮಿತಿಯ ಅಂದಾಜಿನ ಪ್ರಕಾರ 1960ರಲ್ಲಿ ಪರಿಶಿಷ್ಟ ಜಾತಿ : ಪಂಗಡಗಳನ್ನು ಹೊರತುಪಡಿಸಿ ಸರಕಾರಿ ಹುದ್ದೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯ ಪಡೆಯದ ಹಿಂದುಳಿದ ಜಾತಿ : ಕೋಮುಗಳ ಸಂಖ್ಯೆ ರಾಜ್ಯದಲ್ಲಿ ಒಟ್ಟು ಜನ ಸಂಖ್ಯೆಯ ಶೇಕಡಾ 57ರಷ್ಟಿತ್ತು. 1951ರಿಂದ ಜನಗಣತಿಯಲ್ಲಿ ಜಾತಿಯನ್ನು ನಮೂದಿಸುವುದನ್ನು ನಿಷೇಧಿಸಿದ್ದರಿಂದ ಜಾತಿ: ಕೋಮುಗಳ ಅಂಕಿ ಅಂಶಗಳನ್ನು 1931 ಮತ್ತು 1941ರಲ್ಲಾದ ವಿವಿಧ ಜಾತಿಯ ಜನಸಂಖ್ಯೆಯ ಬೆಳವಣಿಗೆಯ ಆಧಾರದ ಮೇಲೆ ಕಂಡುಕೊಳ್ಳಲಾಯಿತು. ಈ ಕ್ರಮವೇ ಈಗಲೂ ಮುಂದುವರಿದಿದೆ. ಬೇರೆ ಬೇರೆ ಜಾತಿಯ ಜನಸಂಖ್ಯೆಯನ್ನು ಕಂಡುಕೊಂಡಿದ್ದ ಕೇವಲ ಅಂದಾಜಿನ ಮೇಲೆ ಹೊರತು ನಿಖರವಾಗಿ ಅದನ್ನು ಹೇಳಲು ಸಾಧ್ಯವಿರಲಿಲ್ಲ. 1960ರಲ್ಲಿ ವಿವಿಧ ಜಾತಿಗಳ ಅಂದಾಜು ಜನಸಂಖ್ಯೆಯ ವಿವರ ಈ ರೀತಿ ಇದೆ.

---

17. ಮೈಸೂರು ಹಿಂದುಳಿದ ವರ್ಗಗಳ ಸಮಿತಿ, (ನಾಗನ ಗೌಡ ಸಮಿತಿ) ಅಂತಿಮ ವರದಿ, ಮೈಸೂರು ಸರಕಾರ, ಬೆಂಗಳೂರು, 1961, ಪುಟ 5-6.

ಕೋಷ್ಟಕ 3.

ಜಾತಿ : ಕೋಮು	1960ರ ಅಂದಾಜು ಜನಸಂಖ್ಯೆ	ಒಟ್ಟು ಹಿಂದುಗಳ ಶೇಕಡಾವಾರು	ಒಟ್ಟು ಜನ ಸಂಖ್ಯೆಯ ಶೇಕಡಾವಾರು
ಅಗಸ	248,800	1.35	1.18
ಬಣಜಿಗ	332,400	1.80	1.58
ಬೇಡ	1,002,100	5.44	4.74
ಬ್ರಾಹ್ಮಣ	905,700	4.92	4.28
ದರ್ಜಿ	65,000	0.35	0.31
ದೇವಾಂಗ	221,000	1.20	1.05
ಗಂಗಾಕುಲ	460,800	2.50	2.18
ಗಾಣಿಗ	90,700	0.49	0.43
ಈಡಿಗ	528,600	2.87	2.40
ಕ್ಷತ್ರಿಯ	78,200	0.42	0.37
ಕುಂಬಾರ	109,100	0.59	0.52
ಕುರುಬ	1,455,800	7.90	6.88
ಲಿಂಗಾಯಿತ	3,293,000	17.88	15.57
ಮರಾಠ	861,700	4.68	4.08
ಮೇಡ	28,300	0.15	0.13
ಮುದಲಿ	112,200	0.61	0.53
ನಾಯಿಂದ	120,800	0.66	0.57
ನೇಗಿ	142,000	0.77	0.67
ರಾಜಪುತ್	43,800	0.24	0.21
ಸತಾಣಿ	36,600	0.20	0.17
ತಿಗಳಾ	152,700	0.83	0.72
ಉಪ್ಪಾರ್	220,700	1.20	1.04
ಒಕ್ಕಲಿಗ	2,744,300	14.90	12.98
ವೈಶ್ಯ	144,800	0.79	0.68
ವಿಶ್ವಕರ್ಮ	482,400	2.62	2.28
ಯಾದವ	310,700	1.69	1.47
ಲಮಾಣಿ	178,400	0.97	0.84
ವಡ್ಡರ	359,800	1.95	1.70

ಕೊಡಗ	56,200	0.31	0.27
ಅದರ್ ನಾನ್-ಶೆಡ್ಯೂಲ್ಡ್ ಹಿಂದೂ ಕಾಸ್ಟ್ಸ್	703,600	3.82	3.30
ಟೋಟಲ್ ನಾನ್-ಶೆಡ್ಯೂಲ್ಡ್ ಹಿಂದೂಸ್	15,514,800	84.24	73.37
ಪರಿಶಿಷ್ಠ ಜಾತಿಗಳು	2,815,600	15.29	13.31
ಪರಿಶಿಷ್ಠ ವರ್ಗಗಳು	87,600	0.48	0.41
ಒಟ್ಟು ಹಿಂದೂಗಳು	18,418,000	100.00	87.09
ಇತರೆ ಧರ್ಮಿಯರು	2,729,300		12.91
ರಾಜ್ಯದ ಒಟ್ಟು ಜನಸಂಖ್ಯೆ	21,147,300		100.00

ಮೂಲ:- ಮೈಸೂರು ಹಿಂದುಳಿದ ವರ್ಗಗಳ ಸಮಿತಿ, ಅಂತಿಮ ವರದಿ, 1961, ಪುಟ - 41,

ಈ ಮೇಲಿನ ಅಂಕಿ ಅಂಶದ ಪ್ರಕಾರ ಲಿಂಗಾಯಿತರು ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದ ಜಾತಿ : ಕೋಮಿನವರಾಗಿದ್ದರೆ, ಮೈಸೂರು ಸಂಸ್ಥಾನದಲ್ಲಿ ಮೊದಲ ಸ್ಥಾನವನ್ನು ಪಡೆದಿದ್ದ ಒಕ್ಕಲಿಗರು ಪುನರ್ವಿಂಗಡಿತ ರಾಜ್ಯದಲ್ಲಿ ಎರಡನೆಯ ಸ್ಥಾನಕ್ಕೆ ಬಂದಿರುವುದನ್ನು ನಾವು ಗಮನಿಸಬಹುದು. ಶೇಕಡಾ 14ರಷ್ಟಿದ್ದ ಪರಿಶಿಷ್ಟ ಜಾತಿ : ಪಂಗಡಗಳವರನ್ನು ಸಂವಿಧಾನದ ವಿಶೇಷ ಅಧಿನಿಯಮದ ಪ್ರಕಾರ ಪ್ರತ್ಯೇಕವಾಗಿಯೇ ಗುರುತಿಸಲಾಯಿತು. ಆದರೆ ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರು, ಅಲ್ಪಸಂಖ್ಯಾತರಾಗಿದ್ದರೂ ಹಿಂದುಳಿದ ವರ್ಗಗಳ ಗುಂಪಿಗೆ ಸೇರಿಸಲ್ಪಟ್ಟರು.

ಹೀಗೆ ಜಾತಿ : ಕೋಮುಗಳ ಜನಸಂಖ್ಯೆಯನ್ನು ಗುರುತಿಸಿದ ಸಮಿತಿಯ ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ನಿರ್ಧರಿಸಲು 1959-60ರಲ್ಲಿ ಪ್ರೌಢಶಾಲೆಯ ಕೊನೆಯ ಮೂರು ವರ್ಷದ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರುವ ಬೇರೆ ಬೇರೆ ಜಾತಿಗಳ ವಿದ್ಯಾರ್ಥಿಗಳ ಸರಾಸರಿಯನ್ನು ತೆಗೆದುಕೊಂಡು ಅದನ್ನು ರಾಜ್ಯದ ಒಟ್ಟು ಸರಾಸರಿಗೆ ಹೋಲಿಸಿ ರಾಜ್ಯ ಸರಾಸರಿಗಿಂತ ಕಡಿಮೆಯಿದ್ದ ಜಾತಿಗಳನ್ನು ಹಿಂದುಳಿದವರೆಂದು ನಿರ್ಧರಿಸಿತು. ಶೈಕ್ಷಣಿಕವಾಗಿ ವಿವಿಧ ಜಾತಿಗಳ ತುಲನಾತ್ಮಕ ಸ್ಥಿತಿ ಈ ಕೆಳಗಿನ ಅಂಕಿ ಅಂಶಗಳಿಂದ ಸ್ಪಷ್ಟವಾಗುತ್ತದೆ.

ಕೋಷ್ಟಕ 4.

ಪ್ರೌಢಶಾಲೆಯ ಕೊನೆಯ ಮೂರು ತರಗತಿಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ (ಒಂದು ಸಾವಿರಕ್ಕೆ)

ಜಾತಿ : ಕೋಮು	ವಿದ್ಯಾರ್ಥಿಗಳ ಸಂಖ್ಯೆ :	ಪ್ರತಿ ಜಾತಿಯ ಒಂದು ಸಾವಿರ ಜನಸಂಖ್ಯೆಗೆ ಇರುವ ವಿದ್ಯಾರ್ಥಿಗಳ ಸಂಖ್ಯೆ :
01.	02.	03.
ಅಗಸ	540	2.2
ಬಣಜಿಗ	2,008	6.0
ಬೇಡ	1,209	1.2

ಬ್ರಾಹ್ಮಣ	36,117	38.8
ದರ್ಜಿ	532	8.2
ದೇವಾಂಗ	1,148	5.2
ಗಂಗಾಕುಲ	1,492	3.2
ಗಾಣಿಗ	634	7.0
ಈಡಿಗ	1,710	3.3
ಕ್ಷತ್ರಿಯಾ	1,743	22.3
ಕುಂಬಾರ	373	3.4
ಕುರುಬ	2,609	1.8
ಲಿಂಗಾಯಿತ	23,369	7.1
ಮರಾಠ	4,715	5.5
ಮೇಡ	115	4.1
ಮುದಲಿ	2,343	19.2
ನಾಯಿಂದ	492	4.1
ನೇಗಿ	980	6.9
ರಾಜಪುತ್	362	8.3
ಸತಾಣಿ	257	7.0
ತಿಗಳ	442	2.9
ಉಪ್ಪಾರ	428	2.0
ಒಕ್ಕಲಿಗ	16,417	6.0
ವೈಶ್ಯ	3,298	22.8
ವಿಶ್ವಕರ್ಮ	2,082	
ಯಾದವ್	827	2.7
ಲಮಾಣಿ	172	1.0
ವಡ್ಡರ್	180	1.0
ನಾಯರ್	182	7.4
ಕೊಡಗ	2,650	47.2
ಅದರ್ ನಾನ್-ಶೆಡ್ಯೂಲ್ಡ್ ಹಿಂದೂ ಕಾಸ್ಟ್ಸ್	3,498	12.1
ಟೋಟಲ್ ನಾನ್-ಶೆಡ್ಯೂಲ್ಡ್ ಹಿಂದೂಸ್	117,933	

ಶೆಡ್ಯೂಲ್ಡ್‌ಕಾಸ್ಟ್ಸ್	8,213	3.0
ಶೆಡ್ಯೂಲ್ಡ್ ಟ್ರೈಬ್ಸ್	125	1.4
ಮುಸಲ್ಮಾನರು	9,979	5.0
ಕ್ರಿಶ್ಚಿಯನ್ಸ್	8,360	18.4
ಜೈನ್ಸ್	2,075	14.1
ಬುದ್ದಿಸ್ಟ್	2	1.1
ಸಿಖ್ಖರು	58	13.5
ಜೊರೊಯೆಸ್ಟ್ರೇನ್ಸ್	7	7.0
ಜ್ಯುಯಿಸ್		
ಅದರ್ ವೂಸ್ ರಿಲಿಜಿಯನ್ ಈಸ್ ನಾಟ್ ಸ್ಟೇಟೆಡ್ (ಇನ್‌ಕ್ಲೂಡೆಡ್ ಅಂಡರ್ ಅದರ್ ನಾನ್-ಶೆಡ್ಯೂಲ್ಡ್ ಹಿಂದೂ ಕಾಸ್ಟ್ಸ್)		
ಟೋಟೆಲ್	146,752	

ಮೂಲ :- ಮೈಸೂರು ಹಿಂದುಳಿದ ವರ್ಗಗಳ ಸಮಿತಿ, (ಉಲ್ಲೇಖಿತ) ಪುಟ. 43 - 44.

ಸಮಿತಿಯು ಪ್ರಾರಂಭದಲ್ಲಿ ಜಾತಿಗಳ ಅಕ್ಷರಸ್ಥರ ಶೇಕಡಾವಾರು ಸಂಖ್ಯೆಯನ್ನು ತೆಗೆದುಕೊಳ್ಳಲು ನಿರ್ಧರಿಸಿತು. ಆದರೆ ನಂತರ ತನ್ನ ಅಂತಿಮ ವರದಿಯಲ್ಲಿ ಒಟ್ಟು ಅಕ್ಷರಸ್ಥರ ಸಂಖ್ಯೆಯ ಬದಲು ಪ್ರತಿ ಜಾತಿಯಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಹೈಸ್ಕೂಲಿನ ಕೊನೆಯ ಮೂರು ತರಗತಿಗಳಲ್ಲಿ ಕಲಿಯುತ್ತಿದ್ದಾರೆ ಎನ್ನುವ ಅಂಶವನ್ನು ಪರಿಗಣನೆಗೆ ತೆಗೆದುಕೊಂಡಿತು. ಈ ಬದಲಾವಣೆಗೆ ಸಮಿತಿ ಕಾರಣವನ್ನು ನೀಡಿತು.

''ಅಕ್ಷರಸ್ಥರ ಶೇಕಡಾವಾರು ಸಂಖ್ಯೆ ಜನರ ನಿಜವಾದ ಶೈಕ್ಷಣಿಕ ಮಟ್ಟವನ್ನು ತಿಳಿಸುವ ಸಾಧ್ಯತೆ ಇಲ್ಲ. ಅದು ಎಷ್ಟು ಮಂದಿ ಓದಬಲ್ಲರು ಮತ್ತು ಬರೆಯಬಲ್ಲರು ಎಂದು ಮಾತ್ರ ಹೇಳುತ್ತದೆ. ಆದ್ದರಿಂದ ಜನರ ನಿಜವಾದ ಶೈಕ್ಷಣಿಕ ಮಟ್ಟವನ್ನು ಅರ್ಥ ಮಾಡಿಕೊಳ್ಳಲು ಕೇವಲ ಅಕ್ಷರಸ್ಥರ ಸಂಖ್ಯೆ ಸಾಕಾಗುವುದಿಲ್ಲ''[18]

ಸರಕಾರಿ ಹುದ್ದೆಯಲ್ಲಿ ಜಾತಿ ಪ್ರಾತಿನಿಧ್ಯದ ಮಾನದಂಡ ಈಗಾಗಲೇ ಎಲ್ಲರಿಗೂ ಒಪ್ಪಿತವಾದ ಮಾನದಂಡವಾದುದರಿಂದ ಅದೇನು ಅಂತಹ ಸಮಸ್ಯೆಯನ್ನು ತಂದೊಡ್ಡಲಿಲ್ಲ. ನಾಲ್ಕನೇ ದರ್ಜೆಯ ನೌಕರನನ್ನು ಹೊರತುಪಡಿಸಿ ಇನ್ನುಳಿದ ದರ್ಜೆಗಳಲ್ಲಿ ಇದ್ದ ಜಾತಿ ಪ್ರಾತಿನಿಧ್ಯವನ್ನು ಗಣನೆಗೆ ತೆಗೆದುಕೊಂಡು ಸಮಿತಿಯು ಯಾವ ಯಾವ ಜಾತಿಗಳಿಗೆ ಸಾಕಷ್ಟು ಪ್ರಾತಿನಿಧ್ಯವಿಲ್ಲವೆಂಬ ಪಟ್ಟಿ ಮಾಡಿತು. ನಾಲ್ಕನೆ ದರ್ಜೆಯಲ್ಲಿ ಕೆಳ ಜಾತಿಯವರೆ ಜಾಸ್ತಿ ಇದ್ದರೂ ಆ ಹುದ್ದೆಗಳು ಸಮಾಜದಲ್ಲಿ ಪ್ರತಿಷ್ಠೆಯ ಸಂಕೇತವಾಗಿರದಿದ್ದುದರಿಂದ ಅದನ್ನು ಕೈಬಿಡಲಾಯಿತು.

---

18. ಅದೇ. ಪುಟ 14-15.

ಕೋಷ್ಟಕ 5.

ಮಾರ್ಚ್ 31, 1959ರಲ್ಲಿ ರಾಜ್ಯ ಸರಕಾರಿ ನೌಕರಿಯಲ್ಲಿದ್ದ ಜಾತಿಗಳ ಶೇಕಡಾವಾರು ಸಂಖ್ಯೆ :

ಜಾತಿ : ಕೋಮು	ರಾಜ್ಯ ಸರ್ಕಾರದ ಒಟ್ಟು ನೌಕರರ ಸಂಖ್ಯೆ :	ಪ್ರತಿ ಜಾತಿಯಲ್ಲಿ ರಾಜ್ಯ ಸರಕಾರಿ ನೌಕರರ ಒಟ್ಟು ಜನ ಸಂಖ್ಯೆಯ ಶೇಕಡಾವಾರು :	ನಾಲ್ಕನೇ ದರ್ಜೆ ನೌಕರರನ್ನು ಹೊರತುಪಡಿಸಿ ಸರಕಾರಿ ನೌಕರರ ಒಟ್ಟು ಸಂಖ್ಯೆ :	ಪ್ರತಿ ಜಾತಿಯ ಸರಕಾರಿ ನೌಕರರ ಆ ಜಾತಿಯ ಒಟ್ಟು ಜನಸಂಖ್ಯೆಯ ಶೇಕಡಾವಾರು ಸಂಖ್ಯೆ
01.	02.	03.	04.	05.
ಅಗಸ	1,331	0.90	567	0.51
ಬಣಜಿಗ	2,635	1.77	1,967	1.80
ಬೇಡ	1,557	1.05	868	0.79
ಬ್ರಾಹ್ಮಣ	28,429	19.12	26,135	23.93
ದರ್ಜಿ	168	0.11	142	0.13
ದೇವಾಂಗ	1,239	0.88	994	0.91
ಗಂಗಾಕುಲ	1,190	0.80	405	0.37
ಗಾಣಿಗ	604	0.41	407	0.37
ಈಡಿಗ	906	0.61	560	0.51
ಕ್ಷತ್ರಿಯಾ	2,014	1.35	1,530	1.40
ಕುಂಬಾರ	352	0.24	183	0.17
ಕುರುಬ	4,587	3.00	2,508	2.30
ಲಿಂಗಾಯಿತ	18,431	12.40	16,194	14.83
ಮರಾಠ	4,473	3.01	2,949	2.70
ಮೇಡ	150	0.10	86	0.80
ಮುದಲಿ	2,218	1.49	1,509	1.38
ನಾಯಿಂದ	618	0.42	530	0.49
ನೇಗಿ	1,132	0.76	819	0.75
ರಾಜಪುತ್	326	110	0.22	0.10
ಸತಾಣಿ	210	0.14	199	0.18
ತಿಗಳ	488	0.33	218	0.20
ಉಪ್ಪಾರ	492	0.33	330	0.30

ಒಕ್ಕಲಿಗ	15,886	10.68	9,773	8.95
ವೈಶ್ಯ	1,331	0.90	1,170	1.07
ವಿಶ್ವಕರ್ಮ	1,882	1.27	1,646	1.51
ಯಾದವ	853	0.57	563	0.52
ಲಮಾಣಿ	224	0.15	159	0.14
ವಡ್ಡರ್	903	0.61	503	0.46
ನಾಯರ್	492	0.33	288	0.26
ಕೊಡಗು	1,794	1.21	1,571	1.44
ಆದರ್ ನಾನ್-ಶೆಡ್ಯೂಲ್ಡ್ ಹಿಂದೂ ಕಾಸ್ಟ್ಸ್	13,762	9.26	8,308	7.61
ಟೋಟಲ್ ನಾನ್-ಶೆಡ್ಯೂಲ್ಡ್ ಹಿಂದೂಸ್	110,677	74.42	83,191	76.18
ಶೆಡ್ಯೂಲ್ಡ್ ಕಾಸ್ಟ್ಸ್	7,509	5.05	5,151	4.73
ಶೆಡ್ಯೂಲ್ಡ್ ಕಾಸ್ಟ್ಸ್	7,509	5.05	5,151	4.73
ಶೆಡ್ಯೂಲ್ಡ್ ಟ್ರೈಬ್ಸ್	218	0.15	38	0.03
ಮುಸ್ಲಿಮ್ಸ್	22,343	15.03	14,807	13.56
ಕ್ರಿಶ್ಚಿಯನ್ಸ್	7,126	4.79	5,255	4.81
ಜೈನ್ಸ್	570	0.38	485	0.44
ಬುದ್ದಿಸ್ಟ್ಸ್	20	0.01	17	0.02
ಸಿಖ್ಖರು	102	0.07	90	0.08
ಜೊರೊಯೆಸ್ಟ್ರೇನ್ಸ್	121	0.08	121	0.11
ಜ್ಯುಯಿಸ್ ಅದರ್ಸ್, ವೂಸ್ ರಿಲಿಜಿಯನ್ ಈಸ್ ನಾಟ್ ಸ್ಟೇಟೆಡ್ (ಇನ್‌ಕ್ಲುಡೆಡ್ ಅಂಡರ್ ಆದರ್ ನಾನ್ - ಶೆಡ್ಯೂಲ್ಡ್ ಹಿಂದೂಸ್ ಕಾಸ್ಟ್ಸ್)				
ಒಟ್ಟು	148,685	100.00	109,155	

ಸ್ಟೋರ್ಸ್ :- ಗವರ್ನ್‌ಮೆಂಟ್ ಆಫ್ ಮೈಸೂರು, ಮೈಸೂರು ಬ್ಯಾಕ್‌ವರ್ಡ್ ಕ್ಲಾಸಸ್ : ಫೈನಲ್ ರಿಪೋರ್ಟ್, ಬೆಂಗಳೂರು, 1961, ಪಿ. ಪಿ. 45-46.

ವಾರ್ಷಿಕ ವರಮಾನ 1200ಕ್ಕಿಂತಲೂ ಕಡಿಮೆ ಇದ್ದ ಕುಟುಂಬಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿನಿಲಯ ಮತ್ತು ವಿದ್ಯಾಭ್ಯಾಸವನ್ನು ಕೊಡುವಂತೆ ಸಮಿತಿ ಶಿಫಾರಸ್ಸು ಮಾಡಿತು. ಆದರೆ ಈ ಆದಾಯದ ಮಾನದಂಡವನ್ನು ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಾವಕಾಶವನ್ನು ಕೊಡುವಲ್ಲಿ ಅಥವಾ ಸರಕಾರಿ ಹುದ್ದೆಗಳಲ್ಲಿ ಮೀಸಲಾತಿಯನ್ನು ನೀಡುವ ಉದ್ದೇಶಕ್ಕೆ ಉಪಯೋಗಿಸಲಿಲ್ಲ. ಹತ್ತು ವರ್ಷಗಳ ನಂತರ ಮೀಸಲಾತಿ ನೀತಿಯನ್ನು ಪುನರ್ವಿಮರ್ಶಿಸಬೇಕೆಂದು ಸಮಿತಿ ಅಭಿಪ್ರಾಯಪಟ್ಟಿತು. ಯಾವ ಜಾತಿ : ಕೋಮು ಶೈಕ್ಷಣಿಕ ಮಟ್ಟದಲ್ಲಿ ಮತ್ತು ಸರಕಾರಿ ಹುದ್ದೆಯಲ್ಲಿನ ಪ್ರಾತಿನಿಧ್ಯದಲ್ಲಿ ಪ್ರಗತಿಯನ್ನು ತೋರಿಸುತ್ತವೆಯೋ ಅವುಗಳನ್ನು ಹಿಂದುಳಿದ ವರ್ಗಗಳ ಪಟ್ಟಿಯಿಂದ ಕೈಬಿಡಬೇಕೆಂದು ಸಲಹೆ ನೀಡಿತು.

ಸಮಿತಿಯ ವರದಿಯ ವಿಶ್ಲೇಷಣೆ

ನಾಗನ ಗೌಡ ಸಮಿತಿಯ ವರದಿಯನ್ನು ವೈಜ್ಞಾನಿಕವೆಂದು ಪರಿಗಣಿಸಲಾಗುವುದಿಲ್ಲ. ಅದಕ್ಕೆ ಈ ಕೆಳಗಿನ ಕಾರಣಗಳು ಸಮರ್ಥನೆ ನೀಡುತ್ತವೆ.

ಈ ಮೊದಲೇ ಹೇಳಿದಂತೆ ಜಾತಿಯ ಅಂಕಿ ಅಂಶಗಳನ್ನು ಸಂಗ್ರಹಿಸುವಲ್ಲಿ ಈ ಸಮಿತಿಗೆ ಮಿಲ್ಲರ್ ಸಮಿತಿಗೆ ಇದ್ದ ಅನುಕೂಲಗಳಿರಲಿಲ್ಲ. 1911ರ ಜನಗಣತಿ ಜಾತಿಯ ವಿವರಗಳನ್ನು ಸಂಗ್ರಹಿಸುವುದರಿಂದ ಮಿಲ್ಲರ್ ವರದಿಗೆ ಜಾತಿಗಳ ಬಗ್ಗೆ ಸಂಪೂರ್ಣ ಮಾಹಿತಿ ಇತ್ತು. ಆದರೆ 1951ರ ಜನಗಣತಿಯಲ್ಲಿ ಜಾತಿಯನ್ನು ಕೈಬಿಟ್ಟದ್ದರಿಂದ ನಾಗನಗೌಡ ಸಮಿತಿಗೆ ಇದ್ದ ದಾರಿ ಎರಡು : ಒಂದು, ವಿಸ್ತೃತವಾದ ಸಾಮಾಜಿಕ - ಆರ್ಥಿಕ ಸಮೀಕ್ಷೆ ನಡೆಸುವುದು. ಎರಡು,1932ರ ಜನಗಣತಿಯನ್ನು ಆಧಾರವಾಗಿಟ್ಟುಕೊಂಡು ಜನಸಂಖ್ಯೆಯ ಸರಾಸರಿ ಏಕತೆಯ ಆಧಾರದ ಮೇಲೆ ಜಾತಿವಾರು ಮಾಹಿತಿಯನ್ನು ಸಂಗ್ರಹಿಸುವುದು. ಎರಡನೆಯ ದಾರಿ ಸುಲಭವಾದ್ದರಿಂದ ಸಮಿತಿ ಅದನ್ನೇ ಆರಿಸಿಕೊಂಡಿತು. ಇದು ಎಷ್ಟರಮಟ್ಟಿಗೆ ಜಾತಿ : ಕೋಮುಗಳ ನಿಖರ ಮಾಹಿತಿಯನ್ನು ಕೊಡುತ್ತದೆ ಎಂದು ಹೇಳುವುದು ಕಷ್ಟ. ಅಲ್ಲದೆ, ಇತ್ತೀಚೆಗಿನ ಮಾಹಿತಿಯ ಪ್ರಕಾರ ಎಷ್ಟೋ ಜಾತಿ : ಕೋಮುಗಳು ಆ ಪಟ್ಟಿಯಲ್ಲಿ ಸೇರಿಲ್ಲದೆ ಇರುವುದು ನಮ್ಮ ಗಮನಕ್ಕೆ ಬಂದಿದೆ.

ಸಮಿತಿಯು ನಂತರ ರಾಜ್ಯ ಸರಕಾರದ ಇಲಾಖೆಯಿಂದ ಪ್ರೌಢಶಾಲೆಯ ವಿದ್ಯಾರ್ಥಿಗಳ ಜಾತಿವಾರು ಮಾಹಿತಿಯನ್ನು ಸಂಗ್ರಹಿಸಿತು. ಇದಕ್ಕೆ ಅದು ಕೊಟ್ಟ ಕಾರಣ ಕೇವಲ ಅಕ್ಷರಸ್ಥರ ಸಂಖ್ಯೆಯಿಂದ ಜಾತಿಯ ಹಿಂದುಳಿದಿರುವಿಕೆಯನ್ನು ನಿರ್ಧರಿಸಲು ಸಾಧ್ಯವಾಗುವುದಿಲ್ಲ; ಬದಲಾಗಿ, ಸರಕಾರಿ ಹುದ್ದೆಗೆ ಅಗತ್ಯವಾದ ಕನಿಷ್ಟ ವಿದ್ಯಾರ್ಹತೆಯನ್ನು ಪರಿಗಣಿಸುವುದು ಹೆಚ್ಚು ಸೂಕ್ತ ಎಂದು. ಆದರೆ ಆಗ ಸರಕಾರಿ ಹುದ್ದೆಗೆ ಕನಿಷ್ಟ ವಿದ್ಯಾರ್ಹತೆಯನ್ನು ರಾಜ್ಯ ಸರಕಾರ ನಿಗದಿ ಪಡಿಸಿರಲಿಲ್ಲ.[19] ಒಂದು ವೇಳೆ ಕನಿಷ್ಟ ವಿದ್ಯಾರ್ಹತೆಯನ್ನೇ ತೆಗೆದುಕೊಳ್ಳುವುದಾಗಿದ್ದರೆ ಎಸ್. ಎಸ್. ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದವರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವುದು ಹೆಚ್ಚು ಸೂಕ್ತವಾಗುತ್ತಿತ್ತು. ಸಮಿತಿಯು ಅನುಸರಿಸಿದ ಈ ವಿಧಾನ ಕೆಲವು ಜಾತಿ : ಕೋಮುಗಳನ್ನು ಉದ್ದೇಶ ಪೂರ್ವಕವಾಗಿಯೇ ಹಿಂದುಳಿದವರ ಪಟ್ಟಿಯಿಂದ ಕೈಬಿಡುವುದಾಗಿತ್ತು ಎನ್ನುವ ಸಂದೇಹಕ್ಕೆಡೆಮಾಡಿಕೊಟ್ಟಿತು. ಲಿಂಗಾಯಿತರನ್ನು ಇಡಿಯಾಗಿ ಮುಂದುವರೆದವರು ಎನ್ನುವ ಸಮಿತಿಯ ತೀರ್ಮಾನ ಈ ಸಂದೇಹವನ್ನು

---

19. ತಿಮ್ಮಯ್ಯ ಜಿ, 1993 (ಉಲ್ಲೇಖಿತ) ಪುಟ 90.

ಲಿಂಗಾಯಿತರಲ್ಲಿ ಇನ್ನೂ ಹೆಚ್ಚು ಮಾಡಿತು. ಸಮಿತಿಯಲ್ಲಿದ್ದ ಒಬ್ಬರೇ ಒಬ್ಬ ಲಿಂಗಾಯಿತ ಸದಸ್ಯ ತಮ್ಮ ಭಿನ್ನಮತದಲ್ಲಿ ಇದನ್ನು ವ್ಯಕ್ತಪಡಿಸಿದ್ದಾರೆ.[20] ಒಕ್ಕಲಿಗರು ಹಿಂದುಳಿದವರೆಂದು ಪರಿಗಣಿಸಲಾಗಿದ್ದು ಆಗಿನ ರಾಜಕೀಯದಲ್ಲಿ ಹಿಂದುಳಿದ ವರ್ಗಗಳ ರಚನೆಯಲ್ಲಿ ಬದಲಾವಣೆಯಾಗುತ್ತಿದ್ದುದನ್ನು ಸೂಚಿಸುತ್ತದೆ. ಲಿಂಗಾಯಿತರು ಮತ್ತು ಒಕ್ಕಲಿಗರು ಪ್ರಬಲ ಕೋಮುಗಳಾಗಿದ್ದರೂ ರಾಜ್ಯ ಪುನರ್ವಿಂಗಡಣೆಯ ನಂತರ ರಾಜಕೀಯದಲ್ಲಿ ಲಿಂಗಾಯಿತರ ಪ್ರಾಬಲ್ಯ ಒಕ್ಕಲಿಗ ನಾಯಕರ ಅಸಮಧಾನಕ್ಕೆ ಕಾರಣವಾಗಿತ್ತು. ಇನ್ನುಳಿದ ಹಿಂದುಳಿದ ಜಾತಿಗಳು ಈ ಎರಡೂ ಪ್ರಬಲ ಕೋಮುಗಳನ್ನು ಒಟ್ಟಿಗೆ ಎದುರಿಸುವಷ್ಟು ರಾಜಕೀಯವಾಗಿ, ಸಾಮಾಜಿಕವಾಗಿ ಸಂಘಟಿತವಾಗಿರಲಿಲ್ಲ. ಈ ಎರಡೂ ಕೋಮುಗಳ ಸಾಮಾಜಿಕ, ರಾಜಕೀಯ ಪ್ರಾಬಲ್ಯದ ಬಗ್ಗೆ ಈ ಜಾತಿಗಳು ಅಸಮಧಾನ ಹೊಂದಿದ್ದರೂ ಸದ್ಯದ ಪರಿಸ್ಥಿತಿಯಲ್ಲಿ ಒಕ್ಕಲಿಗರ ಜೊತೆ ಸೇರುವುದು ಅವುಗಳಿಗೆ ಅನಿವಾರ್ಯವಾಗಿತ್ತು. ಒಕ್ಕಲಿಗ ನಾಯಕರುಗಳಿಗೂ ಇದು ರಾಜಕೀಯವಾಗಿ ಲಿಂಗಾಯಿತರನ್ನು ಎದುರಿಸುವ ಅನುಕೂಲಕರವಾದ ಸಾಧನವಾಯಿತು.

1881ರ ಜನಗಣತಿ ಬ್ರಾಹ್ಮಣ ಮತ್ತು ಕ್ಷತ್ರಿಯರನ್ನು ಹೊರತುಪಡಿಸಿ ಉಳಿದ ಎಲ್ಲಾ ಜಾತಿಗಳನ್ನು (ಲಿಂಗಾಯಿತರು ಒಳಗೊಂಡಂತೆ) ಶೂದ್ರರು ಎಂದು ಪರಿಗಣಿಸಿದ್ದು ಕಂಡು ಬರುತ್ತದೆ. ಭಾರತದ ವರ್ಣ ವ್ಯವಸ್ಥೆಯಲ್ಲಿ ಬ್ರಾಹ್ಮಣ ಮತ್ತು ಕ್ಷತ್ರಿಯರು ಮಾತ್ರ 'ದ್ವಿಜ' ಸ್ಥಾನವನ್ನು ಹೊಂದಿದ್ದರಿಂದ ಉಳಿದೆಲ್ಲರೂ ಶೂದ್ರರಂತೆ ಪರಿಗಣಿಸಲ್ಪಡುತ್ತಾರೆ. ಲಿಂಗಾಯಿತ ಕೋಮಿನಲ್ಲಿ ಬೇರೆ ಬೇರೆ ವೃತ್ತಿಗಳನ್ನು ಆಶ್ರಯಿಸಿಟ್ಟ ಜನರಿದ್ದುದರಿಂದ ಅವರನ್ನು ಶೂದ್ರರು ಎಂದು ತೀರ್ಮಾನಿಸಲಾಯಿತು. ಆದರೆ ತಮ್ಮನ್ನು ಶೂದ್ರರೆಂದು ಕರೆದುಕೊಳ್ಳುವುದು ಜಾತಿ ಪ್ರತಿಷ್ಠೆಗೆ ಕುಂದು ಎಂದು ಆಗ ಭಾವಿಸಿದ್ದ ಲಿಂಗಾಯಿತರು ಇದನ್ನು ಪ್ರತಿಭಟಿಸಿದ್ದರಿಂದ ಅವರನ್ನು ಪ್ರತ್ಯೇಕ ಗುಂಪೆಂದು ನಿರ್ಣಯಿಸಲಾಯಿತು. ಬಹುಶಃ ಲಿಂಗಾಯಿತರ ಈ ಪ್ರತಿಭಟನೆಗೆ ಅವರನ್ನು ಶೂದ್ರರೆಂದು ಪರಿಗಣಿಸಿದ್ದರೆ ಅದರಿಂದ ಆಗ ಯಾವುದೇ ರಾಜಕೀಯ, ಆರ್ಥಿಕ ಲಾಭ ಇಲ್ಲದಿದ್ದುದರಿಂದ ಸಾಮಾಜಿಕ ಪ್ರತಿಷ್ಠೆಯೇ ಮುಖ್ಯವಾಗಿದ್ದುದು ಕಾರಣವಿರಬಹುದು. ಲಿಂಗಾಯಿತರಲ್ಲಿ ಉತ್ತಮ ಜಾತಿ ಎನಿಸಿಕೊಂಡ ಜಂಗಮರು ತಮ್ಮನ್ನು ಪರಿಶಿಷ್ಟ ಪಂಗಡದವರೆಂದು ಈಗ ಕರೆದುಕೊಳ್ಳುತ್ತಿರುವುದು ಸಾಮಾಜಿಕ ಪ್ರತಿಷ್ಠೆ ಎರಡನೆಯ ಸ್ಥಾನ ಪಡೆದಿರುವುದನ್ನು ಸೂಚಿಸಬಹುದೇನೋ.

ಅದೇನೇ ಇದ್ದರೂ ಚಮ್ಮಾರ, ಕುಂಬಾರ, ಹಜಾಮ, ನೇಯ್ಗಾರ ಮುಂತಾದ ಸಾಮಾಜಿಕವಾಗಿ ಪ್ರತಿಷ್ಠಿತವಲ್ಲದ ಆರ್ಥಿಕವಾಗಿ ಲಾಭದಾಯಕವಲ್ಲದ ವೃತ್ತಿಗಳನ್ನು ಅವಲಂಬಿಸಿದ್ದ ಲಿಂಗಾಯಿತರನ್ನೂ ಮುಂದುವರೆದವರು ಎಂದು ಸಮಿತಿ ತೀರ್ಮಾನಿಸಿದ್ದುದಕ್ಕೆ ಜಾತಿ ಪೂರ್ವಾಗ್ರಹದ ಹೊರತಾಗಿ ಬೇರಾವ ಕಾರಣವೂ ಇರುವುದಕ್ಕೆ ಸಾಧ್ಯವಿಲ್ಲ. ನಿಜವಾಗಿಯೂ ಹಿಂದುಳಿದವರು ಯಾರು ಎಂದು ತೀರ್ಮಾನಿಸುವಲ್ಲಿ ಸಮಿತಿಗೆ ಇದ್ದ ಪ್ರಾಮಾಣಿಕತೆ ಮತ್ತು ಶ್ರದ್ಧೆಯ ಕೊರತೆಯನ್ನು ಇದು ತೋರಿಸುತ್ತದೆ. ಜಾತಿ ನಾಯಕರುಗಳ ಜಾತಿ ಪ್ರಜ್ಞೆಗೆ ಸಾಮಾಜಿಕ ಸಮಸ್ಯೆ ನಿಜವಾಗಿ ಎಷ್ಟು ಸಂಕೀರ್ಣವಾಗಿದೆ ಎಂಬುದು ಅರ್ಥವಾಗಲಿಲ್ಲ. ಇಡೀ ಜಾತಿಯನ್ನು ಒಂದು ಹಿತಾಸಕ್ತಿ ಗುಂಪೆಂದು ಪರಿಗಣಿಸುವ ಈ ರಾಜಕೀಯ ಕ್ರಮೇಣ ಸಾಮಾಜಿಕ ಮತ್ತು ಆರ್ಥಿಕವಾಗಿ ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು ಹೊಂದಿದ್ದ ವಿವಿಧ ವರ್ಗಗಳು ಜಾತಿಯ ವೇದಿಕೆಯಲ್ಲಿ ಸಂಘಟಿತರಾಗುವ ಅನಿವಾರ್ಯತೆಯನ್ನು ಹುಟ್ಟುಹಾಕಿತು.

---

20. ನೋಡಿ, ಜಿ ಎಸ್ ಪಾಟೀಲರ ಭಿನ್ನಮತ, ಮೈಸೂರು ಹಿಂದುಳಿದ ವರ್ಗಗಳ ಸಮಿತಿ, ಮೈಸೂರು ಸರಕಾರ, ಬೆಂಗಳೂರು, 1963.

ನಾಗನ ಗೌಡ ಸಮಿತಿಯ ವರದಿಗೆ ವಿವಿಧ ಜಾತಿಗಳ ಪ್ರತಿಕ್ರಿಯೆ ನಿರೀಕ್ಷಿಸಿದಂತೆಯೇ ಇತ್ತು. ವಿದ್ಯಾರ್ಹತೆ ಮಾನದಂಡದ ಪ್ರಕಾರ ರಾಜ್ಯದ ಸರಾಸರಿಗಿಂತ ಹೆಚ್ಚಿದೆಯೆಂಬ ಕಾರಣದಿಂದ ** ಲಿಂಗಾಯಿತರನ್ನು ಹಿಂದುಳಿದ ವರ್ಗಗಳ ಪಟ್ಟಿಯಿಂದ ಹೊರಗಟ್ಟಿದ್ದಕ್ಕೆ ಆ ಕೋಮಿನವರಿಂದ ಪ್ರತಿಭಟನೆ ಪ್ರಾರಂಭವಾಯಿತು. ಜೂನ್ 2, 1961ರಲ್ಲಿ ದಾವಣಗೆರೆಯಲ್ಲಿ ನಡೆದ ವೀರಶೈವರ ಸಮ್ಮೇಳನದ ಅಧ್ಯಕ್ಷ ಹರಳೆಣ್ಣೆ ಕೊಟೂರು ಬಸಪ್ಪನವರು "ಇದೊಂದು ಹಾಸ್ಯಾಸ್ಪದ ವರದಿ, ವೀರಶೈವ ಸಮಾಜಕ್ಕೆ ಒದಗಿರುವ ಕುತ್ತು" ಎಂದು ಬಣ್ಣಿಸಿದರು.[19] ಈ ವರದಿಯ ಅನುಷ್ಠಾನದಿಂದ ವೀರಶೈವರಿಗೆ ಆಗುವ ಅನ್ಯಾಯವನ್ನು ವಿವರಿಸುತ್ತಾ ಶ್ರೀ ಎಲ್. ಸಿದ್ದಪ್ಪನವರು,

"ಕಳೆದ ವರ್ಷ ಈ ಸಮಿತಿಯ ತಾತ್ಕಾಲಿಕ ವರದಿಯನ್ನು ಸರಕಾರ ಅಂಗೀಕರಿಸಿದ್ದರ ಪರಿಣಾಮವಾಗಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿನ 400 ಸ್ಥಾನಗಳಲ್ಲಿ ರಾಜ್ಯದ ಜನಸಂಖ್ಯೆಯ ಐದನೇ ಒಂದು ಭಾಗದಷ್ಟಿರುವ ಲಿಂಗಾಯಿತರಿಗೆ ದೊರಕಿದ್ದು ಕೇವಲ 16 ಮಾತ್ರ" ಎಂದು ಹೇಳಿದರು.[20]

ಹಲವು ಉಪಜಾತಿಗಳನ್ನು ಹೊಂದಿರುವ ಮತ್ತು ಅವುಗಳಲ್ಲಿ ಪರಸ್ಪರ ಸಾಮರಸ್ಯವಿಲ್ಲದಿದ್ದರೂ ವಿವಿಧ ವೀರಶೈವ ಉಪಜಾತಿಗಳ ನಾಯಕರುಗಳು ಒಗ್ಗಟ್ಟಾಗಿ ಪ್ರತಿಭಟಿಸಿದ್ದುದಕ್ಕೆ ಸಮಿತಿ ಇವರೆಲ್ಲರನ್ನು ಒಂದು ಗುಂಪಾಗಿ ಪರಿಗಣಿಸಿದ್ದು ಒಂದು ಕಾರಣವಾದರೆ, ಇಂತಹ ಸಂದರ್ಭದಲ್ಲಿ ವೀರಶೈವರ ಪರವಾಗಿ ಮಾತನಾಡದಿದ್ದರೆ ತಮ್ಮ ನಾಯಕತ್ವಕ್ಕೆ ಧಕ್ಕೆ ಬರಬಹುದೆಂಬ ಭೀತಿಯೂ ಕಾರಣವಿರಬಹುದು. ರಾಜಕೀಯದಲ್ಲಿ ಜಾತಿಯ ಅಸ್ತಿತ್ವವನ್ನು ಸೈದ್ಧಾಂತಿಕವಾಗಿ ಗುರುತಿಸದ ಸಮಾಜವಾದಿ ಪಕ್ಷದ ನಾಯಕರುಗಳು ಸಹ ತಮ್ಮ ಕೋಮಿಗೆ ಆದ ಅನ್ಯಾಯದ ವಿರುದ್ಧ ಪ್ರತಿಭಟನೆಗೆ ನಿಂತರು. ವೀರಶೈವ ಮಹಾಸಭಾ ಸಮ್ಮೇಳನದ ಅಧ್ಯಕ್ಷರಾಗಿದ್ದ ಜಿ. ವಿ. ಮಲ್ಲಾರಾಧ್ಯರು ತಾವು ಪ್ರಜಾ ಸೋಷಿಯಲಿಸ್ಟ್ ಪಕ್ಷದ ನಾಯಕರಾಗಿ ಒಂದು ಕೋಮಿನ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರ ಸಮರ್ಥನೆ ಮಾಡಿಕೊಂಡ ರೀತಿ ಕುತೂಹಲಕಾರಿಯಾಗಿದೆ.

"ಜಾತಿ ಮತಗಳ ಗೊಂದಲವನ್ನು ದೂರಮಾಡಿ ಸಮಾಜದಲ್ಲಿ ಸಮಾನತೆಯನ್ನು ಉಂಟುಮಾಡಬೇಕೆಂಬ ಎ. ಎಸ್. ಪಿ. ಯ ಮಹದೋದ್ದೇಶಕ್ಕೆ ನಾಗನ ಗೌಡ ಸಮಿತಿಯ ವರದಿಯು ವಿರುದ್ಧವಾಗಿರುವುದರಿಂದ (ಅದರ ಪ್ರತಿಭಟನೆಯಲ್ಲಿ) ನಾನು ಭಾಗಿಯಾಗಿದ್ದೇನೆ" [21]

ಎಂದು ಅವರು ದಾವಣಗೆರೆಯ ಸಮ್ಮೇಳನದಲ್ಲಿ ಹೇಳಿದರು. ಜಾತಿ ಮತಗಳ ನಿರ್ಮೂಲನದಲ್ಲಿ ಜಾತಿಯನ್ನು ಉಪಯೋಗಿಸಿಕೊಳ್ಳುವ ವೈರುಧ್ಯವನ್ನು ವಾಸ್ತವ ರಾಜಕೀಯದಲ್ಲಿ ಒಪ್ಪಿಕೊಂಡ ಸಮಾಜವಾದಿಗಳು ತಮ್ಮ ಈ

** ನಾಗನ ಗೌಡ ಸಮಿತಿಯ ಅಂತಿಮ ವರದಿ ಪ್ರಕಾರ ರಾಜ್ಯದ ಸರಾಸರಿ 6.9ರಷ್ಟಿದ್ದರೆ ಲಿಂಗಾಯಿತರ ವಿದ್ಯಾರ್ಹತೆಯ (ಪ್ರೌಢಶಾಲೆಯಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳ ಸರಾಸರಿ) ಸರಾಸರಿ 7.1ರಷ್ಟಿತ್ತು. ಸಮಿತಿಯ ಲಿಂಗಾಯಿತ ಸದಸ್ಯ ಎಂ. ಎಸ್. ಪಾಟೀಲ್ ಈ ಸರಾಸರಿ ಲೆಕ್ಕಾಚಾರವೇ ತಪ್ಪು ಎಂದು ತಮ್ಮ ಭಿನ್ನಮತದಲ್ಲಿ ವ್ಯಕ್ತಪಡಿಸಿದ್ದಾರೆ. (ಮೈಸೂರು ಹಿಂದುಳಿದ ವರ್ಗಗಳ ಸಮಿತಿ, 1960, ಪು. 34-35) ವರದಿಯಲ್ಲಿ ಹಿಂದುಳಿದವರು, ಅತಿ ಹಿಂದುಳಿದವರು ಎಂದು ಎರಡು ಗುಂಪುಗಳನ್ನು ಮಾಡಲಾಯಿತು. ಮೊದಲನೆಯದರಲ್ಲಿ ದೇವಾಂಗ, ಮರಾಠ (ಬ್ರಾಹ್ಮಣೇತರ) ಮೇದ, ನಾಯಿಂದ, ಒಕ್ಕಲಿಗ (ಬಂಟರನ್ನು ಹೊರತು ಪಡಿಸಿ), ವಿಶ್ವಕರ್ಮ ಜಾತಿಗಳನ್ನೂ, ಎರಡನೆಯ ಪಟ್ಟಿಯಲ್ಲಿ ಅಗಸ, ಬೇಡ, ಗಂಗಾಕುಲ, ಈಡಿಗ, ಕುಂಬಾರ, ಕುರುಬ, ತಿಗಲ, ಉಪ್ಪಾರ, ಯಾಧವ, ಲಮಾಣಿ ಮತ್ತು ಒಡ್ಡರನ್ನು ಸೇರಿಸಲಾಯಿತು.

19. *ಪ್ರಜಾವಾಣಿ* ಜೂನ್ 3, 1961.

20. ಅದೇ.

21. ಅದೇ

ಅನುಭವದ ಆಧಾರದ ಮೇಲೆ ಸಮಾಜವಾದಿ ಸಿದ್ಧಾಂತವನ್ನೇ ಪುನರ್ವಿಮರ್ಶಿಸುವ ಅಗತ್ಯವನ್ನು ಏಕೆ ಕಂಡುಕೊಳ್ಳಲಿಲ್ಲ ಎನ್ನುವುದು ಭಾರತದಲ್ಲಿ ಸಮಾಜವಾದಿ ಚಿಂತನೆಯ ಬೆಳವಣಿಗೆ (ಅವನತಿ)ಯನ್ನು ವಿಶ್ಲೇಷಿಸುವ ದೃಷ್ಟಿಯಿಂದ ಮಹತ್ವದ ಪ್ರಶ್ನೆ ಎನಿಸಿದರೂ ಈ ಲೇಖನದ ಚೌಕಟ್ಟಿನೊಳಗೆ ಅದು ಸಾಧ್ಯವಾಗುವುದಿಲ್ಲ.

ನಾಗನ ಗೌಡ ಸಮಿತಿಯು ಹೇಗಾದರೂ ಮಾಡಿ ವೀರಶೈವರನ್ನು ಮುಂದುವರಿದವರನ್ನಾಗಿ ಮಾಡುವ ಸಂಕಲ್ಪದಿಂದಲೆ ಕಾರ್ಯ ನಿರ್ವಹಿಸಿದೆ ಎಂದು ವೀರಶೈವ ನಾಯಕರು ಆರೋಪಿಸಿದರು. ಈ ಆರೋಪವನ್ನು ಸಮರ್ಥಿಸುತ್ತಾ ಜಿ. ಬಿ. ಮಲ್ಲಾರಾಧ್ಯರು "ಶಿಕ್ಷಣ ಇಲಾಖೆಯ ಮುಖ್ಯಾಧಿಕಾರಿಗಳಿಂದ ಹೈಸ್ಕೂಲಿನ ಲಿಂಗಾಯಿತ ವಿದ್ಯಾರ್ಥಿಗಳ ಸಂಖ್ಯೆ ಶೇಕಡಾ 6.9 ಎಂದು ತರಿಸಿಕೊಂಡ ನಂತರವೂ ಎರಡನೇ ಬಾರಿ ವಿವರವನ್ನು ಶಿಕ್ಷಣ ಮುಖ್ಯಾಧಿಕಾರಿಗಳಿಂದ ತರಿಸಿಕೊಳ್ಳುವ ಅಗತ್ಯವೇನಿತ್ತು?',[22] ಎಂದು ಪ್ರಶ್ನಿಸಿದ್ದಾರೆ.

ಕೇಂದ್ರದ ಕೆಲವು ನಾಯಕರುಗಳ ಪ್ರಭಾವದಿಂದ ಹೀಗಾಗಿದೆ ಎಂದು ಕೆಲವರು ಹೇಳಿಕೆ ಇತ್ತರು. ಶ್ರೀ ನಿಜಲಿಂಗಪ್ಪನವರು ಕೇಂದ್ರದಲ್ಲಿ ಪ್ರಬಲರಾಗಬಹುದೆಂಬ ಉದ್ದೇಶದಿಂದ ಅವರ ಜಾತಿಯವರನ್ನು ಕಡೆಗಣಿಸಲಾಗಿದೆ ಎನ್ನುವ ಮಾತೂ ಕೇಳಿಬರುತ್ತಿತ್ತು. ವೀರಬಸಪ್ಪ, ಕೆ. ಟಿ. ಜಂಬಣ್ಣ ಮುಂತಾದವರು ಲಿಂಗಾಯಿತರು ಮುಂದುವರಿದಿದ್ದಾರೆ ಎನ್ನುವ ಹೊಟ್ಟೆಕಿಚ್ಚಿನಿಂದ ಹೀಗಾಗಿದೆ ಎಂದು ಅಭಿಪ್ರಾಯಪಟ್ಟರು. ಲಿಂಗಾಯಿತ ನಾಯಕರುಗಳ ಈ ಗ್ರಹಿಕೆ ಎಷ್ಟು ಸತ್ಯ ಎನ್ನುವುದು ಇಲ್ಲಿ ಮುಖ್ಯವಲ್ಲ. ಈ ತರಹದ ಹೇಳಿಕೆಗಳು ವೀರಶೈವರೆಲ್ಲಾ ಒಟ್ಟಾಗದಿದ್ದರೆ ಆಗುವ ಅಪಾಯದ ಬಗ್ಗೆ ಜನರಲ್ಲಿ ನಂಬಿಕೆ ಹುಟ್ಟಿಸಲು ಸಹಾಯ ಮಾಡುತ್ತಿತ್ತು. ಈ ಅಪಾಯದಿಂದ ಪಾರಾಗಲು ಇರುವ ದಾರಿ ಎಂದರೆ ಚುನಾವಣೆಗಳಲ್ಲಿ ತಮ್ಮ ಕೋಮಿನ ನಾಯಕರುಗಳನ್ನು ಬೆಂಬಲಿಸುವುದು. ಜೂನ್ 5, 1961ರಂದು ಬೆಂಗಳೂರಿನ ಜಯದೇವ ಹಾಸ್ಟೇಲಿನಲ್ಲಿ ನಡೆದ ಸಭೆಯಲ್ಲಿ ಸರಕಾರ ವರದಿಯನ್ನು ಹಿಂತೆಗೆದುಕೊಳ್ಳದಿದ್ದರೆ ಭಾರಿ ಪ್ರತಿಭಟನೆ ಮಾಡಲು ವೀರಶೈವ ಮಹಾಸಭೆಯು ಕರೆಕೊಟ್ಟಿತು.[23]

ವೀರಶೈವರಿಂದ ತಿರಸ್ಕೃತವಾದ ಈ ವರದಿಯು ಹಿಂದುಳಿದವರ ಪಟ್ಟಿಯಲ್ಲಿ ಸೇರಿಸಲ್ಪಟ್ಟ ಜಾತಿಗಳಿಗೆ ಸ್ವಾಗತಾರ್ಹವಾಗಿತ್ತು. ಜೂನ್ 5, 1961ರಂದು ಶೇಷಾದ್ರಿಪುರದ ಆರ್ಯ ಈಡಿಗರ ಸಂಘದ ಕಟ್ಟಡದಲ್ಲಿ ಮೈಸೂರು ಪ್ರದೇಶದ ಹಿಂದುಳಿದ ವರ್ಗಗಳ ಕಲ್ಯಾಣ ಸಂಘದ ಆಶ್ರಯದಡಿ ಹಿಂದುಳಿದ ವರ್ಗಗಳ ನಾಯಕರ ಸಭೆ ನಡೆಯಿತು. ಇದರಲ್ಲಿ ಭಾಗವಹಿಸಿದ ಪ್ರಮುಖರುಗಳೆಂದರೆ : ಎನ್. ಶ್ರೀರಾಮರೆಡ್ಡಿ, (ಸಂಸತ್ ಸದಸ್ಯ), ಬಿ. ವಿ. ವೆಂಕಟ ಸ್ವಾಮಿ(ಸಂಘದ ಕಾರ್ಯದರ್ಶಿ), ಎನ್. ರಾಚಯ್ಯ (ಸಮಾಜ ಕಲ್ಯಾಣ ಮಂತ್ರಿ), ಭೀಮಪ್ಪ ನಾಯ್ಕ(ಎಂ. ಎಲ್ ಎ.) ವಿ. ಆರ್. ನಾಯ್ಡು, ಕೆ. ಹೆಚ್. ಪಾಟೀಲ್ ಮೊದಲಾದವರು. ಈ ಸಭೆಯು ಸಮಿತಿಯ ವರದಿಯನ್ನು ಸ್ವಾಗತಿಸಿ ಸರಕಾರ ಆದಷ್ಟು ಬೇಗ ಇದನ್ನು ಅನುಷ್ಠಾನಕ್ಕೆ ತರಬೇಕೆಂದು ಒತ್ತಾಯಿಸಿತು.[24]

ಜೂನ್ 4 ಮತ್ತು 5ರಂದು ನಡೆದ ಮೈಸೂರು ಶಾಸಕಾಂಗ ಸಭೆಯಲ್ಲಿ ವರದಿಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಈ ಚರ್ಚೆಯಲ್ಲಿ ಮಂಡಿತವಾದ ಪ್ರಮುಖ ಸಲಹೆಗಳೆಂದರೆ:-

---

22. ಅದೇ

23. *ಡೆಕ್ಕನ್ ಹೆರಾಲ್ಡ್*, ಜೂನ್ 5, 1961.

24. *ಡೆಕ್ಕನ್ ಹೆರಾಲ್ಡ್*, ಜೂನ್ 6, 1961.

1) ಆರ್ಥಿಕತೆ ಹಿಂದುಳಿದಿರುವಿಕೆ ಆಧಾರವಾಗಿರಬೇಕು.
2) ಹಿಂದುಳಿದ ವರ್ಗದವರನ್ನು ಮೂರು ಗುಂಪುಗಳಾಗಿ ವಿಂಗಡಿಸಬೇಕು. (ಅ) ಎಸ್. ಸಿ., ಎಸ್. ಟಿ., (ಆ) ಹಿಂದುಳಿದವರು ಮತ್ತು ಅತಿ ಹಿಂದುಳಿದವರು, (ಇ) ಮುಂದುವರೆದವರು ಮತ್ತು ಕಡಿಮೆ ಮುಂದುವರೆದವರು.
3) ಗ್ರಾಮೀಣ ಪ್ರದೇಶಕ್ಕೆ ವಿಶೇಷ ಆದ್ಯತೆ ಕೊಟ್ಟು, ಆದಾಯವನ್ನು ಆಧಾರವಾಗಿಟ್ಟುಕೊಳ್ಳಬೇಕು.
4) ಪೋಷಕರ ವೃತ್ತಿ ಮತ್ತು ಆದಾಯಗಳೆರಡನ್ನೂ ಪರಿಗಣಿಸಬೇಕು, ಇತ್ಯಾದಿ.

ಚರ್ಚೆಯ ನಂತರ ವರದಿಯ ಅನುಷ್ಠಾನ ಮಾಡಬೇಕೇ ಎನ್ನುವ ತೀರ್ಮಾನವನ್ನು ಸರಕಾರಕ್ಕೆ ಬಿಡಲಾಯಿತು.

ನಾಗನ ಗೌಡ ಸಮಿತಿಯು ವರದಿಯನ್ನು ಸಲ್ಲಿಸಿದ ಸಮಯದಲ್ಲಿ ಲಿಂಗಾಯಿತರು ರಾಜಕೀಯವಾಗಿ ಬಹಳ ಪ್ರಬಲರಾಗಿದ್ದರು. ಮುಖ್ಯಮಂತ್ರಿಯಾಗಿದ್ದ ಶ್ರೀ ನಿಜಲಿಂಗಪ್ಪನವರ ಮೇಲೆ ವರದಿಯನ್ನು ಅನುಷ್ಠಾನಗೊಳಿಸದಂತೆ ಭಾರಿ ಒತ್ತಡವನ್ನು ತರಲಾಯಿತು. ಅವರ ಪರಿಸ್ಥಿತಿ ಬಹಳ ಸಂದಿಗ್ಧವಾಗಿತ್ತು. ವರದಿಯನ್ನು ಜಾರಿಗೆ ತರದಿದ್ದಲ್ಲಿ ಬಹುಪಾಲು ಜನಸಂಖ್ಯೆಯನ್ನು ಹೊಂದಿದ್ದ ಹಿಂದುಳಿದ ವರ್ಗಗಳ ವಿರೋಧವನ್ನು ಅವರು ಎದುರಿಸಬೇಕಾಗಿತ್ತು. ಹಾಗೆಯೇ ಜಾರಿಗೊಳಿಸುವ ನಿರ್ಧಾರ ತೆಗೆದುಕೊಂಡಲ್ಲಿ ತಮ್ಮವರನ್ನೇ (ಲಿಂಗಾಯಿತರು) ಎದುರು ಹಾಕಿಕೊಳ್ಳಬೇಕಾಗಿದ್ದ ಪರಿಸ್ಥಿತಿ. ಇವೆರಡರಲ್ಲಿ ಯಾವುದೂ ರಾಜಕೀಯವಾಗಿ ಜಾಣತನದ ದಾರಿಯಾಗಿರಲಿಲ್ಲ. ಈ ಸಮಸ್ಯೆಯಿಂದ ಪಾರಾಗಲು ಇದ್ದ ಒಂದೇ ಒಂದು ಪರಿಹಾರವೆಂದರೆ ಲಿಂಗಾಯಿತರನ್ನು ಹಿಂದುಳಿದ ಪಟ್ಟಿಗೆ ಸೇರಿಸುವುದು. ಈ ಉದ್ದೇಶದಿಂದಲೇ ರಾಜ್ಯ ಸರಕಾರ ವಿದ್ಯಾರ್ಹತೆಯ ರಾಜ್ಯಮಟ್ಟದ ಸರಾಸರಿಯನ್ನು ಶೇಕಡಾ 6.9 ಇದ್ದುದನ್ನು ಶೇಕಡಾ 7ಕ್ಕೆ ಏರಿಸಿ ಲಿಂಗಾಯಿತರನ್ನೂ ಹಿಂದುಳಿದವರ ಪಟ್ಟಿಗೆ ಸೇರಿಸಿತು. ನಂತರ ಸರಕಾರ 1962ರಲ್ಲಿ ಮೂರನೇ ಸರಕಾರಿ ಆಜ್ಞೆಯನ್ನು ಹೊರಡಿಸಿತು. ** ಈ ಆಜ್ಞೆಯಂತೆ ಶೇಕಡಾ 28 ಹಿಂದುಳಿದವರಿಗೆ, ಶೇಕಡಾ 22 ಅತಿ ಹಿಂದುಳಿದವರಿಗೆ, ಶೇಕಡಾ 18 ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲಾತಿಯನ್ನು ಜಾರಿಗೊಳಿಸಲಾಯಿತು. ಇದರ ಪರಿಣಾಮ ಮೀಸಲಾತಿಯ ಸೌಲಭ್ಯವನ್ನು ಪಡೆದವರ ಒಟ್ಟು ಸಂಖ್ಯೆ ಶೇಕಡಾ 68.

1961 ಮತ್ತು 1962ರ ಸರಕಾರಿ ಆಜ್ಞೆಯನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ ನ್ಯಾಯಾಲಯ ಸರಕಾರಿ ಆಜ್ಞೆಯನ್ನು ಅನೂರ್ಜಿತಗೊಳಿಸಿತು. ನಂತರ ರಾಜ್ಯ ಸರಕಾರ ಸುಪ್ರಿಂ ಕೋರ್ಟಿಗೆ ಅಹವಾಲು ಸಲ್ಲಿಸಿತು. ಈ ಮೊಕದ್ದಮೆಗೆ ಸಂಬಂಧಿಸಿದಂತೆ ಭಾರತದ ಶ್ರೇಷ್ಠ ನ್ಯಾಯಾಲಯದ ತೀರ್ಪು ಮೀಸಲಾತಿ ನೀತಿಯಲ್ಲಿ ಒಂದು ಮೈಲಿಗಲ್ಲು ಎಂದು ಹೇಳಲಾಗಿದೆ.[25] ನ್ಯಾಯಾಲಯ ಸರಕಾರಿ ಆಜ್ಞೆಯನ್ನು ತಳ್ಳಿಹಾಕಿದ್ದಕ್ಕೆ ಮುಖ್ಯ ಕಾರಣವೆಂದರೆ ವರದಿ ಜಾತಿಯನ್ನೇ ಪ್ರಮುಖ ಆಧಾರವಾಗಿಟ್ಟುಕೊಂಡು ಹಿಂದುಳಿದಿರುವಿಕೆಯನ್ನು ನಿರ್ಧರಿಸಿದುದು. ಹಿಂದುಳಿದಿರುವಿಕೆಗೆ ಜಾತಿಯೂ ಒಂದು ಕಾರಣ ಎಂದು ಒಪ್ಪಿಕೊಂಡ ನ್ಯಾಯಾಲಯ ಜಾತಿಯೊಂದೆ ಕಾರಣವಲ್ಲ ಎನ್ನುವುದನ್ನೂ ಸ್ಪಷ್ಟಪಡಿಸಿತು. [26] ಅಲ್ಲದೆ ಯಾವುದೇ ಕಾರಣಕ್ಕೂ ಮೀಸಲಾತಿ ಒಟ್ಟು ಜನ ಸಂಖ್ಯೆಯ ಶೇಕಡಾ

** ಈ ವರದಿಗೆ ಸಂಬಂಧಿಸಿದಂತೆ ಮೊದಲ ಸರಕಾರಿ ಆಜ್ಞೆಯನ್ನು 1960ರಲ್ಲಿ ಸಮಿತಿ ಮಧ್ಯಾವಧಿ ವರದಿಯನ್ನು ಸಲ್ಲಿಸಿದಾಗ ಮತ್ತು ಎರಡನೇ ಆಜ್ಞೆಯನ್ನು 1961ರಲ್ಲಿ ಅಂತಿಮ ವರದಿಯನ್ನು ಸಲ್ಲಿಸಿದಾಗ ಹೊರಡಿಸಲಾಗಿತ್ತು.

25. ಬಾಲಾಜಿ ಎದುರು ಸ್ಟೇಟ್ ಆಫ್ ಮೈಸೂರು, ಎ ಐ ಆರ್, 1963, ಎಸ್ ಸಿ 439.

26. ಅದೇ.

50ಕ್ಕಿಂತ ಹೆಚ್ಚಿರಬಾರದು ಎಂದು ತೀರ್ಪುಕೊಟ್ಟಿತು. ನ್ಯಾಯಾಲಯ ಲಿಂಗಾಯಿತರನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸುವುದನ್ನು ಆಕ್ಷೇಪಿಸಿತು. ರಾಜ್ಯದ ಸರಾಸರಿಯನ್ನು ಶೇಕಡಾ 6.9 ರಿಂದ 7ಕ್ಕೆ ಏರಿಸಿದರೂ ಲಿಂಗಾಯಿತರ ವಿದ್ಯಾರ್ಹತೆಯು ಸರಾಸರಿ ಶೇಕಡಾ 7.1ರಷ್ಟಿರುವುದರಿಂದ ಅದು ರಾಜ್ಯ ಸರಾಸರಿಗಿಂತ ಹೆಚ್ಚಾಗುತ್ತದೆ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿತ್ತು. ಇಷ್ಟಲ್ಲದೆ ನ್ಯಾಯಾಲಯದ ಅಭಿಪ್ರಾಯದಂತೆ ಹಿಂದುಳಿದ ವರ್ಗಗಳನ್ನು 'ಹಿಂದುಳಿದವರು' ಮತ್ತು 'ಅತಿ ಹಿಂದುಳಿದವರು' ಎನ್ನುವ ವಿಂಗಡಣೆ ಸಂವಿಧಾನ ಭಾಹಿರವಾದುದಾಗಿತ್ತು.

ಬಾಲಾಜಿ ಮೊಕದ್ದಮೆಯ ತೀರ್ಪಿನ ನಂತರ ರಾಜ್ಯ ಸರಕಾರ ಸೆಪ್ಟೆಂಬರ್ 16, 1963ರಂದು ಮತ್ತೊಂದು ಆಜ್ಞೆಯನ್ನು ಹೊರಡಿಸಿ ಹಿಂದುಳಿದಿರುವಿಕೆಯನ್ನು ನಿರ್ಧರಿಸಲು ಆರ್ಥಿಕ ಮಾನದಂಡವನ್ನು ಬಳಸಿತು. ಅದರಂತೆ,

"ಯಾವ ವ್ಯಕ್ತಿಯ ತಂದೆ-ತಾಯಿಗಳ : ಪೋಷಕರ ವಾರ್ಷಿಕ ವರಮಾನ ರೂ. 1200 ಅಥವಾ ಅದಕ್ಕಿಂತ ಕಡಿಮೆ ಇರುತ್ತದೋ, ಮತ್ತು ಯಾರು ಈ ಕೆಳಗೆ ನಮೂದಿಸಿರುವ ವೃತ್ತಿಯನ್ನು ಆಶ್ರಯಿಸಿರುತ್ತಾರೋ ಅಂದರೆ, (1) ಸ್ವಂತ ಸಾಗುವಳಿದಾರ, (2) ಕೈ ಕೆಲಸಗಾರ (3) ಸಣ್ಣ ವ್ಯಾಪಾರಿ (4) ಕೆಳದರ್ಜೆಯ ನೌಕರಿ (ಅಂದರೆ ಸರಕಾರದಲ್ಲಿ ನಾಲ್ಕನೇ ದರ್ಜೆ ನೌಕರಿಗೆ ಸಮನಾದುದು), (5) ದೈಹಿಕ ಶ್ರಮವನ್ನೊಳಗೊಂಡ ಇನ್ನಾವುದೇ ವೃತ್ತಿ ಅಂತಹ ವ್ಯಕ್ತಿಯನ್ನು ಸಂವಿಧಾನ 16 (4) ವಿಧಿಯ ಉದ್ದೇಶದಂತೆ ಹಿಂದುಳಿದವನೆಂದು ಪರಿಗಣಿಸುವುದು"

ಈ ಆಜ್ಞೆಯಂತೆ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು (ಪರಿಶಿಷ್ಟ ಜಾತಿ : ಪಂಗಡಗಳಿಗಿದ್ದ ಶೇಕಡಾ 18ನ್ನು ಹೊರತುಪಡಿಸಿ) ಶೇಕಡಾ 30ಕ್ಕೆ ನಿಗದಿಪಡಿಸಲಾಯಿತು. ಈಗ ಒಟ್ಟು ಮೀಸಲಾತಿಯ ಶೇಕಡಾ 48. ಆದುದರಿಂದ ಅದು ಉಚ್ಚನ್ಯಾಯಾಲಯ ವಿಧಿಸಿದ ಶೇಕಡಾ 50ರ ಮಿತಿಯೊಳಗೆ ಇತ್ತು. ಮೀಸಲಾತಿಯು ಈ ನೀತಿ 1963ರಿಂದ 1977ರ ವರೆಗೆ ಜಾರಿಯಲ್ಲಿತ್ತು. ಸ್ವಂತ ಸಾಗುವಳಿದಾರರನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಿದುದರಿಂದ ಗ್ರಾಮೀಣ ಪ್ರದೇಶದ ಲಿಂಗಾಯಿತ ಮತ್ತು ಒಕ್ಕಲಿಗರಿಗೆ ಮೀಸಲಾತಿ ಸೌಲಭ್ಯ ದೊರಕಲಾಗಿ ಪ್ರಸ್ತುತ ಸರಕಾರಿ ಆಜ್ಞೆ ಜಾರಿಯಲ್ಲಿದ್ದ ಕಾಲದಲ್ಲಿ ಅದರ ಬಹುಪಾಲು ಲಾಭವನ್ನು ಪಡೆದವರು ಈ ಕೋಮಿಗೆ ಸೇರಿದವರು ಮತ್ತು ಬ್ರಾಹ್ಮಣರು ಎನ್ನುವ ಅಭಿಪ್ರಾಯವನ್ನು ವೆಂಕಟ ಸ್ವಾಮಿ ಮತ್ತು ಚಿನ್ನಪ್ಪ ರೆಡ್ಡಿ ವರದಿಯಲ್ಲಿ ವ್ಯಕ್ತಪಡಿಸಲಾಗಿದೆ.[27]

ಈ ಅಭಿಪ್ರಾಯಕ್ಕೆ ಯಾವುದೇ ಅಂಕಿ ಅಂಶಗಳ ಆಧಾರವಿಲ್ಲದಿದ್ದರೂ ಈ ಕೋಮಿನವರ ವಿದ್ಯಾರ್ಹತೆ, ರಾಜಕೀಯ ಪ್ರಭಾವ ಮತ್ತು ಇನ್ನಿತರ ಸಾಂಧರ್ಭಿಕ ಸಾಕ್ಷಿ ಇದನ್ನು ಸಮರ್ಥಿಸುತ್ತದೆ. ಅದರಲ್ಲೂ ಪ್ರಬಲ ಕೋಮಿಗೆ ಸೇರಿದ ಯಾವ ವರ್ಗದ ಜನರು ಮೀಸಲಾತಿಯ ಲಾಭ ಪಡೆದರು ಎನ್ನುವ ಬಗ್ಗೆ ವೆಂಕಟ ಸ್ವಾಮಿ ವರದಿಯಾಗಲಿ, ಚಿನ್ನಪ್ಪ ರೆಡ್ಡಿ ವರದಿಯಾಗಲಿ ತಲೆಕೆಡಿಸಿಕೊಳ್ಳುವುದಿಲ್ಲ. ಇದರ ಬಗ್ಗೆ ಅಂಕಿ ಅಂಶಗಳು ದೊರೆತಿದ್ದಲ್ಲಿ ವಿಶ್ಲೇಷಣೆಗೆ ಇನ್ನೂ ಹೆಚ್ಚು ಅನುಕೂಲವಾಗುತ್ತಿತ್ತು. ಅದೇನೆ ಇದ್ದರೂ ಸರಕಾರದ ಮೀಸಲಾತಿಯ ನೀತಿ ಮಾತ್ರ ಯಾವುದೇ ವಸ್ತುನಿಷ್ಠ ತತ್ವಗಳ ಆಧಾರದ ಮೇಲೆ ನಿಂತಿರಲಿಲ್ಲ ಎನ್ನುವುದು ಸ್ಪಷ್ಟ. ಹೀಗಾಗಿ ಹೆಚ್ಚು ಸಂಘಟಿತವಾದ ಜಾತಿ :

---

27. ಕರ್ನಾಟಕ ಸರಕಾರದ ಎರಡನೇ ಹಿಂದುಳಿದ ವರ್ಗಗಳ ಸಮಿತಿಯ (ವೆಂಕಟ ಸ್ವಾಮಿ ವರದಿ) ಸಂ. 1, ಬೆಂಗಳೂರು, 1986, ಪುಟ 27 ಮತ್ತು ಕರ್ನಾಟಕ ಸರಕಾರದ ಮೂರನೇ ಹಿಂದುಳಿದ ವರ್ಗಗಳ ಸಮಿತಿಯ (ಚಿನ್ನಪ್ಪ ರೆಡ್ಡಿ ಸಮಿತಿಯ ವರದಿ) ವರದಿ, ಸಂ. 1, ಬೆಂಗಳೂರು, 1990, ಪುಟ 15-16.

ಕೋಮುಗಳು ಹೆಚ್ಚಿನ ಲಾಭ ಪಡೆಯುತ್ತಿದ್ದವು. ಸಂಘಟಿತರಾಗದ ಉಳಿದ ಜಾತಿಗಳಿಗೆ ಇದೊಂದು ಮಹತ್ತರವಾದ ರಾಜಕೀಯ ಪಾಠವಾಗಿತ್ತು.

1963ರ ಸರಕಾರಿ ಆಜ್ಞೆ ಬಹಳಷ್ಟು ಕೆಳ ಜಾತಿಗಳವರಿಗೆ ಅಸಮಧಾನ ಉಂಟು ಮಾಡಿತ್ತು. ಆರ್ಥಿಕ ಮಾನದಂಡವನ್ನೇ ಪ್ರಧಾನವಾಗಿಟ್ಟುಕೊಂಡ ಈ ನೀತಿಯಿಂದ ಪ್ರಬಲ ಕೋಮುಗಳಿಗೆ ಮಾತ್ರ ಉಪಯೋಗವಾಗುವ ಈ ಆಜ್ಞೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವ ನಿರ್ಧಾರವನ್ನು ಈ ಜಾತಿಗಳಿಗೆ ಸೇರಿದ ಕೆಲವರು ತೆಗೆದುಕೊಂಡರು. ಆದರೆ ನ್ಯಾಯಾಲಯ ಸರಕಾರಿ ಆಜ್ಞೆಯನ್ನು ಎತ್ತಿ ಹಿಡಿದಿದುದರಿಂದ ಪ್ರಬಲ ಕೋಮಿಗೆ ಸೇರದ ಜಾತಿಗಳಿಗೆ ರಾಜಕೀಯವಾಗಿ ಸಂಘಟಿತರಾಗುವುದನ್ನು ಬಿಟ್ಟರೆ ಬೇರೆ ಮಾರ್ಗವಿರಲಿಲ್ಲ. ಆದರೆ ಹರಿದು ಹಂಚಿಹೋಗಿದ್ದ ನೂರಾರು ಜಾತಿಗಳನ್ನು ರಾಜಕೀಯ ಶಕ್ತಿಗುಂಪುಗಳಾಗಿ ಪರಿವರ್ತಿಸುವುದು ಅಷ್ಟು ಸುಲಭದ ದಾರಿಯಾಗಿರಲಿಲ್ಲ. ಸರಕಾರಿ ಆಜ್ಞೆಯನ್ನು ಪ್ರತಿಭಟಿಸಿ ತಮ್ಮ ತಮ್ಮ ಜಾತಿಗಳವರಿಗೆ ನ್ಯಾಯ ದೊರಕಿಸಿಕೊಡುವುದಕ್ಕೋಸ್ಕರ ಈ ಜಾತಿಗಳ ನಾಯಕರುಗಳು ಒಂದೇ ವೇದಿಕೆಯಡಿಯಲ್ಲಿ ಬರುವ ಪ್ರಯತ್ನ ಪ್ರಾರಂಭಿಸಿದರು. ಸೆಪ್ಟೆಂಬರ್ 13, 1970ರಂದು ಹಿಂದುಳಿದ ಜಾತಿಗಳ ನಾಯಕರುಗಳು ಬೆಂಗಳೂರಿಗೆ ಬಂದಿದ್ದ ರಾಷ್ಟ್ರಪತಿಯವರನ್ನು ಬೇಟಿ ಮಾಡಿ ಹಿಂದುಳಿದ ವರ್ಗಗಳ ಸಮಿತಿಯನ್ನು ನೇಮಕ ಮಾಡುವಂತೆ ರಾಜ್ಯಸರ್ಕಾರಕ್ಕೆ ನಿರ್ದೇಶಿಸುವಂತೆ ಕೇಳಿಕೊಂಡು ಮನವಿ ಪತ್ರವನ್ನು ಸಲ್ಲಿಸಿದರು.[28] ಇದಾದ ಒಂದೆರಡು ತಿಂಗಳುಗಳ ನಂತರ ನವೆಂಬರ್ 8, 1970ರಂದು ಪರಿಶಿಷ್ಟ ಜಾತಿ : ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ರಾಜ್ಯ ಮಟ್ಟದ ಜಂಟಿ ಸಮ್ಮೇಳನದಲ್ಲಿ ಸಹ ಹಿಂದುಳಿದ ವರ್ಗಗಳ ಸಮಿತಿಯನ್ನು ರಚಿಸಲು ಸರ್ಕಾರವನ್ನು ಕೇಳುವ ನಿರ್ಣಯವನ್ನು ಕೈಗೊಳ್ಳಲಾಯಿತು.[29] ಈ ಹೊತ್ತಿಗಾಗಲೇ ಪ್ರಬಲ ಕೋಮಿನವರನ್ನು ರಾಜಕೀಯವಾಗಿ ಎದುರಿಸಲು ಹಿಂದುಳಿದ ವರ್ಗಗಳು ಮತ್ತು ಪರಿಶಿಷ್ಟ ಜಾತಿ : ಪಂಗಡಗಳು ಒಟ್ಟಾಗುವ ಅನಿವಾರ್ಯತೆಯನ್ನು ಈ ಜಾತಿಗಳ ನಾಯಕರುಗಳು ಕಂಡುಕೊಂಡಿದ್ದರು. ಆ ಸಮಯದಲ್ಲಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ವೀರೇಂದ್ರ ಪಾಟೀಲರು ಹಿಂದುಳಿದ ವರ್ಗಗಳ ಒತ್ತಾಯಕ್ಕೆ ಮಣಿದು ಪ್ರಬಲ ಕೋಮಿನವರನ್ನು ಎದುರು ಹಾಕಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಪ್ರಬಲ ಕೋಮಿನ ರಾಜಕೀಯ ಪ್ರಭಾವ, ಅಧಿಕಾರಗಳ ವಿರುದ್ಧ ಏಳುತ್ತಿದ್ದ ಅಸಮಧಾನದ ಹೊಗೆಯನ್ನು ಬಳಸಿಕೊಳ್ಳುವ ಸಮರ್ಥ ನಾಯಕತ್ವ ಬರುವವರೆಗೂ ಕರ್ನಾಟಕದ ರಾಜಕೀಯದಲ್ಲಿ ಯಾವುದೇ ಮಹತ್ತರ ಬದಲಾವಣೆಯನ್ನು ನಾವು ಕಾಣುವುದಿಲ್ಲ. ಹಿಂದುಳಿದ ವರ್ಗಗಳಿಗೆ ಅಂತಹ ಅವಕಾಶ ದೊರಕಿದ್ದೂ ಮಾರ್ಚ್, 1971ರಲ್ಲಿ ನಡೆದ ಮಧ್ಯಾವದಿ ಚುನಾವಣೆಯ ನಂತರ. ಅವರಿಗೆ ಸಮರ್ಥ ನಾಯಕತ್ವ ದೊರಕಿದ್ದು ಶ್ರೀ ಡಿ. ದೇವರಾಜ್ ಅರಸುರವರಲ್ಲಿ. ಶ್ರೀ ಅರಸುರವರ ಅಧಿಕಾರಾವಧಿಯಲ್ಲಿ ಕರ್ನಾಟಕದ ಜಾತಿ ರಾಜಕೀಯದ ಸ್ವರೂಪದಲ್ಲಿ ಸಂಪೂರ್ಣ ಬದಲಾವಣೆಯಾದುದನ್ನು ನಾವು ಕಾಣುತ್ತೇವೆ. ಅದನ್ನು ಮುಂದಿನ ಲೇಖನದಲ್ಲಿ ವಿವರವಾಗಿ ವಿಶ್ಲೇಷಿಸಲಾಗುವುದು.

---

28. *ಡೆಕ್ಕನ್ ಹೆರಾಲ್ಡ್*, ಸೆಪ್ಟೆಂಬರ್ 14, 1970.

29. *ಡೆಕ್ಕನ್ ಹೆರಾಲ್ಡ್*, ನವೆಂಬರ್ 9, 1970.

ಔಧ್ ರೈತ ಚಳವಳಿ ಮತ್ತು ಕಾಂಗ್ರೆಸ್ ರಾಜಕೀಯ

1920-22 ಮತ್ತು 1930-32

ಅಧ್ಯಾಯ V

ಮೂಲ : ಡಿ. ಎನ್. ಧನಾಗರೆ

ಅನುವಾದ : ರಾಮಚಂದ್ರ ಉಡುಪ ಮತ್ತು ಅನಂತಕೃಷ್ಣ ಹೆಬ್ಬಾರ

ಉತ್ತರ ಪ್ರದೇಶದ ಹನ್ನೆರಡು ಜಿಲ್ಲೆಗಳನ್ನೊಳಗೊಂಡ ಔಧ್ ಪ್ರಾಂತದಲ್ಲಿ 1920-22 ಮತ್ತು1930-32ರ ನಡುವೆ ನಡೆದ ರೈತ ಚಳವಳಿಯು ವಿಶಿಷ್ಟ ಗುಣ ಲಕ್ಷಣಗಳನ್ನು ಹೊಂದಿದ್ದು ಇದು ಇಂಡಿಯಾದ ರೈತ ಚಳವಳಿಯಲ್ಲಾದ ಪ್ರಗತಿಯ ಒಂದು ಪ್ರಮುಖ ಹಂತವಾಗಿದೆ. ಈ ಚಳವಳಿಗಳು ರಾಷ್ಟ್ರವ್ಯಾಪಿ ಚಳವಳಿಯ ಜತೆಜತೆಗೇ ಹುಟ್ಟಿಕೊಂಡಿವೆ. 1920-22ರ ಚಳವಳಿಯು ಅಸಹಕಾರ ಚಳವಳಿಯ ಜತೆ ಸೇರಿಕೊಂಡಿದ್ದರೆ 1930-32ರ ಚಳವಳಿಯು ಸವಿನಯ ಕಾಯಿದೆಭಂಗ ಚಳವಳಿಯ ಒಡಲಿನಿಂದಲೇ ಹುಟ್ಟಿಕೊಂಡಿದೆ. ಹೀಗಾಗಿ ಔಧ್‌ನ ಚಳವಳಿಗಳನ್ನು ಕೇವಲ ದನಿ ಒಕ್ಕಲು ಸಮಸ್ಯೆಯಾಗಿ ಮಾತ್ರ ಗಮನಿಸದೆ ಅದಕ್ಕಿಂತ ವಿಸ್ತಾರವಾದ ಹಿನ್ನೆಲೆಯಲ್ಲಿ ನೋಡುವ ಅಗತ್ಯವಿದೆ. ಪ್ರಕೃತ ಅಧ್ಯಾಯದಲ್ಲಿ ಈ ಚಳವಳಿಗಳಿಗಿರುವ ಕಾಂಗ್ರೆಸ್ ಸಂಬಂಧವನ್ನು ಇಂತಹ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಔಧ್‌ನ ಚಾರಿತ್ರಿಕ ಹಿನ್ನೆಲೆ

ಮಧ್ಯ ಭಾರತದ ಉತ್ತರಕ್ಕಿರುವ ಗಂಗಾನದಿ ಪಾತ್ರದ ಹನ್ನೆರಡು ಜಿಲ್ಲೆಗಳಿಂದ ಕೂಡಿದ ಪ್ರದೇಶವೇ ಔಧ್. ಮೊಗಲ ಸಾಮ್ರಾಜ್ಯದ ನವಾಬರೇ ಇದರ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಇಲ್ಲಿ ಜಮೀನು ವ್ಯವಸ್ಥೆ ಅರೆ ಊಳಿಗಮಾನ್ಯ ಪದ್ಧತಿಯ ಸ್ವರೂಪದಲ್ಲಿದ್ದುದರಿಂದ ಮೊಗಲ್ ಸಾಮ್ರಾಜ್ಯದ ಅವನತಿಯ ಮೊದಲೂ ಬಳಿಕವೂ ಶ್ರೀಮಂತ ಜಮೀನ್ದಾರರೇ ಪ್ರಮುಖರಾಗಿದ್ದರು. 1775 ಮತ್ತು 1856ರ ನಡುವೆ ಇವತ್ತು ಉತ್ತರ ಪ್ರದೇಶವೆಂದು ಕರೆಯುವ ಹೆಚ್ಚಿನ ಭೂಭಾಗವೆಲ್ಲ ಒಂದೋ ಬ್ರಿಟಿಷರಿಗೆ ತಾನಾಗಿ ಒಪ್ಪಿಸಲಾಗಿತ್ತು ಅಥವಾ ಅವರೇ ಗೆದ್ದು ತಮ್ಮ ವಶಕ್ಕೆ ತೆಗೆದುಕೊಂಡಿದ್ದರು. ಬೇರೆ ಬೇರೆ ಕಾರಣಗಳಿಗಾಗಿ ಬ್ರಿಟಿಷರು ಆಗ್ರಾ ಮತ್ತು ಔಧ್‌ನ್ನು ಒಂದೇ ಆಡಳಿತದ ಕೆಳಗೆ ತಂದಿದ್ದರೂ ಅವುಗಳಲ್ಲಿದ್ದ ವ್ಯವಸಾಯಿ ವ್ಯವಸ್ಥೆ 1939ರ ವರೆಗೂ ಭಿನ್ನವಾಗಿಯೇ ಇತ್ತು.

ಬ್ರಿಟಿಷ್ ಪೂರ್ವದ ದಿನಗಳಲ್ಲಿ ಕಂದಾಯ ವಸೂಲು ಮಾಡುವ ತಾಲೂಕುದಾರರೇ ಔಧ್‌ನಲ್ಲಿ ಪ್ರಮುಖರಾಗಿದ್ದರು. ಎಸ್ಟೇಟ್‌ಗಳನ್ನು ಹೊಂದುವುದರ ಮೂಲಕ ಸಾಕಷ್ಟು ಮಂದಿ ಹಿಂಬಾಲಕರನ್ನು ಪಡೆದ ಇವರು ಸ್ವತಂತ್ರ ರಾಜಕೀಯ ಸ್ಥಾನಮಾನಗಳನ್ನು ಅನುಭವಿಸುತ್ತಿದ್ದರು. ಔಧ್ ಬ್ರಿಟಿಷರ ಆಕ್ರಮಣಕ್ಕೆ ಒಳಗಾದಾಗ ಮೊತ್ತಮೊದಲ ಬಾರಿ ಪ್ರಶ್ನಾತೀತವಾಗಿದ್ದ ಇವರ ಸಾಂಪ್ರದಾಯಿಕ ಅಧಿಕಾರವು ತತ್ತರಿಸಿತು.[1] ಬ್ರಿಟಿಷರು ಈ ತಾಲೂಕುದಾರರನ್ನು ದಬ್ಬಾಳಿಕೆಯಿಂದ ಅಧಿಕಾರ ಚಲಾಯಿಸುವ ಪ್ರತಿಗಾಮಿ ಶಕ್ತಿಗಳೆಂದು ಭಾವಿಸಿ ಭೂವಿವಾದಗಳ ಇತ್ಯರ್ಥ ಮಾಡುವಾಗೆಲ್ಲ ಇವರ ಶಕ್ತಿಯನ್ನು ಕುಗ್ಗಿಸುವ ಪ್ರಯತ್ನ ಮಾಡಿದರು. ಸಿಪಾಯಿ

---

1. *ನೋಡಿ ಟಿ. ಆರ್. ಮೆಟ್‌ಕಾಲ್ಫ್, ಫ್ರಾಮ್ ರಾಜಾ ಟು ಲ್ಯಾಂಡ್ ಲಾರ್ಡ್:ದಿ ಔಧ್ ತಾಲೂಕ್‌ದಾರ್,* 1850-1879, *ಇದು ಆರ್.ಇ. ಫ್ರೈಕನ್‌ಬರ್ಗ್ ಸಂಪಾದಿಸಿದ, ಲ್ಯಾಂಡ್ ಕಂಟ್ರೋಲ್ ಆಂಡ್ ಸೋಶಿಯಲ್ ಸ್ಟ್ರಕ್ಚರ್ ಇನ್ ಇಂಡಿಯನ್ ಹಿಸ್ಟರಿ ಎಂಬ* ಪುಸ್ತಕದಲ್ಲಿದೆ, 1969, ಪುಟಗಳು 123-41

ದಂಗೆಯಲ್ಲಿ ಇವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದಾಗ ಮಾತ್ರ ಅವರ ಶಕ್ತಿಯ ಬಗ್ಗೆ ಬ್ರಿಟಿಷರಿಗೆ ಮನದಟ್ಟಾಯಿತು. ಬಳಿಕ ಅವರನ್ನು ಜನರ ನೇತಾರರೆಂದು ಸರಕಾರ ಮಾನ್ಯ ಮಾಡಿತು.[2] ಸಿಪಾಯಿದಂಗೆಯನ್ನು ಬೆಂಬಲಿಸಿದ ಈ ತಾಲೂಕುದಾರರ ಅನುಕೂಲಸಿಂಧು ರಾಜಕಾರಣವು ಸಂಪೂರ್ಣ ಭೂಸ್ವಾಮ್ಯವನ್ನು ಹೊಂದುವ ಹಾಗೂ ಹಳೆಯ ಒಕ್ಕಲುಗಳನ್ನು ಎಬ್ಬಿಸಿ ಹೊಸಬರನ್ನು ನೇಮಿಸುವ ತಮ್ಮ ಹಿತಾಸಕ್ತಿಗೆ ಪೂರಕವಾಗಿಯೇ ಇತ್ತು. ಹೀಗಾಗಿಯೇ ಇವರು ಬ್ರಿಟಿಷ್ ಪ್ರಭುಗಳಿಗೆ ತಮ್ಮ ನಿಷ್ಠೆಯನ್ನೂ ಬೆಂಬಲವನ್ನೂ ಘೋಷಿಸಿದರು.[3]

1860-1900ರ ಮಧ್ಯೆ ಬಂದ ಅನೇಕ ಕಾನೂನುಗಳು ಹಾಗೂ ಒಪ್ಪಂದಗಳು ತಾಲೂಕುದಾರರ ಶಕ್ತಿಸಾಮರ್ಥ್ಯಗಳನ್ನು ಒಂದೇ ಸವನೆ ಬೆಳೆಸಿದವು. ಒಕ್ಕಲೆಬ್ಬಿಸುವುದು, ಗೇಣಿದರ ಏರಿಸುವುದು, ನಜ್ರಾನಗಳನ್ನು ಹೇರುವುದು, ಅಬ್ವಾಬ್‌ಗಳೆಂಬ ಕಾನೂನುಬಾಹಿರ ಕಾಣಿಕೆಗಳನ್ನು ಪಡೆಯುವುದು ಮತ್ತು ಬಿಟ್ಟಿ ದುಡಿಸುವುದು ಮೊದಲಾದ ಚಟುವಟಿಕೆಗಳಿಗೆ ಕಡಿವಾಣ ಹಾಕುವವರೇ ಇಲ್ಲವಾಯಿತು. ಉತ್ತರ ಪ್ರದೇಶದಾದ್ಯಂತ ಒಕ್ಕಲುಗಳು ಕಾನೂನು ರೀತ್ಯಾ ವಿವಿಧ ರೀತಿಯಲ್ಲಿ ವಿಂಗಡಿಸಲ್ಪಟ್ಟಿದ್ದರು. ಆದರೆ ಔಧ್‌ನಲ್ಲಿ ಜಮೀನ್ದಾರರ ದಬ್ಬಾಳಿಕೆಯಿಂದ ಇವರಿಗೆ ಯಾವುದೇ ರಕ್ಷಣೆಯಿರಲಿಲ್ಲ.[4]

ಸಿಪಾಯಿದಂಗೆಯ ಬಳಿಕ ಬ್ರಿಟಿಷರು ರೈತರ ಅಸಮಾಧಾನವನ್ನು ಸಾಂತ್ವನಗೊಳಿಸುವ ಸಲುವಾಗಿ ಅನೇಕ ಪ್ರಗತಿಪರ ಕಾನೂನುಗಳನ್ನು ಜ್ಯಾರಿಗೊಳಿಸಿದರು. ಇದಕ್ಕನುಸಾರವಾಗಿಯೇ ಹನ್ನೆರಡು ವರ್ಷ ಮೇಲ್ಪಟ್ಟು ಒಂದೇ ಕಡೆ ಬೇಸಾಯ ಮಾಡಿಕೊಂಡಿದ್ದವನನ್ನು ಒಕ್ಕಲೆಬ್ಬಿಸದಂತೆ ತಡೆಯುವ ಕಾನೂನೊಂದನ್ನು "ಉತ್ತರ ಪ್ರದೇಶ ಲೆಜಿಸ್ಲೇಟಿವ್ ಕೌನ್ಸಿಲ್" ತಂದಿತು. ಆಗ್ರಾದ 90% ಒಕ್ಕಲುಗಳು ಇದರ ಪ್ರಯೋಜನ ಹೊಂದಿದರು.[5] ಆದರೆ ಇದರಿಂದ ಔಧ್ ರೈತರ ಭೂಒಡೆತನದ ಅನಿಶ್ಚಿತತೆ ಒಂದಿಷ್ಟೂ ಬದಲಾಗಲಿಲ್ಲ.

ಔಧ್‌ನ ವ್ಯವಸಾಯಿ ರಚನೆ :

ಔಧ್‌ನ ವ್ಯವಸಾಯಿ ವರ್ಗ ರಚನೆಯು 1920ರ ವೇಳೆಗಾಗಲೇ ಸಾಕಷ್ಟು ಸಂಕೀರ್ಣಗೊಂಡಿತ್ತು. 1921ರ ಜನಗಣತಿಯು ಔಧ್‌ನಲ್ಲಿ ಭೂಮಿಯ ಹಕ್ಕು ಚಿತ್ರವಿಚಿತ್ರವಾಗಿ ಹರಿಹಂಚಾಗಿರುವುದನ್ನು ತೋರಿಸುತ್ತದೆ.[6] ಈ ಜನಗಣತಿಯಲ್ಲಿ ರೈತಜನಸಮೂಹವನ್ನು 'ಗೇಣಿ ಪಡೆಯುವವರು' 'ಗೇಣಿ ಕೊಡುವವರು' ಮತ್ತು 'ಕೃಷಿ

---

2. ನೋಡಿ, ಮೆಟ್‌ಕಾಲ್ಫ್, *ಸೋಶಿಯಲ್ ಇಫೆಕ್ಟ್ಸ್ ಆಫ್ ಬ್ರಿಟಿಷ್ ಲ್ಯಾಂಡ್ ಪಾಲಿಸಿ ಇನ್ ಔಧ್* ಇದು ಫ್ರೈಕನ್‌ಬರ್ಗ್ ಸಂಪಾದಿಸಿದ *ಲ್ಯಾಂಡ್ ಕಂಟ್ರೋಲ್ ಅಂಡ್ ಸೋಶಿಯಲ್ ಸ್ಟ್ರಕ್ಚರ್ ಇನ್ ಇಂಡಿಯನ್ ಹಿಸ್ಟರಿ* ಎಂಬ ಪುಸ್ತಕದಲ್ಲಿದೆ, ಪುಟ 159 ಮತ್ತು ಪಿ.ಡಿ. ರೀವ್ಸ್‌ರ *ಲ್ಯಾಂಡ್‌ಲಾರ್ಡ್ ಅಂಡ್ ಪಾರ್ಟಿ ಪಾಲಿಟಿಕ್ಸ್ ಇನ್‌ದಿ ಯುನೈಟೆಡ್ ಪ್ರಾವಿನ್ಸಸ್* 1934-7 ಎಂಬ ಲೇಖನ, ಡಿ.ಎ.ಲೋ (ಸಂ) ಸೌಂಡಿಗ್ಸ್ ಇನ್ ಮಾಡರ್ನ್ ಸೌತ್ ಏಷ್ಯನ್ ಹಿಸ್ಟರಿ, ಬರ್ಕ್‌ಲೀ, ಕ್ಯಾಲಿಫೋರ್ನಿಯಾ, 1969ಪುಟ 262
3. ಮೆಟ್‌ಕಾಲ್ಫ್, ಫ್ರಾಮ್ ರಾಜಾ ಟು ಲ್ಯಾಂಡ್ ಲಾರ್ಡ್, ಪುಟ 136-37
4. ವಿವರಗಳಿಗಾಗಿ ನೋಡಿ ಡಬ್ಲ್ಯು.ಸಿ.ನೀಲ್, *ಇಕಾನಾಮಿಕ್ ಚೇಂಜ್ ಇನ್ ರೂರಲ್ ಇಂಡಿಯಾ-ಲಾಂಡ್ ಟೆನ್ಯೂರ್ ಅಂಡ್ ರಿಫಾರ್ಮ್ ಇನ್ ಉತ್ತರಪ್ರದೇಶ,* 1800-1955, ಯೇಲ್, 1962,ಪುಟ 50-102.
5. ಬಿ.ಆರ್. ಮಿಶ್ರಾ, *ಲ್ಯಾಂಡ್ ರೆವಿನ್ಯೂ ಪಾಲಿಸಿ ಇನ್ ದಿ ಯುನೈಟೆಡ್ ಪ್ರಾವಿನ್ಸ್‌ಸ್,* ಬನಾರಸ್, 1942, ಪುಟ 122-66
6. ಸೆನ್ಸಸ್ ಆಫ್ ಇಂಡಿಯಾ -1921 (ಯು.ಪಿ.ಆಫ್ ಆಗ್ರಾ ಅಂಡ್ ಔಧ್) ಸಂ. XVI, 2,ಇಂಪೀರಿಯಲ್ ಟೇಬಲ್ಸ್, XVIII ಪುಟ 382-89

ಕಾರ್ಮಿಕರು' ಎಂಬುದಾಗಿ ವಿಂಗಡಿಸಿ ಗುರುತಿಸಲಾಗಿತ್ತು. (ಈ ಮೂರು ವಿಭಾಗಗಳಲ್ಲೂ ಅವರವರ ಉಪವೃತ್ತಿಯನ್ನನುಸರಿಸಿ ಮತ್ತೆ ವಿಂಗಡಣೆ ಮಾಡಲಾಗಿದೆ) ಇಂತಹ ವಿರೋಧಾಭಾಸಗಳಿಂದ ಕೂಡಿದ ವಿಂಗಡಣೆಗಳಿಂದ ಅವರವರ ವರ್ಗಲಕ್ಷಣಗಳನ್ನು ಗುರುತಿಸುವುದು ಬಹಳ ಕಷ್ಟದ ಕೆಲಸ. ಅಲ್ಲದೆ ಪ್ರತಿಯೊಬ್ಬರೂ ಹೊಂದಿರುವ ಭೂಮಿಯ ವಿಸ್ತೀರ್ಣವನ್ನು 1948[7]ರವರೆಗೂ ದಾಖಲೆ ಮಾಡಿಲ್ಲವಾದುದರಿಂದ 1920-32ರ ಅವಧಿಯ ನಮ್ಮ ಅಧ್ಯಯನಕ್ಕೆ ಇದರಿಂದೇನೂ ಉಪಯೋಗವಿಲ್ಲ. ಆದುದರಿಂದ ನಮಗೆ ಸಾಧ್ಯವಾಗುವ ಇನ್ನೊಂದು ಮೂಲವೆಂದರೆ ಕೋಷ್ಟಕ 5.1ರಲ್ಲಿ ದೊರೆಯುವ ವಿವರಗಳಾದ 'ಜಮೀನುದಾರರು

ಕೋಷ್ಟಕ 5.1

1920ರಲ್ಲಿ ಕೊಟ್ಟ ಕಂದಾಯ ಹಾಗೂ ಗೇಣಿಯನ್ನಾಧರಿಸಿ ಔಧ್‌ನ ಜಮೀನ್ದಾರರು ಮತ್ತು ಒಕ್ಕಲುಗಳ ವರ್ಗೀಕರಣ

ಕೊಟ್ಟ ವಾರ್ಷಿಕ ಮೊತ್ತ, ರೂಪಾಯಿಗಳಲ್ಲಿ	ಜಮೀನ್ದಾರರ ಸಂಖ್ಯೆ ಕಂದಾಯ ಕೊಡುವವರು	ಜಮೀನ್ದಾರರ ಶೇಕಡಾವಾರು ಸಂಖ್ಯೆ	ಒಕ್ಕಲುಗಳ ಸಂಖ್ಯೆ ಗೇಣಿ ಕೊಡುವವರು	ಒಕ್ಕಲುಗಳ ಶೇಕಡಾವಾರು ಸಂಖ್ಯೆ
೨೦೦ ಮತ್ತು ಹೆಚ್ಚು	14,355	8.25 (I)	7,659	0.44 (II)
150-199	18,976	10-92 (II)	16,032	0.93 (II)
100-149	24,596	14.4 (II)	50,467	2.89 (III)
50-99	15,102	8.69 (III)	194,837	11.19 (III)
25-49	21,443	12.32 (III)	392,910	22.56 (IV)
1-24	79,453	45.68 (IV)	1,079,927	61.99 (IV)
ಒಟ್ಟು ಮೊತ್ತ	173,921	100	1,741,832	100

ಕೊಟ್ಟ ಕಂದಾಯ ಹಾಗೂ ಒಕ್ಕಲುಗಳು ಕೊಟ್ಟ ಗೇಣಿಯ ಪ್ರಮಾಣ'ವಾಗಿದೆ.

ಆಕರ ಮೂಲ : ರಿಫಾರ್ಮ್ಸ್ ಕಮಿಟಿ (ಫ್ರಾಂಚಾಸ್) ಕಲ್ಕತ್ತದ ಸರಕಾರಿ ಮುದ್ರಣಾಲಯದಿಂದ ತೆಗೆದುಕೊಳ್ಳಲಾಗಿದೆ. 1920 ಸಂಪುಟ I ಪುಟಗಳು 86ರಿಂದ 91 ಕೋಷ್ಟಕ VI ಮತ್ತು VIII ಕೂಡ ಇಲ್ಲಿಂದಲೇ ಪಡೆಯಲಾಗಿದೆ. ರಿಫಾರ್ಮ್ಸ್ ಆಫೀಸಿನ ನಡಾವಳಿಗಳು ಜೂನ್ 1920, ಎಪೆಂಡಿಕ್ಸ್ I ಪುಟಗಳು 67-68. ಸೂಚನೆ: ಕಂಸಗಳಲ್ಲಿರುವ ರೋಮನ್ ಅಂಕೆಗಳು ಮುಂದೆ ಚರ್ಚಿಸಲಿರುವ ವರ್ಗವಿಭಾಗಗಳನ್ನು ತೋರಿಸುತ್ತವೆ.

---

7. ನೋಡಿ. *ರಿಪೋರ್ಟ್ ಆಫ್‌ದಿ ಯುನೈಟೆಡ್ ಪ್ರಾವಿನ್ಸಸ್ ಜಮೀನ್ದಾರ್ ಅಬೋಲಿಶನ್ ಕಮಿಟಿ* (ಇನ್ನು ಮುಂದೆ ಝಡ್ ಎಸಿ), ಅಲಹಾಬಾದ್, 1948, ಸಂ. 1, ಪುಟಗಳು 24-25; ಸಂ.11, ಪುಟಗಳು 34-39.

ಮೇಲಿನ ದಾಖಲೆಗಳು ವಾರ್ಷಿಕ 1ರೂಗಿಂತ ಕಡಿಮೆ ಕಂದಾಯ ಕೊಡುವವರನ್ನು ಹಾಗೂ ಭೂರಹಿತ ಕೃಷಿಕಾರ್ಮಿಕರನ್ನು ಪರಿಗಣಿಸಿಲ್ಲವೆಂಬುದನ್ನು ಗಮನಿಸಬೇಕು. 1921ರಲ್ಲಿ 1ರೂಗಿಂತ ಕಡಿಮೆ ಕಂದಾಯ ಕೊಡುವವರ ಸಂಖ್ಯೆ ಇಡೀ ಉತ್ತರ ಪ್ರದೇಶದಲ್ಲಿ ಸುಮಾರು 1.5 ಮಿಲಿಯದಷ್ಟಿತ್ತು. ಔಧ್‌ನ ಭೂರಹಿತ ಕೃಷಿ ಕಾರ್ಮಿಕರ ಸಂಖ್ಯೆಯೇ 1,83,903ರಷ್ಟಿತ್ತು[8] ಕೃಷಿ ಭೂಮಿಯ ದೃಷ್ಟಿಯಿಂದ ನೋಡಿದಾಗ ಜಮೀನ್ದಾರರು ಹಾಗು ಗೇಣಿ ಒಕ್ಕಲುಗಳ ಅಂತಸ್ತುಗಳಲ್ಲಿ ಸಾಕಷ್ಟು ವ್ಯತ್ಯಾಸವಿದ್ದುದು ಗೊತ್ತಾಗುತ್ತದೆ. ಗೇಣಿ ಹಾಗೂ ಕಂದಾಯವನ್ನು2:1 ರಂತೆ ಪರಿಗಣಿಸಿ ಅವರಿಗೆ ಇಂಡಿಯಾ ಸರಕಾರ ತನ್ನ 1919ರ ಕಾನೂನಿನಲ್ಲಿ ಓಟಿನ ಹಕ್ಕನ್ನು ಕೊಡಮಾಡಿತ್ತು. ಇದನ್ನನುಸರಿಸಿ ಉತ್ತರ ಪ್ರದೇಶ ಸರಕಾರ 50 ಹಾಗೂ ಹೆಚ್ಚು ರೂ. ಗೇಣಿ ಕೊಡುವವರನ್ನು 25 ಹಾಗೂ ಹೆಚ್ಚು ರೂ ಕಂದಾಯ ಕೊಡುವವರಿಗೆ ಸಮವೆಂದು ಪರಿಗಣಿಸಿತು.[9] ಈ ಆಧಾರದಲ್ಲೇ (ಕೋಷ್ಟಕ 5.1ರ ರೋಮನ್ ಅಂಕೆಯಲ್ಲಿ ಸೂಚಿಸಿದಂತೆ) ಔಧ್‌ನ ವ್ಯವಸಾಯಗಾರರ ವರ್ಗ ವ್ಯತ್ಯಾಸವನ್ನು 5.2ರ ಕೋಷ್ಟಕದಲ್ಲಿ ಕಾಣಿಸಲಾಗಿದೆ.

ಅತ್ಯಂತ ಸಂಕೀರ್ಣವಾದ ವ್ಯವಸಾಯಿ ವರ್ಗರಚನೆಯನ್ನು ಈ ರೀತಿ ವಿಂಗಡಿಸುವುದು ಕೃತಕವೆಂಬಂತೆ ಕಂಡರೂ ಇದರಿಂದ ರೈತ ಸಮುದಾಯದೊಳಗಿನ ಪರಸ್ಪರ ವ್ಯತ್ಯಾಸವನ್ನೂ, ಭಿನ್ನ ಭಿನ್ನ ಸಮುದಾಯಗಳು ಹೊಂದಿರುವ ಜನರ ಸಂಖ್ಯೆಯನ್ನೂ ತಿಳಿದುಕೊಳ್ಳಬಹುದು.

ಕೋಷ್ಟಕ 5.2

ಔಧ್‌ನ ವ್ಯವಸಾಯಿ ವರ್ಗ ರಚನೆ :

I	ಜಮೀನುದಾರರು	200 ರೂಗಿಂತ ಹೆಚ್ಚು ವಾರ್ಷಿಕ ಕಂದಾಯ ಕೊಡುವವರು. ಈ ವರ್ಗದಲ್ಲೇ ವಾರ್ಷಿಕ ಕಂದಾಯ ರೂ. 5,000 ಮತ್ತು ಹೆಚ್ಚು ಕೊಡುವವರ ಸಂಖ್ಯೆ ಕೇವಲ ಬೆರಳೆಣಿಕೆಯಷ್ಟು ಮಾತ್ರವಿತ್ತು.[10]
ii	ಶ್ರೀಮಂತ ರೈತರು	a) ರೂ. 100-199 ಕಂದಾಯ ಕೊಡುವ ಭೂ ಮಾಲಿಕರು b) ರೂ. 150ಕ್ಕಿಂತ ಹೆಚ್ಚು ಗೇಣಿ ಕೊಡುವ ಒಕ್ಕಲುಗಳು
III	ಮಧ್ಯಮ ರೈತರು	a) ರೂ. 25ರಿಂದ 99ರವರೆಗೆ ಕಂದಾಯ ಕೊಡುವ ಭೂಮಾಲಿಕರು b) ರೂ.50-149ರವರೆಗೆ ಗೇಣಿ ಕೊಡುವ ಒಕ್ಕಲುಗಳು
IV	ಬಡ ರೈತರು	a) ರೂ. 25ಕ್ಕಿಂತ ಕಡಿಮೆ ಕಂದಾಯ ಕೊಡುವ ಭೂ ಮಾಲಿಕರು b) ರೂ. 50ಕ್ಕಿಂತ ಕಡಿಮೆ ಗೇಣಿ ಕೊಡುವ ಒಕ್ಕಲುಗಳು c) IV a) ಅಥವಾ IV b) ವಿಭಾಗಗಳಲ್ಲಿ ಗುರುತಿಸಲಾಗದ ಪಾಲು ಬೆಳೆಗಾರರು
V	ಭೂಹೀನ ಕೃಷಿ ಕಾರ್ಮಿಕರು	

8. *ಸೆನ್ಸ್‌ಸ್ ಆಫ್ ಇಂಡಿಯಾ* - 1921, ಪುಟ 382-89. ಕೃಷಿ ಕಾರ್ಯ ತಮ್ಮ ಉಪವೃತ್ತಿ ಎಂದುಕೊಂಡ ಇನ್ನಿತರ ವೃತ್ತಿಯಲ್ಲಿರುವವರ ಸಂಖ್ಯೆಗಳನ್ನೆಲ್ಲ ಒಟ್ಟಾಗಿ ಕೂಡಿಸಿ ಈ ಮೊತ್ತವನ್ನು ಪಡೆಯಲಾಗಿದೆ.

9. ಗೇಣಿ ಹಾಗೂ ಕಂದಾಯಗಳ ಪ್ರಮಾಣ ಸುಮಾರಾಗಿ 2:1 ಎಂಬ ಒಟ್ಟಾರೆ ಅಭಿಪ್ರಾಯದ ಮೇಲೆ ಈ ತೀರ್ಮಾನಕ್ಕೆ ಬರಲಾಗಿದೆ. ಒಟ್ಟು ಆಸ್ತಿಯ ಶೇಕಡಾ 50ರಷ್ಟು ಕಂದಾಯವೇ ಆಗುತ್ತದೆ ಎಂಬುದು ಇದರ ಅರ್ಥ.

10. ಝುಡ್ ಎ.ಸಿ, ಸಂ. 11, ಪುಟ 32-33

5.1 ಕೋಷ್ಟಕ ಸೂಚಿಸುವಂತೆ ಸ್ವಂತ ಜಮೀನು ಹೊಂದಿರುವವರಲ್ಲಿ 25% ಹಾಗೂ ಗೇಣಿ ಒಕ್ಕಲುಗಳಲ್ಲಿ 1%ರಷ್ಟು ಮಾತ್ರ ಶ್ರೀಮಂತ ರೈತರಿದ್ದರು. ಜಮೀನು ಹೊಂದಿರುವವರಲ್ಲಿ 21% ಮತ್ತು ಗೇಣಿ ಒಕ್ಕಲುಗಳಲ್ಲಿ 14% ಮಧ್ಯಮ ರೈತರು. ಹಾಗೂ ಜಮೀನುಳ್ಳ ಬಡರೈತರು 45% ಮತ್ತು ಗೇಣಿ ಒಕ್ಕಲುಗಳಲ್ಲಿ ಬಡರೈತರು 84% ಇದ್ದರು. ಈ ಅಂಕೆ ಸಂಖ್ಯೆಗಳು ಔಧ್‌ನ ಭೂವ್ಯವಸ್ಥೆಯು ಹೊಂದಿದ್ದ ಪಿರಮಿಡ್ ಲಕ್ಷಣಗಳನ್ನು ಸ್ಪಷ್ಟವಾಗಿಯೇ ಸೂಚಿಸುತ್ತವೆ.

ಔಧ್ ರೈತ ಸಮಾಜವನ್ನು ಕುರಿತಂತೆ ಇನ್ನೆರಡು ಸಂಗತಿಗಳನ್ನು ಗುರುತಿಸಬೇಕು. ಒಂದನೆಯದಾಗಿ, ಭೂಸ್ವಾಮ್ಯವನ್ನು ಹೊಂದಿದ್ದ ಗೇಣಿ ಒಕ್ಕಲುಗಳ ಸಂಖ್ಯೆ ಕೇವಲ 2.02%ದಷ್ಟು ಮಾತ್ರವಿತ್ತು. ಬಹುಸಂಖ್ಯೆಯ ಒಕ್ಕಲುಗಳಿಗೆ ಭೂಮಿಯ ಮೇಲೆ ಯಾವುದೇ ಹಕ್ಕಿರಲಿಲ್ಲ. ಯಾವುದೇ ಕ್ಷಣದಲ್ಲಾದರೂ ಇವರನ್ನು ಒಕ್ಕಲೆಬ್ಬಿಸಬಹುದಾಗಿತ್ತು ಅಥವಾ ಕಾನೂನುಬಾಹಿರ ಗೇಣಿಯನ್ನು ಇವರಿಂದ ಪಡೆಯಬಹುದಾಗಿತ್ತು.[11] ಎರಡನೆಯದಾಗಿ, 20ನೇ ಶತಮಾನದ ಮೊದಲೆರಡು ದಶಕಗಳಲ್ಲಿ ಉತ್ತರ ಪ್ರದೇಶದಲ್ಲಿ ಒಕ್ಕಲೆಬ್ಬಿಸುವುದರ ಪ್ರಮಾಣ ನೂರಕ್ಕೆ ನೂರರಷ್ಟು ಹೆಚ್ಚಿತು. ಹಾಗು ದನಿ ಒಕ್ಕಲುಗಳ ಸಂಬಂಧ ಇದರಿಂದ ಸಾಕಷ್ಟು ಕಹಿಯಾಯಿತು.[12] ಇದೇ ಅವಧಿಯಲ್ಲಿ ವಸ್ತುಗಳ ಬೆಲೆ, ಗೇಣಿದರ ಹಾಗೂ ಕಂದಾಯಗಳು ಭಿನ್ನ ಭಿನ್ನ ರೀತಿಯಲ್ಲಿ ಏರಿದವು. ಕಂದಾಯವು 7.5%ರಷ್ಟು ಏರಿದರೆ ಅದೇ ಸಮಯಕ್ಕೆ ಗೇಣಿಯು ಭೂಸ್ವಾಮ್ಯವುಳ್ಳ ರೈತರಿಗೆ 12% ಹಾಗೂ ಇತರ ಸಾಮಾನ್ಯ ರೈತರಿಗೆ 26% ಏರಿತು. (ಕೋಷ್ಟಕ 5.3)

ಬೆಲೆ, ಕಂದಾಯ ಹಾಗೂ ಗೇಣಿಯ ಯದ್ವಾತದ್ವಾ ಏರಿಕೆಯ ಆರ್ಥಿಕ ಪರಿಣಾಮಗಳೇನೇ ಇದ್ದರೂ ಈ ಏರಿಕೆಯು ಬೇರೆ ಬೇರೆ ವ್ಯವಸಾಯಿ ವರ್ಗಗಳಿಗೆ ಸಮಾನವಾಗಿಯೇ ಅನ್ವಯಿಸುತ್ತಿತ್ತು. ಸತತವಾಗಿ ಏರುತ್ತಿರುವ ಗೇಣಿ ಮತ್ತು ಇದಕ್ಕೆ ಹೋಲಿಸಿದರೆ ಸ್ಥಿರವೇ ಎನ್ನಬಹುದಾದ ಕಂದಾಯಗಳಿಂದಾಗಿ ಜಮೀನುದಾರರ ಲಾಭಾಂಶವು ಹೆಚ್ಚುತ್ತಾ ಹೋಯಿತು. ಮಾರುಕಟ್ಟೆಯ ಬೆಲೆಗಳು 1906 ಮತ್ತು 21ರ ನಡುವೆ ಒಂದೇ ಸವನೆ ಏರಿದುದರಿಂದಲೂ ಜಮೀನ್ದಾರರಿಗೆ ಮತ್ತು ಭೂಸ್ವಾಮ್ಯವುಳ್ಳ ಗೇಣಿ ಒಕ್ಕಲುಗಳಿಗೆ ತುಂಬಾ ಲಾಭವಾಯಿತು. ಏಕೆಂದರೆ ಇವರು ತಮ್ಮ ಭೂಮಿಯ ಸ್ವಲ್ಪ ಭಾಗದಲ್ಲಾದರೂ ಆರ್ಥಿಕ ಬೆಳೆಗಳನ್ನು ಬೆಳೆಸಿ ಮಾರುಕಟ್ಟೆಯ ಬಾಗಿಲನ್ನು ತಟ್ಟಿದ್ದರು. ಹೇಗಿದ್ದರೂ ಸಣ್ಣ ಭೂಮಾಲಿಕರೂ ಅರಕ್ಷಿತ ಗೇಣಿದಾರರೂ ಇದರಿಂದಾಗಿ ತುಂಬಾ ತೊಂದರೆಗೊಳಗಾದರು. ಏಕೆಂದರೆ ಇವರು ತಮ್ಮ ಕುಟುಂಬದ ಅನೇಕ ಸಣ್ಣಪುಟ್ಟ ಅಗತ್ಯಗಳಿಗೆ ಕೂಡ ಮಾರುಕಟ್ಟೆಯನ್ನೇ ಅವಲಂಬಿಸಬೇಕಾಗಿತ್ತು. ಇಂತಹ ಆರ್ಥಿಕ ಸಂಕಟವು ಆಗ್ರಾ ಪ್ರಾಂತಕ್ಕಿಂತ ಔಧ್‌ನಲ್ಲೇ ಹೆಚ್ಚಾಗಿತ್ತು. ಇದಕ್ಕೆ ಅರಕ್ಷಿತ ಗೇಣಿ ಒಕ್ಕಲುಗಳ ಸಂಖ್ಯೆ ಔಧ್‌ನಲ್ಲಿ ಹೆಚ್ಚಾಗಿದ್ದುದೇ ಕಾರಣವಾಗಿದೆ.[13]

---

11. *ರಿಫಾರ್ಮ್ಸ್ ಕಮಿಟಿ* (ಫ್ರಾಂಚೈಸ್) ಸಂ. 1, ಪುಟ 88-89.
12. ಮಿಶ್ರಾ, *ಲ್ಯಾಂಡ್ ರೆವಿನ್ಯೂ ಪಾಲಿಸಿ*, ಪುಟ 142, ವಿವರಗಳಿಗಾಗಿ ನೋಡಿ, ಎಸ್.ಎನ್.ಎ.ಜೆಫ್ರಿ, *ದಿ ಹಿಸ್ಟರಿ ಆಂಡ್ ಸ್ಟ್ಯಾಟಸ್ ಆಫ್ ಲ್ಯಾಂಡ್‌ಲಾರ್ಡ್ಸ್ ಆಂಡ್ ಟೆನೆಂಟ್ಸ್ ಇನ್‌ದಿ ಯು.ಪಿ.*, ಅಲಹಾಬಾದ್, 1931, ಪುಟ - 181.
13. ಉದಾಹರಣೆಗೆ ನೋಡಿ *ಪ್ರಾವಿನ್ಷಿಯಲ್ ಕಾಂಗ್ರೆಸ್ ಅಗ್ರೇರಿಯನ್ ಎನ್‌ಕ್ವಯರಿ ಕಮಿಟಿ ರಿಪೋರ್ಟ್*, ಬರೇಲಿ, 1936 ಪುಟ 14.

ಕೋಷ್ಟಕ 5.3
ಬೆಲೆಗಳು, ಗೇಣಿ, ಕಂದಾಯ ಹಾಗೂ ಕೂಲಿದರ (1900-1934 ರಲ್ಲಿ ಉತ್ತರ ಪ್ರದೇಶದಲ್ಲಿ) ಸೂಚ್ಯಂಕ ಸಂಖ್ಯೆ (ಇಂಡೆಕ್ಸ್ ನಂಬರ್) 1901-100

ವರ್ಷ	ಸಗಟು ಬೆಲೆಗಳು	ಗೇಣಿ ದರ		ಭೂಕಂದಾಯ ದರ	ಕೃಷಿ ಕೂಲಿ ದರ
		ಭೂ ಸ್ವಾಮ್ಯವುಳ್ಳ ರೈತರು	ಅರಕ್ಷಿತ ರೈತರು		
1906	129	104	106	101	100
1911	120	106	115	103	100
1916	160	111	121	104	120
1921	258	114	134	108	–
1926	230	120	146	109	–
1929	218	120	165	110	180
1930	162	121	166	111	–
1931	112	121	165	112	–
1934	103	121	161	113	120

ಆಕರ : ಬ್ಯೂರೋ ಆಫ್ ಸ್ಟಾಟಿಸ್ಟಿಕ್ಸ್ ಆಂಡ್ ಇಕನಾಮಿಕ್ ರಿಸರ್ಚ್. ಯು.ಪಿ. ಕರಪತ್ರ ಸಂಖ್ಯೆ 1, ಅಗ್ರಿಕಲ್ಚರಲ್ ಪ್ರೈಸಸ್ ಇನ್ ದಿ ಯುನೈಟೆಡ್ ಪ್ರೊವಿನ್ಸಸ್, ಪ್ರಕಾಶಕರು ಆರ್. ಬಿ. ಗುಪ್ತ (ಅಲ್ಲಹಾಬಾದ್ : 1937) ಪುಟಗಳು 51-52 ಕಾಂಗ್ರೆಸ್ ಮತ್ತು ರೈತ ಚಳವಳಿ.1920-22

1920ರ ಮೊದಲು ಯು. ಪಿ. ಕಾಂಗ್ರೆಸ್ ರಾಜಕೀಯವಾಗಿ ಅಷ್ಟೇನೂ ಪ್ರಬಲವಾಗಿರಲಿಲ್ಲ. ಅದು ಮಧ್ಯಮ ವರ್ಗದ ಪಟ್ಟಣಿಗರು ಮತ್ತು ಬ್ರಾಹ್ಮಣರು, ಕಾಯಸ್ಥರು, ಖತ್ರಿಗಳು , ಬನಿಯಾಗಳೇ ಮುಂತಾದ ಮೇಲ್ಜಾತಿ ಭೂಮಾಲಿಕರ ಹಿಡಿತದಲ್ಲೇ ಇತ್ತು. ಔಧ್‌ನಿಂದ ನಾಮಕರಣಗೊಂಡ ಹೆಚ್ಚಿನ ಶಾಸನ ಸಭಾ ಸದಸ್ಯರು (1893-1900) 'ತಾಲೂಕುದಾರ'ರೇ ಆಗಿದ್ದರು. ಕಾಂಗ್ರೆಸಿನ ವಾರ್ಷಿಕ ಸಭೆಗಳಿಗೆ ಹಾಜರಾಗುತ್ತಿದ್ದವರು ಉದ್ಯೋಗಸ್ಥರು, ಜಮೀನ್ದಾರರು ಮತ್ತು ವ್ಯಾಪಾರಿಗಳೇ ಆಗಿದ್ದರು.[14] ಹೀಗಾಗಿ ಕಾಂಗ್ರೆಸಿಗೆ ಹಳ್ಳಿಯ ವಿಶಾಲ ಜನ ಸಮುದಾಯದಿಂದ ಸರಿಯಾದ ಪ್ರಾತಿನಿಧ್ಯವಿಲ್ಲದಂತಾಗಿತ್ತು. ಇದರಿಂದಾಗಿ ಈ ಸಮುದಾಯಕ್ಕೆ ಶಾಸನ ಸಭೆಯಲ್ಲೂ ಸರಿಯಾದ ಪ್ರಾತಿನಿಧ್ಯ ದೊರಕದೆ ಹಳ್ಳಿಯ ಅರಕ್ಷಿತ ರೈತರಿಗೆ ಕಾಂಗ್ರೆಸ್ ಔಧ್‌ನಲ್ಲಿ ಹೇಳಿಕೊಳ್ಳುವಂತಹದ್ದೇನೂ ಮಾಡಿರಲಿಲ್ಲ.

14. ನೋಡಿ, ಜಾನ್. ಎಲ್. ಹಿಲ್, *ಕಾಂಗ್ರೆಸ್ ಆಂಡ್ ರೆಪ್ರಸೆಂಟೇಟಿವ್ ಇನ್ಸ್ಟಿಟ್ಯೂಶನ್ಸ್ ಇನ್ ದಿ ಯುನೈಟೆಡ್ ಪ್ರಾವಿನ್ಸ್‌ಸ್,* 1886-1901 (ಪಿ.ಹೆಚ್.ಡಿ ಪ್ರಬಂಧ, ಡ್ಯೂಕ್ ವಿಶ್ವವಿದ್ಯಾಲಯ1966) ಪುಟ 58-64, 322-26.

1901ರಿಂದ 1920ರ ಅವಧಿಯಲ್ಲಿ ಬಡರೈತರ ಪರಿಸ್ಥಿತಿ ಹದಗೆಡುತ್ತಾ ಹೋಯಿತಲ್ಲದೆ ಪ್ರಥಮ ಜಾಗತಿಕ ಯುದ್ಧದ ಮಧ್ಯಾವಧಿಯವರೆಗೂ ಕಾಂಗ್ರೆಸ್ ಇವರತ್ತ ಗಮನವನ್ನೇ ಹರಿಸಿರಲಿಲ್ಲ. ಏನಿದ್ದರೂ 1915ರ ಬಳಿಕವಷ್ಟೇ ಕಾಂಗ್ರೆಸಿಗೆ ಜನಸಾಮಾನ್ಯರ ಬೆಂಬಲದ ಮಹತ್ವ ಅರ್ಥವಾಯಿತೆನ್ನಬಹುದು. ಅಲ್ಲಹಾಬಾದ್ ಜಿಲ್ಲೆಯಲ್ಲಿ ಪಂಡಿತ ಮದನಮೋಹನ ಮಾಳವೀಯರು ಮೊದಲಬಾರಿಗೆ ಕಿಸಾನ್ ಸಭಾವನ್ನು ಸಂಘಟಿಸಿ ರೈತರ ಸಂಕಷ್ಟಗಳಿಗೆ ದನಿಕೊಟ್ಟರು. ಆದರೆ ರೈತರ ಕುರಿತಾದ ಮಾಳವೀಯರ ಆಸಕ್ತಿಯು ಹೋಂ ರೂಲು ಚಳವಳಿಯ ಒಂದು ಅಂಗವಾಗಿಯಷ್ಟೇ ಮೂಡಿದುದಾಗಿತ್ತು. ಜೊತೆಗೆ 'ಕಿಸಾನ್ ಸಭಾ'ದ ಚಟುವಟಿಕೆಗಳೂ ಅಲ್ಲಹಾಬಾದಿಗೆ ಸೀಮಿತವಾಗಿತ್ತು. ಅಲ್ಲದೆ ಅದರ ಉದ್ದೇಶವು ಇಡೀ ರೈತ ಸಮುದಾಯದ ರಾಜಕೀಯ ಹಿತಾಸಕ್ತಿಯೇ ಆಗಿದ್ದರೂ ವಾಸ್ತವದಲ್ಲಿ ಅದು ಮೇಲ್ವರ್ಣದ ಬ್ರಾಹ್ಮಣರು, ರಜಪೂತ ರೈತರು ಹಾಗೂ ಸಣ್ಣ ಜಮೀನುದಾರರ ಅಹವಾಲುಗಳಿಗೆ ಮಾತ್ರ ಕಿವಿಗೊಡುತ್ತಿತ್ತು.[15] ಗಾಂಧಿ ಮಾದರಿಯ ಧ್ರುವೀಕರಣವೇ ಮಾಳವೀಯರ ಉದ್ದೇಶವಾಗಿದ್ದರೂ ಅವರಿಂದ ಹೆಚ್ಚಿನದೇನನ್ನೂ ಸಾಧಿಸಲಾಗಲಿಲ್ಲ.[16] 1916ರಿಂದ ಕಾಂಗ್ರೆಸ್ ಹಾಗೂ ಹೋಂ ರೂಲ್‌ನಲ್ಲಿ ಸಕ್ರಿಯರಾಗಿದ್ದ ಜವಾಹರಲಾಲ್ ನೆಹರೂರವರೇ 1920ರ ಮಧ್ಯಭಾಗದಲ್ಲಿ'ಕಿಸಾನ್'ಗಳ ಪರಿಣಾಮಕಾರಿ ಸಂಪರ್ಕವನ್ನು ಸಾಧಿಸಿದರು ಎನ್ನುವುದು ಗಮನಾರ್ಹವಾಗಿದೆ.[17]

ಕಾಂಗ್ರೆಸ್ ಅಸಹಕಾರ ಆಂದೋಲನದ ಪೂರ್ವ ತಯಾರಿಯಲ್ಲಿದ್ದ ವೇಳೆಯಲ್ಲೇ ನೆಹರೂರವರಿಗೆ ಗ್ರಾಮೀಣ ಬದುಕಿನ ಕಟು ವಾಸ್ತವದ ಪರಿಚಯವಾಯಿತು. 1916ರಿಂದಲೇ ಕಾಂಗ್ರೆಸ್‌ನಲ್ಲಿದ್ದರೂ1920ರ ಸುಮಾರಿಗೆ ರೈತರ ಬದುಕಿನ ಕಷ್ಟಗಳಿಂದ ನೆಹರೂ ಮೊದಲಬಾರಿಗೆ ವಿಚಲಿತರಾದರು. ಕಾಂಗ್ರೆಸಿನ ಗಮನ ಸೆಳೆಯಲು 'ಕಿಸಾನ್'ಗಳು ಪ್ರತಾಪಗಡದಿಂದ ಸುಮಾರು 50 ಮೈಲು ದೂರದ ಅಲ್ಲಹಾಬಾದಿಗೆ ಕಾಲ್ನಡಿಗೆಯ ಜಾಥಾ ಕೈಗೊಂಡಿದ್ದರು.[18] ರೈತರ ಹಿತಾಸಕ್ತಿಗಳನ್ನು ಕಾಂಗ್ರೆಸ್ ಸಮರ್ಥಿಸಬೇಕೆ ಬೇಡವೆ ಎನ್ನುವ ಕುರಿತು ನೆಹರೂ ಹಾಗೂ ಉತ್ತರ ಪ್ರದೇಶದ ಕಾಂಗ್ರೆಸ್ ನಡುವೆ ಭಿನ್ನಾಭಿಪ್ರಾಯ ಉಂಟಾಯಿತು. ರೈತರ ಹಿತಾಸಕ್ತಿಗಾಗಿ ಹೋರಾಡುವುದು ಕಾಂಗ್ರೆಸಿಗೆ ಅಷ್ಟೇನೂ ಸುಲಭವಾಗಿರಲಿಲ್ಲ. (ಇದು 'ನಜ್ರಾನಾ' ಮತ್ತು ಇತರ ಅನಧಿಕೃತ ವಸೂಲಿ ಹಾಗೂ ಕಾನೂನುಬಾಹಿರ ಒಕ್ಕಲೆಬ್ಬಿಸುವಿಕೆಯ ವಿರುದ್ಧದ ಹೋರಾಟವೇ ಆಗಿತ್ತು.) ಏಕೆಂದರೆ ರೈತರಿಗೆ ರಾಷ್ಟ್ರೀಯ ಚಳವಳಿಯೆನ್ನುವುದು ಯಾವತ್ತೂ ಮನದಾಳಕ್ಕೆ ಇಳಿದಿರಲೇ ಇಲ್ಲ.[19] ಇದು ಗಾಂಧೀಜಿಯ ಹೊಸ ರಾಜಕೀಯ ಶೈಲಿಯ ಪರೀಕ್ಷಾ ಕಾಲವಾಗಿತ್ತು. 1920ರ ಕೊನೆಗೆ ಎರಡು ವಿರುದ್ಧ ಗುಂಪುಗಳು 'ಕಿಸಾನ್ ಸಭಾ'ಗಳ ಮೂಲಕ ರೈತರನ್ನು ಒಗ್ಗೂಡಿಸಲು ತೊಡಗಿದ್ದವು. ಅವುಗಳಲ್ಲೊಂದು ನೆಹರೂ ಮುಂದಾಳ್ತನದಲ್ಲಿ ಔಧ್‌ಕಿಸಾನ್ ಸಭಾವನ್ನು

---

15. ನೋಡಿ, ಸಿ.ಎ. ಬೆಯ್‌ಲಿ, *ದಿ ಡೆವಲ್‌ಪ್‌ಮೆಂಟ್ ಆಫ್ ಪೊಲಿಟಿಕಲ್ ಆರ್ಗನೈಸೇಶನ್ ಇನ್ ದಿ ಅಲಹಾಬಾದ್ ಲೋಕಾಲಿಟಿ,* 1880-1925 (ಡಿ.ಫಿಲ್.ಪ್ರಬಂಧ, ಆಕ್ಸ್‌ಫರ್ಡ್, 1970), ಪುಟ 325-25
16. ಡಬ್ಲ್ಯು.ಎಫ್. ರೈವ್‌ಲಿ, *ಕಿಸಾನ್ ಸಭಾಸ್ ಅಂಡ್ ಅಗ್ರೇರಿಯನ್ ರಿವೋಲ್ಟ್ಸ್ ಇನ್ ದಿ ಯುನೈಟೆಡ್ ಪ್ರಾವಿನ್ಸ್‌ಸ್* 1920-21, ಮಾಡರ್ನ್ ಏಷ್ಯನ್ ಸ್ಟಡೀಸ್, ಸಂ. V, ನಂ 2 (1971), ಪುಟ 96-97.
17. ಜವಾಹರ್‌ಲಾಲ್ ನೆಹರೂ, *ಆನ್ ಆಟೋಬಯಾಗ್ರಫಿ,* ಲಂಡನ್ 1938, ಪುಟ 52-62. ಹಾಗೆಯೇ *ಜವಾಹರಲಾಲ ನೆಹರೂಸ್ ನೋಟ್ ಆನ್ ರಿಪ್ರೆಶನ್ ಇನ್ ದಿ ಯು.ಪಿ.,* ಸಿಡಬ್ಲ್ಯುಎಮ್‌ಜೆ, ಸಂ. XX, ಪುಟ 543-46.
18. ಎಮ್.ಎಚ್. ಸಿದ್ಧಿಕಿ, *ಅಗ್ರೇರಿಯನ್ ಅನ್‌ರೆಸ್ಟ್ ಇನ್ ನಾರ್ತರ್ನ್ ಇಂಡಿಯಾ ಡೆಲ್ಲಿ,* 1978, ಪುಟ 104-11.
19. ನೋಡಿ ಜೆ.ಸಿ. ಫಾನ್‌ತ್ರೋಪ್ *ರಿಪೋರ್ಟ್ ಆನ್ ದಿ ಇರಾ ಮೂವ್‌ಮೆಂಟ್* 8 ಏಪ್ರಿಲ್1922, ಯುನೈಟೆಡ್ ಪ್ರಾವಿನ್ಸ್ ಗಜೆಟ್‌ನಲ್ಲಿ 13 ಮೇ 1922, ಪುಟ 1-38.

ಸಂಘಟಿಸಿದರೆ ಇನ್ನೊಂದು ಪುರುಷೋತ್ತಮದಾಸ್ ಟಂಡನ್ ಸಂಘಟಿಸಿದ ಉತ್ತರ ಪ್ರದೇಶ 'ಕಿಸಾನ್ ಸಭಾ'. 1921ರಲ್ಲಿ ಈ ಎರಡೂ ಗುಂಪುಗಳನ್ನು ಹತ್ತಿರ ತರುವ ಉದ್ದೇಶದಿಂದ ಕಾಂಗ್ರೆಸ್ (ಸಹಜವಾಗಿಯೇ ಟಂಡನ್ ಗುಂಪನ್ನು ಅಶಕ್ತಗೊಳಿಸಲು) ಮೋತಿಲಾಲ್ ನೆಹರೂ ಹಿರಿತನದಲ್ಲಿ ಹೊಸ 'ಉತ್ತರ ಪ್ರದೇಶ ಕಿಸಾನ್ ಸಭಾ' ವನ್ನು ಸ್ಥಾಪಿಸಿತು.[20] ಹೀಗೆ ಮುಂದುವರಿಯುತ್ತಿದ್ದಾಗಲೇ ಮತ್ತೊಮ್ಮೆ ಕಾಂಗ್ರೆಸಿನ ಆಸಕ್ತಿಯು ಗ್ರಾಮೀಣ ಸಮಸ್ಯೆಗಳಿಂದ ಬಹುದೂರ ಸಾಗಿತು. 1920ರ ಕೊನೆಗೆ ಪ್ರತಾಪಗಡದಲ್ಲಿ ಮೆರವಣಿಗೆಗಳ ರೂಪದಲ್ಲಿ ಪ್ರಕಟಗೊಂಡ ಔಧ್ ರೈತರ ಅಶಾಂತಿಯು 1921ರಲ್ಲಿ ರಾಯ್‌ಬರೇಲಿ, ಫೈಜಾಬಾದ್‌ಗಳಲ್ಲಿ ಹಾಗೂ ಮುಂದೆ ಅನೇಕ ಇತರ ಕಡೆಗಳಿಗೂ ಹರಡುತ್ತಾ ವಿಸ್ತಾರಗೊಂಡು ಹಿಂಸಾತ್ಮಕ ರೂಪವನ್ನು ಪಡೆದುಕೊಂಡಿತು.[21] ಸುಮಾರು 3,000ದಿಂದ 10,000ದವರೆಗಿದ್ದ'ಕಿಸಾನ್' ಗುಂಪುಗಳು ತಾಲೂಕುದಾರರ ಬೆಳೆ ಹಾಗೂ ಸೊತ್ತುಗಳನ್ನು ವಶಪಡಿಸಿಕೊಂಡವು. ದುಷ್ಟ ವ್ಯಾಪಾರಿಗಳ ಹಾಗೂ ಲೇವಾದೇವಿಗಾರರ ಅಂಗಡಿಗಳನ್ನು ಲೂಟಿ ಮಾಡಿದವು. ಕೆಲವು ಕಡೆ ಬಂಧನಕ್ಕೊಳಗಾದ ತಮ್ಮ ಜನರ ಬಿಡುಗಡೆಗಾಗಿ ಬಲಾತ್ಕರಿಸಿದವು. ಕೆಲವೇ ಕೆಲವು ಸಂದರ್ಭಗಳಲ್ಲಿ ಪೋಲೀಸರು ಗುಂಡೂ ಹಾರಿಸಬೇಕಾಯಿತು. ಹೇಗಿದ್ದರೂ ಇದರಲ್ಲಿ ಸತ್ತವರ ಸಂಖ್ಯೆ ಹತ್ತನ್ನು ಮೀರಿರಲಿಲ್ಲ. 'ಕಿಸಾನ್ ಸಭಾ'ದ ಹಿಡಿತದಲ್ಲಿರುವ ಅನೇಕ ಸ್ಥಳಗಳಲ್ಲಿ ಲೂಟಿಮಾಡಿದವರ ವಿಚಾರಣೆಗಾಗಿ ಗ್ರಾಮ ಪಂಚಾಯತುಗಳು ರಚನೆಯಾದವು. ಬಲಾತ್ಕಾರವಾಗಿ ಒಕ್ಕಲೆಬ್ಬಿಸಲ್ಪಟ್ಟ ರೈತರು ಫೈಜಾಬಾದಿನ ಟಾಂಟಾ ತಾಲೂಕಿನ ಸುಮಾರು 15 ಗ್ರಾಮಗಳಲ್ಲಿ ಇಂತಹ ಲೂಟಿಗಳನ್ನು ನಡೆಸಿದರು. ಅವರು ಸುಮಾರು 500 ಜನರ ಗುಂಪಾಗಿ ಹೋಗಿ ಚಿಕ್ಕಪುಟ್ಟ ಜಮೀನುದಾರರನ್ನೂ ಸಾಕಷ್ಟು ಸಂಖ್ಯೆಯ ಗೇಣಿ ಒಕ್ಕಲುಗಳನ್ನೂ ದರೋಡೆ ಮಾಡಿದರು. ಮುಂದೆ 1921ರಲ್ಲಿ ಕಾಂಗ್ರೆಸ್ ಮತ್ತು 'ಕಿಸಾನ್ ಸಭಾ' ಗಳು ಸಂಘಟಿಸಿದ 'ಏಕ' (ಒಗ್ಗಟ್ಟು) ಎಂಬ ಹೆಸರಿನ ಚಳವಳಿಗಳಿಂದ ಮತ್ತೊಮ್ಮೆ ಹಿಂಸಾತ್ಮಕ ಚಟುವಟಿಕೆಗಳು ಆರಂಭಗೊಂಡವು. ಇದು ಹಾರ್ಡೋೕ, ಉನ್ನಾವೋ ಮತ್ತು ಬೇರಿ ಜಿಲ್ಲೆಗಳಿಗೂ ಹರಡಿತು. ಈ ಸಂದರ್ಭದಲ್ಲಿ ಕೆಲವು ರೈತ ಮುಖಂಡರು ಕಾಂಗ್ರೆಸಿನ ಧೋರಣೆಯಾದ ಗೇಣಿಯನ್ನು ಕೊಟ್ಟು ಕಂದಾಯವನ್ನು ಮಾತ್ರ ಕೊಡದಿರುವುದು ಎಂಬುದಕ್ಕೆ ವಿರೋಧವಾಗಿ ಗೇಣಿಯನ್ನು ಕೊಡದಿರುವಂತೆ ಕರೆಕೊಟ್ಟರು.

1920ರ ಚಳವಳಿಯಲ್ಲಿ ಪ್ರತ್ಯೇಕ ಹಿನ್ನೆಲೆಯುಳ್ಳ ಎರಡು ರೈತಗುಂಪುಗಳು ಪಾಲ್ಗೊಂಡಿದ್ದುದೇ ಇದಕ್ಕೆ ಕಾರಣವಾಗಿತ್ತು. ಕಾಂಗ್ರೆಸಿನ ಆಶ್ರಯದಲ್ಲಿ ನಡೆದ 'ಔಧ್ ಕಿಸಾನ್ ಸಭಾ'ದ ಚಟುವಟಿಕೆಗಳನ್ನು ಈ ಹಿನ್ನೆಲೆಯಲ್ಲಿ ನೋಡಬೇಕಾಗಿದೆ. ಒಂದು ಹಂತದಲ್ಲಿ ರೈತರ ಒಂದು ಗುಂಪು ಜಮೀನುದಾರರ ವಿರುದ್ಧ ಹೋರಾಡುತ್ತ ತಮ್ಮ ಗೇಣಿಯ ಪ್ರಮಾಣವನ್ನು ಕಡಿಮೆಮಾಡಿಕೊಳ್ಳಲು ಹಾಗೂ ಭೂಮಿಯ ಹಕ್ಕನ್ನು ಖಾಯಂ ಮಾಡಿಕೊಳ್ಳಲು

20. ಇಂಡಿಪೆಂಡೆಂಟ್ (ಅಲಹಾಬಾದ್) 10 ಫೆಬ್ರವರಿ 1921, ಪುಟ 1. ನೋಡಿ, ಪಿ.ಡಿ. ರೀವ್ಸ್, ದ ಲ್ಯಾಂಡ್‌ಲಾರ್ಡ್ ರೆಸ್‌ಪಾನ್ಸ್ ಟು ಪೊಲಿಟಿಕಲ್ ಚೇಂಜ್ ಇನ್ ದಿ ಯುನೈಟೆಡ್ ಪ್ರಾವಿನ್ಸಸ್, (ಪಿ.ಎಚ್.ಡಿ ಪ್ರಬಂಧ, ಆಸ್ಟ್ರೇಲಿಯನ್ ನ್ಯಾಶನಲ್ ಯೂನಿವರ್ಸಿಟಿ, 1963), ಪುಟ 115-18.

21. ಎರಿಕ್ ಹಾಬ್ಸ್‌ಬಾಮ್ ತನ್ನ *ಬ್ಯಾಂಡಿಟ್ ಲಂಡನ್,* 1971 ಪುಟ 13-29ರಲ್ಲಿ ಹೇಳಿದ ಸಾಮಾಜಿಕ ಡಕಾಯತಿಯಂತಹದೇ ಪರಿಸ್ಥಿತಿಗೆ ಇಲ್ಲಿಯ ದಂಗೆಗಳು ಹೋಲಿಕೆಯಾಗುತ್ತದೆ. ಅಂತೆಯೇ ಜಿ.ರುಡೆ, *ದಿ ಕ್ರೌಡ್ ಇನ್ ಹಿಸ್ಟರಿ,* 1730-1848 ನ್ಯೂಯಾರ್ಕ್, 1964, ಪುಟ 149-63, ಜೊತೆಗೇ ಫಾನ್‌ತ್ರೋಫ್, *ರಿ ಪೋರ್ಟ್ ಆನ್ ದಿ ಇಕಾ ಮೂವ್‌ಮೆಂಟ್*; ಕಾವ್ಲಿ, *ಕಿಸಾನ್ ಸಭಾಸ್ ಇನ್ ದಿ ಯುನೈಟೆಡ್ ಪ್ರಾವಿನ್ಸಸ್,* ಎಮ್. ಎಚ್. ಸಿದ್ದಕಿ *ದಿ ಪೆಸೆಂಟ್ ಮೂವ್‌ಮೆಂಟ್ ಇನ್ ಪ್ರತಾಪ್‌ಗರ್,* 1921, *ಇಂಡಿಯನ್ ಇಕಾನಾಮಿಕ್ ಆಂಡ್ ಸೋಶಿಯಲ್ ಹಿಸ್ಟರಿ ರಿವ್ಯೂ,* ಸಂ IX, ನಂ 3 (ಸೆಪ್ಟೆಂಬರ್ 1972). ಮತ್ತು ಡಿ. ಎನ್. ಪಾಣಿಗ್ರಾಹಿ *ಅಗ್ರೇರಿಯನ್ ರಿಲೇಶನ್ಸ್ ಆಂಡ್ ದಿ ಕಮ್ಯೂನಲ್ ಪ್ರಾಬ್ಲೆಮ್ ಇನ್ ದಿ ಯು.ಪಿ.* 1920-21, ಮಿಮಿಯೋಗ್ರಾಫ್, ನೆಹರೂ ಮೆಮೋರಿಯಲ್ ಮ್ಯೂಸಿಯಮ್ ಆಂಡ್ ಲೈಬ್ರರಿ, ನ್ಯೂಡೆಲ್ಲಿ1971.

ಪ್ರಯತ್ನಿಸುತ್ತಿತ್ತು. ಯು. ಪಿ. ಲೆಜಿಸ್ಲೇಟಿವ್ ಕೌನ್ಸಿಲ್‌ನ ಕೆಲವು ಉದಾರವಾದಿ ಸದಸ್ಯರು ಇವರನ್ನು ಬೆಂಬಲಿಸುತ್ತಿದ್ದರು. ಎರಡನೇ ಹಂತದ ಪ್ರತಿಭಟನೆ ಇನ್ನೂ ತೀವ್ರತರದ್ದಾಗಿದ್ದು ಇವರು ನೇರವಾಗಿ ಜಮೀನುದಾರರ ಮೇಲೇ ಆಕ್ರಮಣ ಮಾಡುತ್ತಿದ್ದರು. ಅಲ್ಲದೆ ಪೇಟೆಯ ಅಂಗಡಿಗಳನ್ನು ದೋಚುವುದು ಮುಂತಾದ ಚಟುವಟಿಕೆಗಳಲ್ಲಿ ನಿರತರಾಗಿದ್ದರು. 1901-20ರ ನಡುವೆ ಉಂಟಾದ ಬೆಲೆಯೇರಿಕೆಯ ಲಾಭವು ಈ ಎರಡನೆ ಹಂತದ ರೈತರಿಗೆ ಮಾತ್ರ ಸಿಗುವ ಸಾಧ್ಯತೆಯಿತ್ತು. ಇವರಲ್ಲಿ ಸಾಕಷ್ಟು ಭೂಮಿಯಿದ್ದು ಮಾರುಕಟ್ಟೆಗಾಗಿಯೇ ಬೆಳೆ ಬೆಳೆಯುವ ಸಾಮರ್ಥ್ಯವಿತ್ತು. ಆದರೂ ಸದಾ ಏರುತ್ತಿದ್ದ ಗೇಣಿಯಿಂದಾಗಿ ಇವರ ಹೆಚ್ಚುವರಿ ಲಾಭವೆಲ್ಲ ಅದಕ್ಕೆ ವಿನಿಯೋಗವಾಗಿ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿತ್ತು. ಆದರೆ ಭೂಮಿಯ ಹಕ್ಕೂ ಇಲ್ಲದ ಆಹಾರ ಧಾನ್ಯಗಳ ಸಂಗ್ರಹವೂ ಇಲ್ಲದ ಮೊದಲ ಹಂತದ ರೈತರಿಗೆ'ಹೆಚ್ಚುವರಿ'ಗಿಂತ ತತ್‌ಕ್ಷಣದ ಸಮಸ್ಯೆಗಳೇ ಮುಖ್ಯವಾಗಿದ್ದವು. ಬೆಲೆಯೇರಿಕೆಯ ಪರಿಣಾಮದಿಂದ ಇವರ ಸ್ಥಿತಿ ಇನ್ನಷ್ಟು ಹದಗೆಟ್ಟಿತು. ಗೇಣಿಕೊಟ್ಟ ಬಳಿಕ ಅವರಿಗೆ ದೈನಂದಿನ ನಿರ್ವಹಣೆಯೇ ಕಷ್ಟವಾಗತೊಡಗಿತು. ರೈತರ ಈ ಗುಂಪೇ ಚಳವಳಿಯ ಪ್ರಮುಖ ಅಂಗವಾಗಿದ್ದು ದರೋಡೆ, ಲೂಟಿ ಮೊದಲಾದ ಇವರ ಚಟುವಟಿಕೆಗಳಿಂದಾಗಿ ಉದಾರವಾದಿಗಳ ಭೂಮಿಹಕ್ಕಿನ ಕೇಳಿಕೆಯೇ ಅರ್ಥಹೀನ ಎನಿಸಿತು.

ಭಿನ್ನ ಭಿನ್ನ ಸಾಮಾಜಿಕ ರಾಜಕೀಯ ಮೂಲಗಳಿಂದ ಬೆಳೆದು ಬಂದ ಭಿನ್ನ ಭಿನ್ನ ವರ್ಗದ ನಾಯಕತ್ವವೇ ಈ ಗೊಂದಲಕ್ಕೆ ಕಾರಣವೆನ್ನಬಹುದು. ಮೊದಲನೆ ವರ್ಗಕ್ಕೆ ಸೇರುವ ಗೌರಿಶಂಕರ ಮಿಶ್ರರಂತಹ ಕೆಲವು ನಾಯಕರು ವಕೀಲರಾಗಿದ್ದುದರಿಂದಲೂ ರೈತರ ಅಸಮಾಧಾನಗಳೆಲ್ಲ ಅವರಿಗೆ ತಮ್ಮ ವೃತ್ತಿ ಹಿತಾಸಕ್ತಿಯ ಭಾಗವಾಗಿಯೇ ಕಂಡಿದ್ದರೆ ಆಶ್ಚರ್ಯವಿಲ್ಲ.[22] ಇವರಲ್ಲಿ ಹೆಚ್ಚಿನವರು ನಗರದ ಮಧ್ಯಮ ವರ್ಗದಿಂದ ಬಂದವರಾಗಿದ್ದು ಗಾಂಧೀಜಿಯ ರಾಜಕೀಯ ವಿಚಾರಗಳಿಂದ ಪ್ರಭಾವಿತರಾಗಿ ಹಿಂಸಾಮಾರ್ಗದಿಂದ ಸದಾ ದೂರವಿರುವಂತೆ ರೈತರನ್ನು ಒತ್ತಾಯಿಸುತ್ತಿದ್ದರು. ಎರಡನೆ ವರ್ಗಕ್ಕೆ ಸೇರಬಹುದಾದ ನಾಯಕರೆಲ್ಲ ಸ್ಥಳೀಯರೂ, ಜನಸಾಮಾನ್ಯರಿಗೆ ಪರಿಚಿತರೂ ಸ್ಥಳೀಯ ಸಮಸ್ಯೆಗಳನ್ನು ಬಲ್ಲವರೂ ಆಗಿದ್ದರು. ಇಂತಹವರಲ್ಲಿ ಬಾಬಾ ರಾಮಚಂದ್ರ ಎನ್ನುವವರು ಮುಖ್ಯರಾಗಿದ್ದರು. ಇವರು ಒಂದರ್ಥದಲ್ಲಿ ಧಾರ್ಮಿಕ ಮುಖಂಡರೂ ಆಗಿದ್ದು ಉತ್ತರ ಪ್ರದೇಶದಾದ್ಯಂತ ಅದರಲ್ಲೂ ವಿಶೇಷವಾಗಿ ಔಧ್‌ನಲ್ಲಿ ಜನಪ್ರಿಯವಾಗಿದ್ದ ತುಲಸೀರಾಮಾಯಣವನ್ನು ಪ್ರವಚನ ಮಾಡುತ್ತಿದ್ದರು.[23] ಸಮಾಜದ ಅತ್ಯಂತ ಕೆಳವರ್ಗದ ಜನರೊಡನೆ ತಮ್ಮನ್ನು ಗುರುತಿಸಿಕೊಳ್ಳುತ್ತಿದ್ದ ಇವರು ಹಳ್ಳಿಗಳಲ್ಲೆಲ್ಲ ಸಂಚರಿಸಿ ತಮ್ಮ ಹಿಂಬಾಲಕರ ಸಂಖ್ಯೆಯನ್ನು ಹೆಚ್ಚಿಸಿಕೊಂಡಿದ್ದರು. ಇವರ ಯಶಸ್ಸಿಗೆ ಇವರು ಉಪಯೋಗಿಸಿಕೊಳ್ಳುತ್ತಿದ್ದ ಜಾತಿಯ ಒಗ್ಗಟ್ಟು[24] ಒಂದು ಕಾರಣವಾದರೆ ಹಳ್ಳಿಯ ಜನರಿಗೆ ಗಾಂಧೀಜಿಯ ಪ್ರತಿರೂಪದಂತೆ ಕಾಣಿಸಿದ ಇವರ ಆಕೃತಿಯು ಇನ್ನೊಂದು ಕಾರಣವೆನ್ನಬಹುದು. ಗಾಂಧೀಜಿಯವರೊಂದಿಗಿನ ಈ ಹೋಲಿಕೆಯು ಕೇವಲ ಆಕೃತಿಗೆ ಮಾತ್ರ ಸಂಬಂಧಿಸಿದ್ದಾಗಿದೆ. ಏಕೆಂದರೆ ಇವರು

---

22. ಪ್ರಾಣೆಗ್ರಾಹಿ, *ಅಗ್ರೇರಿಯನ್ ರಿಲೇಶನ್ಸ್ ಇನ್ ದಿ ಯು.ಪಿ.*, ಪುಟ 10-11.
23. ನೆಹರೂ, *ಆಟೋಬಯಾಗ್ರಫಿ*, ಪುಟ ೫೩; ಕ್ರಾವ್‌ಲಿ, *ಕಿಸಾನ್ ಸಭಾಸ್ ಇನ್ ದಿ ಯುನೈಟೆಡ್ ಪ್ರಾವಿನ್ಸಸ್*, ಪುಟ 102-4.
24. ಸಿದ್ದಿಕಿ, *ಪೆಸೆಂಟ್ ಮೂವ್‌ಮೆಂಟ್ ಇನ್ ಪ್ರತಾಪ್‌ಗಢ್*, ಪುಟ 316-17.

ರಾಯ್‌ಬರೇಲಿ ಹಾಗೂ ಪ್ರತಾಪಗಡ ಜಿಲ್ಲೆಗಳಲ್ಲಿ ರೈತರನ್ನು ಹಿಂಸಾತ್ಮಕ ಪ್ರತಿಭಟನೆಗಳಿಗೆ ಆಕ್ರಮಣಗಳಿಗೆ ಪ್ರಚೋದಿಸಿದ್ದಲ್ಲದೆ[25] ಒಂದು ರೀತಿಯ ವರ್ಗಸಂಘರ್ಷಕ್ಕೇ ಕಾರಣರಾಗಿದ್ದರು.

ಔಧ್‌ನ ರೈತರ ಸಮಸ್ಯೆಗಳಿಗಿರುವ ರಾಜಕೀಯ ಶಕ್ತಿಯನ್ನು ಉತ್ತರ ಪ್ರದೇಶದ ಕಾಂಗ್ರೆಸ್ ಮುಖಂಡರು ಬಹಳ ತಡವಾಗಿ ಗುರುತಿಸಿದರು. ಅವರು 1920-22ರಲ್ಲಿ ರೈತರನ್ನು ಸಂಘಟಿಸಲು ತೊಡಗಿದಾಗಲೇ ಅವರಿಗೆ ಗ್ರಾಮೀಣಮಟ್ಟದಲ್ಲಿದ್ದ ತಮ್ಮ ಸಂಘಟನೆಯ ದೌರ್ಬಲ್ಯ ಅರಿವಾದದ್ದು. ಅವರಿಗೆ ರೈತರನ್ನು 'ಅಹಿಂಸೆ'ಯ ಮಿತಿಯೊಳಗೆ ಇರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಮಾತ್ರವಲ್ಲದೆ ಚಳವಳಿಗೆ ತೊಡಗಿದಾಗಲೆಲ್ಲ ವರ್ಗಸಂಘರ್ಷದ ಸಮಸ್ಯೆಗಳನ್ನು ಕಾಂಗ್ರೆಸ್ ಉದ್ದೇಶಪೂರ್ವಕವಾಗಿಯೇ ಬದಿಗೆ ಸರಿಸುತ್ತಿರುವುದು ಸ್ಪಷ್ಟವಾಗತೊಡಗಿತು.[26] ಫೈಜಾಬಾದ್‌ನಲ್ಲಿ 1921ರಲ್ಲಿ ಗಾಂಧೀಜಿ ಮಾಡಿದ ಸಲಹೆಗಳಿಂದ ಇದು ಸ್ಪಷ್ಟವಾಗುತ್ತದೆ. ಕೆಟ್ಟ ಬಯ್ಗಳ ಭಾಷೆಯಿಂದ ಅನ್ಯಾಯವಾಗಿ ಜಮೀನ್ದಾರರ ಮೇಲೆ ಒತ್ತಡ ಹೇರುವುದು, ಸಾಮಾಜಿಕವಾಗಿ ಅವರನ್ನು ಬಹಿಷ್ಕರಿಸುವುದು ತಪ್ಪು ಎಂದು ಗಾಂಧೀಜಿ ಎಚ್ಚರಿಸಿದ್ದಲ್ಲದೆ ಎಲ್ಲಾ ರೀತಿಯ ಹಿಂಸೆಗಳಿಂದ ದೂರವಿರುವಂತೆ ಉಪದೇಶಿಸಿದ್ದರು.[27]

ಕಾಂಗ್ರೆಸ್ ಮತ್ತು ಕರನಿರಾಕರಣೆ ಚಳವಳಿ, 1930-32

1921ರಲ್ಲಿ ವ್ಯಾಪಕವಾಗಿ ಸ್ಫೋಟಗೊಂಡ ಅಸಹನೆಯಿಂದ ಗೊಂದಲಕ್ಕೀಡಾದ ಉತ್ತರ ಪ್ರದೇಶ ಸರಕಾರ ಔಧ್ ಗೇಣಿ ಶಾಸನವನ್ನು ತಿದ್ದುಪಡಿಮಾಡಿ ಗೇಣಿದಾರನಿಗೆ ಇನ್ನಷ್ಟು ರಕ್ಷಣೆ ಕೊಟ್ಟಿತು. ಇದರಿಂದಾಗಿ ಕನಿಷ್ಠ ಹತ್ತು ವರ್ಷಗಳ ಕಾಲ ಗೇಣಿದಾರನಿಗೆ ತನ್ನ ಜಮೀನಿನ ಮೇಲೆ ಕಾನೂನುಬದ್ಧ ಹಕ್ಕು ದೊರೆಯಿತಲ್ಲದೆ, ಅನೇಕ ಬಗೆಯ ನ್ಯಾಯಬದ್ಧವಲ್ಲದ ತೆರಿಗೆಯಿಂದಲೂ (ನಜ್ರಾನಾ ನ್ಯಾಯಬದ್ಧವಲ್ಲ ಎಂಬುದು) ವಿನಾಯಿತಿ ದೊರೆಯಿತು. ಆದರೂ,1920ರ ದಶಕದಲ್ಲಿ, ಔಧ್ ಪ್ರಾಂತದ ವ್ಯವಸಾಯೀ ರಚನೆಯಲ್ಲಾಗಲೀ, ವರ್ಗ ಸಂಬಂಧಗಳಲ್ಲಾಗಲೀ ಯಾವುದೇ ಬದಲಾವಣೆಗಳು ಆಗಲೇ ಇಲ್ಲ. ರೈತ ಸಮೂಹದಲ್ಲಿ ಅತೃಪ್ತಿ, ಅಸಹನೆ ಹೊಗೆಯಾಡುತ್ತಲೇ ಇದ್ದರೂ, ಅದು ಸ್ಫೋಟಗೊಳ್ಳಲಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ 'ರಚನಾತ್ಮಕ ಕಾರ್ಯಕ್ರಮ'ಗಳನ್ನು ಹಮ್ಮಿಕೊಳ್ಳಬೇಕೆಂಬ ಗಾಂಧೀಜಿಯವರ ಕರೆಯಿಂದಾಗಿ, ಕೆಲವು ಕಾರ್ಯಕರ್ತರು ಹಳ್ಳಿಗಳಿಗೂ ತಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿದರು. ಇದರಿಂದಾಗಿ, ಕನಿಷ್ಠ ಹಳ್ಳಿಗಳ ಮಟ್ಟದಲ್ಲಿ ಒಂದು ಕಾರ್ಯತಂಡ ನಿರ್ಮಾಣವಾಗುವಂತಾಯಿತು. ಕಾಂಗ್ರೆಸ್ಸಿಗೆ ಅಷ್ಟರವರೆಗೆ ಹಳ್ಳಿಗಳಲ್ಲಿ ಇಂತಹ ಒಂದು ಜಾಲ ಇದ್ದಿರಲಿಲ್ಲ.[28] ಸೋವಿಯತ್ ರಷ್ಯಾಕ್ಕೆ ಅಲ್ಪ ಅವಧಿಯ ಭೇಟಿನೀಡಿ ವಾಪಸಾದ ಜವಾಹರ್‌ಲಾಲ್ ನೆಹರೂರವರು, 1927-28ರಷ್ಟರಲ್ಲಿ ವ್ಯವಸಾಯೀ ಸಮಸ್ಯೆಗಳನ್ನು ಹೊಸದೃಷ್ಟಿಕೋನದಿಂದ ನೋಡಬೇಕೆಂದು

---

25. ಕ್ರಾವ್ಲಿ, *ಕಿಸಾನ್ ಸಭಾಸ್ ಇನ್ ದಿ ಯುನೈಟೆಡ್ ಪ್ರಾವಿನ್ಸಸ್,* ಪುಟ 104; ಪಾಣಿಗ್ರಾಹಿಯವರ ಪ್ರಕಾರ ಬಾಬಾ ರಾಮಚಂದ್ರ ಅವರು ಒಬ್ಬ ಗಾಂಧಿವಾದಿ 'ರಚನಾತ್ಮಕ ಕಾರ್ಯಕರ್ತ' ಮತ್ತು ಮೊದಮೊದಲು ಅವರು ವಿವಿಧ ವರ್ಗಗಳ ನಡುವೆ ಸಾಮರಸ್ಯವನ್ನು ಬೆಳೆಸುವ ಪ್ರಯತ್ನ ಮಾಡಿದ್ದರು. *ಅಗ್ರೇರಿಯನ್ ರಿಲೇಶನ್ಸ್ ಇನ್ ದಿ ಯು.ಪಿ.* ಪುಟ 12-13.

26. ಉದಾಹರಣೆಗೆ , *ದಿ ವ್ಯಾಸ್ ಆಫ್ ಫ್ರೀಡಮ್:ಸಿಲೆಕ್ಟೆಡ್ ಸ್ಪೀಚಸ್ ಆಫ್ ಪಂಡಿತ್ ಮೋತಿಲಾಲ್ ನೆಹರೂ,* ಕೆ.ಎಮ್. ಪಣಿಕ್ಕರ್ ಮತ್ತು ಎ. ಪೆರ್ಷದ್ (ಸಂ) ಬೊಂಬಾಯಿ, 1961, ಪುಟ 512-13.

27. *ಇನ್‌ಸ್ಟ್ರಕ್ಷನ್ಸ್ ಟು ಯು.ಪಿ. ಪೆಸೆಂಟ್ಸ್,* ಸಿಡಬ್ಲ್ಯುಎಮ್‌ಜಿ. ಸಂ. XIX, ಪುಟ 419-20; ಅಲ್ಲದೆ ಸಂ XX, ಪುಟ 138-40.

28. ನನ್ನ *ಅಗ್ರೇರಿಯನ್ ಮೂವ್‌ಮೆಂಟ್ಸ್ ಅಂಡ್ ಗಾಂಧಿಯನ್ ಪಾಲಿಟಿಕ್ಸ್,* ಎಂಬ ಪುಸ್ತಕದಲ್ಲಿ ಈ ವಿಷಯವನ್ನು ವಿವರವಾಗಿ ಚರ್ಚಿಸಿದ್ದೇನೆ. ಪುಟ 41-50, 95-100.

ಒತ್ತಾಯ ತರತೊಡಗಿದರು[29]. 1929-34ರ ಮುಗ್ಗಟ್ಟಿನಿಂದಾಗಿ ಬೆಲೆಕುಸಿತವು, ಉತ್ತರ ಪ್ರದೇಶ ಕಾಂಗ್ರೆಸ್ಸಿಗರಿಗೆ ವ್ಯವಸಾಯೀ ರಂಗದಲ್ಲಿರುವ ಅಸಹನೆಯನ್ನು ಬಳಸಿಕೊಳ್ಳಲು ಉತ್ತಮ ಅವಕಾಶ ಒದಗಿಸಿಕೊಟ್ಟಿತು.

ಔಧ್ ಪ್ರಾಂತದಲ್ಲಿ ಈ ಮುಗ್ಗಟ್ಟಿನ ಪರಿಣಾಮ ವಿವಿಧ ವರ್ಗಗಳ ಮೇಲೆ ಬೇರೆ ಬೇರೆ ರೀತಿಯಲ್ಲಿ ಆಯಿತು. ವಿಶಾಲ ಹಿಡುವಳಿ ಹೊಂದಿ, ಕೃಷಿ ಮಾಡದ ಭೂಮಾಲಕರಿಗೆ ಮೊದಮೊದಲು ಅಷ್ಟಾಗಿ ಈ ಮುಗ್ಗಟ್ಟಿನ ಪರಿಣಾಮ ಬಾಧಿಸಲಿಲ್ಲ. ಆದರೆ, ಅವರ ಒಕ್ಕಲುಗಳು ಗೇಣಿ ಕೊಡಲು ಅಶಕ್ತರಾದಾಗ ಮತ್ತು ಬದಲಿ ಒಕ್ಕಲುಗಳು ಒಟ್ಟು ಗೇಣಿದರದ ಅರ್ಧದಷ್ಟನ್ನು ಮಾತ್ರ ಕೊಡಲು ಪ್ರಾರಂಭಿಸಿದಾಗ ಇವರಿಗೂ ಆರ್ಥಿಕ ಮುಗ್ಗಟ್ಟಿನ ಬಿಸಿ ತಟ್ಟಿತು. ಮೊದಮೊದಲು ಬಡರೈತರಿಗೆ ಇದರಿಂದ ಲಾಭವೇ ಆಯಿತು. ಕೃಷಿಯಲ್ಲಿ ಕಳೆದುಕೊಂಡ ಅವರ ಆದಾಯವನ್ನು ಅವರು ಕೂಲಿ ಮಾಡಿ ತುಂಬಿಕೊಂಡರು. 1928ರವರೆಗೂ ಕೃಷಿ ಕೂಲಿ ಏರುತ್ತಾ ಹೋದುದಲ್ಲದೆ, ಅದು ಯಾವತ್ತೂ 1921ರ ಮಟ್ಟಕ್ಕಿಂತ ಕೆಳಗಿಳಿಯಲೇ ಇಲ್ಲ. (ನೋಡಿ: ಕೋಷ್ಟಕ 5.3) ಶ್ರೀಮಂತ ಹಾಗೂ ಮಧ್ಯಮ ವರ್ಗದ ರೈತರೇ ಈ ಮುಗ್ಗಟ್ಟಿನಿಂದ ಸಾಕಷ್ಟು ಬಲವಾದ ಹೊಡೆತ ತಿಂದರು.[30] ಈ ವರ್ಗಕ್ಕೆ ಮಾರುಕಟ್ಟೆಯ ಜೊತೆಗೆ ನೇರವಾದ ಸಂಬಂಧವಿದ್ದುದರಿಂದ ಬೆಲೆಗಳಲ್ಲಾಗುವ ಏರುಪೇರು ಇವರನ್ನು ತಕ್ಷಣ ತಟ್ಟುತ್ತಿತ್ತು. ಅಲ್ಲದೆ, ಗ್ರಾಮೀಣ ಪ್ರದೇಶದ ಜನರಲ್ಲಿ ಇವರು ಅತ್ಯಂತ ಅಧಿಕ ಸಾಲಗಾರರಾಗಿರುತ್ತಿದ್ದರು.[31] ಹೀಗಾಗಿ, ಮುಗ್ಗಟ್ಟಿನ ಅವಧಿಯಲ್ಲಾದ ಆರ್ಥಿಕ ಬದಲಾವಣೆಗಳು ಈ ವರ್ಗದ ಮೇಲೆ ಆಳವಾದ ಪರಿಣಾಮ ಬೀರಿದವು. 1932ರಷ್ಟರಲ್ಲಿ ಅಲ್ಪಾವಧಿ ಸಾಲದ ಶೇಕಡಾ 25ರಷ್ಟು ಹಾಗೂ ದೀರ್ಘಾವಧಿ ಸಾಲದ ಶೇಕಡಾ 7ರಷ್ಟು ಮಾತ್ರ ಮರುಪಾವತಿಯಾಗುತ್ತಿತ್ತು. ಅಲ್ಲದೆ, ಅಡವಿಟ್ಟ ಭೂಮಿಯೂ ಸಾಲಬಾಕಿಗಾಗಿ ಕ್ರಮೇಣ ಭೂಮಾಲಕರ ಹಾಗೂ ಲೇವಾದೇವಿದಾರರ ವಶಕ್ಕೆ ಬರತೊಡಗಿತು[32] ಹಳೆ ಬಾಕಿಗಾಗಿ ಒಕ್ಕಲೆಬ್ಬಿಸುವಿಕೆ ಗೇಣಿದಾರನಿಗೆ ಇನ್ನೊಂದು ಹೊಡೆತವಾಗಿತ್ತು. 1930-31ರಲ್ಲಿ, ಒಕ್ಕಲೆಬ್ಬಿಸುವುದಕ್ಕಾಗಿ ಔಧ್ ಪ್ರಾಂತದಲ್ಲಿ 31,383 ವ್ಯಾಜ್ಯಗಳು

---

29. ಜವಾಹರಲಾಲ ನೆಹರೂ, *ಇಂಡಿಯಾಸ್ ಫ್ರೀಡಮ್,* ಲಂಡನ್, 1962, ಪುಟ 14-17. ರಷ್ಯಾದ ಕುರಿತು ನೆಹರೂರವರ ಅಭಿಪ್ರಾಯಗಳಿಗಾಗಿ ನೋಡಿ, ಎಸ್. ಗೋಪಾಲ (ಸಂಪಾದನೆ) *ಸಿಲೆಕ್ಟೆಡ್ ವರ್ಕ್ಸ್ ಆಫ್ ಜವಾಹರಲಾಲ್ ನೆಹರೂ,* ನ್ಯೂಡೆಲ್ಲಿ, 1972ಸಂ. 11, ಪುಟ 369-75, 390-95, 403-16.

30. ವಾಣಿಜ್ಯ ಬೆಳೆಗಳಾದ ಹತ್ತಿ, ಹೊಗೆಸೊಪ್ಪು ಮತ್ತು ಸಕ್ಕರೆಯ ಬೆಲೆ ಬೇಳೆ ಕಾಳುಗಳ ಬೆಲೆಗಳಿಗಿಂತ ಹೆಚ್ಚು ಗಣನೀಯ ಪ್ರಮಾಣದಲ್ಲಿ ಕುಸಿದಿರುವುದನ್ನು ಗಮನಿಸಿದರೆ ಈ ಅಂಶ ಮನದಟ್ಟಾಗುತ್ತದೆ. ನೋಡಿ, *ಗವರ್ನಮೆಂಟ್ ಆಫ್ ಯು.ಪಿ.ಬ್ಯೂರೋ ಆಫ್ ಸ್ಟ್ಯಾಟಿಸ್ಟಿಕ್ಸ್ ಆಂಡ್ ಇಕನಾಮಿಕ್ ರಿಸರ್ಚ್,* ಬುಲೆಟಿನ್ ನಂ1, 1937, *ಅಗ್ರಿಕಲ್ಚರಲ್ ಪ್ರೈಸಸ್ ಇನ್‌ದಿ ಯುನೈಟೆಡ್ ಪ್ರಾವಿನ್ಸಸ್,* ಪುಟ 28-101; ಅಂತೆಯೇ *ರೆಂಟ್ ಆಂಡ್ ರೆವಿನ್ಯೂ ಪೇಪರ್ಸ್* ಕಲೆಕ್ಷನ್ ಆಫ್ ಸರ್ ಮಾಲ್ಕಮ್‌ಲೇಸ್ ಪೇಪರ್ಸ್ (ಪ್ರೈವೇಟ್), (ಹೈಲೆ ಪೇಪರ್ಸ್),ಇಂಡಿಯಾ ಆಫೀಸ್ ಲೈಬ್ರರಿ ಆಂಡ್ ರೆಕಾರ್ಡ್ಸ್, ಲಂಡನ್ ಸಂ XXIXA, ಪುಟ1. ಕೃಷಿ ಬೆಳೆಗಳ ಬೆಲೆ ಕುಸಿತ ಯು.ಪಿ.ಯಲ್ಲಿ ಮಾಡಿದಷ್ಟು ಹಾನಿಯನ್ನು ಇನ್ನಿತರ ಪ್ರಾಂತ್ಯಗಳಲ್ಲಿ ಮಾಡಿರಲಿಲ್ಲ: ನೋಡಿ, ಎಸ್.ಎನ್. ಸೇನ್‌ಗುಪ್ತಾರ *ದಿ ಡಿಪ್ರೆಶನ್,* ಆರ್. ಮುಖರ್ಜಿ ಸಂಪಾದಿಸಿದ *ಇಕನಾಮಿಕ್ ಪ್ರಾಬ್ಲೆಮ್ಸ್ ಆಫ್ ಮಾಡರ್ನ್ ಇಂಡಿಯಾ* ಲಂಡನ್, 1941, ಸಂ. 1, ಪುಟ 349.

31. ನೋಡಿ, *ರಿಪೋರ್ಟ್ ಆಫ್ ದಿ ಯು.ಪಿ. ಬ್ಯಾಂಕಿಂಗ್ ಎನ್‌ಕ್ವಯರಿ ಕಮಿಟಿ,* 1929-30 ಕಲ್ಕತ್ತಾ, 1930 ಸಂ. 1, ಪುಟ 103.

32. ಅದೇ, ಪುಟ 105. ಜೊತೆಗೆ ಪಿ.ಜೆ. ಥಾಮಸ್, *ರೂರಲ್ ಇಂಡೆಟೆಡ್‌ನೆಸ್* ಎಂಬ ಲೇಖನ. ಇದು ಆರ್. ಮುಖರ್ಜಿ ಸಂಪಾದಿಸಿದ *ಇಕನಾಮಿಕ್ ಪ್ರಾಬ್ಲೆಮ್ಸ್ ಆಫ್ ಮಾಡರ್ನ್ ಇಂಡಿಯಾ,* ಪುಟ 84, ಮತ್ತು ರಾಧಾಕಮಲ್ ಮುಖರ್ಜಿ, *ಲ್ಯಾಂಡ್ ಪ್ರಾಬ್ಲೆಮ್ಸ್ ಇನ್ ಇಂಡಿಯಾ,* ಲಂಡನ್, 1933, ಪುಟ 266-78. ಪಿ.ಡಿ. ರೀವ್ಸ್, *ಅಗ್ರೇರಿಯನ್ ಲೆಜಿಸ್ಲೇಶನ್ ಆಂಡ್ ರೂರಲ್ ಸೊಸೈಟಿ ಇನ್ ಉತ್ತರ ಪ್ರದೇಶ (ಇಂಡಿಯಾ)',* ಎಂ.ಎ ಪ್ರಬಂಧ, ಯೂನಿವರ್ಸಿಟಿ ಆಫ್ ಜಸ್ಮಾನಿಯಾ, 1959 ಪುಟ 82 ಮತ್ತು 125-26.

ದಾಖಲಾಗಿದ್ದವು.1926-27ರಲ್ಲಿ ಈ ಸಂಖ್ಯೆ ಬರೇ 24,061ರಷ್ಟಿತ್ತು.[33] ಹೀಗೆ, ವ್ಯಾಪಕವಾಗಿ ಆವರಿಸುತ್ತಿದ್ದ ಆರ್ಥಿಕ ಬಿಕ್ಕಟ್ಟಿನ ಈ ಪರಿಸ್ಥಿತಿಯನ್ನು ಉತ್ತರ ಪ್ರದೇಶ ಕಾಂಗ್ರೆಸ್ ತನ್ನ ರಾಜಕೀಯ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಪ್ರಯತ್ನಿಸಿತು. ಬರೇ ಕೆಲವು ಸಾಂವಿಧಾನಿಕ ಸುಧಾರಣೆಗಳಿಗಾಗಿ ನಡೆಸುವ ನಗರದ ಮಧ್ಯಮ ವರ್ಗದ ಹೋರಾಟವಾಗಿ ಮಾರ್ಪಡಬಹುದಾಗಿದ್ದ ಈ ಹೋರಾಟವು ನೆಹರೂರವರಿಂದಾಗಿ ಅಪಾರ ಸಂಖ್ಯೆಯ ರೈತಾಪಿ ಜನರನ್ನು ಒಳಗೊಳ್ಳುವಂತಾಯಿತು. ಕಾಂಗ್ರೆಸ್ಸಿನ ಒಳಗೇ 'ಎಡಪಂಥೀಯ' ಗುಂಪೊಂದನ್ನು ನೆಹರೂರವರು ರಚಿಸಿದರು[34]. ಇದರ ಹೆಚ್ಚಿನ ಸದಸ್ಯರು ಹಳ್ಳಿಗಳ ಸಮಸ್ಯೆಯ ಜೊತೆಗೆ ನಿಕಟ ಸಂಪರ್ಕ ಉಳ್ಳವರಾಗಿದ್ದು, 1920ರ ದಶಕದ ಮಧ್ಯದಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಗ್ರಾಮೀಣ ಸಂಪರ್ಕ ಉಳ್ಳವರಾಗಿದ್ದರು.

ಔಧ್ ಪ್ರಾಂತದಲ್ಲಿ 'ಕರನಿರಾಕರಣೆ' ಚಳುವಳಿ 1930ರ ಮಧ್ಯಭಾಗದಲ್ಲಿ ಪ್ರಾರಂಭವಾಯಿತು. ಇದು 1930ರಲ್ಲಿ ಕಾಂಗ್ರೆಸ್ ಸಂಘಟಿಸ ಬಯಸಿದ ಸವಿನಯ ಕಾಯಿದೆಭಂಗ ಚಳುವಳಿಗೆ ಒಂದು ಪೀಠಿಕೆಯಾಗಿತ್ತು. ಈ ಚಳುವಳಿ ಮೊದಲು ಮೋತಿಲಾಲ್ ನೆಹರೂರವರ ಆಶೀರ್ವಾದದಿಂದ ರಾಯ್‌ಬರೇಲಿ ಜಿಲ್ಲೆಯಲ್ಲಿ ರಫಿ ಅಹಮ್ಮದ್ ಕಿದ್ವಾಯಿಯವರಿಂದ ಪ್ರಾರಂಭಿಸಲ್ಪಟ್ಟಿತು. ಇಡೀ ರೈತ ವರ್ಗ ಗೇಣಿ ಕೊಡುವುದನ್ನು ನಿಲ್ಲಿಸುವಲ್ಲಿ ಈ ಚಳುವಳಿ ಸಫಲವಾಯಿತು. ಜವಾಹರಲಾಲ್ ನೆಹರೂರವರು ಫೆಬ್ರವರಿ ತಿಂಗಳಿನಲ್ಲಿ ರಾಯ್‌ಬರೇಲಿ ಜಿಲ್ಲೆಯಾದ್ಯಂತ ಸಂಚರಿಸಿ, ಏರಿದ ಗೇಣಿ ಕೊಡದಂತೆ ರೈತರಿಗೆ ಸಲಹೆ ಕೊಟ್ಟರು. ಉತ್ತರ ಪ್ರದೇಶ ಕಾಂಗ್ರೆಸ್ ಕಮಿಟಿ ಅನಂತರ ನೆಹರೂರವರ ಅಭಿಪ್ರಾಯವನ್ನು ಒಂದು ಠರಾವಿನ ಮೂಲಕ ಅನುಮೋದಿಸಿತಲ್ಲದೆ, ಏರಿದ ಗೇಣಿ ಹಾಗೂ ಕಂದಾಯಗಳನ್ನು ಕೊಡದಂತೆ ರೈತ ಹಾಗೂ ಭೂಮಾಲಿಕರಿಬ್ಬರನ್ನೂ ಕೇಳಿಕೊಂಡಿತು.[35] ಆದರೆ, ಜಮೀನ್ದಾರರು ಮಾತ್ರ ಸರಕಾರಕ್ಕೆ ಬಾಕಿ ಕಂದಾಯ ಪಾವತಿ ಮಾಡಿಬಿಟ್ಟರು. ರೈತರು ಮಾತ್ರ ಗೇಣಿ ಕೊಡಲೇ ಇಲ್ಲ. ಆದುದರಿಂದ,'ಕರನಿರಾಕರಣೆ' ಚಳುವಳಿ ವಾಸ್ತವವಾಗಿ 'ಗೇಣಿ ನಿರಾಕರಣೆ' ಚಳುವಳಿಯಾಗಿ ಮಾರ್ಪಟ್ಟಿತ್ತು. ಹೀಗೆ, ವಿವಿಧ ವರ್ಗ ಹಿತಾಸಕ್ತಿಗಳ ತಾಕಲಾಟವನ್ನು ನಿವಾರಿಸಲು ಚಳುವಳಿಯ ನೇತಾರರು ಏನನ್ನೂ ಮಾಡಲು ಸಾಧ್ಯವಾಗಲಿಲ್ಲ.[36]

---

33. *ರಿಪೋರ್ಟ್ ಆನ್ ದಿ ಆಡ್ಮಿನಿಸ್ಟ್ರೇಶನ್ ಆಫ್ ಯು.ಪಿ.*. 1926-27 ಅಲಹಾಬಾದ್, ಪುಟ 19-20; ಅದೇ, 1927-28, ಪುಟ 17-18. ಅದೇ, 1928-29, ಪುಟ 18-19, ಅದೇ, 1929-30ಪುಟ 19-21; ಮತ್ತು ಅದೇ, 1930-31, ಪುಟ 12-13.
34. ಈ ಘಟನೆಗಾಗಿ ನೋಡಿ : ಗವರ್ನಮೆಂಟ್ ಆಫ್ ಇಂಡಿಯಾ, ಹೋಮ್ ಡಿಪಾರ್ಟ್‌ಮೆಂಟ್ ಫೈಲ್ ನಂ. 1/28 (ಪೊಲಿಟಿಕಲ್) (ಇನ್ನು ಮುಂದೆ ಜಿ.ಒ.ಐ. ಹೋಮ್), ಜನವರಿ 1928, ಉತ್ತರ ಪ್ರದೇಶದ ರಾಜಕೀಯ ಪರಿಸ್ಥಿತಿಯ ಮೇಲೆ ಹದಿನೈದು ದಿನಕ್ಕೊಮ್ಮೆ ಪ್ರಕಟವಾಗುತ್ತಿದ್ದ ವರದಿಗಳು ಮತ್ತು ಎಪ್ರಿಲ್-ಜುಲೈ 1928, ಹಾಗೂ ಅಕ್ಟೋಬರ್ 1928. ಜೊತೆಗೇ ನೋಡಿ : ರಿಪೋರ್ಟ್ ಆನ್ ದಿ ಡೆಲ್ಲಿ ಪ್ರೊವಿನ್ಸಿಯಲ್ ಪೊಲಿಟಿಕಲ್ ಕಾನ್‌ಫರೆನ್ಸ್ (ಮೀರತ್ 13-15 ಅಕ್ಟೋಬರ್1928), ಪ್ರೆಸಿಡೆಂಟ್ ಪಂಡಿತ್ ಜವಾಹರಲಾಲ್ ನೆಹರೂ, ರೆಗ್ಯುಲೇಶನ್ ನಂ 11, ಮೀರತ್ ಕಾನ್‌ಸ್ಪಿರೆಸಿ ಕೇಸ್ ಎಕ್ಸಿಬಿಟ್ಸ್ (ಎಮ್.ಸಿ.ಸಿ.ಇ)ದಲ್ಲಿ, ಯೂನಿವರ್ಸಿಟಿ ಆಫ್ ಸಸೆಕ್ಸ್ ಮೈಕ್ರೋಫಿಲ್ಮ್ ಯೂನಿಟ್, 1x (ಹಿಂದಿಯಲ್ಲಿದ್ದ ಪ್ರಚಾರ ಸಾಮಗ್ರಿಗಳ ಇಂಗ್ಲೀಷ್ ಅನುವಾದ),ಪುಟ 176-ಟಿ, ಪುಟ 5, ಮತ್ತು 22ನೆಯ ಯು.ಪಿ. ಪ್ರಾವಿನ್ಸಿಯಲ್ ಪೊಲಿಟಿಕಲ್ ಕಾನ್‌ಫರೆನ್ಸ್ (ಝೂನ್ಸಿ, 27-9 ಅಕ್ಟೋಬರ್, 1928, ಪ್ರೆಸಿಡೆಂಟ್ ಜೆ. ನೆಹರು) ಅದೇ ಸಂ. ಪುಟ 428 - ಟಿ, ಪುಟ 60.
35. ನೋಡಿ ರಫಿ-ಯಾನ್, *ಲೈಫ್ ಅಂಡ್ ಟೈಮ್ಸ್ ಆಫ್ ಎ ಗ್ಯಾಡ್‌ಪ್ಲಾ*; ಸ್ಟೋರಿ ಆಫ್ ರಫಿ ಅಹಮದ್ ಕಿದ್ವಾಯಿ ಪಾಟ್ III, ನ್ಯಾಶನಲ್ ಹೆರಾಲ್ಡ್, ಲಕ್ನೋ, 26 ಅಕ್ಟೋಬರ್ 1972;ಮತ್ತು ಜಿ.ಒ.ಐ. ಹೋಮ್ 18/111 (ಪೋಲ್), ಫೆಬ್ರವರಿ 1930.
36. ನೆಹರೂ, *ಆಟೋಬಯೋಗ್ರಫಿ* ಪುಟ 26-37.

ಏಪ್ರಿಲ್ 1930ರಲ್ಲಿ ಗಾಂಧೀಜಿಯವರಿಂದ ಉದ್ಘಾಟಿಸಲ್ಪಟ್ಟ ಸವಿನಯ ಕಾಯಿದೆಭಂಗ ಚಳುವಳಿ ಉಪ್ಪಿನ ಕಾನೂನುಗಳ ಉಲ್ಲಂಘನೆಗೆ ಮಾತ್ರ ಸೀಮಿತಗೊಂಡಿತು. ರೈತವರ್ಗದಲ್ಲಿ ಬಲಗೊಳ್ಳುತ್ತಿದ್ದ ಅಸಹನೆಯನ್ನು ಮೂಲೆಗೊತ್ತುವ ಉದ್ದೇಶದಿಂದ ಈ ಸಾಂಕೇತಿಕ ಪ್ರತಿಭಟನೆಯನ್ನು ಯೋಜಿಸಲಾಗಿತ್ತು. ಆದರೆ, ಉತ್ತರ ಪ್ರದೇಶದಲ್ಲಿ, ಈ ಪ್ರಯತ್ನ ಕಾಂಗ್ರೆಸ್ಸಿಗೇ ತಿರುಗುಬಾಣವಾಗಿ ಪರಿಣಮಿಸಿತು. ಸವಿನಯ ಕಾಯಿದೆಭಂಗ ಚಳುವಳಿ ಯಾಂತ್ರಿಕ ಪ್ರತಿಭಟನೆಯಾಗುತ್ತಾ ಹೋದಂತೆ ಕರನಿರಾಕರಣೆ ಹೋರಾಟವೂ ಹಿನ್ನೆಲೆಗೆ ಸರಿಯಿತು. ಉತ್ತರ ಪ್ರದೇಶದಲ್ಲಿ 1930ರ ಹೊತ್ತಿಗೆ ಸವಿನಯ ಕಾಯಿದೆಭಂಗ ಚಳುವಳಿ ಬರೇ ನಗರ ಪ್ರದೇಶಗಳಿಗೆ ಸೀಮಿತಗೊಂಡಿತ್ತು. ರೈತ ಒಕ್ಕಲುಗಳನ್ನು ಇದರಲ್ಲೂ ಭಾಗವಹಿಸುವಂತೆ ಕಾಂಗ್ರೆಸ್ ಪ್ರಯತ್ನಿಸಿದರೂ, ಅಕ್ಟೋಬರ್ ತಿಂಗಳಿನವರೆಗೂ ಹಳ್ಳಿಗಳಲ್ಲಿ ಇದಕ್ಕೆ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಲಿಲ್ಲ. ಅಕ್ಟೋಬರ್ ತಿಂಗಳಿನಲ್ಲಿ ಜೈಲಿನಿಂದ ಬಿಡುಗಡೆಯಾದ ಒಂದು ವಾರದ ನಂತರ ನೆಹರೂರವರು ಕರನಿರಾಕರಣೆ ಚಳುವಳಿಯನ್ನು ಪ್ರಾರಂಭಿಸಿದರು. ಆದಾಗ್ಯೂ, ನವಂಬರ್ ತಿಂಗಳ ಅಂತ್ಯದ ಹೊತ್ತಿಗೆ ಬರೇ 6249 ಕಾಂಗ್ರೆಸ್ ಕಾರ್ಯಕರ್ತರಷ್ಟೇ ಬಂಧನಕ್ಕೊಳಗಾಗಿದ್ದರು.[37] ಸವಿನಯ ಕಾಯಿದೆಭಂಗ ಚಳುವಳಿಯ ಮೊದಲ ಹಂತ ಗ್ರಾಮೀಣ ಜನಸಮುದಾಯದ ಮೇಲೆ ಯಾವುದೇ ಪ್ರಭಾವವನ್ನೂ ಬೀರಿರಲಿಲ್ಲ.

1930ರ ಕೊನೆಯ ಭಾಗದಲ್ಲಷ್ಟೇ ಕಾಂಗ್ರೆಸ್ಸಿಗೆ ರೈತವರ್ಗದಿಂದ ಸಹಕಾರ ಪಡೆದುಕೊಳ್ಳಲು ಸಾಧ್ಯವಾಯಿತು. ಗೇಣಿ ವಸೂಲಿ ಕಷ್ಟವಾಗುತ್ತಾ ಹೋದಂತೆ ಒಕ್ಕಲೆಬ್ಬಿಸುವಿಕೆಯ ಪ್ರಮಾಣವೂ ಹೆಚ್ಚತೊಡಗಿತು. ವಾಣಿಜ್ಯ ಬೆಳೆಗೆ ಮಾರುಹೋಗಿದ್ದ ಗಣನೀಯ ಪ್ರಮಾಣದ ರೈತರು ಮಾರುಕಟ್ಟೆಯ ಏರಿಳಿತಗಳಿಂದ ತಮ್ಮ ಆದಾಯದಲ್ಲಿ ಸಾಕಷ್ಟು ಸೋಲು ಅನುಭವಿಸಲೇಬೇಕಾಯಿತು. ರಾಜಕೀಯ ರಂಗದಲ್ಲಂತೂ, ಸೆರೆಮನೆಯಿಂದ ಬಿಡುಗಡೆಯಾಗಿ ಬಂದ ಕಾರ್ಯಕರ್ತರಿಂದಾಗಿ ಹಳ್ಳಿಗಾಡಿನಲ್ಲಿ ಪೂರ್ಣಪ್ರಮಾಣದಲ್ಲಿ ಕೆಲಸಮಾಡಲು ಸಿದ್ಧರಾದ ಸ್ವಯಂಸೇವಕರ ಸಂಖ್ಯೆ ಸಾಕಷ್ಟು ಏರಿತು. ಈ ಅಸಮಾಧಾನವನ್ನು ನಿಗ್ರಹಿಸಲು ಸರಕಾರ1931ರಲ್ಲಿ ಕೈಗೊಂಡ ಕ್ರಮಗಳು ಬರೇ ತಾತ್ಕಾಲಿಕವಾಗಿ ಸಫಲವಾದುವು. ಮಾರ್ಚ್ 1931ರಲ್ಲಾದ ಗಾಂಧಿ-ಇರ್ವಿನ್ ಒಪ್ಪಂದದಿಂದ ಕರನಿರಾಕರಣೆ ಚಳುವಳಿ ಸ್ವಲ್ಪಕಾಲ ಸ್ಥಗಿತಗೊಂಡಿತು.[38]
ಅದೇ ಹೊತ್ತಿಗೆ, ಕಂದಾಯ ಮಾಫಿಯ ಕೊಡುಗೆಗೆ ಪ್ರತಿಯಾಗಿ ಗೇಣಿ ಮಾಫಿ ಮಾಡಲು ಭೂಮಾಲಕರನ್ನು ಕಾಂಗ್ರೆಸ್ ಒತ್ತಾಯಿಸಬಹುದೆಂಬ ಸರಕಾರದ ಆಸೆ ನೆರವೇರಲಿಲ್ಲ[39] 'ವ್ಯವಸಾಯೀ ಸಂಕಷ್ಟಗಳ ಅಧ್ಯಯನಕ್ಕೆಂದು ರಚಿಸಲ್ಪಟ್ಟ ಕಾಂಗ್ರೆಸ್ಸಿನ ಸಮಿತಿಯೊಂದು ಔಧ್ ಪ್ರಾಂತದ ರೈತರಿಗೆ ಬರೇ ಸ್ವಲ್ಪ ಪ್ರಮಾಣದ ಪರಿಹಾರ ದೊರಕಿತ್ತು ಎಂಬುದನ್ನು ಒತ್ತಿಹೇಳಿತು[40]. ಉತ್ತರ ಪ್ರದೇಶ ಕಾಂಗ್ರೆಸ್ ನೆಹರೂರವರ ನಿರ್ದೇಶನದಂತೆ

---

37. ಅದೇ ಪುಟ 231, ಜೊತೆಗೆ ಜಿ.ಒ.ಇ. ಹೋಮ್ 18/x-18/XII (ಪೋಲ್) ಸೆಪ್ಟೆಂಬರ-ನವಂಬರ 1930. ಈ ಹಂತದಲ್ಲಿ ಯು.ಪಿ. ಸರಕಾರ ಚಳವಳಿ ನಿರತರನ್ನು ಬಂಧಿಸುವ ಸಂದರ್ಭಗಳನ್ನು ಉದ್ದೇಶಪೂರ್ವಕವಾಗಿ ತಪ್ಪಿಸಿಕೊಳ್ಳುತ್ತಿತ್ತು. ಆ ಮೂಲಕ ಕರನಿರಾಕರಣೆ ಚಳುವಳಿಯ ತೀವ್ರತೆಯನ್ನು ಅಲಕ್ಷಿಸುವುದು ಅದರ ಉದ್ದೇಶವಾಗಿತ್ತು.

38. ಗೋಪಾಲ್, *ವೈಸರಾಯಲ್ಟಿ ಆಫ್ ಲಾರ್ಡ್ ಇರ್ವಿನ್*, ಪುಟಗಳು 54-70 ಮತ್ತು 80-87.

39. ನೋಡಿ ಯು.ಪಿ. ಸರಕಾರದ ಸ್ಟೇಟ್‌ಮೆಂಟ್ ಆಫ್ ದಿ ಕೇಸ್ ರಿಗಾರ್ಡಿಂಗ್ ದಿ ನೋ-ರೆಂಟ್ ಕ್ಯಾಂಪೆಯ್ನ, ಲಕ್ನೋ, 1931, ಪುಟ 4. ಹಳೆ ಬಾಕಿ ಬಗೆಗಿನ ಈ ರಿಯಾಯತಿಯನ್ನು 1931ರ ಮೇ ಮೊದಲ ಭಾಗದಲ್ಲೇ ಘೋಷಿಸಲಾಯಿತು.

40. ಯುನೈಟೆಡ್ ಪ್ರಾವಿನ್ಸಸ್ ಪ್ರಾವಿನ್ಶಿಯಲ್ ಕಾಂಗ್ರೆಸ್ ಕಮಿಟಿ (ಯು.ಪಿ.ಪಿ.ಸಿ.ಸಿ.), ಅಗ್ರೇರಿಯನ್ ಡಿಸ್ಟ್ರೆಸ್ ಇನ್ ದಿ ಯುನೈಟೆಡ್ ಪ್ರಾವಿನ್ಸೆಸ್, ಅಲಹಾಬಾದ್, 1931,

ಪುಟ 12-13. ವಿವರಗಳಿಗಾಗಿ ನೋಡಿ ಹೈಲೇ ಪೇಪರುಗಳು XXIXA; ಜಿ.ಒ. ನಂ2548-ಸಿ, ಏಪ್ರಿಲ್ 1931, ಪುಟ 6; ಮತ್ತು ಗವರ್ಮೆಂಟ್ ಆಫ್ ದಿ ಯುಪಿ, ರೆಂಟ್ ಆಂಡ್ ರೆವಿನ್ಯೂ ಪ್ರಾಬ್ಲೆಮ್ಸ್ ನೈನಿತಾಲ್, 1934, ಪುಟ 5-6.

ಗ್ರಾಮೀಣ ಪ್ರದೇಶದಲ್ಲಿ ಚಳುವಳಿಯನ್ನು ತೀವ್ರಗೊಳಿಸಿತು. ಗೇಣಿಗೆ ಸಂಬಂಧಿಸಿದಂತೆ, ಕೆಲವು ಕಾಂಗ್ರೆಸ್ ನಾಯಕರು ಭೂಮಾಲಕ ಹಾಗೂ ಒಕ್ಕಲುಗಳ ಮಧ್ಯೆ ಒಂದು ಒಪ್ಪಂದಕ್ಕೆ ಪ್ರಯತ್ನಿಸಿದರೆ[41], ಕಾಂಗ್ರೆಸ್ಸಿನ ಪ್ರಾಂತ ಹಾಗೂ ರಾಷ್ಟ್ರ ಮಟ್ಟದ ನಾಯಕರು ಸರಕಾರದ ಜತೆಗೆ ರಾಜಿಯ ಕುರಿತು ತೀವ್ರ ಗಮನ ಹರಿಸಿದ್ದರು. ಮೇ 1931ರಲ್ಲಿ, ಗಾಂಧೀಜಿಯವರು ಉತ್ತರ ಪ್ರದೇಶದ ರಾಜ್ಯಪಾಲ ಮಾಲ್ಕನ್ ಹೈಲಿಯವರನ್ನು ಭೇಟಿಯಾಗಿ, ರೈತರು ಯಾವುದೇ ಪ್ರತೀಕಾರಕ್ರಮ ಕೈಗೊಳ್ಳದೆ ಗೇಣಿ ಕೊಡಬೇಕೆಂದು ಕರೆಕೊಟ್ಟರು.[42] ನೆಹರೂರವರು ಈ ವಿಷಯದಲ್ಲಿ ತೀರ ಸಂದಿಗ್ಧಕ್ಕೊಳಗಾದರು; ಅವರು ಭೂಮಾಲಕರ ವಿರುದ್ಧವಾಗಿಯೇ ಮಾತನಾಡಿದರು. ಅದೇ ಹೊತ್ತಿಗೆ ನೇರ ಸಂಘರ್ಷವನ್ನು ಪ್ರಚೋದಿಸುವ ಯಾವ ಸಲಹೆಯನ್ನೂ ಅವರು ರೈತರಿಗೆ ಕೊಡಲಿಲ್ಲ. ಇರ್ವಿನ್ ಮತ್ತು ಹೈಲಿಯವರ ಜೊತೆಗಿನ ಗಾಂಧೀಜಿಯವರ ಒಪ್ಪಂದದಿಂದಾಗಿ, ನೆಹರೂ ಮತ್ತು ಅವರ 'ಎಡಪಂಥೀಯ' ಗುಂಪಿನ ಗೆಳೆಯರಿಗೆ ಉತ್ತರ ಪ್ರದೇಶದಲ್ಲಿ ಮುಕ್ತವಾಗಿ ಕರನಿರಾಕರಣೆ ಚಳುವಳಿಯನ್ನು ಮುಂದರಿಸಲು ಸಾಧ್ಯವಾಗಲಿಲ್ಲ ಎಂಬ ಅಭಿಪ್ರಾಯಕ್ಕೆ ಬರಬಹುದು.

ಸೆಪ್ಟೆಂಬರ್ 1931ರ ಅಂತ್ಯಕ್ಕೆ ಚಳುವಳಿಯ ನಿರಾತಂಕ ಮುಂದುವರಿಕೆಗೆ ಇದ್ದ ತೊಡಕುಗಳು ನಿವಾರಣೆಯಾದವು. ಇರ್ವಿನ್‌ರ ಬದಲಿಗೆ ವಿಲ್ಲಿಂಗ್‌ಡನ್ ವೈಸ್‌ರಾಯಿಯಾಗಿ ಬಂದು, ಗಾಂಧೀಜಿಯವರು ಎರಡನೆ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಲಂಡನ್‌ಗೆ ಹೋದಾಗ, ಕಾಂಗ್ರೆಸ್ ಹಾಗೂ ಸರಕಾರಗಳೆರಡೂ ಹೆಚ್ಚು ಮುಕ್ತವಾಗಿ ಚಟುವಟಿಕೆಗಳಲ್ಲಿ ತೊಡಗಲು ಸಾಧ್ಯವಾಯಿತು.[43] ದಶಂಬರ 5, 1931ರಂದು ಉತ್ತರ ಪ್ರದೇಶದ ಕಾಂಗ್ರೆಸ್ ಕಾರ್ಯಕಾರಿಣಿ ರೈಬರೇಲಿ ಹಾಗೂ ಔಧ್‌ನ ಉನ್ನಾವೋ ಜಿಲ್ಲೆಗಳಲ್ಲಿ ಕರನಿರಾಕರಣೆ ಚಳುವಳಿಯನ್ನು ಪುನಃ ತೀವ್ರಗೊಳಿಸುವ ನಿರ್ಧಾರ ತೆಗೆದುಕೊಂಡಿತು. ಅಲ್ಲದೆ, ಆಗ್ರಾ ಪ್ರಾಂತದ ಅಲಹಾಬಾದ್ ಹಾಗೂ ಇಟಾವಾಗಳಲ್ಲೂ ಈ ಹೋರಾಟವನ್ನು ವಿಸ್ತರಿಸಲು ತೀರ್ಮಾನಿಸಿತು.[44]

ಪುನಃ ತೀವ್ರಗೊಂಡ ಸವಿನಯ ಕಾಯಿದೆಭಂಗ ಚಳುವಳಿ ಉತ್ತರ ಪ್ರದೇಶದಲ್ಲಿ 1931ರ ಮಧ್ಯಭಾಗದವರೆಗೂ ಮುಂದುವರಿಯಿತು. ಈ ಬಾರಿ ನಗರ ಹಾಗೂ ಹಳ್ಳಿಗಳಿಂದ ಕಾಂಗ್ರೆಸ್ಸಿಗೆ ಬೆಂಬಲ ದೊರೆಯಿತು. ದಶಂಬರ 1931 ಮತ್ತು ಜುಲೈ 1932ರ ನಡುವೆ ಉತ್ತರ ಪ್ರದೇಶದಲ್ಲಿ10,000ಕ್ಕಿಂತಲೂ ಹೆಚ್ಚು ಕಾಂಗ್ರೆಸ್ ಸ್ವಯಂಸೇವಕರು ಮತ್ತು ಚಳುವಳಿಗಾರರ ಮೇಲೆ ಮೊಕದ್ದಮೆ ಹೂಡಲಾಗಿತ್ತು. ಕುತೂಹಲದ ವಿಷಯವೆಂದರೆ, ಮಾರ್ಚ್ 1931ರಲ್ಲಿ ಉತ್ತರ ಪ್ರದೇಶದಲ್ಲಿ ಮೊಕದ್ದಮೆ ಹೂಡಲಾದ ಒಟ್ಟು 2004

---

41. ಹೈಲೆ ಟು ಜಿ. ಡಾಸನ್, 26 ಏಪ್ರಿಲ್ 1931, *ಹೈಲೆ ಟು ಇರ್ವಿನ್*, 27 ಏಪ್ರಿಲ್ 1931, *ಹೈಲೆ ಪೇಪರ್ಸ್*, XX ಪುಟ 19-20, 30.

42. ನೋಡಿ *ಗಾಂಧೀಸ್ ಮನಿಫೆಸ್ಟೋ ಟು ದಿ ಕಿಸಾನ್ಸ್* 23ಮೇ, 1931, ಯು.ಪಿ.ಸಿ.ಸಿಯಲ್ಲಿ ಅಗ್ರೇರಿಯನ್ ಡಿಸ್ಟ್ರೆಸ್, ಅಪೆಂಡಿಕ್ಸ್ XIV; ಜೊತೆಗೆ ನೋಡಿ *ಹೈಲೆ ಪೇಪರ್ಸ್*, XX, ಪುಟ 157-58.

43. ಉದಾಹರಣೆಗೆ ನೋಡಿ, *ವಿಲ್ಲಿಂಗ್‌ಡನ್ ಟು ಹೈಲೆ* 17ಮತ್ತು 22 ಜುಲೈ, 1931, *ಹೈಲೆ ಟು ವಿಲ್ಲಿಂಗ್‌ಡನ್*, 27, ಆಗೋಸ್ತು 1931, *ಹೈಲೆಟು ಜಿ.ಟಿ.ಗ್ರಿನ್*, 10ಸೆಪ್ಟೆಂಬರ್, 1931, *ಹೈಲೆಟು ಹೆಚ್. ಜಿ. ಹೇಗ್*, 10, ಅಕ್ಟೋಬರ , 1931, *ಹೈಲೆ ಪೇಪರ್ಸ್*, XXIA, ಪುಟ 313, 337-38, 459ಮತ್ತು XXII ಪುಟ 482, 522.

44. *ಹೈಲೆ ಟು ಇ.ಸಿ. ಮಿವಿಲ್*, 6, ಡಿಸೆಂಬರ್, 1931, *ಹೈಲೆ ಪೇಪರ್ಸ್*, XXII ಪುಟ, 607. ಅಲಹಾಬಾದ್ ಜಿಲ್ಲೆಯಲ್ಲಿ ನವಂಬರ್ 16, 1931ರಂದು ಉತ್ತರಪ್ರದೇಶ ಕಾಂಗ್ರೆಸ್ ಕರ ನಿರಾಕರಣೆ ಚಳುವಳಿಯನ್ನು ಪ್ರಾರಂಭಿಸಿತು: *ಲೀಡರ್* (ಅಲಹಾಬಾದ್), 18, ನವಂಬರ್ 1931, ಪುಟ 1.

ರಾಜಕೀಯ ಅಪರಾಧಗಳಲ್ಲಿ 1397 (ಶೇಕಡಾ 69ಕ್ಕಿಂತಲೂ ಹೆಚ್ಚು) ರಷ್ಟು ಮಂದಿ ಸಣ್ಣರೈತರು ಅಥವಾ ಕೃಷಿಕಾರ್ಮಿಕರಾಗಿದ್ದರು.[45] ಆದರೆ ಇವರನ್ನು ಕೆಲವೊಮ್ಮೆ ಕಾಂಗ್ರೆಸ್ ಪಾರ್ಟಿ ಚಳುವಳಿಯಲ್ಲಿ ಭಾಗವಹಿಸಲಿಕ್ಕಾಗಿಯೇ ನೇಮಕ ಮಾಡಿಕೊಳ್ಳುತ್ತಿತ್ತು. ಇವರಲ್ಲದೆ, ಆರ್ಥಿಕ ಹಿಂಜರಿತದಿಂದ ಸಾಕಷ್ಟು ಸಂಕಷ್ಟಕೀಡಾಗಿದ್ದ ಶ್ರೀಮಂತ ಹಾಗೂ ಮಧ್ಯಮ ರೈತರೂ ಕೂಡಾ 1930-32ರ ಕರನಿರಾಕರಣೆ ಚಳುವಳಿಯ ಬೆನ್ನೆಲುಬಾಗಿದ್ದರು.

ಕರನಿರಾಕರಣೆ ಚಳವಳಿಗೆ ಸ್ವಯಂಸೇವಕರಾಗಿ ಕಾಂಗ್ರೆಸ್ ನೇಮಕ ಮಾಡಿದ ಹೆಚ್ಚಿನವರು ಕಾಲೇಜು ಹಾಗೂ ಪಟ್ಟಣದ ವಿಶ್ವವಿದ್ಯಾನಿಲಯಗಳಿಂದ ಬಂದವರಾಗಿದ್ದರು. ಇವರಲ್ಲಿ ಹೆಚ್ಚಿನವರು ಸ್ಥಳೀಯರೂ ಆಗಿರುತ್ತಿದ್ದರು.[46] ಈ ಬಾರಿ ಚಳುವಳಿಯ ನೇತೃತ್ವ ನಗರದ ಮಧ್ಯಮ ವರ್ಗದ ವೃತ್ತಿಪರ ರಾಜಕಾರಣಿಗಳ ಕೈಯಲ್ಲೇ ಇತ್ತು. ಇವರಿಗೆ ರೈತರ ಸಂಪರ್ಕವೂ ಇರುತ್ತಿತ್ತು. ಏಕೆಂದರೆ, ಇವರಲ್ಲಿ ಹೆಚ್ಚಿನವರಿಗೆ ಸ್ವತಃ ಸಣ್ಣ ಭೂಮಾಲಿಕರಾಗಿ ಅಥವಾ ವಕೀಲರಾಗಿ ರೈತರ ಸಮಸ್ಯೆಗಳಲ್ಲಿ ವಿಶೇಷ ಆಸಕ್ತಿ ಇರುತ್ತಿತ್ತು. ಆದರೆ ಒಕ್ಕಲುಗಳಿಗಂತೂ ಸಂಘಟನಾತ್ಮಕ ಹಾಗೂ ನಾಯಕತ್ವದ ವಿಷಯಗಳಲ್ಲಿ ಯಾವುದೇ ಅನುಭವವಿದ್ದಿರಲಿಲ್ಲ ಎಂಬುದನ್ನು ಇಲ್ಲಿ ಸ್ಪಷ್ಟವಾಗಿ ಗಮನಿಸಬೇಕು. 1931-32ರ ಕರನಿರಾಕರಣೆ ಚಳುವಳಿಯ ಸಂದರ್ಭದಲ್ಲಿ ಬಾಬಾ ರಾಮಚಂದ್ರರಂತಹ ನಾಯಕರು ಅಂತಹ ಪ್ರಭಾವವನ್ನೇನೂ ಬೀರಲಿಲ್ಲ. ಅಲ್ಲದೆ ಅವರಿಗೆ ಹೇಳಿಕೊಳ್ಳುವಂತಹ ಬೆಂಬಲವೂ ಇದ್ದಿರಲಿಲ್ಲ.[47]

1931-32ರ ಎರಡನೆ ಹಂತದ ಚಳುವಳಿಯ ಮೇಲೆ ಕಾಂಗ್ರೆಸಿಗೆ ಸಂಪೂರ್ಣ ಹತೋಟಿ ಇತ್ತು. ಇದು 1921ರಲ್ಲಿ ಇದ್ದುದಕ್ಕಿಂತ ಸಂಪೂರ್ಣ ಬೇರೆಯಾದ ಸ್ಥಿತಿಯಾಗಿತ್ತು. ಚಳುವಳಿಯ ಮೊದಲಿನ ಹತ್ತು ತಿಂಗಳ ಅವಧಿಯಲ್ಲಿ, ಔಧ್ ಪ್ರಾಂತದಲ್ಲಿ, ರೈತರ ಹಿಂಸೆ ಅತಿಕಡಿಮೆ ಪ್ರಮಾಣದಲ್ಲಿದ್ದುದನ್ನು ಗಮನಿಸಿದರೆ ಮೇಲಿನ ಅಂಶ ಸ್ಪಷ್ಟವಾಗುತ್ತದೆ. ಆದರೆ, ಭೂಮಾಲಕರು ಖಾಸಗಿ ಪಡೆಗಳನ್ನು ಬಳಸಿ ತಮ್ಮ ಒಕ್ಕಲುಗಳನ್ನು ಹತ್ತಿಕ್ಕಲು ಪ್ರಯತ್ನಿಸಿದ ಕೆಲವು ಪ್ರದೇಶಗಳಲ್ಲಿ ಸ್ವಲ್ಪ ಮಟ್ಟಿಗೆ ಹಿಂಸೆ ಸ್ಫೋಟಗೊಂಡಿದ್ದು ನಿಜ. ಅಲ್ಲದೆ ಕೆಲವೊಂದು ಸಲ

---

45. ಜಿ.ಒ.ಇ. ಹೋಮ್ 18/10 1932 (ಪೋಲ್), ಜುಲೈ, 1932. ಈ ಬಾರಿ ಸರಕಾರ ಚಳುವಳಿ ನಿರತರನ್ನು ನಿರ್ದಯವಾಗಿ ಹತ್ತಿಕ್ಕುವ ನೀತಿಯನ್ನು ಅನುಸರಿಸಿತು. ಆ ಸಂದರ್ಭದಲ್ಲಾದ ಗಣನೀಯ ಸಂಖ್ಯೆಯ ಬಂಧನಗಳನ್ನು ಗಮನಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ಈ ಸಂಬಂಧದ ಅಂಕಿ ಅಂಶಗಳು ಇಡೀ ಉತ್ತರಪ್ರದೇಶದಲ್ಲಿ ಬಂದಿಸಲ್ಪಟ್ಟವರ ಕುರಿತು ಮಾಹಿತಿ ನೀಡುತ್ತವೆ. ರಾಜಕೀಯ ಅಪರಾಧಿಗಳ ವರ್ಗ ಹಿನ್ನೆಲೆಯನ್ನು ತಿಳಿಯಬೇಕಾದರೆ ನೋಡಿ, ಜಿ.ಒ.ಐ. ಹೋಮ್ 18/V/32 (ಪೋಲ್), ಮಾರ್ಚ್, 1932.
46. ಮೇ, 1931ರ ಹೊತ್ತಿಗೆ ಇಡೀ ಉತ್ತರ ಪ್ರದೇಶದಲ್ಲಿ ಸುಮಾರು 13,000 ದಷ್ಟು ಸಕ್ರಿಯ ಕಾಂಗ್ರೆಸ್ ಕಾರ್ಯಕರ್ತರಿರಬಹುದೆಂದು ಸರಕಾರ ತೀರ್ಮಾನಿಸಿತ್ತು. ಇವರಲ್ಲಿ ಹೆಚ್ಚಿನವರು ರಾಯ್‌ಬರೇಲಿ, ಪ್ರತಾಪ್‌ಗರ್, ಬಾರಾಬಂಕಿ, ಮತ್ತು ಅಲಹಾಬಾದ್ ಜಿಲ್ಲೆಗಳಲ್ಲಿ ಇದ್ದರು. ನೋಡಿ, ಜಿ.ಇ.ಐ. ಹೋಮ್ 18/V/31 (ಪೋಲ್), ಮೇ, 1931; ಜೊತೆಗೆ ಸಂಪೂರ್ಣಾನಂದ, *ಮೆಮೊರೀಸ್ ಅಂಡ್ ರಿಫ್ಲೆಕ್ಷನ್ಸ್*, ಬೊಂಬಾಯಿ, 1962, ಪುಟ 63.
47. ಎಪ್ರಿಲ್ 1931ರಲ್ಲಿ, ಉನಾವ್ ಜಿಲ್ಲೆಯಲ್ಲಿ ಬಾಬಾರಾಮಚಂದ್ರರು ರೈತರ ಸಭೆಗಳನ್ನು ಸಂಘಟಿಸಿದ್ದರು. ಇವುಗಳಲ್ಲಿ ಸುಮಾರು 15,000 ರೈತರು ಭಾಗವಹಿಸಿದ್ದರು. ಆದರೆ , ಕರ ನಿರಾಕರಣೆ ಚಳುವಳಿಯನ್ನು ತೀವ್ರಗೊಳಿಸುವಲ್ಲಿ ಅವರು ಸಫಲರಾಗಲಿಲ್ಲ. ನೋಡಿ ಜಿ.ಒ.ಐ. ಹೋಮ್ 18/IV/31 (ಪೋಲ್), ಎಪ್ರಿಲ್; 1931. ಹಾಗೆಯೇ, ಸ್ವಾಮಿ ಧರ್ಮಗಿರ್ ಎಂಬ ಧಾರ್ಮಿಕ ನಾಯಕರೊಬ್ಬರು ಬಾರಾಬಂಕಿಯಲ್ಲಿ ಈ ಚಳುಳಿಗೆ ಸಂಬಂಧಿಸಿದಂತೆ ಬಂದಿಸಲ್ಪಟ್ಟರು. ಆದರೆ, ಜುಲೈ, 1931ರಲ್ಲಿ ಬಿಡುಗಡೆಯಾದ ನಂತರ ಅವರು ಅಷ್ಟೊಂದು ಕ್ರಿಯಾಶಾಲಿಯಾಗಿ ಚಳುವಳಿಯಲ್ಲಿ ಪುನಃ ತೊಡಗಿಸಿಕೊಂಡಿರುವುದು ಕಂಡು ಬರುವುದಿಲ್ಲ. ನೋಡಿ: *ಲೀಡರ್*, 11, ಜುಲೈ 1931, ಪುಟ 9.

ಒಕ್ಕಲುಗಳು ಭೂಮಾಲಕರನ್ನು ಥಳಿಸಿದ ಪ್ರಕರಣಗಳು ಇವೆ.[48] ಏನಿದ್ದರೂ ರೈತಹಿಂಸೆ ಒಟ್ಟು ವ್ಯವಸಾಯೀ ಆಂದೋಲನದ ಒಂದು ಸಣ್ಣ ಅಂಶವಾಗಿತ್ತು ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಮೇಲಾಗಿ ಸರಕಾರ ಚಳುವಳಿಯನ್ನು ದಮನಿಸಲು ಪ್ರಯತ್ನಿಸಿದಾಗ, ಈ ರೈತರಿಂದಾಗಲೀ ಕಾಂಗ್ರೆಸ್ ಸ್ವಯಂಸೇವಕರಿಂದಾಗಲೀ ಯಾವುದೇ ಪ್ರತಿಭಟನೆ ಬರಲಿಲ್ಲ. ಅವರು ಸವಿನಯ ಕಾಯಿದೆಭಂಗ ಚಳುವಳಿಯ ವಿಶಾಲ ಚೌಕಟ್ಟಿನಲ್ಲಿ ನಿಜವಾಗಿಯೂ ಅಹಿಂಸಾತ್ಮಕವಾದ ವ್ಯವಸಾಯೀ ಹೋರಾಟವನ್ನು ಸಂಘಟಿಸಿದ್ದರು. ಸರಕಾರ ಹಾಗೂ ಭೂಮಾಲಕರು ಬಳಸಿದ ದಂಡನಾತ್ಮಕ ಕ್ರಮಗಳ ಪಟ್ಟಿಯನ್ನು ಇಲ್ಲಿ ಪುನರುಚ್ಚರಿಸುವ ಅಗತ್ಯವಿಲ್ಲ.[49] ಸುಲಭವಾಗಿ ದೊರಕುವ ಮಾಹಿತಿಗಳೇ ರೈತರು ದಬ್ಬಾಳಿಕೆಯನ್ನು ಮೌನವಾಗಿ ಎದುರಿಸಿದರು ಎಂಬುದಕ್ಕೆ ಸಾಕ್ಷಿಗಳಾಗಿವೆ.

ಗಣನೀಯ ಪ್ರಮಾಣದ ರೈತರು ಕರನಿರಾಕರಣೆ ಚಳುವಳಿಯನ್ನು ತಮ್ಮಷ್ಟಕ್ಕೇ ಏಕೆ ಮುಂದರಿಸಲಿಲ್ಲ? ಹಳ್ಳಿಗಳಲ್ಲಿ ಚಳುವಳಿಯನ್ನು ಸಂಘಟಿಸಿದ್ದ ಪ್ರಾಂತ ಮತ್ತು ಜಿಲ್ಲಾ ಮಟ್ಟದ ಅನೇಕ ನಾಯಕರುಗಳು ಬಂಧಿಸಲ್ಪಟ್ಟಿದ್ದರು. ಹೀಗಾಗಿ, ಹಳ್ಳಿಗಳಲ್ಲಿ ಕಾನೂನು ಮತ್ತು ಶಿಸ್ತು ಸಡಿಲಾಯಿತು. 1921ರಲ್ಲಾದಂತೆ, ಈಗಲೂ ಯಾವುದೇ ಹಳ್ಳಿಮಟ್ಟದ ನಾಯಕರುಗಳು ಜನರನ್ನು ದಂಗೆಯೇಳುವಂತೆ ಪ್ರೇರೇಪಿಸಲು ಅನುವಾಗುವಂತಹ ಪರಿಸ್ಥಿತಿ ಇತ್ತು. ಆದರೆ 1932ರಲ್ಲಿಉತ್ತರ ಪ್ರದೇಶದಲ್ಲಿ ಹಾಗಾಗಲಿಲ್ಲ. ಏಕೆಂದರೆ ಆರ್ಥಿಕ ಮುಗ್ಗಟ್ಟು ಹಾಗೂ ಬೆಲೆ ಇಳಿತ ಬಡರೈತರು ಹಾಗೂ ಭೂಹೀನ ಕಾರ್ಮಿಕರನ್ನು ಯಾವ ರೀತಿಯಲ್ಲೂ ಬಾಧಿಸಲಿಲ್ಲ. ಕೆಳವರ್ಗದ ಜನರಲ್ಲಿ ಅಸಹನೆ ವ್ಯಾಪಕವಾಗಿದ್ದಿದ್ದರೆ, 1921ರಲ್ಲಾದಂತೆ, ಒಂದಲ್ಲ ಒಂದು ರೀತಿಯಲ್ಲಿ ಅದು ಹಿಂಸಾತ್ಮಕವಾಗಿಯೇ ವ್ಯಕ್ತವಾಗುತ್ತಿತ್ತು. ಜಮೀನಿನ ಮೇಲಿನ ತಮ್ಮ ಹಿತಾಸಕ್ತಿಗಳೇ ಪ್ರಮುಖವೆಂದು ತಿಳಿದ ಶ್ರೀಮಂತ ಹಾಗೂ ಮಧ್ಯಮ ವರ್ಗದ ರೈತರು ಚಳುವಳಿಯನ್ನು ಮುಂದರಿಸಲಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ, ಇಡೀ ವ್ಯವಸಾಯೀ ರಚನೆಯ ಸೂಕ್ಷ್ಮವಾದ ಹಂತದಲ್ಲಿದ್ದ ಈ ವರ್ಗ, ತನ್ನ ಹಿತಾಸಕ್ತಿಗಳ ರಕ್ಷಣೆಯ ಕಾರಣಕ್ಕಾಗಿ ಚಳುವಳಿಯನ್ನು ಮುಂದರಿಸುವ ಸಾಹಸ ಮಾಡಲಿಲ್ಲ.[50]

---

48. ಉದಾಹರಣೆಗೆ, ಏಪ್ರಿಲ್, 1931ರಲ್ಲಿ, ಬಾರಾಬಂಕಿ ಜಿಲ್ಲೆಯಲ್ಲಿ ಒಬ್ಬ ಮುಸ್ಲಿಮ್ ಜಮೀನ್ದಾರರು ಅವರ ಒಕ್ಕಲುಗಳಿಂದಲೇ ಕೊಲ್ಲಲ್ಪಟ್ಟರು. ಕೊಲೆಯಲ್ಲಿ ಭಾಗವಹಿಸಿದ ಹೆಚ್ಚಿನವರು ಪಾಸಿಗಳಾಗಿದ್ದರು. ಮುಂದಿನ ತಿಂಗಳು, ಉನಾವ್ ಜಿಲ್ಲೆಯ ಅಸಿವಾನ್ ಎಂಬಲ್ಲಿ ಸುಮಾರು 4,000 ಒಕ್ಕಲುಗಳು ಹಾಗೂ ಕೆಲವು ಮುಸ್ಲಿಮ್ ಜಮೀನ್ದಾರರ ನಡುವೆ ಸ್ಫೋಟಗೊಳ್ಳಬಹುದಾಗಿದ್ದ ಘರ್ಷಣೆಯನ್ನು ತಪ್ಪಿಸಲಾಯಿತು. ಜಿ.ಒ.ಐ. ಹೋಮ್ 18/V/31 (ಪೋಲ್) ಏಪ್ರಿಲ್, ಮೇ, 1931. ಅಲಹಾಬಾದ್ ಜಿಲ್ಲೆಯಲ್ಲಿ ಒಬ್ಬ ಜಮೀನ್ದಾರ ಹಾಗೂ ಇತರ ಆರು ಮಂದಿ (ಎಲ್ಲರೂ ಮುಸ್ಲಿಮರೇ)ಯ ಮೇಲೆ ಅವರ ಒಕ್ಕಲುಗಳಿಂದಲೇ ಮರಣಾಂತಿಕ ಹಲ್ಲೆ ನಡೆಯಿತು. ಹಲ್ಲೆ ಮಾಡಿದವರೆಲ್ಲ ಕೃಷಿ ಕಾರ್ಯಗಳಲ್ಲಿ ಪರಂಪರಾಗತವಾಗಿ ತೊಡಗಿಕೊಂಡ ಕೆಳಜಾತಿಯ ಲೋಧ್ ಜನಾಂಗಕ್ಕೆ ಸೇರಿದವರಾಗಿದ್ದರು. ಜಿ.ಒ.ಐ. ಹೋಮ್18/VI/31 (ಪೋಲ್) ಜೂನ್, 1931.

49. ಉದಾಹರಣೆಗೆ ನೋಡಿ : *ಕಂಡಿಶನ್ ಆಫ್ ಇಂಡಿಯಾ: ರಿಪೋರ್ಟ್ ಆಫ್ ದಿ ಇಂಡಿಯಾ ಲೀಗ್ ಡೆಲಿಗೇಶನ್*, 1932, ಲಂಡನ್, 1933, ಪುಟ 364-84; ಹೆಚ್. ಎನ್. ಬ್ರೈಲ್ಸ್-ಫೋರ್ಡ್, *ರೆಬೆಲ್ ಇಂಡಿಯಾ*, ಲಂಡನ್, 1931, ಪುಟ 56-57; ಡಬ್ಲ್ಯು. ಮಿಲ್ಲರ್, *ಐ ಫೌಂಡ್ ನೋ ಪೀಸ್, ಲಂಡನ್*, 1937 ಪುಟ 35-104. ಮತ್ತು ಜೊತೆಗೇ ಸೀತಾರಾಮಯ್ಯ, *ಇಂಡಿಯನ್ ನ್ಯಾಶನಲ್ ಕಾಂಗ್ರೆಸ್*, ಸಂ 1 ಪುಟ 522-6.

50. ಎರಿಕ್ ವೂಲ್ಫ್ ಚಾಲ್ತಿಗೆ ತಂದ '*ಮಧ್ಯಮ ರೈತ*ಕಲ್ಪನೆ 1930-32ರ ಔಧನ ಮಧ್ಯಮ ರೈತರ ಪಾತ್ರವನ್ನು ನಿರ್ಣಯಿಸುವಲ್ಲಿ ಯಾವ ಸಹಾಯವನ್ನೂ ಮಾಡುವುದಿಲ್ಲ. *ಪೆಸೆಂಟ್‌ವಾರ್ಸ್ ಆಫ್ ದಿ ಟ್ವೆಂಟಿಯತ್ ಸೆಂಚುರಿ*, ಮತ್ತು ಹೆಚ್. ಅಲವಿ, '*ಪೆಸೆಂಟ್ಸ್ ಅಂಡ್ ರೆವಲ್ಯೂಶನ್* ಪುಟ 245-75. 1930-32ರ ಚಳುವಳಿಗೆ ಸಣ್ಣರೈತಃಮಧ್ಯಮ ರೈತರ ತಳಹದಿ ಇತ್ತು ಎನ್ನುವುದಕ್ಕೆ ನಿಖರ ಪುರಾವೆಗಳೇನೂ ಈವರೆಗೆ ದೊರಕಿಲ್ಲ. ಹೀಗಾಗಿ ಈ ತೀರ್ಮಾನ ಬರೇ ತಾತ್ಕಾಲಿಕ.

1920-22 ಹಾಗೂ 1930-32ರ ವ್ಯವಸಾಯೀ ದಂಗೆಗಳು

1920-22ರಲ್ಲಿ ಔಧ್‌ನಲ್ಲಾದ ವ್ಯವಸಾಯೀ ಆಂದೋಲನ ಹಾಗೂ 1930-32ರ ಕರನಿರಾಕರಣೆ ಚಳುವಳಿಗಳಲ್ಲಿ ಕಾಂಗ್ರೆಸ್ ಪಾತ್ರದ ಕುರಿತು ಈಗ ನಾವು ತುಲನೆ ಮಾಡಬಹುದು. ವರ್ಗಗುಣ, ನಾಯಕತ್ವ ಮತ್ತು ಈ ಎರಡು ಆಂದೋಲನಗಳ ಸಾಮಾಜಿಕ ಪರಿಣಾಮವನ್ನು ಈ ಅವಲೋಕನದ ಹಿನ್ನೆಲೆಯಲ್ಲಿ ಪರಿಗಣಿಸಬೇಕಾದುದು ಬಹಳ ಮುಖ್ಯ. ಉತ್ತರ ಪ್ರದೇಶದ ಈ ಎರಡು ವ್ಯವಸಾಯೀ ಆಂದೋಲನಗಳ ವರ್ಗ ರಚನೆ ಹಾಗೂ ನಾಯಕತ್ವ ಸಂಪೂರ್ಣ ಬೇರೆಯಾಗಿದ್ದವು ಮತ್ತು ಈ ಭಿನ್ನತೆಗೆ ಕಾರಣವನ್ನು ಅವುಗಳ ಸಾಮಾಜಿಕ ಮೂಲಗಳಲ್ಲೇ ಕಂಡುಕೊಳ್ಳಬೇಕು ಎಂಬುದು ಈ ವಾದದ ಪ್ರಮುಖ ಅಂಶವಾಗಿದೆ. 1921ರಲ್ಲಿ ಔಧ್‌ನ ಕಿಸಾನ್ ಸಭಾ, ಏಕಾ (Eka) ಹಾಗೂ 1932ರ ಕರನಿರಾಕರಣೆ ಚಳುವಳಿಗಳು ಸಾಮಾನ್ಯವಾಗಿ ಒಂದೇ ಹಣೆಪಟ್ಟಿಯಡಿಯಲ್ಲಿ ಗುರುತಿಸಲ್ಪಟ್ಟಿದ್ದರೂ ಅವುಗಳ ಸಾಮಾಜಿಕ ಮೂಲ ಹಾಗೂ ವರ್ಗಗುಣಗಳಿಂದಾಗಿ ಅವೆರಡರಲ್ಲೂ ಸಾಕಷ್ಟು ಭಿನ್ನತೆಗಳಿವೆ. ವಿಶೇಷವೆಂದರೆ, ಇವೆರಡು ಚಳುವಳಿಗಳೂ ಎರಡು ರಾಷ್ಟ್ರವ್ಯಾಪಿ ರಾಜಕೀಯ ಆಂದೋಲನಗಳ ಸಂದರ್ಭದಲ್ಲೇ ಸಂಘಟಿಸಲ್ಪಟ್ಟಿದ್ದವು. ಇದೊಂದೇ ಈ ಎರಡು ಚಳುವಳಿಗಳೊಳಗಿನ ಸಮಾನ ಅಂಶವಾಗಿದೆ. ಸಹಜ ಸ್ಫೂರ್ತಿಯಿಂದ ಸ್ಫೋಟಗೊಂಡ ರೈತರ ಹಿಂಸೆ ಮೊದಲನೆ ಚಳುವಳಿಯಲ್ಲಿ ಮೇಲುಗೈ ಪಡೆಯಿತು. ಖಿಲಾಫತ್ ಹಾಗೂ ಅಸಹಕಾರ ಚಳುವಳಿಗಳು ಇದೇ ಕಾಲಕ್ಕೆ ಸ್ಫೋಟಗೊಂಡಿದ್ದುದು ಒಂದು ಚಾರಿತ್ರಿಕ ಆಕಸ್ಮಿಕ ಅಷ್ಟೆ. ಆದರೆ ಕರನಿರಾಕರಣೆ ಚಳುವಳಿಯ ಮೇಲೆ ಕಾಂಗ್ರೆಸಿಗೆ ಸಂಪೂರ್ಣ ಹತೋಟಿ ಇತ್ತು.

ಈ ಎರಡು ಚಳುವಳಿಗಳು ಎರಡು ವಿಭಿನ್ನ ಆರ್ಥಿಕ ಹಾಗೂ ರಾಜಕೀಯ ಸಂದರ್ಭದ ಹಿನ್ನೆಲೆಯಲ್ಲಿ ಹುಟ್ಟಿದುವು. 1920ರಲ್ಲಿ ಬೆಲೆಗಳು ದಾಖಲೆ ಮಟ್ಟಕ್ಕೆ ಏರಿದ್ದುವಲ್ಲದೆ, ಗೇಣಿ ಕೂಡಾ ಕ್ರಮೇಣ ಹೆಚ್ಚಾಗುತ್ತಿತ್ತು. ಔಧ್‌ನ ವಿಶಾಲ ರೈತವರ್ಗಕ್ಕೆ ಜಮೀನಿನ ಮೇಲೆ ಯಾವ ಭದ್ರತೆಯೂ ಇರಲಿಲ್ಲ. ಒಕ್ಕಲು ದೊಡ್ಡವನಾಗಿರಲಿ ಸಣ್ಣವನಾಗಿರಲಿ, ಹೆಚ್ಚುತ್ತಿರುವ ಗೇಣಿಯ ಆತಂಕ ಅವರನ್ನು ಸಮಾನವಾಗಿ ಬಾಧಿಸುತ್ತಿತ್ತು. ಆದರೆ ರಾಜಕೀಯವಾಗಿ ಇವರು ಬೇರೆ ಬೇರೆಯಾಗಿದ್ದರು. ಏಕೆಂದರೆ 1919ರ ಹೊಸ ಸಾಂವಿಧಾನಿಕ ಸುಧಾರಣೆಗಳ ಪ್ರಕಾರ ಇವರಲ್ಲಿರುವ ಸ್ಥಿತಿವಂತ ರೈತರಿಗೆ ಮತದಾನದ ಹಕ್ಕು ದೊರೆತಿದ್ದರೆ, ಬಡವರು ಈ ಹಕ್ಕಿನಿಂದ ತಿರಸ್ಕೃತರಾಗಿದ್ದರು. ಆರ್ಥಿಕವಾಗಿ ಕೂಡಾ, ರೈತರ ಮಧ್ಯೆ ಎದ್ದು ಕಾಣುವ ಭಿನ್ನತೆ ಇತ್ತು. ಏರುತ್ತಿರುವ ಬೆಲೆಗಳಿಂದಾಗಿ ಶ್ರೀಮಂತ ಹಾಗೂ ಮಧ್ಯಮ ರೈತರ ವರಮಾನದಲ್ಲಿ ಸಾಕಷ್ಟು ಏರಿಕೆಯಾಗಿದ್ದರೆ ಬಡರೈತರು ಬದುಕಲು ಸಾಕಾಗುವಷ್ಟು ಬೆಳೆ ಬೆಳೆಸಲೂ ಅಶಕ್ತರಾಗಿದ್ದರು. ಹೀಗೆ 1921ರಲ್ಲಿ ಬಡ ರೈತರು ಮತ್ತು ಭೂರಹಿತ ಕಾರ್ಮಿಕರು ಎರಡು ರಂಗಗಳಲ್ಲೂ ಸೋತಿದ್ದರು. ಹೀಗಾಗಿ ಅವರು ನೇರವಾದ ಹಿಂಸಾತ್ಮಕ ಪ್ರತಿಭಟನೆಗೆ ಇಳಿದರು. 1921ರಲ್ಲಿ ಔಧ್ ಪ್ರಾಂತದ ವ್ಯವಸಾಯೀ ಅಸಹನೆಗಳು ಯಾವ ರೀತಿಯಲ್ಲೂ ಪೂರ್ಣ ಪ್ರಮಾಣದ ಸುಸಂಘಟಿತ ಆಂದೋಲನಗಳಾಗದೆ, ರೈತರ ಬರೇ ಸರಣಿ ಪ್ರತಿಭಟನೆಗಳಾಗಿದ್ದವು. ಇಲ್ಲಿಯೇ ಈ ಪ್ರತಿಭಟನೆಗಳ ವರ್ಗಗುಣ ಸ್ಪಷ್ಟವಾಗುತ್ತದೆ.

ಆದರೆ 1930-32ರಲ್ಲಿ ಪರಿಸ್ಥಿತಿ ಬದಲಾಗಿತ್ತು. ನಾವು ಈಗಾಗಲೇ ನೋಡಿದಂತೆ 1922-28ರ ನಡುವಿನ ಶಾಂತಿಯ ಸಮಯದಲ್ಲಿ ಕಾಂಗ್ರೆಸ್ ಹಳ್ಳಿಗಾಡಿನಲ್ಲಿ ತನ್ನ ಪ್ರಭಾವವನ್ನು ವಿಸ್ತರಿಸಲು ಪ್ರಯತ್ನಿಸಿತು. ಅಲ್ಲದೆ 1929-34ರ ನಡುವಿನ ಆರ್ಥಿಕ ಹಿಂಜರಿತ ಅವರ ಸಾಚಾತನವನ್ನು ಸಾಧಿಸಿ ತೋರಿಸಲು ಅವರಿಗೊಂದು ಅವಕಾಶ ಒದಗಿಸಿತು. ಇದಕ್ಕಿಂತ ಹೆಚ್ಚಾಗಿ ಈ ಆರ್ಥಿಕ ಹಿಂಜರಿತನದಿಂದ ಅತಿ ಹೆಚ್ಚು ಸಂಕಷ್ಟಕ್ಕೊಳಗಾದವರು ಶ್ರೀಮಂತ ಮತ್ತು ಮಧ್ಯಮ ರೈತರೇ ಆಗಿದ್ದರು. ಕಾಂಗ್ರೆಸ್ ಈ ಮೇಲ್ವರ್ಗದ ರೈತರ ಹಿತರಕ್ಷಣೆಯನ್ನೇ ತನ್ನ ಪ್ರಧಾನ

ಕಾರ್ಯಕ್ರಮವಾಗಿ ಸ್ವೀಕರಿಸಿತು. ಅದೇ ಹೊತ್ತಿಗೆ ಕಾಂಗ್ರೆಸ್ ಕೆಲವು ಬಡ ರೈತರು ಹಾಗೂ ಭೂರಹಿತ ಕಾರ್ಮಿಕರನ್ನು ಚಳುವಳಿಯಲ್ಲಿ ಭಾಗವಹಿಸಲು ನೇಮಕ ಮಾಡಿಕೊಂಡಿತ್ತು. 1930-32ರ ಅನಂತರದ ವರ್ಷಗಳಲ್ಲಿ ಬೆಲೆಯಲ್ಲಿ ಸ್ವಲ್ಪ ಸುಧಾರಣೆಯಾಗುತ್ತಿದ್ದಂತೆ, ಚಳುವಳಿಯ ಪ್ರಧಾನ ಬಲವಾಗಿದ್ದ ಮಧ್ಯಮ ರೈತರು ಮತ್ತು ನಗರದ ಮಧ್ಯಮ ವರ್ಗದ ಕಾಂಗ್ರೆಸ್ ನಾಯಕತ್ವ ಹೋರಾಟವನ್ನು ಬಿಟ್ಟು ಬಿಟ್ಟಿತು. ಸಾಂವಿಧಾನಿಕ ವಿಧಾನಗಳ ಮೂಲಕ ವ್ಯವಸಾಯೀ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ದಾರಿಯನ್ನು ಅದು ಆಯ್ದುಕೊಂಡಿತು.

1921ರಲ್ಲಿ, ಸ್ಥಳೀಯ ಹಾಗೂ ಧಾರ್ಮಿಕ ನಾಯಕತ್ವ ತಳಮಟ್ಟದಲ್ಲಿ ರೈತರು ಚಳುವಳಿಯಲ್ಲಿ ಭಾಗವಹಿಸುವಂತೆ ಯೋಜನೆ ಹಾಕಿಕೊಂಡಿತು. ಕಿಸಾನ್‌ಸಭಾದ ಮೂಲಕ ತಮ್ಮ ಚಟುವಟಿಕೆಗಳನ್ನು ವಿಸ್ತರಿಸಬಯಸಿದ ನಗರದ ಬುದ್ಧಿಜೀವಿ ವರ್ಗಕ್ಕೆ ಹಳ್ಳಿಗಳಲ್ಲಿ ಯಾವ ಹಿನ್ನೆಲೆಯೂ ಇದ್ದಿರಲಿಲ್ಲ. ಹೀಗಾಗಿ, ಅವರಿಗೆ ವಿಶಾಲ ರೈತ ಸಮೂಹವನ್ನು ಹಿಡಿತದಲ್ಲಿಟ್ಟುಕೊಳ್ಳಲು ಸಾಧ್ಯವಾಗಲಿಲ್ಲ. ಆದರೆ 1930-32ರ ಕರನಿರಾಕರಣೆ ಚಳುವಳಿ ಮೇಲಿನಿಂದ ಬಂದದ್ದಾಗಿತ್ತು. ಸವಿನಯ ಕಾಯಿದೆ ಭಂಗ ಚಳುವಳಿ ಪೇಟೆ ಪಟ್ಟಣಗಳಲ್ಲಿ ಸಫಲವಾಗಿತ್ತು. ಹಳ್ಳಿಗಳಲ್ಲಿ ಹರಡಿದ್ದ ಕರ ನಿರಾಕರಣೆ ಚಳುವಳಿ ಅಷ್ಟೇನೂ ತೀವ್ರವಾಗಿಲ್ಲದಿದ್ದರೂ, ಬ್ರಿಟಿಷರನ್ನೂ ಇದು ಸಾಕಷ್ಟು ಆತಂಕಕ್ಕೆ ಒಳಪಡಿಸಿತ್ತು.

ಎಲ್ಲಿಯ ವರೆಗೆ ವ್ಯವಸಾಯೀ ಸಂಘರ್ಷಗಳು ತನ್ನ ವಸಾಹತುಶಾಹೀ ವಿರೋಧಿ ನೀತಿಗೆ ಪೂರಕವಾಗಿದ್ದುವೋ ಅಲ್ಲಿಯವರೆಗೆ ಕಾಂಗ್ರೆಸ್ ಈ ಹೋರಾಟಗಳಿಗೆ ಸಂಪೂರ್ಣ ಬೆಂಬಲ ಕೊಟ್ಟಿತು. ಅಲ್ಲದೆ ವರ್ಗನೆಲೆಯಲ್ಲೇ ಜನರಲ್ಲಿ ರಾಜಕೀಯ ಪ್ರಜ್ಞೆಯನ್ನು ಜಾಗೃತಗೊಳಿಸಿತು. ರಾಜಕೀಯ ಕಾರಣಗಳಿಗಾಗಿಯೇ ಕಾಂಗ್ರೆಸ್ ರೈತಾಪಿ ವರ್ಗವನ್ನು ಸಂಘಟಿಸಲು ಬಯಸಿತ್ತು. ಹೀಗಾಗಿ, ಬದಲಾಗುತ್ತಿರುವ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗೆ ಅದು ಸ್ಪಂದಿಸುವುದು ಅನಿವಾರ್ಯವಾಗಿತ್ತು. ಔಧ್ ಮೂಲತಃ ಜಮೀನ್ದಾರಿ ಪ್ರದೇಶವಾಗಿತ್ತು. ಯಾವುದೇ ರಾಜಕಾರಿಣಿ ರೈತ ಸಮೂಹದಲ್ಲಿ ಬೆಂಬಲವನ್ನು ನಿರೀಕ್ಷಿಸಬೇಕಾದರೆ ಅವನು ಮೊದಲು ಅಲ್ಲಿದ್ದ ವ್ಯವಸಾಯೀ ರಚನೆಯ ಶೋಷಕ ಸ್ವರೂಪವನ್ನು ಖಂಡಿಸಬೇಕಾಗುತ್ತಿತ್ತು. ಆದೇ ಹೊತ್ತಿಗೆ, ಭೂಮಾಲಕ ವರ್ಗ ಸರಕಾರದ ಜತೆ ಹೆಚ್ಚಾಗಿ ಸಹಕಾರದಿಂದ ಇರುತ್ತಿತ್ತು. ಆರ್ಥಿಕ ಹಿಂಜರಿತದ ಸಂದರ್ಭದಲ್ಲಿ ಕಾಂಗ್ರೆಸ್ಸೇನಾದರೂ ಮೌನವಾಗಿ ಉಳಿದಿದ್ದರೆ, ಅದು ಒಕ್ಕಲುಗಳಿಂದ ಸಂಪೂರ್ಣವಾಗಿ ತ್ಯಜಿಸಲ್ಪಡುವ ಭಯ ಇತ್ತು. ಬರೇ ಸೈದ್ಧಾಂತಿಕ ಹೇಳಿಕೆಗಳ ಮಟ್ಟದಲ್ಲೇ ಉಳಿದ ನೆಹರೂರವರ ಎಡಪಂಥೀಯ ಉಗ್ರಗಾಮಿತನವನ್ನು ಈ ಹಿನ್ನೆಲೆಯಲ್ಲಿ ನೋಡಬೇಕು. ಏಕೆಂದರೆ ಅವರು ಗಾಂಧೀಜಿಯವರ ನೈತಿಕ ಬೆಂಬಲವನ್ನು ಕಳೆದುಕೊಳ್ಳುವಂತಿರಲಿಲ್ಲ.

ಎರಡೂ ಚಳುವಳಿಗಳ ಸಂದರ್ಭದಲ್ಲಿ ಕಾಂಗ್ರೆಸ್ ಹಳ್ಳಿಗಳ ಕಡೆಗೆ ಗಮನ ಹರಿಸಿದ್ದಂತೂ ಸತ್ಯ. ಆದರೆ ಜನಸಮೂಹಕ್ಕಾಗಿ ಹೋರಾಟದ ಮುಖವಾಡ ತೊಟ್ಟಾಗಲೂ ಕೂಡಾ, ಕಾಂಗ್ರೆಸ್ ಮುಖ್ಯವಾಗಿ ಹಳ್ಳಿಗಳ ಶ್ರೀಮಂತ ಹಾಗೂ ಮಧ್ಯಮ ರೈತರ ಬೆಂಬಲವನ್ನೇ ಬಲವಾಗಿ ನೆಚ್ಚಿಕೊಂಡಿತ್ತು. ಬಡರೈತರು ರಾಷ್ಟ್ರೀಯ ಚಳುವಳಿಯ ಪ್ರಮುಖ ಪ್ರವಾಹದಿಂದ ದೂರವೇ ಇದ್ದರು.

ಹಿಂದೂ ಕೋಮುವಾದದ ಸಮರ ಯುಕ್ತಿ : ಹಂತಗಳು ಹಾಗೂ ಐತಿಹಾಸಿಕ ಒತ್ತಡಗಳು

ಮೂಲ : ಎಮ್. ಮುರಳೀಧರನ್

ಅನುವಾದ : ಡಾ। ರಾಜಾರಾಮ ಹೆಗ್ಡೆ

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಹಿಂದೂ ಕೋಮುವಾದೀ ರಾಜಕೀಯದಲ್ಲಿ ನಡೆದ ಬೆಳವಣಿಗೆಗಳನ್ನು ಸಾಮಾಜಿಕ-ಸಾಂಸ್ಕೃತಿಕ ಬದಲಾವಣೆಗಳ ಹಿನ್ನೆಲೆಯಲ್ಲಿ ಗ್ರಹಿಸುವುದು ಈ ಲೇಖನದ ಉದ್ದೇಶ. ಈ ರೀತಿ ಕೋಮುವಾದೀ ರಾಜಕೀಯದ ಏಳು-ಬೀಳುಗಳನ್ನು ಚಿತ್ರಿಸುವ ಒಂದು ಗಮನಾರ್ಹಲೇಖನವೆಂದು ಇದನ್ನು ಅರಿವು-ಬರಹದ ಓದುಗರಿಗಾಗಿ ಭಾಷಾಂತರಿಸಲಾಗಿದೆ. ಆದರೆ ಅರಿವು-ಬರಹದ ಸಂಪಾದಕರು ಈ ಲೇಖನದ ಎಲ್ಲ ಗ್ರಹಿಕೆಗಳನ್ನೂ ಪುರಸ್ಕರಿಸುವುದಿಲ್ಲ. ಇಲ್ಲಿ 'ಹಿಂದೂ ಕೋಮುವಾದ' ಹಾಗೂ 'ರಾಷ್ಟ್ರೀಯತಾವಾದ' ಇವೆರಡೂ ಮೂಲಭೂತವಾಗಿ ವಿಭಿನ್ನವಾದ ಹಾಗೂ ಸಿದ್ಧವಾದ ಪ್ರಭೇದಗಳೆಂಬ ಗ್ರಹಿಕೆ ಇದೆ. ಅದರಂತೇ 'ರಾಷ್ಟ್ರೀಯತಾವಾದಿ' ಸಂಪ್ರದಾಯವು ಒಂದು ಶುದ್ಧ 'ಧರ್ಮ ನಿರಪೇಕ್ಷತಾವಾದೀ' ಸಂಪ್ರದಾಯವಾಗಿದ್ದು ಕೋಮುವಾದಕ್ಕೆ ಪ್ರತಿಯಾಗಿ ಇದೆ ಎಂಬ ಗ್ರಹಿಕೆಯೂ ಇದೆ. ಆದರೆ ಇಂದಿನ ಸಂದರ್ಭದಲ್ಲಿ ಭಾರತೀಯ ಧರ್ಮ ನಿರಪೇಕ್ಷತಾವಾದೀ ರಾಜಕೀಯ ಸಂಪ್ರದಾಯ ಹಾಗೂ ಅದರ ಇತ್ತೀಚೆಗಿನ ಸ್ವರೂಪಗಳು ಇಂಥ ಗ್ರಹಿಕೆಯ ಕುರಿತು ಗಂಭೀರ ಪ್ರಶ್ನೆಗಳನ್ನೆತ್ತುತ್ತದೆ. ಹಾಗಾಗಿ ಕೋಮುವಾದೀ ಗ್ರಹಿಕೆ ಹಾಗೂ ನಿರೂಪಣೆಗಳ ಕುರಿತು ಆರ್. ಎಸ್. ಎಸ್.ನ ಸಂದರ್ಭದಲ್ಲಿ ಮಾತ್ರ ಈ ಲೇಖನ ಪ್ರಸ್ತುತವಾಗುತ್ತದೆ.

ಹಿಂದೂ ಕೋಮುವಾದ ಈ ದೇಶದಲ್ಲಿ ಈಗ ಸಾಕಷ್ಟು ಹಳೆಯದಾಗಿದೆ. ಅದರ ಒಳಗುಟ್ಟುಗಳನ್ನು ತಿಳಿದುಕೊಳ್ಳುವುದು ಈಗ ಕೇವಲ ಶುದ್ಧ ಸಂಶೋಧನೆಯ ವಿಷಯವಾಗಿ ಉಳಿದಿಲ್ಲ. ಬದಲಾಗಿ ಕೋಮುವಾದದ ಕುರಿತು ತಿಳುವಳಿಕೆ ಅದನ್ನು ಎಲ್ಲಾ ಮಟ್ಟದಲ್ಲೂ ಎದುರಿಸುವ ಒಂದು ಶಕ್ತಿಯನ್ನು ನೀಡುತ್ತದೆ. ಅಂಥ ಒಂದು ದೀರ್ಘಕಾಲಾವಧಿಯ ಜವಾಬ್ದಾರಿ ಎಲ್ಲಾ ಧರ್ಮ ನಿರಪೇಕ್ಷ, ಪ್ರಜಾತಾಂತ್ರಿಕ ಹಾಗೂ ಸಮಾಜವಾದಿ ಬಣಗಳ ಮೇಲೆ ಇದೆ. ಆದರೆ ಒಂದು ನಿರ್ದಿಷ್ಟವಾದ ಯುಕ್ತಿಯನ್ನೂ ಅನುಸರಿಸಲಾಗದ ನಮಗೆ ಈ ಲೇಖನದಲ್ಲಿ ಎತ್ತಲಾಗುವ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಗಂಭೀರ ಮಿತಿಗಳಿವೆ.

ಮೊದಲನೆಯದಾಗಿ, ನಮ್ಮ ಯುಕ್ತಿ ಕೋಮುವಾದದ ಜಾತೀಯ ಅಥವಾ ಸೈದ್ಧಾಂತಿಕ ಅಂಶಗಳನ್ನು ಬೆಳಕಿಗೆ ತರುವ ವಾಗ್ವಾದಕ್ಕೆ ಮಿತವಾಗಿದೆ. ನಾವು ಬಲಪಂಥೀಯರೊಡನೆ ವಾದಿಸುವ ವಿಷಯಗಳೆಂದರೆ ಕೋಮುವಾದಿ ಸಿದ್ಧಾಂತದ ವಾಸ್ತವಿಕತೆಯ ಹಾಗೂ ತಾರ್ಕಿಕ ತಪ್ಪುಗಳನ್ನು ಎತ್ತಿತೋರಿಸುವುದು, ಅವು ಇತಿಹಾಸವನ್ನು ತಿರುಚುವುದನ್ನು ಗಮನಕ್ಕೆ ತರುವುದು, ಆ ಮೂಲಕವಾಗಿ ಕೋಮುವಾದಿಗಳ ಗೆಲುವಿನಿಂದುಂಟಾಗಬಹುದಾದ ಅನಾಹುತಗಳನ್ನು ಜಟಿಸುವುದು, ಮುಂತಾದುವು. ಈ ಬೌದ್ಧಿಕ ಹೋರಾಟದ ಮಹತ್ತರ ಬೆಲೆಯನ್ನೂ ನಾವು ಕಡೆಗಣಿಸುವಂತಿಲ್ಲ. ಆದರೆ ಈ ಹೋರಾಟದಲ್ಲಿ ನಾವು ಒತ್ತುಕೊಡುವ ವಿಷಯಗಳು ಪ್ರಚಾರ ಮಟ್ಟದಿಂದ ಮೇಲಕ್ಕೆ ಏರುವುದಿಲ್ಲ. ಇದಕ್ಕೆ ಸಂಬಂಧಿಸಿದ ಹಾಗೂ ಸ್ಪಷ್ಟವಾದ ಅಪಾಯವೊಂದಿದೆ. ಅದೆಂದರೆ ಕೋಮುವಾದಿಗಳ ಪ್ರಚಾರವನ್ನು ಅದರ ಸಾತ್ವಿಕ ನಂಬಿಕೆ ಎಂದು ಭ್ರಮಿಸುವುದು ಹಾಗೂ ಅದರ ಸಾರ್ವಜನಿಕ ಹೇಳಿಕೆಗಳನ್ನು ಮತ್ತು ಖಾಸಗಿ ಹಂಚಿಕೆಗಳ ನಡುವಿನ ವ್ಯತ್ಯಾಸವನ್ನು ಸರಿಯಾಗಿ ಗುರುತಿಸುವಲ್ಲಿ ಸೋಲುವುದು. ವೈರಿಯ ರಾಜಕೀಯದ ನಿಜವಾದ ಒಳತಿರುಳನ್ನು ತೋರಿಸಬಲ್ಲ ಮಾರ್ಮಿಕ ವಿಶ್ಲೇಷಣೆಯ ಮೇಲೆ ವಾಗ್ವಾದ ನಿಂತಿರಬೇಕು.

ಎರಡನೆಯದಾಗಿ, ಕೋಮುವಾದ ಪ್ರಾಯಶಃ ಒಂದು ಏಕರೇಖಾತ್ಮಕ ಸ್ರೋತವಲ್ಲ. ಅದು ಕಾಲದಿಂದ ಕಾಲಕ್ಕೆ ಬದಲಾಗುತ್ತಿದೆ ಎಂಬುದನ್ನು ನಾವು ಗುರುತಿಸುವುದಿಲ್ಲ. ಈ ಹಂತಗಳನ್ನು ಚೆನ್ನಾಗಿ ಅರಿಯಬೇಕು. ಕೆಲ ಸಂದರ್ಭಗಳಲ್ಲಿ ನಿರ್ಣಾಯಕವಾದ ಬದಲಾವಣೆಯನ್ನು ತರಲಿಕ್ಕೆ ಕಾರಣವಾದ ಅಂಶಗಳ ಅಧ್ಯಯನ ಬಾಹ್ಯವಿಮರ್ಶೆಯಲ್ಲಿ ಇನ್ನೂ ಒಂದು ಕೊರತೆಯಾಗಿಯೇ ಉಳಿದಿದೆ. ಸ್ವಾತಂತ್ರ್ಯಪೂರ್ವದಲ್ಲಿ ವಸಾಹತುಶಾಹಿ ಕೋಮುವಾದವನ್ನು ಬೆಳೆಸಿತು ಹಾಗೂ ಈಗ ಭಾರತೀಯ ಬೂರ್ಶ್ವಾಗಳಿಗೆ ಅದನ್ನು ಮುಂದುವರಿಸುವ ಸರದಿ ಬಂದಿದೆ ಎಂಬ ತೀರ ಯಾಂತ್ರಿಕ ನಿರ್ಣಯಗಳು ಈಗ ನಾವು ನಡೆಸಬೇಕಾಗಿರುವ ಕಷ್ಟದ ಕೆಲಸಕ್ಕೆ ಕೆಲವೊಮ್ಮೆ ಉಪದ್ರವಕಾರಿಯಾಗಿ ಪರಿಣಮಿಸುತ್ತವೆ.

ಮೂರನೆಯದಾಗಿ, ಈ ಮೈಲಿಗೆಯ ಸಂಗತಿಯಿಂದ ತಪ್ಪಿಸಿಕೊಳ್ಳುವ ಭರದಲ್ಲಿ ನಾವು ಕೋಮುವಾದವನ್ನು ಸಂಘಟನಾತ್ಮಕವಾಗಿ ಹಾಗೂ ಸೈದ್ಧಾಂತಿಕವಾಗಿ ಏಕರೂಪಿ ಎಂದುಕೊಳ್ಳುತ್ತೇವೆ. ಇದರಲ್ಲಿನ ದೊಡ್ಡ ಒಡಕುಗಳು ಇನ್ನೂ ಕಾಣಿಸಿಕೊಳ್ಳಬೇಕಿದೆ ಹಾಗೂ ಅದರ ನಿಯಮಗಳು ಫ್ಯಾಸಿಸ್ಟ್ ಲಕ್ಷಣದಿಂದಾಗಿ ಅಂಥ ಆಂತರಿಕ ವಿಭಾಗಗಳು ಹೊರಗೆ ಕಾಣಿಸಿಕೊಳ್ಳುವುದೂ ಕಷ್ಟವೇ. ಅದರಲ್ಲೂ ಹಿಂದೂ ಕೋಮುವಾದದಲ್ಲಿ ಏಕತೆ ಯಾವುದೇ ಕಾಲದಲ್ಲೂ ಸಂಪೂರ್ಣವಾಗಿ ಇರಲಿಲ್ಲ. ಬಲಪಂಥವನ್ನೂ ಏಕರೂಪಿ ಎಂದು ಗ್ರಹಿಸುವುದರಿಂದ ಅದು ಹೊಂದಿರುವುದಕ್ಕಿಂತ ಹೆಚ್ಚಿನ ಸಮತೆಯನ್ನು ಆರೋಪಿಸುವುದಲ್ಲದೇ ಅದರ ಕೋಮುವಾದೀ ತಂತ್ರಗಳು ಹುಟ್ಟುವುದಕ್ಕೆ ಮೂಲ ಕಾರಣವಾದ ಆಂತರಿಕ ಕಲಹಗಳನ್ನು ಮರೆಮಾಚುತ್ತೇವೆ. ಒಂದು ಉದಾಹರಣೆ ಎಂದರೆ ಆರ್. ಎಸ್. ಎಸ್. ಎಂದೂ ಹಿಂದೂ ಕೋಮುವಾದದ ವಿಶಾಲ ಜಗತ್ತಿನ ಮೇಲೆ ತನ್ನ ಸಂಪೂರ್ಣ ಸಂಘಟನಾತ್ಮಕ ಆಳ್ವಿಕೆಯನ್ನು ಹೊಂದಿರಲಿಲ್ಲ ಎಂಬುದನ್ನು ನಂಬಲು ನಮಗಿನ್ನೂ ಸಾಧ್ಯವಾಗದಿರುವುದು.

ಎರಡು ಕಾರಣಗಳಿಂದಾಗಿ ಇಂಥ ಪ್ರಯತ್ನ ಅಪಾಯಕಾರಿಯಾಗಬಹುದು. ಮೊದಲನೆಯ ಕಾರಣ ಸರಳವಾಗಿದೆ; ಆದರೆ ಎರಡನೆಯದು ಹಾಗಿಲ್ಲ. ಆರ್. ಎಸ್. ಎಸ್. ತನ್ನ ತಂತ್ರವನ್ನು ಅಪರೂಪಕ್ಕೆಲ್ಲಾದರೂ ಜಾಹೀರುಪಡಿಸುತ್ತದೆ. ನಮ್ಮ ರಾಜಕಾರಣಿಗಳು ತಮ್ಮ ಯೋಜನೆಗಳನ್ನು ಸಾರುವುದಿಲ್ಲ ಎಂಬುದು ಸರಿಯಲ್ಲ. ಕಾಂಗ್ರೆಸ್ಸು ಹಾಗೂ ಕಾಂಗ್ರೆಸ್ಸಿನಂಥ ಸಂಸ್ಥೆಗಳು ಬಹುಶಃ ಆರ್ಥಿಕ ಅಂಶಗಳನ್ನೊಂದು ಬಿಟ್ಟರೆ ತಮ್ಮ ಉಳಿದೆಲ್ಲ ಪಟ್ಟುಗಳನ್ನು ಹೆಚ್ಚುಕಡಿಮೆ ಪಾರದರ್ಶಕವಾಗಿ ಪ್ರಚಾರ ಮಾಡುತ್ತವೆ. ಅದಕ್ಕೆ ಕಾರಣ ಕಾಂಗ್ರೆಸ್ಸಿನ ಸಂಘಟನೆ ಅಷ್ಟು ಭದ್ರವಾಗಿ ಕಟ್ಟಿದ್ದಲ್ಲ. ಹಾಗೂ ಯಾವುದೇ ರೀತಿಯ ಸಿದ್ಧಾಂತ ಅಥವಾ ಏಕೋದ್ದೇಶ ಕಾಂಗ್ರೆಸ್ ವಲಯದಲ್ಲಿ ಸಂಪೂರ್ಣವಾಗಿ ಶಿಥಿಲವಾಗಿ ಹೋಗಿದೆ. ಹಾಗಾಗಿ ಬೌದ್ಧಿಕ ಮಟ್ಟದಲ್ಲೂ ಕಾಂಗ್ರೆಸ್ಸಿನ ತಂತ್ರಗಳನ್ನು ಅಭ್ಯಸಿಸುವುದು ಒಂದು ಸವಾಲೇನಲ್ಲ. ಕಮ್ಯುನಿಷ್ಟರಿಗೆ ಒಂದು ತೀರ ಹಳೆಯದಾದ (ಹಾಗೂ ತೀರ ಭಯಾನಕ ಕೂಡ) ಸಂಚುಗಳ ಸಂಪ್ರದಾಯವಿದೆಯೇನೋ ನಿಜ. ಆದರೆ ದೀರ್ಘಕಾಲ ಪ್ರಜಾಪ್ರತಿನಿಧಿ ಸರ್ಕಾರದ ಸಂಪ್ರದಾಯದಲ್ಲಿ ಪಳಗಿಸಲ್ಪಟ್ಟದ್ದರಿಂದ ಅದರ ಪ್ರಣಾಳಿಕೆಯನ್ನು ಗೂಢಚಾರಿಕೆ ಮಾಡಿ ಕಂಡುಹಿಡಿಯಬೇಕಿಲ್ಲ. 1951ರ ನಂತರ ಕಮ್ಯುನಿಸ್ಟ್ ಪಕ್ಷ ಪ್ರತೀ ರಂಗದಲ್ಲೂ ಮಹತ್ವಾಕಾಂಕ್ಷೆಯಿಂದ ತುಂಬಿದ ತನ್ನ ಸಿದ್ಧಾಂತಗಳನ್ನು ಭಕ್ತಿಯಿಂದ ಪ್ರಕಟಿಸುತ್ತಾ ಬಂದಿದೆ. ಅದೇ ಬಲಪಂಥೀಯರಿಗೆ ಮಾತ್ರ ತೀರ ನಿಗೂಢವಾದ ಯೋಜನೆಗಳಿರುತ್ತವೆ. ಆರ್. ಎಸ್. ಎಸ್.ನ ಶಿಖರಪ್ರಾಯರಾದ ಹಿರಿಯ ಮುಂದಾಳುಗಳು ಸಾರ್ವಜನಿಕ ಜಗತ್ತಿನಿಂದ ಹೊರತಾಗಿಯೇ ಇದ್ದಾರೆ. ಇದು ಉಳಿದ ಬಹಳ ಪ್ರಜಾತಾಂತ್ರಿಕ ಸಂಘಟನೆಗಳಿಗಿಲ್ಲದ ಅವಕಾಶವನ್ನೂ ಆರ್. ಎಸ್. ಎಸ್.ಗೆ ನೀಡುತ್ತದೆ. ಈ ರೀತಿಯ ಗೂಢ ವ್ಯವಹಾರವೇ ಪ್ರಜಾತಂತ್ರಕ್ಕೆ ವಿರೋಧಿ ಎಂಬುದು ನಿಜ. ಇದು ಒಂದು ವಿವಾದಾತ್ಮಕ ವಿಷಯವೇನೋ ಸರಿ. ಆದರೆ ಆಂತರಿಕವಾಗಿ ಕ್ರಿಯೆಗಳು ಹೇಗೆ ನಡೆಯುತ್ತಿವೆ ಎಂದು ತಿಳಿಯ ಬಯಸುವವರಿಗೆ ಅದೊಂದು ಕ್ಷುದ್ರ ಸಮಾಧಾನ.

ಎರಡನೆಯ ಪ್ರಕಾರದ ಅಡೆ-ತಡೆಗಳು ಐಡಿಯಾಲಜಿಗೆ ಸಂಬಂಧಿಸಿದ್ದು. ಆರ್. ಎಸ್. ಎಸ್., ಬಿ. ಜೆ. ಪಿ. ಮುಂದಾಳುಗಳು ತಾವೇ ಸೃಷ್ಟಿಸಿಕೊಂಡ ತಾತ್ವಿಕ ಪ್ರಪಂಚದಲ್ಲಿ ಕೆಲಸ ಮಾಡುತ್ತಾರೆ. ಹನ್ನಾ ಆರಂಟ (Hanna Arandt)ರವರು ಇಂಥದೇ ಬೇರೆ ಸನ್ನಿವೇಶದಲ್ಲಿ ಫ್ಯಾಸಿಸ್ಟ್ ರಚನೆಗಳು ಹುಟ್ಟುಹಾಕುವ ಇಬ್ಬಗೆಯ ಭ್ರಮೆಗಳನ್ನು ಗುರುತಿಸಿದ್ದಾರೆ.[1] ಜನರಿಗೆ ಮುಂದಾಳುಗಳನ್ನು ನಿರೂಪಿಸಲಾಗದಂತೆ ಅವರ ಸುತ್ತ ಕೆಳಹಂತದ ಮುಂದಾಳುಗಳ ವ್ಯೂಹಗಳೇ ಇದ್ದರೆ ಮುಂದಾಳುಗಳಿಗೆ ಕೂಡ ಜನರ ಜೊತೆ ಸಂಬಂಧ ಇರುವುದಿಲ್ಲ.[2] ಈ ಪರಿಸ್ಥಿತಿ ಪ್ರಚಾರ ಮತ್ತು ನಂಬಿಕೆಯ ಮಧ್ಯೆ ಈ ಮೊದಲೇ ಸೂಚಿಸಿದ ಒಂದು ಒರಟು ವ್ಯತ್ಯಾಸವನ್ನು ಹುಟ್ಟುಹಾಕುತ್ತದೆ. ಸಿನಿಕ ಸುಳ್ಳುಗಳು, ಮಿಥ್ಯಾ ಶ್ರದ್ಧೆ ಹಾಗೂ ತಾವೇ ಸೃಷ್ಟಿಸಿಕೊಂಡ ಭ್ರಮೆಗಳಲ್ಲಿನ ಗಾಢನಂಬಿಕೆ ಇವುಗಳ ಮಿಶ್ರಣದಲ್ಲಿ ನಿರ್ಣಯಗಳು ಇರುತ್ತವೆ.[3] ಈ ಮಟ್ಟಿಗೆ ತಮ್ಮ ಪ್ರಚಾರಗಳಿಗೆ ಅವರು ತಾವೇ ಭಾಗಶಃ ಬಲಿಯಾಗಿದ್ದಾರೆ ಎಂದು ಅವರನ್ನು ಗ್ರಹಿಸಬೇಕಾಗುತ್ತದೆ. ಈ ಸ್ಥಿತಿಯನ್ನು ತಪ್ಪಾಗಿ ತಿಳಿದು ಎಡಪಂಥೀಯರು ತಮ್ಮದೇ ಶೈಲಿ ಹಾಗೂ ಗುರಿಯನ್ನು ಬಲಪಂಥೀಯರಿಗೆ ಆರೋಪಿಸುತ್ತಾರೆ. ಆದರೆ ಮನುಷ್ಯ ಸ್ವಭಾವದ ಸ್ಥೂಲ ಸಾಮ್ಯಗಳನ್ನು ಅಲ್ಲಗಳೆಯದೇ ಈ ಎರಡೂ ಒಂದೇ ಅಲ್ಲ ಎಂದು ಪ್ರತಿಪಾದಿಸುವುದು ಶಕ್ಯವಿದೆ. ನಮಗಿರುವ ಸಮಸ್ಯೆ ಎಂದರೆ ಈ ಪರಿಸ್ಥಿತಿಯನ್ನು ನೇರಗ್ರಹಿಕೆಯಿಂದ ಕಟ್ಟಿಕೊಡಲು ಆಗದಿರುವುದು. ಇಲ್ಲಿ ತರ್ಕವನ್ನೂ ಆಧರಿಸಬೇಕಾಗುತ್ತದೆ ಹಾಗೂ ಕೆಲವೊಮ್ಮೆ ಕಲ್ಪನೆಯ ಮೊರೆಹೋಗಬೇಕಾಗುತ್ತದೆ.ಏನೂ ಮಾಡದೇ ಉಳಿಯುವುದಕ್ಕಿಂತ ಇದು ಒಳ್ಳೆಯದು. ನಾವು ಕಾಲಾನುಕ್ರಮಣಿಕೆಯ ಸೂಕ್ಷ್ಮಗಳನ್ನು ಪ್ರವೇಶಿಸುವುದಕ್ಕೂ ಪೂರ್ವದಲ್ಲಿ ಕೋಮುವಾದೀ ನಿರ್ಣಯಗಳಿಗೆ ಸಂಬಂಧಿಸಿ ಇರುವ ಕೆಲ ಭ್ರಮೆಗಳ ಕುರಿತು ಒಂದು ತೀರ್ಮಾನಕ್ಕೆ ಬರುವ ಅವಶ್ಯಕತೆ ಇದೆ. ಅಂತಹವುಗಳಲ್ಲಿ ಒಂದು ತೀರ ಸಾಮಾನ್ಯವಾದ ಆದರೆ ತಿರಸ್ಕರಿಸಬೇಕಾದ ಒಂದು ಭ್ರಮೆಯನ್ನು ಕೈಬಿಡುವ. ಅದೆಂದರೆ ಆರ್. ಎಸ್.ಎಸ್. ಎಂದರೆ ಹಿಂದಿನ ಜನಸಂಘ ಅಥವಾ ಈಗಿನ ಬಿ.ಜೆ.ಪಿ.ಯ ಸ್ವಯಂಸೇವಕ ಸೈನ್ಯ ಎಂಬುದು. ಇದು ಸತ್ಯದ ಸರೀ ಹಿಂದು ಮುಂದಾದ ಗ್ರಹಿಕೆ. ಆರ್. ಎಸ್. ಎಸ್. ಪೂರ್ಣಾವಧಿಯಾಗಿ ಮುಡುಪಾದ ಕಾರ್ಯಕರ್ತರಿಂದ ರಚಿತವಾದ ಒಂದು ಸಂಘಟನೆ. ಬಿ. ಜೆ. ಪಿ. ಇದರ ಪ್ರಜಾಪ್ರಾತಿನಿಧ್ಯದ ವಿಸ್ತರಣೆ ಅಷ್ಟೆ. ಜೊತೆಗೆ ಬಹುಶಃ ಕಾಲ ಮತ್ತು ದೇಶಕ್ಕೆ ಅಗತ್ಯವಿರುವ ಸ್ವಲ್ಪ ಮಟ್ಟಿಗಿನ ಸ್ವಾಯತ್ತತೆ ಬಿ. ಜೆ. ಪಿ. ಗೆ ಇದೆ.

ಬಿ. ಜೆ. ಪಿ.ಯ ಜೊತೆಗೇ ವಿ. ಹೆಚ್. ಪಿ., ವಿದ್ಯಾರ್ಥಿ ಪರಿಷದ್, ಭಾರತೀಯ ಮಜದೂರ ಸಂಘ ಎಂಬ ಕಾರ್ಮಿಕ ಸಂಘಟನೆ ಮುಂತಾದವು ಕೂಡ ಮುಂದೆ ನಿಲ್ಲುವ ಸಂಘಟನೆಗಳು. ಈ ಪ್ರತಿಯೊಂದು ಸಂಘಟನೆಯಲ್ಲೂ ಕೇಂದ್ರ ವ್ಯಕ್ತಿ ಆರ್. ಎಸ್. ಎಸ್. ಪ್ರಚಾರಕನಾಗಿರುತ್ತಾನೆ. ಇವರು ಈ ಸಂಘಟನೆಗಳು ತೆಗೆದುಕೊಳ್ಳುವ ನಿರ್ಣಯಗಳು ಹಾಗೂ ಉನ್ನತ ಸ್ಥಾನಗಳಿಗೆ ಎತ್ತಲ್ಪಡುವ ಜನರು ತಮ್ಮ ಆಯ್ಕೆಗೆ ಸರಿಯಾಗಿರುವಂತೆ ನೋಡಿಕೊಳ್ಳುತ್ತಾರೆ. ಅವರ ಜೊತೆ ಆರ್. ಎಸ್. ಎಸ್. ಹಿನ್ನೆಲೆ ಇಲ್ಲದವರನ್ನೂ ಅವರು ಕಡಿಮೆ ಗುಣಮಟ್ಟದವರು ಹಾಗೂ ಎರಡನೆಯ ದರ್ಜೆಯವರು ಎಂದು ನೋಡುತ್ತಾರೆ. ಹಾಗೂ ಅಂಥವರು ಲೆಕ್ಕದ ಭರ್ತಿಗೆ ಮಾತ್ರ ಇರುತ್ತಾರೆ. ಅವರಿಗೆ ನಿರ್ಣಯ ತೆಗೆದುಕೊಳ್ಳುವ ಆಕರ್ಷಕ ಕೋಣೆಗಳೊಳಗೆ ಅಪರೂಪಕ್ಕೊಮ್ಮೆ ಪ್ರವೇಶ ಸಿಗುತ್ತದೆ. ಸ್ಥಾನಿಕವಾಗಿ

---

1) ಹನ್ನಾ ಆರಂಟ, *ದಿ ಒರಿಜಿನ್ಸ ಆಫ್ ಟೋಟ್ಯಾಲಿಟೇರಿಯನಿಸಂ*

2) ಅದೇ

3) ಮಾರ್ಟಿನ್ & ಸೆಲಿಗರ್, *ದಿ ಮಾರ್ಕ್ಸಿಸ್ಟ ಕನ್‌ಸೆಪ್ಷನ್ಸ್ ಆಫ್ ಐಡಿಯಾಲಜಿ : ಎ ಕ್ರಿಟಿಕಲ್ ಎಸ್ಸೆ,* ಕ್ಯಾಂಬ್ರಿಜ್ ಯೂನಿವರ್ಸಿಟಿ ಪ್ರೆಸ್. 1977

ಸಾಪ್ತಾಹಿಕ ಹಾಗೂ ಮಾಸಿಕ ಬೌದ್ಧಿಕಗಳು, ಪ್ರಾದೇಶಿಕ ಶಿಬಿರಗಳು ಮುಂತಾದ ಚಟುವಟಿಕೆಗಳಿಂದ ಆರ್.ಎಸ್. ಎಸ್. ಗುಂಪಿನ ಆಳ್ವಿಕೆಯನ್ನು ಕಾಯ್ದುಕೊಂಡು ಬರಲಾಗುತ್ತದೆ. ಇವುಗಳ ಅರ್ಥ ಹಾಗೂ ಮಹತ್ವ ಯಾವುದೇ ವ್ಯಾಪಕ ಪ್ರಚಾರಕ್ಕೆ ಒಳಪಡದೇ ದೀಕ್ಷೆ ಹೊಂದಿದವರಿಗೆ ಮಾತ್ರ ಗೊತ್ತಿರುತ್ತದೆ.

ಈ ಎಲ್ಲ ಸಂಘಟನೆಗಳ ಮೇಲೆ ಆರ್. ಎಸ್. ಎಸ್. ತನ್ನ ಹಿಡಿತವನ್ನು ಹೇಗೆ ಉಳಿಸಿಕೊಂಡು ಬರುತ್ತದೆ? ಮುಖ್ಯವಾದ ಸಂಗತಿ ಎಂದರೆ ಈ ಎಲ್ಲ ಸಂಘಟನೆಗಳಲ್ಲಿ ಸುಸಂಘಟಿತ ಅಲ್ಪಸಂಖ್ಯಾತರು ಅಸಂಘಟಿತ ಬಹುಸಂಖ್ಯಾತರನ್ನೂ ವಶದಲ್ಲಿ ಇಟ್ಟುಕೊಳ್ಳಬಹುದು. ಫ್ಯಾಸಿಸ್ಟ್ ಹಾಗೂ ಮತ್ತೊಂದು ರೂಪದಲ್ಲಿ ಸ್ಟಾಲಿನಿಸ್ಟ್ ರಚನೆಗಳಲ್ಲಿ ಮೂಲಭೂತವಾಗಿ ಅಧಿಕಾರ ಬಲದ ಆಳ್ವಿಕೆ ಇರುತ್ತದೆ. ಎರಡನೆಯದಾಗಿ, ಈ ವ್ಯವಸ್ಥೆ ಆರ್. ಎಸ್. ಎಸ್. ಶಿಷ್ಯರಿಗೆ ಉನ್ನತ ಸ್ಥಾನಮಾನಗಳಿಂದ ಸಾರ್ವಜನಿಕ ಹುದ್ದೆಗಳಿಂದ ದೂರವಿರುವುದನ್ನೂ ಅನಿವಾರ್ಯವನ್ನಾಗಿಸುತ್ತದೆ. ಹಾಗಾಗಿ ಅವರು ಸಂಪತ್ತು ಹಾಗೂ ಅಧಿಕಾರದಿಂದ ಭ್ರಷ್ಟರಾಗುವುದಿಲ್ಲ. ಪ್ರಚಾರಕರ ಸರಳವಾದ , ಕೆಲವೊಮ್ಮೆ ಕಷ್ಟಕರವಾದ ಜೀವನಶೈಲಿ ಸುಖೀಜೀವನವನ್ನು ನಡೆಸುತ್ತಿರುವ ಹೊರಗಿನವರಲ್ಲಿ ಶ್ಲಾಘನೆಯನ್ನು ಹಾಗೂ ಪ್ರಭಾವವನ್ನು ಬೀರುವುದರಲ್ಲಿ ಇದನ್ನು ಕಾಣಬಹುದು. ಆರ್. ಎಸ್. ಎಸ್.ನ ಒಳತಿರುಳಿನ ಭಾಗದ ಜನ ಐಹಿಕ ಸುಖವನ್ನೂ ತ್ಯಜಿಸುವುದರಿಂದ ಹಾಗೂ ಅವರಲ್ಲಿನ ಬಹುಪಾಲು ಕಾರ್ಯಕರ್ತರು ಜೀವಾವಧಿ ಬ್ರಹ್ಮಚಾರಿಗಳಾಗಿರುವುದರಿಂದ ಅವರಿಗೆ ಸಿಗುವ ಪ್ರತಿಫಲವೆಂದರೆ ಬಲ. ಆರ್. ಎಸ್.ಎಸ್.ನ ಆಳದ ಸ್ತರಗಳು ಇಂಥ ಸ್ವಸಂತುಷ್ಟ ಮಾನಸಿಕ ಜಗತ್ತಾಗಿದ್ದು ಅವರು ಆಧುನಿಕ ಸಾಮಾಜಿಕ ಮಾಧ್ಯಮಗಳಾದ ಭಾರತೀಯ ಸರ್ಕಾರ ಮುಂತಾದವನ್ನೂ ಹೃತ್ಪೂರ್ವಕವಾಗಿ ಒಪ್ಪಿಕೊಳ್ಳಲಾರದು. ಈ ವಲಯಗಳಲ್ಲಿ ರಾಜ್ಯವೆಂದರೆ ಒಂದು ಭ್ರಷ್ಟ ಹಾಗೂ ಪತನ ಹೊಂದುತ್ತಿರುವ ಶಕ್ತಿ. 60ರ ದಶಕದಲ್ಲಿ ಬಲರಾಜ ಮಧೋಕರಂಥ ಸಾರ್ವಜನಿಕ ಮುಂದಾಳುಗಳನ್ನು ಕೈಬಿಟ್ಟು ಎ. ಬಿ. ವಾಜಪೇಯಿಯವರನ್ನು ಅವರ ಪಟ್ಟಕ್ಕೇರಿಸಿ ಪಕ್ಷವನ್ನು ವಿಲಾಸ ಹಾಗೂ ಪತನದ ಹಾದಿಯಿಂದ ಎತ್ತಲಾಯಿತೆಂದು ನಿಟ್ಟುಸಿರು ಬಿಟ್ಟದ್ದಕ್ಕೆ ಆರ್. ಎಸ್. ಎಸ್.ನ ಇಂಥ ಮನಸ್ಥಿತಿಯೇ ಕಾರಣ. ಮೂರನೆಯದಾಗಿ ಅದರ ಮುಖ್ಯ ಸಂದೇಶ, ವಿಧಾನಗಳು ಹಾಗೂ ಆಜ್ಞಾಪನೆ-ಬದ್ಧತೆಗಳು ಮೌಖಿಕ ಹಾಗೂ ಅನಧಿಕೃತವಾಗಿದ್ದು ಸ್ಪಷ್ಟವಾಗಿ ಹಿಡಿದಿಡಲು ಅಶಕ್ಯವಾಗಿವೆ. ಅದರ ಆಪ್ತವಲಯಗಳ ಆಂತರಿಕ ಲೋಕದಲ್ಲಿ ಹೆಚ್ಚಿನ ಸ್ವಾತಂತ್ರ್ಯಕ್ಕೇನಾದರೂ ಆಸ್ಪದವಿದೆಯೋ ಅಥವಾ ಹೊರಗೆ ಪ್ರಚಲಿತದಲ್ಲಿರುವ ವ್ಯಕ್ತಿಪೂಜೆ ಅಲ್ಲೂ ಮುಂದುವರಿಯುತ್ತಿದೆಯೋ ಎಂಬುದೂ ಸರಿಯಾಗಿ ಸ್ಪಷ್ಟವಿಲ್ಲ. ಅಲ್ಲೂ ಕೂಡ ಸ್ವಾತಂತ್ರ್ಯ ಮಿತವಾಗಿರುವ ಸಾಧ್ಯತೆಯೇ ಬಹಳವಾಗಿದೆ. ಅದಿಲ್ಲದಿದ್ದರೆ ಆರ್. ಎಸ್. ಎಸ್. ಏಕೆ ತೀರ ಪ್ರಾಥಮಿಕ ಹಂತದ ವರಸೆಗಳಲ್ಲಿ ತಪ್ಪು ಮಾಡುತ್ತಿದೆ ಹಾಗೂ ಏಕೆ ದಶಕಗಳಿಂದಲೂ ಸಾಧಾರಣವಾಗಿ ಅಪಕ್ವ ಯುಕ್ತಿಗಳನ್ನು ಹೊಂದಿದೆ ಎಂಬುದನ್ನು ವಿವರಿಸುವುದು ಕಷ್ಟವಾಗುತ್ತದೆ. ಸ್ವಯಂ ಸೇವಕರಲ್ಲಿ ಹೆಚ್ಚು ಹೆಚ್ಚಿನ ವಿಧೇಯತೆ ಹಾಗೂ ಭಾವನಾತ್ಮಕತೆಯನ್ನು ಪ್ರಚೋದಿಸಿ ಇಂಥ ನ್ಯೂನತೆಗಳನ್ನು ಮುಚ್ಚುವ ಪ್ರಯತ್ನಗಳು ನಡೆಯುತ್ತವೆ. ಇಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಾದ ಮುಖ್ಯ ಅಂಶವೆಂದರೆ ಇಂಥ ರಚನೆಗಳನ್ನು ಶುದ್ಧ ಆರ್ಥಿಕ ಪರಿಭಾಷೆಯಲ್ಲಿ ವಿಶ್ಲೇಷಿಸುವುದು ಶಕ್ಯವಿಲ್ಲ. ಬದಲಾಗಿ ಅವುಗಳನ್ನು ಅಧಿಕಾರ (Power)ವನ್ನು ಕಟ್ಟುವುದಕ್ಕಾಗಿ ಅಧಿಕಾರದಿಂದಲೇ ಕಟ್ಟಲ್ಪಟ್ಟ ರಚನೆಗಳನ್ನಾಗಿ ನೋಡಬೇಕಾಗುತ್ತದೆ. ಇದೆಲ್ಲ ನಡೆಯುವುದೂ ಆರ್ಥಿಕ ನಿರ್ಬಂಧದಲ್ಲಿ ಎನ್ನುವುದು ಒಂದು ರೀತಿಯ ವಾದವಾಗಬಹುದು. ಆದರೆ ಇದರಲ್ಲಿ ಎಲ್ಲ ಹಂತಗಳಲ್ಲೂ ವೈಯಕ್ತಿಕವಾದ ಆರ್ಥಿಕ ಹಂಬಲಗಳಿವೆ ಎಂದು ಭ್ರಮಿಸುವುದು ತೀರ ವಿಭಿನ್ನವಾದ ಹಾಗೂ ತಪ್ಪಾದ ತಿಳುವಳಿಕೆ. ಆರ್. ಎಸ್. ಎಸ್. ಮುಂದಾಳತ್ವವು ಮೂಲತಃ ಅಧಿಕಾರಾಕಾಂಕ್ಷೆಯಿಂದ ಚಾಲನೆಯಲ್ಲಿದೆ.

ಪ್ರತಿಷ್ಠಿತರ ಭಯೋತ್ಪಾದನೆ :

ಆರ್. ಎಸ್. ಎಸ್.ನ ಸಮರ ಯುಕ್ತಿಯನ್ನು ನಾವು ಮೂರು ಹಂತಗಳಾಗಿ ವಿಭಾಗಿಸಬಹುದು.

ಅ) ೫೦ರ ದಶಕದ ಆದಿಯಿಂದ 60ರ ದಶಕದ ಆದಿಯವರೆಗೆ

ಆ) ೭೦ರ ದಶಕದ ಆದಿಯಿಂದ 80ರ ದಶಕದ ಅಂತ್ಯದವರೆಗೆ

ಇ) ವರ್ತಮಾನದ ಸ್ಥಿತಿ

1944ರ ನಂತರದ ಮೂರು–ನಾಲ್ಕು ವರ್ಷಗಳು ಇವೆಲ್ಲಕ್ಕಿಂತ ಪೂರ್ವದ ಅವಸ್ಥೆಯಾಗಿದೆ. ಅದನ್ನು ಸಂಕ್ಷಿಪ್ತವಾಗಿ ವಿವರಿಸುವ ಅವಶ್ಯಕತೆ ಇದೆ. ಸ್ವಾತಂತ್ರ್ಯಾನಂತರದ ಅಮಾನುಷ ನರಮೇಧ, ಅದನ್ನು ಅನುಸರಿಸಿದ ವಿಭಜನೆ, ಎದೆಯೊಡೆದುಕೊಂಡ ಜನರ ವಲಸೆ, ಕಹಿನೆನಪುಗಳು ಇವೆಲ್ಲ ಒಂದು ಅತಂತ್ರ ಸ್ಥಿತಿಯನ್ನು ನಿರ್ಮಿಸಿದವು.ಇದು ಆರ್.ಎಸ್.ಎಸ್.ನ ಬೆಳವಣಿಗೆಗೆ ಆದರ್ಶ ವಾತಾವರಣವನ್ನು ನಿರ್ಮಿಸಿರಬಹುದು.[4] ಅದಕ್ಕಿಂತ, ಕಾಂಗ್ರೆಸ್ಸಿನಲ್ಲೇ ಒಂದು ಗುಂಪು ಹಿಂದೂ ಕೋಮುವಾದವನ್ನು ಸ್ವಲ್ಪ ಸಹಾನುಭೂತಿಯಿಂದ ನೋಡುತ್ತಿದ್ದು ಗಾಂಧಿ ಹಾಗೂ ನೆಹರೂ ಅವರ ಕಟು ದೃಷ್ಟಿಗೆ ಒಳಗಾಗಿತ್ತು. ಇದನ್ನು ಆರ್. ಎಸ್. ಎಸ್. ಕೂಡ ಗ್ರಹಿಸಿತ್ತು ಎಂಬುದು ಅವರು ನೆಹರೂರನ್ನು ಕಡೆಗಣಿಸಿ, ವಲ್ಲಭಭಾಯಿ ಪಟೇಲರನ್ನು ಹಾಗೂ ರಾಜೇಂದ್ರ ಪ್ರಸಾದರನ್ನು ವೈಭವೀಕರಿಸಲು ಪುನಃ ಪುನಃ ಪ್ರಯತ್ನ ನಡೆಸಿದ್ದರಿಂದ ಗೊತ್ತಾಗುತ್ತದೆ. ರಾಷ್ಟ್ರೀಯ ಹೋರಾಟದಲ್ಲಿ ಹಿಂದೂ ಕೋಮುವಾದಿಗಳು ಸ್ವಲ್ಪ ವಿಧೇಯ ಪಾತ್ರವನ್ನೇ ವಹಿಸಿದರೂ ಅದು ಇಂಥ ಬೆಳವಣಿಗೆಯನ್ನು ತಡೆಯಲು ಸಾಕಾಗಿರಲಿಲ್ಲ. ಆದರೆ ಈ ಹಂತದಲ್ಲಿ ಆರ್. ಎಸ್. ಎಸ್. ಮುಗ್ಗರಿಸಿ, ಗಾಂಧಿಯವರ ಹತ್ಯೆಯ ಕಾರಣದಿಂದ ದುರ್ಬಲವಾಯಿತು. ಅಷ್ಟರ ನಂತರ ಗಾಂಧಿಯವರ ಕುರಿತು ಆರ್. ಎಸ್. ಎಸ್.ನ ಪ್ರತಿಕ್ರಿಯೆ ಎಂದರೆ ವೈಭವೀಕರಣ ಹಾಗೂ ಟೀಕೆಗಳ ಮಿಶ್ರಣವಾಗಿತ್ತು.[5] ಆಗ ಆರ್. ಎಸ್. ಎಸ್.ನ್ನು ನಿಷೇಧಿಸಲಾಯಿತು. ಹಾಗೂ ಆರ್. ಎಸ್. ಎಸ್. ನ ಮುಂದಾಳುಗಳು ಅದೊಂದು ಅಹಿಂಸಾತ್ಮಕ ಸಾಮಾಜಿಕ–ಸಾಂಸ್ಕೃತಿಕ ಸಂಘಟನೆ ಎಂದು ಲಿಖಿತ ಭರವಸೆ ನೀಡಿದ ನಂತರ ನಿಷೇಧವನ್ನು ಹಿಂತೆಗೆದುಕೊಳ್ಳಲಾಯಿತು. ಆರ್. ಎಸ್. ಎಸ್.ನ ನಂತರದ ಬದುಕಿನ ಮೇಲೆ ಇದೊಂದು ಕರಿನೆರಳಾಗಿ ಕವಿಯಿತು.[6] ಹಾಗೂ ಆರ್, ಎಸ್. ಎಸ್. ಸ್ವಯಂಸೇವಕರು 80ರ ದಶಕದಲ್ಲೂ ಈ ವಿಷಯದ ಪ್ರಸ್ತಾಪದಿಂದ ವ್ಯಗ್ರರಾಗುತ್ತಿದ್ದರು. ಎಂ. ಎಸ್. ಗೋಳ್ವಲಕರ ಅವರು ಶ್ಯಾಮ ಪ್ರಸಾದ ಮುಖರ್ಜಿಯವರಿಗೆ ಜನಸಂಘವನ್ನು ಸ್ಥಾಪಿಸುವಲ್ಲಿ ಸಹಕರಿಸಿ ಆರ್. ಎಸ್. ಎಸ್.ನ ಕಳಂಕವನ್ನು ತೊಳೆಯುವ ಪ್ರಯತ್ನ ನಡೆಸಿದರು. ಗಾಂಧೀಜಿಯವರು ತಮ್ಮ ಜೀವಿತಾವಧಿಯಲ್ಲಿ ಹೇಗೆ ಸುದೀರ್ಘ ರಾಷ್ಟ್ರೀಯ ಹೋರಾಟದಿಂದ ಭಾರತಕ್ಕೆ ಸೇವೆ ಸಲ್ಲಿಸಿದರೋ ಹಾಗೇ ತಮ್ಮ ಬಲಿದಾನದಿಂದ ಸ್ವತಂತ್ರ ಭಾರತಕ್ಕೆ ಈ ರೂಪದಲ್ಲಿ ಸೇವೆ ಸಲ್ಲಿಸಿದರು ಎಂಬ ವ್ಯಂಗ್ಯವನ್ನು ಕೆಲವೇ ಜನ ಗಮನಿಸುತ್ತಾರೆ. ಅವರ ಸಾವಿನಿಂದ ಕೆಲವರಿಗೆ ತೊಂದರೆಯಾದರೂ ಗಾಂಧಿಯವರು ಹಿಂದೂ ಮುಸ್ಲಿಂ ಏಕತೆಗಾಗಿ ತಮ್ಮ ಜೀವನವನ್ನೂ ಮುಡಿಪಾಗಿಟ್ಟಿದ್ದರು ಎಂಬ ಸತ್ಯ ಆರ್. ಎಸ್. ಎಸ್. ಗೆ ಸ್ಪಷ್ಟವಾಗಿ ತಿಳಿದಿತ್ತು. ಈ ಅವಧಿಯಲ್ಲಿ ಕಟ್ಟಾ ಆರ್. ಎಸ್. ಎಸ್. ಕಾರ್ಯಕರ್ತರ ಹಾಗೂ ಮುಖರ್ಜಿಯವರಂಥ ಸ್ವಯಂತಂತ್ರವಾದೀ ಲಘು ಮನಸ್ಸಿನ ಕೋಮುವಾದಿಗಳ ಮಧ್ಯೆ ಒತ್ತಡಗಳು ಹಾಗೂ ವಿಷಮತೆಗಳು ಪ್ರಧಾನವಾದವು. ಮುಖರ್ಜಿಯವರು ನಂತರ ತಮ್ಮ ಇಳಿವಯಸ್ಸಿನಲ್ಲಿ ಸೌಮ್ಯವಾದೀ ಕೋಮುವಾದವನ್ನು

---

4) ಸುಮಿತ್ ಸರ್ಕಾರ್, *ಮಾಡರ್ನ್ ಇಂಡಿಯಾ* ನ್ಯೂಡೆಲ್ಲಿ, 1983

5) ಬಲರಾಜ ಮಧೋಕ, *ಇಂಡಿಯನೈಸೇಶನ್,* ಹಿಂದ್ ಪೇಪರ್‌ಬ್ಯಾಕ್ಸ್, 1970 ಪುಟ 97

6) ಆರ್.ಎಸ್.ಎಸ್. ಸಾಪ್ತಾಹಿಕ (ಮಲಯಾಳಂ) (1990)

ಪರಿಗ್ರಹಿಸಿದ್ದರು. ಇತ್ತೀಚೆಗಿನ ಒಬ್ಬ ಲೇಖಕರು ಈ ಆಂತರಿಕ ಸಮಸ್ಯೆಯೇ ಹಿಂದೂ ಕೋಮುವಾದ ಎದುರಿಸಿದ ಅತ್ಯಂತ ವಿಷಮವಾದ ಸಮಸ್ಯೆ ಎಂದು ಸೂಚಿಸುತ್ತಾರೆ.[7] 50ರ ದಶಕದಿಂದ 70ರ ದಶಕದ ಪ್ರಾರಂಭದವರೆಗೆ ಆರ್.ಎಸ್.ಎಸ್.ನ ಯುಕ್ತಿಯನ್ನು ಸರಿಯಾಗಿ ಗ್ರಹಿಸಲು ಸಾಧ್ಯವಾಗುವ ಒಂದು ಹಂತವಿದೆ. ಈ ಯುಕ್ತಿ ವಸ್ತುನಿಷ್ಠ ಸನ್ನಿವೇಶಗಳಿಂದ ಹಾಗೂ ಅದರಲ್ಲಿ ತನ್ನ ಪಾತ್ರದ ಕುರಿತು ಇದ್ದ ವ್ಯಕ್ತಿನಿಷ್ಠ ಗ್ರಹಿಕೆಯಿಂದ ಮೂಡಿತ್ತು. ಆರ್.ಎಸ್.ಎಸ್. ಭಾರತೀಯ ವಾಸ್ತವಗಳನ್ನು ಎದುರಿಸುವಾಗ ಅದಕ್ಕೆ ಮೂರು ಭಯಗಳು ಪ್ರಧಾನವಾಗಿದ್ದವು. ಹಾಗೂ ಅದರ ಪ್ರತಿಕ್ರಿಯೆಗಳು ಅಂಥವೇ ಮೂರು ವೈರಗಳಿಂದ ಬದ್ಧವಾಗಿದ್ದವು. ಮೊದಲನೆಯದು, ಸಮಾಜವಾದ; ಎರಡನೆಯದು, ಭಾರತದಲ್ಲಿ ಮುಸ್ಲಿಮರು ಬಲಕಾಯಿಸುತ್ತಿರುವ ಹೆದರಿಕೆ; ಮೂರನೆಯದು, ಕೆಳಜಾತಿಯವರ ಪ್ರತಿಭಟನೆ ಹಾಗೂ ಆ ಮೂಲಕ ವರ್ಣಾಶ್ರಮಧರ್ಮ ಹಾಳಾಗಬಹುದೆಂಬ ಶಂಕೆ. ಅವರ ಇಡೀ ಪ್ರಚಾರ ಹಾಗೂ ಸಮರ ಯುಕ್ತಿಗಳನ್ನು ಈ ಮೂರು ಸಾಧ್ಯತೆಗಳಿಗೆ ಸಂಬಂಧಿಸಿದ ಭೀತಿ ಹಾಗೂ ಅದಕ್ಕೊಂದು ಪರ್ಯಾಯವನ್ನು ಕಂಡುಹಿಡಿಯಲಿಕ್ಕೆ ಮಾಡಿದ ಪ್ರಯತ್ನಗಳಿಗೆ ಸಂಬಂಧಿಸಿ ಅರ್ಥೈಸಬಹುದು.

ಆರ್.ಎಸ್.ಎಸ್. ''ಅವಧಿ ಸಮಾಜದವಾದ''ವನ್ನು ಗಂಭೀರವಾಗಿ, ಅಂದರೆ ಎಡಪಂಥೀಯರು ತೆಗೆದುಕೊಂಡಿದ್ದಕ್ಕಿಂತಲೂ ಗಂಭೀರವಾಗಿ ತೆಗೆದುಕೊಂಡಿತು. ಎಂ. ಎಸ್. ಗೋಳ್ವಲಕರರು ಬರೆಯುತ್ತಾರೆ ''ನಮ್ಮ ದೇಶದಲ್ಲಿ ಕಮ್ಯುನಿಸಂನ ಭೀತಿ ಮತ್ತೊಂದು ಕಡೆಯಿಂದ ವಾಸ್ತವವಾಗುತ್ತಿದೆ. ಅದೆಂದರೆ ತಮ್ಮ ಗುರಿ ಸಮಾಜವಾದ ಎಂದು ಸಾರಿದ ಇಂದಿನ ಸರ್ಕಾರದ ನೀತಿ''[9] ರಾಷ್ಟ್ರೀಯತೆಯ ಅಲೆ, ಸಾರ್ವಜನಿಕ ಉದ್ಯಮಗಳಿಗೆ ಹಾಗೂ ಯೋಜನೆಗೆ ಒತ್ತು, ಸೋವಿಯತ್ ಯೂನಿಯನ್ನಿನ ಪ್ರಶಂಸೆ, ಹಾಗೂ ಕಮ್ಯುನಿಷ್ಟರಿಗೆ ತೋರಿಸುತ್ತಿರುವ ಸಹಿಷ್ಣುತೆ ಇವು ಭಾರತವೂ ರಷ್ಯಾದ ಹಾದಿಯನ್ನು ಹಿಡಿದಿದ್ದಕ್ಕೆ ಸೂಚನೆಯಾಗಿದ್ದವು. ಈ ಯುದ್ಧದಲ್ಲಿ ಅವರು ಕಾಂಗ್ರೆಸ್ಸಿನ ಒಳಗಿದ್ದ ಕಮ್ಯುನಿಸ್ಟರನ್ನು ತಮ್ಮ ಮುಖ್ಯ ವೈರಿಗಳೆಂದು ಆಯ್ದುಕೊಂಡರು. ತದನಂತರ ಬಹುಬೇಗ ಬೇರೆ ಬೇರೆ ಸಮಾಜವಾದೀ ಪಕ್ಷಗಳೂ ಅವರ ವೈರಿಗಳಾದುವು. ಈ ವಿಚಾರಕ್ಕೆ ಸಂಬಂಧಿಸಿ ಗೋಳ್ವಲಕರರದು ಸ್ಪಷ್ಟ ನಿಲುವು. ''ಒಬ್ಬ ವ್ಯಕ್ತಿ ಹಿಂದೂ ಆಗಿರಬೇಕು ಇಲ್ಲ ಕಮ್ಯುನಿಸ್ಟನಾಗಿರಬೇಕು. ಅವನು ಎರಡೂ ಆಗಿರುವುದು ಅಸಾಧ್ಯ''.[10] ಎಡಪಂಥದ ಬಗೆಗೆ ಅಸ್ಪಷ್ಟವಾದ ಸಹಾನುಭೂತಿಯಿರುವ ಕಾಂಗ್ರೆಸ್ಸಿಗರ ವಿಭಿನ್ನ ಗುಂಪುಗಳು ಹಾಗೂ ವ್ಯಕ್ತಿಗಳ ಮೇಲೆ ಧಾಳಿ ನಡೆಸಲಾಯಿತು. ನೆಹರೂ ಹಾಗೂ ಕೃಷ್ಣ ಮೆನನ್ ಅವರ ಚಾರಿತ್ರ್ಯ ನಾಶಕ್ಕೆ ಕೂಡ ಪ್ರಯತ್ನಿಸಲಾಯಿತು.[11] ಪಟೇಲರ ಸಾವಿನ ನಂತರ ನೆಹರೂ ಅವರ ಜನಪ್ರಿಯತೆಯ ದಿನಗಳಲ್ಲಿ ಕಾಂಗ್ರೆಸ್ಸನ್ನು ಬಲಪಂಥಕ್ಕೆ ಪರಿವರ್ತಿಸುವ ಆಸೆಗಳು ಕರಗುತ್ತಿದ್ದಂತೇ ಆರ್. ಎಸ್. ಎಸ್. ಬಹಳ ಖಾರವಾಯಿತು. ನೆಹರೂ ಬದಲು ಪಟೇಲರು ಪ್ರಧಾನಿಯಾಗಿದ್ದಿದ್ದರೆ ಭಾರತವನ್ನು ಉಳಿಸಬಹುದಿತ್ತು ಎಂಬ ಒಂದು 'ರೆ' ಆಶಯ ಆರ್. ಎಸ್. ಎಸ್.ನ ಬರವಣಿಗೆಗಳಲ್ಲಿ ಪುನಃ ಪುನಃ ವ್ಯಕ್ತವಾಗುತ್ತಿದ್ದ ಸಂಗತಿ.

---

7) ಬಿ. ಡಿ. ಗ್ರಹಾಮ್. ''*ಶ್ಯಾಮ ಪ್ರಸಾದ ಮುಖರ್ಜಿ ಎಂಡ ದಿ ಕಮ್ಯುನಿಸ್ಟ್ ಆಲ್ಟರ್ನೇಟಿವ್*'' ಸೌಂಡಿಂಗ್ಸ್ ಇನ್ ಮಾಡರ್ನ್ ಸೌಥ್ ಏಶಿಯನ್ ಹಿಸ್ಟರಿ. (ನಂ) ಡಿ. ಎಸ್. ಲಾ. ಲಂಡನ್. 1968 ಪು 330-374

8) ವಾ. ಎಸ್. ಗೋಳ್ವಲಕರ *ಬಂಚ್ ಆಫ್ ಥಾಟ್.* ಬೆಂಗಳೂರು1966-25 ಪುಟ 191

9) ಅದೇ ಪುಟ 52

10) ಅದೇ ಪುಟ 187

11) ಬ್ರಿಗೇಡಿಯರ್ ಜೆ. ಪಿ. ದಳವಿ. *ದಿ ಹಿಮಾಲಯನ್ ಬ್ಲಂಡರ್* (ಕಾದಂಬರಿ)

ಕಾಂಗ್ರೆಸನ್ನು ಟೀಕಿಸುವ ಯುಕ್ತಿ ಈ ಕೆಳಗಿನ ರೂಪಗಳನ್ನು ತಳೆಯಿತು. ನೆಹರೂ ಅವರು ಚೀನಾ ಯುದ್ಧದ ಗಂಡಾಂತರವನ್ನು ಎದುರಿಸುತ್ತಿದ್ದಾಗ ಆರ್. ಎಸ್. ಎಸ್. ವಲಯಗಳು ನೆಹರೂ ವಿರೋಧಿ ಕೋರಸ್ಸಿಗೆ ತಾರಕ ಸ್ವರವನ್ನು ಸೇರಿಸಿದವು. 'ಹಿಂದೂ ಚೀನಿ ಭಾಯಿ ಭಾಯಿ' ಘೋಷಣೆ ಮುಗಿದದ್ದಕ್ಕಾಗಿ ಅವುಗಳಿಗೆ ಮಹದಾನಂದ ವಾಗಿತ್ತು. ಎಂದಿನಂತೇ ಕಾಂಗ್ರೆಸ್ಸು ಮೋಸಗಾರ ಹಾಗೂ ಭಾರತೀಯ ಸೇನೆಯ ಸೋಲು ಪೂರ್ವಯೋಜಿತ ದುರಾಡಳಿತ ಅಥವಾ ಗೊತ್ತಿದ್ದೂ ತೋರಿದ ದೌರ್ಬಲ್ಯ ಎಂಬ ವ್ಯಂಗ್ಯೋಕ್ತಿ, ವಕ್ರೋಕ್ತಿಗಳನ್ನು ಪ್ರಹರಿಸಲಾಯಿತು. ಕಾಂಗ್ರೆಸ್ಸಿನ ಅಸಾಮರ್ಥ್ಯದ ಚಿತ್ರವನ್ನು ಪುನಃ ಪುನಃ ಗಮನಕ್ಕೆ ತರುವ ಪ್ರಯತ್ನ ನಡೆಯಿತು. ಜೆ. ಪಿ. ದಳವಿಯವರ 'ದಿ ಹಿಮಾಲಯನ್ ಬ್ಲಂಡರ್' ನ್ನು ಉಪಯೋಗಿಸಿಕೊಂಡ ಪ್ರಧಾನ ಬಣವೆಂದರೆ ಆರ್.ಎಸ್.ಎಸ್. ಇದನ್ನು ಹೇಗೆ ಒಂದು ಒಳ್ಳೆ ಸೈನ್ಯವನ್ನು ದುರ್ಬಲ ರಾಜಕಾರಣಿಗಳು ಹಾಗೂ ಪತ್ರಿಕೆಯ ಕಾಲಮಿಷ್ಟರು ಸೇರಿ ಹಾಳುಗೆಡಹಿದರೆಂಬುದಕ್ಕೆ ದೃಷ್ಟಾಂತವನ್ನಾಗಿ ನೀಡಲಾಯಿತು. ಹಾಗೂ ಒಂದು ಹಳೇ ನಾಝಿ ವಿದ್ಯದ 'ನಮಗೆ ಬೆನ್ನಿನಲ್ಲಿ ಇರಿಯಲಾಯಿತು' ಎಂಬ ಚರಣವನ್ನು ಹೀಗೇ ಉಪಯೋಗಿಸಿದರು. ಲಾಲ ಬಹಾದೂರ ಶಾಸ್ತ್ರಿಯವರು ತಾಷ್ಕೆಂಟಿನಲ್ಲಿ ಸಾವನ್ನಪ್ಪಿದ ಕುರಿತು ಕಳಂಕದ ಕಥೆಗಳನ್ನು ಚಿತ್ರಿಸಲು ಆರ್. ಎಸ್. ಎಸ್. ತನ್ನೆಲ್ಲಾ ಶಕ್ತಿಯನ್ನು ಉಪಯೋಗಿಸಿತು. ಅದೊಂದು ಸೋವಿಯತ್ ರಷ್ಯಾದ ಪಿತೂರಿ ಎಂಬುದು ಅದರ ವಾದ. ಸೋವಿಯತ್ ರಷ್ಯಾಕ್ಕೆ ತಮ್ಮ ರಾಷ್ಟ್ರವನ್ನು ಭೇಟಿ ಮಾಡಲು ಬಂದ ರಾಷ್ಟ್ರನಾಯಕನೊಬ್ಬನನ್ನು ಹೀಗೆ ಕೊಲ್ಲಲು ಯಾವ ಐಹಿಕ ಕಾರಣಗಳೂ ಇಲ್ಲದ್ದರಿಂದ ಈ ಆರೋಪ ಬಿದ್ದುಹೋಯಿತು. ಕಾಂಗ್ರೆಸ್ಸಿನ ರಾಷ್ಟ್ರೀಯ ಹೋರಾಟ ಇನ್ನೂ ಜನರ ನೆನಪಿನಲ್ಲಿ ಹಸಿರಾಗಿದ್ದುದರಿಂದ ಅದನ್ನು ಉರುಳಿಸಲು ಈ ರಾಷ್ಟ್ರಾತೀತತೆಯನ್ನು ಆರ್.ಎಸ್.ಎಸ್. ಎಷ್ಟು ಆರೋಪಿಸಿದರೂ ಜನರು ಉಪೇಕ್ಷಿಸಿದರು.

ಆರ್.ಎಸ್.ಎಸ್.ನ ಎರಡನೆಯ ಪ್ರಹಾರ ಕಾಂಗ್ರೆಸ್ಸಿಗೆ ಕಮ್ಯುನಿಸ್ಟರ ಕುರಿತು ಇರುವ ಸೌಹಾರ್ದ ಸಂಬಂಧದ ಮೇಲೆ ಕೇಂದ್ರೀಕರಿಸಲ್ಪಟ್ಟಿತ್ತು. ಇದೂ ಕೂಡ ಸೋವಿಯತ್ ಯೂನಿಯನ್ ಹಾಗೂ ಅದರ ಅಂತರಾಷ್ಟ್ರೀಯ ಮಿತ್ರರ ವಿರುದ್ಧ ನಡೆಸಿದ ನಿರಂತರ ಪ್ರಚಾರದ ರೂಪದಲ್ಲಿ ಇತ್ತು. ಅಮೇರಿಕಾ ಪರ ವಾಲುವಿಕೆ ಮಧೋಕರಲ್ಲಿ ಸ್ಪಷ್ಟವಾಗಿದೆ. ''ಅವರ ಅನುಚಿತ ಸ್ವಯಂತಂತ್ರವಾದ ಹಾಗೂ ಯು.ಎಸ್.ಎ. ಮತ್ತು ಇತರ ಪಾಶ್ಚಾತ್ಯ ಸಾಮ್ರಾಜ್ಯಶಾಹಿ ಶಕ್ತಿಗಳ ಕುರಿತ ಭಾವುಕ ವಿರೋಧದಲ್ಲಿ ಕಮ್ಯುನಿಸಂ ಹಾಗೂ ಕಮ್ಯುನಿಸ್ಟ್ ರಾಷ್ಟ್ರಗಳ ಕುರಿತು ಸತ್ಯಕ್ಕೆ ದೂರವಾದ ಅಭಿಪ್ರಾಯಗಳನ್ನು ಬೆಳೆಸಿಕೊಂಡಿದ್ದಾರೆ''[13]. ಇದರ ಧ್ವನಿ ಏನೆಂದರೆ ಕಮ್ಯುನಿಸಂ ಒಂದು ಭಾರತೀಯವಲ್ಲದ ಪರಕೀಯ ಚಿಂತನಕ್ರಮ ಎಂಬುದು. ಆದರೆ ಕಮ್ಯುನಿಸಂ ಭಾರತೀಯ ಪ್ರಜಾತಂತ್ರದಲ್ಲಿ ಮಾಡಿಕೊಂಡ ಹೊಂದಾಣಿಕೆಗಳನ್ನು ತೀರ ಅಪರೂಪಕ್ಕೊಮ್ಮೆ ಟೀಕಿಸಲಾಯಿತು.

ಮತ್ತೊಂದು ಕಾಂಗ್ರೆಸ್ ವಿರೋಧಿ ವಾದವೆಂದರೆ ಜವಾಬ್ದಾರಿ ವಿರೋಧಿ ಕಾಯ್ದೆಯ ಪ್ರಶ್ನೆ. ಗೋಳ್ವಲಕರರು ಜಮೀನ್ದಾರರಿಗೆ ಅನುಕೂಲವಾಗುವ ಒಂದು ಸ್ಪಷ್ಟವಾದ ನಿಲುವನ್ನು ತೆಗೆದುಕೊಂಡರು. ''ವಿನೋಭಾಜೀಯವರ ಭೂದಾನ ಚಳುವಳಿ ಕಮ್ಯುನಿಸಂನ ತತ್ವಗಳನ್ನು ಓಡಿಸುತ್ತವೆ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಆದರೆ 'ಉಳುವವನಿಗೇ ಭೂಮಿ' ಎಂಬ ಘೋಷಣೆ ಹಾಗೂ 'ನೀವು ನಿಮ್ಮ ಮನಃಪೂರ್ವಕ ಕೊಡದಿದ್ದರೆ ಕಮ್ಯುನಿಸ್ಟರು

---

12) *ಇಂಡಿಯನ್ನೆಸೇಶನ್* ಪುಟ 67

13) *ಬಂಚ್ ಆಫ್ ಥಾಟ್ಸ್* ಪುಟ 190

ನಿಮ್ಮ ಜಮೀನುಗಳನ್ನು ಬಲಾತ್ಕಾರವಾಗಿ ಕಸಿದುಕೊಳ್ಳಲು ಬಂದೇ ಬರುತ್ತಾರೆ' ಎಂದು ಕೆಲ ಮಂದಮತಿ ಅನುಯಾಯಿಗಳು ಹಾಕುವ ಬೆದರಿಕೆ ಕಮ್ಯುನಿಸಂ ಸರಿಯಾದದ್ದು ಹಾಗೂ ಅನಿವಾರ್ಯ ಎಂಬ ಅಭಿಪ್ರಾಯವನ್ನು ಜನರಲ್ಲಿ ಹುಟ್ಟುಹಾಕುತ್ತದೆ. ಹಾಗಾಗಿ ಇದು ಒಂದು ರೀತಿಯಲ್ಲಿ ಕಮ್ಯುನಿಸಂನ ಅಪ್ರತ್ಯಕ್ಷ ಅಂಗೀಕಾರ''[14] ಕಾಂಗ್ರೆಸ್ ಪ್ರತಿಪಾದಿಸಿದ ತೀರ ಮಿತವಾದ ಜಮೀನ್ದಾರಿ ವಿರೋಧಿ ಕಾಯ್ದೆಯನ್ನೂ ಸಂಪ್ರದಾಯ ಘಾತುಕ ಎಂಬಂತೇ ಎತ್ತಿ ತೋರಿಸಲಾಯಿತು. ಬಿಹಾರದಲ್ಲಿ ಜನಸಂಘ ಜಮೀನ್ದಾರಿ ಗುಂಪಿನ ಜೊತೆ ಸೇರಿಕೊಂಡು ರಾಷ್ಟ್ರಪತಿ ರಾಜೇಂದ್ರ ಪ್ರಸಾದ ಅವರ ಮೇಲೆ ಒತ್ತಡ ತಂದು ಅವರು ಬಿಲ್ಲಿಗೆ ಸಹಿ ಹಾಕದಂತೆ ಒತ್ತಾಯಿಸಿತು. ಹಾಗಾಗಿ ಈ ಬಿಲ್ಲನ್ನು ವಿಳಂಬ ಮಾಡಲಾಯಿತು. ಅದಕ್ಕಿರುವ ಕಾನೂನಿನ ಅಡೆ ತಡೆಗಳನ್ನು ತಪ್ಪಿಸಲಿಕ್ಕೆ ಹಲವಾರು ತಪ್ಪುಗಳನ್ನು ಮಾಡಲಾಯಿತು. ಎಷ್ಟೆಂದರೆ ಬಿಲ್ಲಿನ ಅಂತಿಮ ರೂಪವು ಎಷ್ಟು ಗೇಣಿದಾರರ ಪರವಾಗಿತ್ತೋ ಅಷ್ಟೇ ಜಮೀನ್ದಾರ ಪರವೂ ಇತ್ತು. ಈ ರೀತಿಯ ಕಾನೂನಿನ ಕ್ರಮಗಳಿಗೆ ಹಾಗೂ ಮನವಿಗಳಿಗೆ ಪೂರಕವಾಗಿ ಜಮೀನ್ದಾರಿ ಪ್ರತಿಷ್ಠಿತರು ಕೃಷಿವ್ಯವಸ್ಥೆಯ ಕೆಳಜನರನ್ನು ತುಳಿದು ಇಡುವಲ್ಲಿ ಕೆಳಹಂತದ ಹಿಂಸಾಚಾರಗಳಿಂದ ಆರ್.ಎಸ್.ಎಸ್. ಧಾರಾಳ ಸಹಾಯವನ್ನು ನೀಡಿತು. ಕೇರಳದಿಂದ ಒಂದು ದೃಷ್ಟಾಂತವನ್ನು ಕೊಡುವುದಾದರೆ ಅಲ್ಲಿಯ ಮೊದಮೊದಲಿನ ಆರ್.ಎಸ್.ಎಸ್. ಕೆಲಸಗಾರರೆಲ್ಲ ನಶಿಸುತ್ತಿರುವ ಸಂಚಾರಿ ವ್ಯಾಪಾರಿಗಳೋ ಅಥವಾ ಊಳಿಗಮಾನ್ಯ ಪ್ರತಿಷ್ಠಿತರೋ ಆಗಿದ್ದರು. ಹಿಂದೀ ಪಟ್ಟಿಯಲ್ಲಿ ಕೂಡ ಬಹುಶಃ ಈ ಜಮೀನ್ದಾರಿ ಪರ ನಿಲುವಿಗೆ ತುಳಿತಕ್ಕೊಳಗಾದ ಸಮುದಾಯ ಹಾಗೂ ಬಿ.ಜೆ.ಪಿ.ಯ ನಡುವೆ ಕ್ಷೀಣ ಸಂಬಂಧವಿದ್ದುದು ಕಾರಣವಿರಬಹುದು.

ನಿಜಕ್ಕೂ ಹೇಳಬೇಕೆಂದರೆ ಸಣ್ಣ ವ್ಯಾಪಾರಿಗಳು ಹಾಗೂ ಚದುರಿದ ವಲಸಿಗರು ಪಟ್ಟಣಗಳ ಬೆಚ್ಚನೆಯ ಆವರಣದಲ್ಲಿ ಹಳೆಯ ಜನಸಂಘವನ್ನು ಚೆನ್ನಾಗಿ ಬೆಳೆಸಿದರು. ನಗರಗಳಲ್ಲಿನ ಪ್ರಥಮ ತಲೆಮಾರಿನ ಕೆಳಮಧ್ಯಮ ವರ್ಗದ ಜನರು ತಾವು ಹಳ್ಳಿಗಳಲ್ಲಿ ಜಮೀನ್ದಾರರಾದಂತೇ ಕಲ್ಪಿಸಿಕೊಳ್ಳಲು ಇಷ್ಟಪಡುತ್ತಾರೆ. ಹಳೇ ಸಂಪ್ರದಾಯವನ್ನು ರಕ್ಷಿಸುವ ಆರ್. ಎಸ್. ಎಸ್.ನ ಭರವಸೆ ಅವರಲ್ಲಿ ಒಂದುರೀತಿಯ ನಿಜದ ಭೂತಕಾಲಕ್ಕೆ ಸಂಬಂಧಿಸಿದ ಕಾಲ್ಪನಿಕ ಭೂತಕಾಲದ ಕುರಿತು ಅಲಸಿಗೆಯನ್ನು ಹುಟ್ಟಿಸಿರಬಹುದು. ಹಳ್ಳಿಗಳಲ್ಲಿ ಸಂಪ್ರದಾಯಗಳ ಸಲುವಾಗಿ ತೆರುವ ಬೆಲೆಯೇ ಅದರ ಸೌಂದರ್ಯಾತ್ಮಕ ವೈಭವಕ್ಕಿಂತ ಹೆಚ್ಚು ಮನಕ್ಕೆ ತಟ್ಟುತ್ತಿದ್ದುದರಿಂದ ಅಂಥ ಅಲಸಿಗೆ ಕಷ್ಟವಾಗಿತ್ತು. ಬೇರೆಯವರ ಸಂಪ್ರದಾಯವನ್ನು ತಮ್ಮದೇ ಎಂದು ಸಾರಿ ಅದನ್ನು ರಕ್ಷಿಸುತ್ತಿದ್ದೇವೆ ಎನ್ನುವ ಯುಕ್ತಿಯೇ ಯಾವಾಗಲೂ ಒಳ್ಳೆಯದು.

ಈ ಯುಕ್ತಿಯ ಕೊನೆಯ ಹಂತ 60ರ ದಶಕದ ನಿರ್ಣಾಯಕ ಉತ್ತರಾರ್ಧದಲ್ಲಿ ನಟಿಸಲ್ಪಟ್ಟಿತು. ಆಗ ರಾಷ್ಟ್ರೀಯವಾದಿಗಳ ಅಥವಾ ಜನಪ್ರಿಯ ಕಾಂಗ್ರೆಸ್ ಸಂಪ್ರದಾಯದ ಮೇಲೆ ಧಾಳಿ ಮಾಡಲು ಜನಸಂಘವು ಭಾರತೀಯ ರಾಜಕೀಯದಲ್ಲಿ ತೀರ ಪ್ರತಿಗಾಮಿ ಅಂಶಗಳನ್ನು ಒಗ್ಗೂಡಿಸಿತು. ಈ ಧಾಳಿಯಲ್ಲಿ ಕೇಂದ್ರ ವಿಷಯಗಳು ನಾಲ್ಕು:

ಅ) ಬ್ಯಾಂಕ್ ರಾಷ್ಟ್ರೀಕರಣ
ಆ) ರಾಜಧನ ರದ್ಧತಿ

---

14) *ಬಂಚ್ ಆಫ್ ಥಾಟ್ಸ್* ಪುಟ 190

ಇ) ಭಾರತ–ಸೋವಿಯತ್ ಮೈತ್ರಿ ಒಪ್ಪಂದ
ಈ) ಸಿಮ್ಲಾ ಒಪ್ಪಂದದ ನಡಾವಳಿಗಳು

ಆರ್. ಎಸ್. ಎಸ್.ನ ಒರಟು ಉತ್ಸಾಹ ಹಾಗೂ ವರ್ಗ ಲಕ್ಷಣ ಈ ಮೇಲಿನ ಪ್ರತಿಯೊಂದು ಸಮಸ್ಯೆಯಲ್ಲೂ ವ್ಯಕ್ತವಾಗಿವೆ. ಭೂ ಮಾಲಕ ಹಿತಾಸಕ್ತಿಗಳ ರಕ್ಷಣೆ, ಅಮೇರಿಕಾ ಪರ ಸ್ವತಂತ್ರ ಉದ್ದಿಮೆಯ ಬೆಳವಣಿಗೆಯ ಮಾರ್ಗ, ಅತಿರೇಕದ ಸಾಮ್ರಾಜ್ಯಶಾಹಿ ವಾದ ಇಂಥ ವಿರೋಧಾಭಾಸ ಪೂರಿತವಾದ, ಸರಳವಾದ ಅಂಶಗಳನ್ನು ಅದರ ಯುಕ್ತಿಯಲ್ಲಿ ನೇಯಲಾಗಿತ್ತು. ಬಳಿಕ ಆರ್. ಎಸ್. ಎಸ್.ನ ಯುಕ್ತಿ ಬದಲಾಗಿದೆ.

ಕಾಂಗ್ರೆಸ್ಸಿನ ಮೇಲಿನ ಧಾಳಿ ಯಶಸ್ವಿಯಾಯಿತೆ? ಹೌದು ಮತ್ತು ಇಲ್ಲ!ಆರ್.ಎಸ್.ಎಸ್.ಗೆ ಸಾಕಷ್ಟು ದೊಡ್ಡ ಸಮುದಾಯವನ್ನು ತಲುಪಲು ಆಗಲೇ ಇಲ್ಲ. ಅಲ್ಲದೆ ಹೆಚ್ಚಿನ ಪ್ರಮಾಣದಲ್ಲಿ ಇದೊಂದು ಸೈದ್ಧಾಂತಿಕವಾದ ಹೊಡೆದಾಟವಾಗಿತ್ತು. ಇಂದು ಬಹಳ ವಲಯಗಳಲ್ಲಿ ನಿರ್ವಿವಾದವಾಗಿ ನಂಬಿಕೊಂಡಂತೆ ರಾಷ್ಟ್ರೀಯ ಚಳುವಳಿಯ ಪರಂಪರೆ ತನ್ನದೇ ಎಂದು ಅದು ಚಿತ್ರಿಸಿತು. ಯಾವ ಚಳುವಳಿಯ ಜೊತೆ ತನಗೆ ಯಾವುದೇ ಸಂಘಟನಾತ್ಮಕ ಸಂಬಂಧವಿರಲಿಲ್ಲವೋ ಅಥವಾ ಅದಕ್ಕೆ ಸ್ಪಷ್ಟವಾದ ವಿರೋಧವಿತ್ತೋ ಆ ಚಳುವಳಿಯ ಜೊತೆ ಸೈದ್ಧಾಂತಿಕವಾದ ಅನುವಂಶೀಯತೆಯನ್ನು ಸಾರಲು ಆರ್. ಎಸ್. ಎಸ್. ಗೆ ಹೇಗೆ ಸಾಧ್ಯವಾಯಿತು? ಈ ರೀತಿ ಭೂತಕಾಲದ ದುರಾಕ್ರಮಣ ಭಾರತದ ಒಂದು ದುರಾದೃಷ್ಟದ ಕಥೆ. ಹಾಗೂ ಅದರ ದುರಂತಮಯ ಪರಿಣಾಮಗಳು ಭವಿಷ್ಯದಲ್ಲಿ ಇನ್ನೂ ಬಹುಕಾಲ ನಮ್ಮನ್ನು ಕಾಡಲಿವೆ.

70ನೇ ದಶಕದ ಉತ್ತರಾರ್ಧದವರೆಗೆ ರಾಷ್ಟ್ರೀಯ ಹೋರಾಟದ ಸಂಪ್ರದಾಯವನ್ನು ಹೇಳುಕೇಳುವವರಿಲ್ಲವಾಗಿತ್ತು. ಆ ಹಕ್ಕು ಇದ್ದ ಕಮ್ಯುನಿಸ್ಟರು ತಮ್ಮ ಎತ್ತರವಾದ ಅಂತರಾಷ್ಟ್ರೀಯ ಮಂಚದಿಂದ ಇಳಿದು ಬಂದು ಅದನ್ನು ತಮ್ಮದೆಂದು ಸಾರಲು ಶ್ರಮವಹಿಸಿರಲಿಲ್ಲ. ಅವರು ರಾಷ್ಟ್ರೀಯತಾವಾದಿಗಳೆಂದು ಕರೆದುಕೊಳ್ಳಲಿಕ್ಕೆ ಅಸಹ್ಯಪಟ್ಟುಕೊಳ್ಳುತ್ತಿದ್ದರು. ಈಗ ಅವರು ವಾಪಾಸು ಬಂದಿದ್ದಾರೆ. ಆದರೆ ತಮ್ಮ ಜಾಗದಲ್ಲಿ ಹಳೆ ಬಯಕೆಯನ್ನು ತೀರಿಸಿಕೊಳ್ಳುವ ಪ್ರತಿಗಾಮಿ ಬಲಪಂಥೀಯರು ಭದ್ರವಾಗಿ ನಿಂತದ್ದನ್ನು ನೋಡಲು ಅವರಿಗೆ ನೋವಾಗುತ್ತದೆ. ಕಾಂಗ್ರೆಸ್ಸು ಅಂಥ ಮಹತ್ವದ್ದೇನನ್ನೂ ಕಳೆದುಕೊಂಡಿಲ್ಲ, ಏಕೆಂದರೆ ಈ ಐತಿಹಾಸಿಕ ಕೊಳ್ಳೆಗಾಗಿ ಜೂಜಾಡಿ ಅದು ತೀರ ಗಣನೀಯವಾಗಿ ದಾರಿ ತಪ್ಪಿದೆ ಹಾಗೂ ಹಾಳಾಗಿದೆ. ಸ್ವಾತಂತ್ರ್ಯಾನಂತರ ಹುಟ್ಟಿಬಂದ ತಲೆಮಾರಿಗೆ (ಮುಖ್ಯವಾಗಿ ಮಧ್ಯಮ ವರ್ಗದ್ದು) ತಾವು ನೋಡುತ್ತಿರುವ ಕಾಂಗ್ರೆಸ್ಸಿಗೆ ಹೆಸರಿಸಬಹುದಾದಂಥ ಯಾವುದೇ ಸಾಮಾಜಿಕ ಚಳುವಳಿಯ ಜೊತೆ ಸಂಬಂಧವಿದೆಯೆ ಎಂದು ಆಶ್ಚರ್ಯ ಪಡಲು ಎಲ್ಲ ಕಾರಣಗಳೂ ಇವೆ. ಕಾಂಗ್ರೆಸ್ ಮುಂದಾಳತ್ವ ಅದನ್ನೊಂದು ಶುದ್ಧ ಅಧಿಕಾರಾಪೇಕ್ಷೆಯ ಹಾಗೂ ಆಶ್ರಯ ವ್ಯವಸ್ಥೆಯ ಪಕ್ಷವನ್ನಾಗಿ ಎಷ್ಟರ ಮಟ್ಟಿಗೆ ಪರಿವರ್ತಿಸಿದೆಯೆಂದರೆ ಯಾರಿಗೂ, ಸ್ವತಃ ಮುಂದಾಳುವಿಗೂ ಕೂಡ, ಅದರ ತತ್ವಗಳನ್ನು, ಕಾರ್ಯಕ್ರಮಗಳನ್ನು ಗಂಭೀರವಾಗಿ ತೆಗೆದುಕೊಳ್ಳಲಾಗುವದಿಲ್ಲ.

ಹಾಗಾಗಿ 60ರ ದಶಕದ ಉತ್ತರಾರ್ಧದ ಯುವಕರು ಎಡಪಂಥದ ಕಡೆ ಇಲ್ಲವೇ ಬಲಪಂಥದ ಕಡೆ, ಎಲ್ಲೆಲ್ಲಿ ಮೌಲ್ಯನಿಷ್ಠೆ ರಾಜಕಾರಣ ಇದೆಯೆಂದು ಭಾವಿಸಿದರೋ ಅಲ್ಲಲ್ಲಿಗೆ ತಿರುಗಿದರು. ಫ್ಯಾಸಿಸ್ಟ್ ಹೊಂದಾಣಿಕೆಯನ್ನು ಎದುರಿಸಲು ಸ್ವಯಂತಂತ್ರವಾದೀ ರಾಜಕೀಯಕ್ಕೆ ಒಂದು ಅನುವಂಶಿಕ ದೌರ್ಬಲ್ಯವಿದೆ. ಅದೆಂದರೆ ಸೈದ್ಧಾಂತಿಕವಾಗಿ ಅದು ತನ್ನ ಹೊಂದಾಣಿಕೆಗಳಿಂದ ಹಾಗೂ ಜೂಜಾಟಗಳಿಂದ ಬಹಳ ಶಿಥಿಲವಾಗಿ, ಮುದುಕಾಗಿ ಕಾಣಿಸುತ್ತದೆ. ಎಲ್ಲೆಲ್ಲಿ ಯುವಕರಿಗೆ ತಮ್ಮ ತೀವ್ರಗಾಮಿ ಹಂಬಲವನ್ನು ತಣಿಸಿಕೊಳ್ಳಲು ಕಾಲ ಹಾಗೂ ಅವಕಾಶವನ್ನು ಎಡಪಂಥ ಮಾಡಿಕೊಳ್ಳಲಿಲ್ಲವೋ ಅಲ್ಲಲ್ಲಿ ಅವರು ಬಲಪಂಥವನ್ನು ಸೇರಿದರು.

ಆರ್. ಎಸ್. ಎಸ್. ಸ್ವಾತಂತ್ರ್ಯ ಸಂಗ್ರಾಮವನ್ನು ಕೈವಶ ಮಾಡಿಕೊಳ್ಳಲು ಎರಡನೆಯ ಕಾರಣ ರಾಷ್ಟ್ರೀಯತೆ ಒಂದು ಇತಿಹಾಸ ಶಾಸ್ತ್ರೀಯ ಅರ್ಥದಲ್ಲಿ ಸಿದ್ಧಾಂತವಾಗಲು ಸೋತಿದ್ದಕ್ಕೆ ಸಂಬಂಧಿಸಿದೆ. ತೀರ ಮೊದಲಿನಿಂದಲೂ ಭಾರತೀಯ ರಾಷ್ಟ್ರೀಯತೆಗೆ ಸಂಬಂಧಿಸಿದ ಐತಿಹಾಸಿಕ ಗ್ರಹಿಕೆ ಪುನರುತ್ಥಾನವಾದದ ಜೊತೆ ಬೆರೆತಿತ್ತು. ಕೆಲವೊಮ್ಮೆ ಹಿಂದೂ ಧಾರ್ಮಿಕ ಎಳೆಯೂ ಅದಕ್ಕಿತ್ತು. ಕೆ. ಪಿ. ಜಯಸ್ವಾಲ, ಆರ್. ಕೆ. ಮುಖರ್ಜಿ ಹಾಗೂ ಆರ್. ಸಿ. ಮಜುಂದಾರ ಮುಂತಾದ ಇತಿಹಾಸಕಾರರು ನಮ್ಮ ಪ್ರಾಚೀನ ನಾಗರೀಕತೆ ಹಾಗೂ ಹಿಂದೂ ಕಾಲವನ್ನು ತೋರಿಸಿ ಬ್ರಿಟಿಷರು ಇಲ್ಲಿ ನಾಗರೀಕತೆಯನ್ನು ತಂದ ವಾದವನ್ನು ಖಂಡಿಸಿದರು. ಬಂಕಿಂಚಂದ್ರ ಮತ್ತು ಇತರ ಬಂಗಾಳಿ ಬುದ್ಧಿಜೀವಿಗಳು ಆಗಿನ್ನೂ ಅಸ್ತಿತ್ವಕ್ಕೆ ಬರದ ರಾಷ್ಟ್ರೀಯ ಹೋರಾಟವನ್ನು ಮಧ್ಯಕಾಲೀನ ಹಿಂದೂ ಮುಸ್ಲಿಂ ಹೋರಾಟವನ್ನಾಗಿ ಕಲ್ಪಿಸಿ ನೆರಳಿನ ಗುದ್ದಾಟವನ್ನು ಪ್ರಾರಂಭಿಸಿದರು. ಇದನ್ನು ಬೇರೆಯವರಿಗಾಗಿ ಮಾಡಿದ ರಾಷ್ಟ್ರೀಯತೆ ಎಂದು ಸರಿಯಾಗಿ ಕರೆಯಲಾಗಿದೆ. ಈ ವೈಭವೀಕರಣದ ಸಂಪ್ರದಾಯ 1970ರ ವರೆಗೆ ಪ್ರಚಲಿತದಲ್ಲಿತ್ತು. ಹಾಗೂ ಇದು ಒಂದು ಧರ್ಮನಿರಪೇಕ್ಷ ದೃಷ್ಟಿಕೋನದಿಂದ ಸತತ ವಿಶ್ಲೇಷಣೆಗೆ ಒಳಪಡದೇ ಒಂದು ಸಾಮಾನ್ಯ ಜ್ಞಾನವಾಗಿ ಉಳಿದುಕೊಂಡಿತು. ಪಠ್ಯಪುಸ್ತಕಗಳಲ್ಲಿ ಇಂಥ ಸುಳ್ಳುಗಳ ಸರಣಿಯೇ ಶಾಶ್ವತವಾಗಿ ಕುಳಿತುಕೊಂಡಿದೆ ಹಾಗೂ ಅದನ್ನು ತೆಗೆದುಹಾಕುವುದೂ ದುಃಸಾಧ್ಯವಾಗಿದೆ. ಈ ಮತವನ್ನು ಆರ್. ಎಸ್. ಎಸ್. ಈಗ ಮಾರಾಟ ಮಾಡುತ್ತಿರುವುದರಿಂದ ಅದೇ ರಾಷ್ಟ್ರೀಯತೆಯನ್ನು ಹಿಂದೂ ಎತ್ತಿಹಿಡಿದಿತ್ತು ಎಂದು ನಂಬಲು ಪ್ರೇರಣೆಯಾಗುತ್ತದೆ. ಈ ರೀತಿ ಭಾಗಶಃ ಉಳಿದವರ ತಪ್ಪಿನಿಂದಾಗಿ, ಭಾಗಶಃ ಭೂತವನ್ನು ಯಶಸ್ವಿಯಾಗಿ ತಯಾರಿಸಬಲ್ಲ ತಂತ್ರಜ್ಞಾನದಿಂದಾಗಿ ಅವರು ಹೆಚ್ಚಿನ ರಾಜಕೀಯ ಮಹತ್ವದ ಐತಿಹಾಸಿಕ ಸ್ಥಾನಮಾನಕ್ಕೆ ಜಾರಿಕೊಳ್ಳಲು ಸಮರ್ಥರಾಗಿದ್ದಾರೆ.

ಇಲ್ಲಿ ಆರ್. ಎಸ್. ಎಸ್. ಸಾರಿಕೊಂಡ ರಾಷ್ಟ್ರೀಯತೆಯ ತಿರುಳನ್ನು ವಿಶ್ಲೇಷಿಸುವುದು ಅಗತ್ಯವಾಗಿದೆ. ಗೋಳ್ವಲಕರರನ್ನು ಉದ್ಧರಿಸುವುದಾದರೆ, ''ಈ ಭೂಮಿಗಿಂತ ಪವಿತ್ರವಾದದ್ದು ನಮಗೆ ಬೇರೇನೂ ಇರಲು ಸಾಧ್ಯವಿಲ್ಲ. ಈ ಭೂಮಿಯ ಮಣ್ಣಿನ ಪ್ರತಿಕಣ, ಪ್ರತಿಜೀವಿ ಹಾಗೂ ನಿರ್ಜೀವಿ, ಪ್ರತೀ ವಂಶ ಹಾಗೂ ಬುಡಕಟ್ಟು, ಮರಗಳು, ಹೊಳೆಗಳು ಎಲ್ಲವೂ ನಮಗೆ ಪವಿತ್ರ...... ನಮ್ಮ ಎಲ್ಲ ಧಾರ್ಮಿಕ ಆಚರಣೆಗಳೂ ಭೂಮಿಪೂಜೆಯಿಂದಲೇ ಪ್ರಾರಂಭವಾಗುತ್ತವೆ. ಒಬ್ಬ ಹಿಂದೂ ಬೆಳಿಗ್ಗೆ ಎದ್ದ ಕೂಡಲೇ ತಾನು ಇಡೀ ದಿನ ಭೂಮಿತಾಯಿಯನ್ನು ಮೆಟ್ಟದೇ ಇರಲಾರದ್ದಕ್ಕೆ ಕ್ಷಮೆಯನ್ನು ಕೇಳುತ್ತಾನೆ''[14] ಇಲ್ಲಿ ರಾಷ್ಟ್ರೀಯತೆ ಮುಖ್ಯವಾಗಿ ಭೂಮಿ ಕೇಂದ್ರಿತ–ಜನ ಕೇಂದ್ರಿತವಲ್ಲ. ಇಲ್ಲಿ ಸಾಂಸ್ಕೃತಿಕ ರಾಷ್ಟ್ರೀಯತೆ ಒಂದು ಕಡಿಮೆ ದರ್ಜೆಯ ವಿಚಾರ. ಗೋಳ್ವಲಕರರು ಬರೆಯುತ್ತಾರೆ, ''ಒಂದು ನಿರ್ದಿಷ್ಟ ಸೀಮೆಯಲ್ಲಿ ಸಾಮಾನ್ಯವಾಗಿ ವಾಸಿಸುವವರೆಲ್ಲರೂ ಸಾಮಾನ್ಯ ಗುಣಲಕ್ಷಣಗಳನ್ನು ಹೊಂದಿದ ರಾಷ್ಟ್ರೀಯ ಸಮಾಜವಾಗಿ ಬಿಡುವುದಿಲ್ಲ. ಹೊರಗಿನಿಂದ ಬಂದವರು ತಮ್ಮ ಮನೋಭಾವನೆಯಲ್ಲಿ ಸಂಪೂರ್ಣ ರೂಪಾಂತರ ಹೊಂದಬೇಕು ಹಾಗೂ ಒಂದೇ ರಾಷ್ಟ್ರೀಯ ವಂಶದೊಳಗೆ ಪುನರ್ಜನ್ಮ ತಳೆಯಬೇಕು''[15] ಈ ಹೇಳಿಕೆಗಳ ಜೊತೆಗೆ ಆಕ್ರಮಣಶೀಲ ಸಾಮ್ರಾಜ್ಯಶಾಹಿ ಗಾಢವಾಗಿ ತಳಕು ಹಾಕಿಕೊಂಡಿದೆ. ಗೋಳ್ವಲಕರರನ್ನೇ ಪುನಃ ಉದ್ಧರಿಸುವುದಾದರೆ, ನಮ್ಮ ಪವಿತ್ರ ಕೈಲಾಸಕ್ಕೆ, ಮಾನಸ ಸರೋವರಕ್ಕೆ ಇರುವ ಪ್ರವೇಶ ನಿಷೇಧವನ್ನೂ, ಅದರಲ್ಲೂ ಯಾವ ಸಿಂಧೂ ನದಿಯಿಂದ 'ಹಿಂದೂ' ಹಾಗೂ 'ಹಿಂದೂಸ್ತಾನ' ಎಂಬ ಹೆಸರುಗಳು ಬಂದವೋ ಅದರಲ್ಲಿ ಒಂದು ಮುಳುಗು ಹಾಕಲೂ ಆಗದಿರುವ ಅವಮಾನವನ್ನು ನಮ್ಮಲ್ಲೆಷ್ಟು ಮಂದಿ ಅನುಭವಿಸುತ್ತೇವೆ? ಒಂದು ಕಾಲದಲ್ಲಿ

---

14 ಅದೇ ಪುಟ 87

15 ಅದೇ ಪುಟ 128

ಹಿಂದೂ ವಿಚಾರಗಳನ್ನು ಸಾರಲಿಕ್ಕೆ ಜಾಗತಿಕ ಕೇಂದ್ರವಾಗಿದ್ದ ತಕ್ಷಶಿಲೆ ಇನ್ನೂ ನಮ್ಮದಲ್ಲ... ಈ ಎಲ್ಲನೆನಪುಗಳೂ ನಮ್ಮ ಧಮನಿಗಳಲ್ಲಿ ಕಿಚ್ಚೆಬ್ಬಿಸುತ್ತಿವೆಯೇ?'' [16] ಆರ್. ಎಸ್. ಎಸ್. ಗೆ ಅದರದೇ ಆದ ಡಂಜಿಂಗ್ ಹಾಗೂ ರೂರ್ ಕಣಿವೆಗಳಿವೆ.

ಕೋಮುವಾದೀ ಯುಕ್ತಿಯ ಎರಡನೆಯ ಮುಖ್ಯ ಅಂಶ ಮುಸ್ಲಿಂ ಭೀತಿಯ ಸುತ್ತ ಇದೆ. ಈ ವಿಷಯದಲ್ಲಿ ಎಷ್ಟರ ಮಟ್ಟಿಗೆ ದಿನನಿತ್ಯದ ಆಗುಹೋಗಿನಿಂದ ಪ್ರಚಾರ ಸಾಮಗ್ರಿಯನ್ನು ತಯಾರಿಸಲಾಗಿದೆ ಎಂದು ನಿರ್ಣಯಿಸುವುದು ಕಷ್ಟದ ಕೆಲಸ. ತಲೆತಪ್ಪಿಸಿಕೊಂಡ ವಲಸಿಗರ ಮನೋಭಾವನೆ ಮುಂದಾಳುಗಳ ಒಂದು ಗುಂಪಿನಲ್ಲಿ ಅಂಥ ಧೋರಣೆಯನ್ನು ಹೊತ್ತಿಸಿರಬಹುದು. ಆದರೆ ಭೌಗೋಲಿಕವಾಗಿ ವಿಭಜನೆಯ ಹಿಂಸಾಚಾರಕ್ಕೆ ಬಹುದೂರದಲ್ಲಿದ್ದ ಮರಾಠಾ ಬ್ರಾಹ್ಮಣರಿಗೆ ಅಂಥ ಮನೋಭಾವನೆ ಏಕೆ ಬಂದಿತು ಎಂಬುದು ಅರ್ಥವಾಗುವುದಿಲ್ಲ. ಹೀಗೆ ಮುಸ್ಲಿಂ ಕ್ರೌರ್ಯದ ಪುರಾಣ ಕಥೆಗಳಂಥ ಸುದ್ದಿಗಳನ್ನು ಅಂಥದ್ದೇ ಒಂದು ಐತಿಹಾಸಿಕ ದೃಷ್ಟಿಗೆ ಕಸಿಮಾಡಿದ್ದಾರೆ. ಇದನ್ನು ಗಮನಿಸಿದರೆ ಆರ್. ಎಸ್. ಎಸ್. ಈ ರೀತಿಯ ವಿಭಜನೆಯ ಜೊತೆ ಸಂಬಂಧಿಸಿದ ನರಮೇಧವನ್ನು ಅತ್ಯುತ್ಸಾಹದಿಂದ ದೇವರು ತಮಗಾಗಿ ಕಳುಹಿಸಿದ ಸದವಕಾಶವೆಂಬಂತೇ ಉಪಯೋಗಿಸಿಕೊಂಡ ಸಾಧ್ಯತೆ ಕಾಣಿಸುತ್ತದೆ. ಇಲ್ಲೂ ಕೂಡ ಉಳಿದ ಕಡೆಗಳ ಫ್ಯಾಸಿಸಂನಂತೇ ಆರ್. ಎಸ್. ಎಸ್. ಕೂಡ ನೆನಪುಗಳನ್ನು ಭಯವನ್ನಾಗಿ ಮಾರ್ಪಡಿಸುವ, ದುಃಸ್ವಪ್ನಗಳನ್ನು ಅಪಶಕುನಗಳನ್ನಾಗಿ ಮಾರ್ಪಡಿಸುವ, ಭೂತದಲ್ಲಿ ಭವಿಷ್ಯವನ್ನು ತುಂಬುವ ಹಾದಿ ಹಿಡಿದಿದೆ. ಅವರು ಹೆಚ್ಚು ಕಡಿಮೆ ಸಂಪೂರ್ಣ ನಕಾರಾತ್ಮಕ ಲಕ್ಷಣಗಳನ್ನು ಹೊಂದಿದ ಹಿಂದುತ್ವವನ್ನು ಪ್ರಚಾರ ಮಾಡುವುದನ್ನು ನೋಡಿದರೆ ಅವರು ಭವಿಷ್ಯವನ್ನು ಸಂಪೂರ್ಣವಾಗಿ ತಮ್ಮ ವಾಗ್ವಾದದಿಂದ ತೆಗೆದುಹಾಕಿ ಭೂತದ ಭ್ರಾಂತಿಯಲ್ಲಿ ಮುಳುಗಿದಂತೇ ತೋರುತ್ತದೆ. ಈ ಅರ್ಥದಲ್ಲಿ ಇದು ನಿಜವಾಗಿ ಪ್ರತಿಗಾಮಿ. ಆರ್ಥಿಕತೆಯ ಅತಿವಾದಗಳ ಕುರಿತು ನನ್ನೆಲ್ಲ ಸಂಶಯಗಳ ಜೊತೆಗೂ ಈ ಮೇಲಿನ ಸಿದ್ಧಾಂತಗಳು ಜಡವಾದ ಸಮಾಜದಲ್ಲಿ ಪ್ರಚಲಿತಕ್ಕೆ ಬರುತ್ತವೆ ಎಂದೇ ನನಗೆ ಅನಿಸುತ್ತದೆ. ಇಲ್ಲಿ ಪ್ರಾಸಂಗಿಕವಾದ ಒಂದು ವಿಷಯವೆಂದರೆ ಆರ್. ಎಸ್. ಎಸ್. ಗೆ ವಿಭಜನೆಯ ಕಗ್ಗೊಲೆಯಲ್ಲೂ ನಂತರದ ಪರಿಹಾರ ಕಾರ್ಯಗಳಲ್ಲೂ ತೀರ ಕ್ಷುದ್ರವಾದ ಪಾತ್ರವಿರಬಹುದು. ಆದರೆ ಅವರ ಭವ್ಯ ಪುರಾಣಗಳಲ್ಲಿ ಅವರು ಇತಿಹಾಸದ ರಂಗಸ್ಥಳವನ್ನು ತುಂಬಿಬಿಟ್ಟಿದ್ದಾರೆ.

ನಾವೀಗ ಮುಸ್ಲಿಂ ವಿರೋಧಿ ಭಾವನೆಗಳಿಗೆ ಸಂಬಂಧಿಸಿದ ತಂತ್ರಗಳನ್ನು ಸೈದ್ಧಾಂತಿಕ ಹಾಗೂ ವ್ಯಾವಹಾರಿಕ ಮಟ್ಟದಲ್ಲಿ ಪರಿಶೀಲಿಸುವ.

ಪಾಕಿಸ್ತಾನ ಧರ್ಮಪ್ರಭುತ್ವವಾಗಿ, ಭಾರತವು ಧರ್ಮನಿರಪೇಕ್ಷವಾಗಿದ್ದರಿಂದ ಮುಸ್ಲಿಮರಿಗೆ ವಿಶೇಷ ಕರ್ತವ್ಯಗಳಿವೆ ಎಂದು ವಾದಿಸಲಾಯಿತು. ಮುಖ್ಯವಾಗಿ ಭಾರತಕ್ಕೆ ತಮ್ಮ ಇಬ್ಬಗೆಯ ಕರ್ತವ್ಯವನ್ನು ಸಾಧಿಸಿ ತೋರಿಸುವ ಸಂಕೋಚಕರವಾದ ಕೆಲಸ. ಗೋಳ್ವಲಕರರು ಬರೆಯುತ್ತಾರೆ. ''ಪ್ರತೀ ಸ್ಥಳಗಳಲ್ಲಿ ಪಾಕಿಸ್ತಾನದ ಜೊತೆ ರೇಡಿಯೋ ಮೂಲಕ ಸಂಬಂಧವನ್ನಿರಿಸಿಕೊಂಡ ಹಾಗೂ ಸಾಮಾನ್ಯ ಪ್ರಜೆಗಳ ಸವಲತ್ತುಗಳ ಜೊತೆಗೆ ಅಲ್ಪಸಂಖ್ಯಾತರ ವಿಶೇಷ ಸವಲತ್ತುಗಳನ್ನೂ ವಿಶೇಷ ಅನುಗ್ರಹವನ್ನೂ ಹೊಂದಿದ ಮುಸ್ಲಿಮರು ಇದ್ದಾರೆ.''[17] ಇಂಥ ವಾದಗಳು ಆರ್. ಎಸ್. ಎಸ್. ನಿಂದ ಉಪಯೋಗಿಸಿಕೊಳ್ಳಲ್ಪಟ್ಟವು ಹಾಗೂ ಬಹುಮಟ್ಟಿಗೆ ಮತಿಭ್ರಮಣೆಯ ಮಟ್ಟಕ್ಕೆ ಅವು

---

16) ಅದೇ, ಪುಟ 95 ಹಾಗೂ XVIII, 2.

17) ಅದೇ, ಪುಟ 176

ತಲುಪಿದವು. ಭಾರತ–ಪಾಕಿಸ್ತಾನ ಯುದ್ಧದ ಸಂದರ್ಭದಲ್ಲಿ ಮುಸ್ಲಿಮರನ್ನು ಆಂತರಿಕ ವೈರಿಗಳೆಂದೂ, ಬಾಹ್ಯವೈರಿಗಳಿಗೆ ಸಹಾಯ ಮಾಡುವವರೂ, ಒತ್ತಾಸೆ ನೀಡುವವರೂ ಎಂದು ಕಡೆಗಣಿಸುವ ವಾತಾವರಣ ಹುಟ್ಟಿಕೊಂಡಾಗ ಆರ್.ಎಸ್.ಎಸ್.ಗೆ ಒಂದು ಒಳ್ಳೆಯ ಅವಕಾಶ ಸಿಕ್ಕಿತ್ತು. ಭಾಷಣಗಳಲ್ಲಿ, ಕರಪತ್ರಗಳಲ್ಲಿ ಪುಂಖಾನುಪುಂಖವಾಗಿ, 'ಮುಸ್ಲಿಮನನ್ನು ಕರೆಯಿರಿ, ಅವನೊಬ್ಬ ಪಾಕಿಸ್ತಾನಿಯಾಗಿರುತ್ತಾನೆ' ಎಂಬ ಘೋಷಣೆಗಳು ನಡೆದವು. ಆರ್ಗನೈಸರ್ ಪತ್ರಿಕೆ 'ಮುಸ್ಲಿಂ ಎಕ್ಸರೇಡ್' ಎಂಬ ಅಂಕಣವನ್ನು ಪ್ರಕಟಿಸಿತು. ಅದರಲ್ಲೂ ಇಂಥ ಪ್ರಚಾರಗಳು ಧಾರಾಳವಾಗಿ ಇದ್ದವು. ಅಂಥವೇ ಕಪೋಲಕಲ್ಪಿತಗಳು ಕ್ರಿಶ್ಚಿಯನ್ನರಿಗೆ ಸಂಬಂಧಿಸಿಯೂ ತಯಾರಾದವು. ಈ ಸಂಬಂಧಿಸಿ ಎಲ್ಲಾ ಮಿಶನರಿಗಳೂ ಅಮೇರಿಕಾದ ಮಧ್ಯವರ್ತಿಗಳೆಂದು ತೆಗಳಲಾಯಿತು. ಈ ಅಬ್ಬರದಲ್ಲಿ ಭಾರತಕ್ಕೆ ಬರುವ ಬಹುಪಾಲು ಹಣ ಕ್ಯಾಥೋಲಿಕರದ್ದೆಂಬುದೂ, ಕ್ಯಾಥೋಲಿಕರು ಅಮೇರಿಕಾದ ರಾಜಕೀಯದಲ್ಲಿ ಹಾಗೂ ಸಮಾಜದಲ್ಲಿ ಬಹುತೇಕ ಪರಕೀಯರೆಂಬುದೂ ಮರೆತೇ ಹೋಗಿತ್ತು. ಈ ವಿಷಯದಲ್ಲಿ ಆರ್. ಎಸ್. ಎಸ್. ನೇರವಾಗಿ ತನ್ನ ಕಿತಾಪತಿಯನ್ನು ನಡೆಸಿತು. ಬಿಹಾರ, ಒರಿಸ್ಸಾ ಮತ್ತು ಮಧ್ಯಪ್ರದೇಶಗಳ ಬುಡಕಟ್ಟು ಪ್ರದೇಶದಲ್ಲಿ ಕ್ರಿಶ್ಚಿಯನ್ ಮಿಶನರಿಗಳು ಕ್ರಿಯಾಶೀಲರಾಗಿದ್ದರು. ಅವರಲ್ಲಿ ಕೆಲವರು ನಿರುಪದ್ರವಿ ಭಕ್ತಿಯನ್ನು ತೊರೆದು ಜಾತಿಪದ್ಧತಿಗೆ ಮಾರಕವಾಗಬಹುದಾದ ಪ್ರಗತಿಶೀಲ ನಿಲುವನ್ನು ತಳೆದರೆ, ಇನ್ನೂ ಕೆಲವರು ಇದನ್ನು ಮತಾಂತರಕ್ಕೆ ಬುದ್ಧಿವಂತಿಕೆಯಿಂದ ಉಪಯೋಗಿಸತೊಡಗಿದರು. ಅವರನ್ನು ಪ್ರತ್ಯೇಕಿಸುವ ಪರಿಣಾಮಕಾರಿ ತಂತ್ರವೆಂದರೆ ಅವರಿಗೆ ಸಿ.ಐ.ಎ. ಮಧ್ಯವರ್ತಿಗಳೆಂದು ಹಣೆಪಟ್ಟಿ ಹಚ್ಚುವುದು.

ಆರ್. ಎಸ್. ಎಸ್. ನ ವಾದಗಳ ಮತ್ತೊಂದು ಪಟ್ಟು ಎಂದರೆ ಜನಸಂಖ್ಯಾಶಾಸ್ತ್ರೀಯ ಆಧಾರದ್ದು. ಮಧೋಕ ಅವರು ಮುಸ್ಲಿಮರು 1947ರ ನಂತರ ಎರಡು ದಶಕಗಳಲ್ಲಿ 15,00,000ದಷ್ಟು ಹೆಚ್ಚಿದರು ಎಂದು ಹಿಂದುಗಳ ಜನಸಂಖ್ಯೆ ಹೆಚ್ಚಳವನ್ನು ಪರಿಗಣಿಸದೇ ಟೀಕಿಸಿದರು. ಈ ಸಂದೇಹಾಸ್ಪದ ಲೆಕ್ಕದ ಸಾರವೆಂದರೆ ಹಿಂದುಗಳು ಈ ಸಂಖ್ಯಾಸ್ಪರ್ಧೆಯಲ್ಲಿ ಮುಸ್ಲಿಮರನ್ನು ಮೀರಿಸಬೇಕು ಎಂಬುದು. ಮುಸ್ಲಿಮರು ಭಾರತದಲ್ಲಿ ಸೃಷ್ಟಿಸಿದ 'ಮಿನಿ ಪಾಕಿಸ್ತಾನ'ಗಳಂಥ ವಾದಗಳೂ ಮಂಡಿಸಲ್ಪಟ್ಟವು.

ಆರ್. ಎಸ್. ಎಸ್.ನ ನಿಟ್ಟಿನ ಮುಖ್ಯ ಗುರಿ ಎಂದರೆ ಧರ್ಮನಿರಪೇಕ್ಷತಾವಾದೀ ಕಾಂಗ್ರೆಸ್ ಹಾಗೂ ಕಮ್ಯುನಿಸ್ಟ್ ಪಕ್ಷಗಳು. ಮುಖ್ಯ ಟೀಕೆಯೆಂದರೆ ಕಾಂಗ್ರೆಸ್ಸು ಮುಸ್ಲಿಮರಿಗೆ ಸಹಾಯನೀಡುತ್ತಿದೆ ಹಾಗೂ"ಈ ಕಾಂಗ್ರೆಸ್ಸಿನ ಉದಾಹರಣೆಯನ್ನು ಕಾಂಗ್ರೆಸ್ಸಿನಿಂದ ಒಡೆದು ಚದುರಿದ ಪಕ್ಷಗಳೂ ತ್ವರಿತವಾಗಿ ಅನುಸರಿಸಿವೆ", ಅಲ್ಪಸಂಖ್ಯಾತರನ್ನು ಮುದ್ದುಮಾಡುವ ಏಕಮೇವ ದೇಶ ಎಂದರೆ ಭಾರತ ಎಂದೆಲ್ಲ ಪ್ರತಿಪಾದಿಸಲಾಯಿತು.[18] ಆಝಾದ್, ಝಾಕಿರ್‌ಹುಸೇನ್ ಹಾಗೂ ಖಾನ್ ಅಬ್ದುಲ್ ಗಫರ್ ಖಾನರಂಥವರನ್ನೂ ಕೂಡ ತೀರ ಹೊಲಸು ಭಾಷೆಯಲ್ಲಿ ಕ್ರೂರಿಗಳನ್ನಾಗಿ ಚಿತ್ರಿಸಲಾಯಿತು. ಝಾಕಿರ್ ಹುಸೇನರ ವಿರುದ್ಧದ ಟೀಕೆ ಎಂದರೆ ಅವರು ತಮ್ಮ ಮೊಮ್ಮಗಳನ್ನು ಮುಸ್ಲಿಮೇತರನೊಬ್ಬನೊಂದಿಗೆ ಮದುವೆಯಾಗಲಿಕ್ಕೆ ಬಿಡಲಿಲ್ಲ ಎಂಬುದು. ಟೀಕಿಸಲ್ಪಟ್ಟ ಮಂದಿ ಟೀಕೆಗಳ ಮಟ್ಟಕ್ಕೆ ಇಳಿದು ಉತ್ತರಿಸುವ ಗೋಜಿಗೇ ಹೋಗಲಿಲ್ಲ ಎಂಬುದು ಅವರ ದೊಡ್ಡಸ್ತಿಕೆಯನ್ನು ತೋರಿಸುತ್ತದೆ. ಆದರೆ ಅಂಥ ಮೌನ ಸಮ್ಮತಿಯ ಲಕ್ಷಣ ಎಂದು ಆರ್. ಎಸ್. ಎಸ್. ಪ್ರಚಾರ ನಡೆಸಿತು. ಇಲ್ಲಿ ಕೂಡ ಜರ್ಮನಿಯ ಸಮಾನ

18) *ಇಂಡಿಯನೈಸೇಶನ್* ಪುಟ 80-84.

ಅಂಶಗಳು ನೆನಪಿಗೆ ಬರುತ್ತವೆ. ಈ ಪ್ರಚಾರ ವಿಧಾನ ದೀರ್ಘಕಾಲಾವಧಿಯಲ್ಲಿ ಅತೀ ಯಶಸ್ವಿಯಾಯಿತು ಹಾಗೂ ಅವರು ನಿರ್ಣಾಯಕವಾಗಿ ನಮಗಿರುವ ಧರ್ಮನಿರಪೇಕ್ಷ ಪರಂಪರೆಯನ್ನೇ ಘಾಸಿಮಾಡಿದರು. ಹಿಂದುಗಳು ಈ ಕುರಿತು ಅವಮಾನಿತರಾಗಿ ಅಪರಾಧಿ ಭಾವವನ್ನು ತೋರಿಸಲು ಕಲಿತಿದ್ದಾರೆ. ಮುಸ್ಲಿಮರಿಗೆ ಬಹುಭಾಗಗಳಲ್ಲಿ ಕೇಂದ್ರೀಯ ಅಥವಾ ಪ್ರಾದೇಶಿಕ ಮಟ್ಟದ ಸಂಘಟನೆಗಳೇ ಇಲ್ಲದ ಸ್ಥಿತಿಯಲ್ಲೂ ಒಂದು ಪೂರ್ಣಪ್ರಮಾಣಕ್ಕಿಂತ ಹೆಚ್ಚಿನದೇ ಆದ ಮುಸ್ಲಿಂ ಕೋಮುವಾದವನ್ನು ಕಟ್ಟಿನಿಲ್ಲಿಸಲು ಆರ್. ಎಸ್. ಎಸ್. ಸಮರ್ಥವಾದದ್ದು ಒಂದು ಸೋಜಿಗದ ವಿಷಯ. ಆರ್. ಎಸ್. ಎಸ್. ಈ ಅವಧಿಯಲ್ಲಿ ಬೆಳೆಸಿದ ಒಂದು ಆಸಕ್ತಿಪೂರ್ಣ ಸೈದ್ಧಾಂತಿಕ ತಂತ್ರವೆಂದರೆ ಹಿಂದೂಗಳನ್ನು ಮೂಲತಃ ದುರ್ಬಲರು, ಅಸಂಘಟಿತರು ಹಾಗೂ ತಮ್ಮ ರಕ್ಷಣೆ ಮಾಡಿಕೊಳ್ಳಲು ಅಸಮರ್ಥರೆಂದು ಕಲ್ಪಿಸಿದ್ದು. ಈ ರೀತಿಯ ಭಾರತದ ದೌರ್ಬಲ್ಯಕ್ಕೆ ಅವರು ನೀಡಿದ ವಿವರಣೆ ಅವರಿಗೆ ಅರಿವಿಲ್ಲದಂತೇ ಭಾರತೀಯ ಸಮಾಜಕ್ಕೆ ಸಂಬಂಧಿಸಿ ಸರಿಯಾಗೇ ಇತ್ತು. ಏಕೆಂದರೆ'ಹಿಂದೂ' ಎಂಬ ಕಾಲ್ಪನಿಕ ಸಮಾಜ ಕೂಡ ತೀರ ಇತ್ತೀಚೆಗಿನದು. ಆರ್.ಎಸ್.ಎಸ್. ಒತ್ತಿ ಹೇಳುವ ವಾದವೆಂದರೆ ನಮಗೆ ಹಿಂದೂ ಗುರುತು ಮೊದಲಿನಿಂದ ಇತ್ತು ಆದರೆ ಬಹುಜನರಿಗೆ ಅದು ಗಮನಕ್ಕೆ ಬಂದಿರಲಿಲ್ಲ ಎಂಬುದು. ಈ ಮೂಲಕಲ್ಪನೆಯನ್ನು ತನ್ನ ಬೋಧನೆ ಹಾಗೂ ಉದಾಹರಣೆಗಳ ಮೂಲಕ 60ರ ದಶಕದ ಹೊತ್ತಿಗೆ ಭಾರತದ ಬಹುಭಾಗದಲ್ಲಿ ಹುಟ್ಟುಹಾಕಲು ಆರ್. ಎಸ್. ಎಸ್. ಶಕ್ತವಾಯಿತು. ವಿಪರ್ಯಾಸವೆಂದರೆ ಅದರ ಭೂತಕಾಲದ ಪುನರುತ್ಥಾನದ ಘೋಷಣೆ ಕೇವಲ ತಮ್ಮ ಗುರುತನ್ನು ಗಟ್ಟಿಮಾಡಿಕೊಳ್ಳುವ ಪೂರ್ವತಯಾರಿಯಾಗಿತ್ತು. ಈ ಕಾರಣದಿಂದ ಅವರು ತಮ್ಮದೇ ಆದ ಭಯೋತ್ಪಾದಕ ಹಿಂದೂ ಧರ್ಮಕ್ಕೆ ಅಪಚಾರ ಮಾಡಬಹುದಾದ ಸಾಂಪ್ರದಾಯಿಕ ಅಂಶಗಳ ಮೇಲೆ ಎಚ್ಚರಿಕೆಯಿಂದ ಧಾಳಿ ಮಾಡಿದರು. ಹಳೆಯ ರಾಷ್ಟ್ರೀಯತಾವಾದಿ ವಾಗ್ಮಾದ ವೈಭವೀಕರಿಸಿದ್ದ 'ಸಹಿಷ್ಣುತೆ' ಹಿಂದೂಗಳ ಒಂದು ದೊಡ್ಡ ದೌರ್ಬಲ್ಯ ಎಂದು ಆರ್. ಎಸ್. ಎಸ್. ಧಾಳಿಮಾಡಿತು. ''ಪ್ರತೀ ರಾಷ್ಟ್ರೀಯ ಅವಮಾನವನ್ನೂ ಶಾಂತಿಯ ಮುಖವಾಡದಲ್ಲಿ ಮುಚ್ಚಿಕೊಳ್ಳುತ್ತಿದ್ದೇವೆ. ದಿನದಿನವೂ ನಾವು ನಮ್ಮ ಗಡಿಗಳು ಕುಗ್ಗುವುದನ್ನು ನೋಡುತ್ತಿದ್ದೇವೆ........ ಇದೆಲ್ಲವನ್ನೂ ನಾವು ಶಾಂತಿದೂತರೆಂದು ನುಂಗಿಕೊಳ್ಳುತ್ತಿದ್ದೇವೆ. ಅವಮಾನವನ್ನು ನುಂಗಿಕೊಳ್ಳುತ್ತಹೋಗುವ ವ್ಯಕ್ತಿ ಗಂಡಸೂ ಅಲ್ಲ, ಹೆಂಗಸೂ ಅಲ್ಲ ಎಂದು ಮಹಾಭಾರತದಲ್ಲಿ ಹೇಳಿದೆ''[19]ಹಿಂದೂಗಳಲ್ಲಿದ್ದ ಒಡಕು ಮತ್ತೊಂದು ದೌರ್ಬಲ್ಯ. ಈ ಎಲ್ಲ ದೃಷ್ಟಾಂತಗಳಲ್ಲಿ ಆರ್.ಎಸ್.ಎಸ್. ನ ಪ್ರಚಾರ ಮನುಷ್ಯರ ಸೂಕ್ಷ್ಮಭಾವನೆಗಳನ್ನು ದುರುಪಯೋಗ ಪಡಿಸಿಕೊಳ್ಳುವ ನಿಟ್ಟಿನಲ್ಲಿ ಇತ್ತು. ಅಂದರೆ ದೌರ್ಬಲ್ಯ ಪ್ರಜ್ಞೆಯನ್ನು ಹಾಗೂ ನಮಗೆ ಮೋಸವಾಗುತ್ತಿದೆ ಎಂಬ ತೀರ ಕ್ಷುದ್ರ ಭಾವನೆಯನ್ನು ಬೆಳೆಯಿಸಿ ಅದನ್ನು ಉಪಯೋಗಿಸಿಕೊಳ್ಳುವುದು. ಗೋಳ್ವಲಕರರು ಬರೆಯುತ್ತಾರೆ. ''ಈ ಸಂಬಂಧಿಸಿ ಹಿಂದೂಗಳಂತೆ ಜಗತ್ತಿನ ಬೇರೆ ಯಾವುದೇ ಇತರ ಜನರು ಕೇವಲ ದುರದೃಷ್ಟಕಾರಿಗಳಲ್ಲ.'' ಇದನ್ನು ಸಮರ್ಥಿಸಲು ಉಪಯೋಗಿಸಿದ ಕಲ್ಪಿತ ಸಿದ್ಧಾಂತಗಳು ಹಾಗೂ ಐತಿಹಾಸಿಕ ದಂತಕಥೆಗಳಿಗೇನೂ ಕೊರತೆಯೇ ಇಲ್ಲ. ಬರ್ಬರ ಮುಸ್ಲಿಮರು ಬಾಬರ್ ಮೂಲಕ ಪವಿತ್ರ ಗಂಗಾ ಬಯಲನ್ನು ಪ್ರವೇಶಿಸಿದ್ದು, ದುರ್ಬಲ, ಮಂಕ ಹಾಗೂ ದ್ರೋಹಿ ಹಿಂದೂಗಳ ಪವಿತ್ರ ಹೆಂಡಿರನ್ನು ಸೆಳೆದುಕೊಂಡದ್ದು, ಪವಿತ್ರ ದೇವಾಲಯಗಳನ್ನು ಮೈಲಿಗೆ ಮಾಡಿ ಹಾಳುಮಾಡಿದ್ದು, ಹಾಗೂ ಮಧ್ಯಮಧ್ಯದಲ್ಲಿ ಆಧುನಿಕ ಸ್ವಯಂಸೇವಕರ ಪೂರ್ವಜರಾದ ರಜಪೂತರು ಈ ವಿನಾಶಕಾರೀ ಮುಸ್ಲಿಮರನ್ನು ಎದುರಿಸುವುದು, ಹೀಗೆ ಈ ರೀತಿಯ ಕಥೆಗಳನ್ನು ಆಧರಿಸಿ ಪ್ರಚಾರ ಇದ್ದವು.

---

19) *ಬಂಚ್ ಆಫ್ ಥಾಟ್,* ಪುಟ 249.

ಮುಸ್ಲಿಮರಿಗೆ ಇರುವ ಆಯ್ಕೆ ಎಂದರೆ ಭಾರತೀಯರಾಗುವುದು, ಅಂದರೆ ಹಿಂದೂಗಳಾಗುವುದು, ಅಥವಾ ತೀರ ಸಂಕುಚಿತ ಅರ್ಥದಲ್ಲಿ ಇದನ್ನು ಹೇಳಬಹುದಾದರೆ ಬ್ರಾಹ್ಮಣ ಶಿಷ್ಟರ ಧರ್ಮವನ್ನು ಒಪ್ಪಿಕೊಳ್ಳುವುದು. ಮಧೋಕರು ಮುಸ್ಲಿಮರಿಗೆ ಬೇಡಿಕೊಂಡರು, ''ಮುಸ್ಲಿಮರು ಕಡೇಪಕ್ಷ ತಮ್ಮ ಮನಃತೃಪ್ತಿಗಾದರೂ ಹೊರಗಡೆ ಬಂದು ಬಹಿರಂಗವಾಗಿ ತಾವು ಭಾರತಕ್ಕೆ ವಿಧೇಯರಾಗಿದ್ದೇವೋ ಅಥವಾ ಪಾಕಿಸ್ತಾನಕ್ಕೋ ಎಂಬುದನ್ನು ಸಾರಲಿ. ಒಮ್ಮೆ ಪಾಕಿಸ್ತಾನಕ್ಕಾದರೆ ಅವರು ತತ್‌ಕ್ಷಣವೇ ತಮ್ಮ ಗಂಟು–ಮೂಟೆಗಳನ್ನು ಕಟ್ಟಿಕೊಂಡು ಪಾಕಿಸ್ತಾನಕ್ಕೆ ಹೋಗಲಿ. ನಮ್ಮ ಪವಿತ್ರ ನೆಲದ ಒಂದು ಇಂಚಿನ ಮೇಲೂ ಅಂಥವರಿಗೆ ಹಕ್ಕಿಲ್ಲ.''[20] ಅವರು ಪರದೇಶೀ ಮೂಲದ ದೇವತೆಗಳಿಗೆ ಹಾಗೂ ಹಬ್ಬಗಳಿಗೆ ಈ ನಾಡಿನಲ್ಲಿ ಸ್ಥಾನವಿಲ್ಲ ಹಾಗೂ ಮುಸ್ಲಿಮರಿಗೆ ಮತ್ತು ಕ್ರಿಶ್ಚಿಯನ್ನರಿಗೆ ಭಾರತೀಯ ದೇವತಾರಾಧನೆಯ ಸಂಪ್ರದಾಯದಲ್ಲಿ ಅಸಂಖ್ಯ ಆಯ್ಕೆಗಳಿವೆ ಎಂದು ಸ್ಪಷ್ಟ ನಿಲುವು ಹೊಂದಿದ್ದರು. ''ಬಹಳಷ್ಟು ಹಿಂದುಗಳಿಗೆ ರಾಮ ಗುಲಾಮ, ಸಂತಭಿಕ್ಷಸಿಂಗ್, ಇಕ್ಬಾಲ್‌ಚೆಂದ್ ಮುಂತಾದ ಹೆಸರುಗಳಿರುವಾಗ ಮುಸ್ಲಿಮರೇಕೆ ಸಂಸ್ಕೃತ ಹೆಸರುಗಳಿಲ್ಲದಿದ್ದರೆ ಇಂಡೋನೇಶೀಯರಂತೆ ಸೂರಜ್‌ದಿನ್, ಶಾಮದತ್ತು ಮುಂತಾದ ಹೆಸರುಗಳನ್ನಿಟ್ಟುಕೊಳ್ಳಬಾರದು?''[21] ಸಾಂಸ್ಕೃತಿಕ ಸಮನ್ವಯ ಹಾಗೂ ಸಮ್ಮೇಳನಗಳ ನೀತಿಗಳು ಆರ್. ಎಸ್. ಎಸ್. ಇಡುವಂತೇ ಹಿಂದೂಗಳಲ್ಲದವರಿಗೆ ಅವಮಾನಕಾರಿಯಾಗಿದ್ದವು.

ತಾವೇ ನಂಬಿಕೆಯ ಸ್ವಘೋಷಿತ ರಕ್ಷಕರೆಂಬ ಪಾತ್ರವನ್ನು ನಿಜಗೊಳಿಸಲು ಆರ್. ಎಸ್. ಎಸ್. ಕಾರ್ಯಕರ್ತರು ಕೋಮುಗಲಭೆಗಳನ್ನು ಹುಟ್ಟಿಸಬೇಕಿತ್ತು. ಉತ್ತರ ಭಾರತದ ಬಹಳಷ್ಟು ಪಟ್ಟಣಗಳಲ್ಲಿ ಈ ಕೆಲಸ ಹೆಚ್ಚು ಸುಲಭವಾಗಿತ್ತು. ಸಣ್ಣ ವ್ಯಾಪಾರಿಗಳಲ್ಲಿ ಧಾರ್ಮಿಕ ಸ್ಪರ್ಧೆ, ಶತಮಾನಗಳಿಂದ ಧಾರ್ಮಿಕವಾಗಿ ವಿಭಜಿತವಾದ ವಸತಿ ಪದ್ಧತಿಗಳು, ಕೆಲವೊಮ್ಮೆ ಕಾರ್ಮಿಕ ವಿಭಜನೆ ಹಾಗೂ ಇವೆಲ್ಲವುಗಳ ಜೊತೆ ನಗರದ ಬಡವರ ಶೋಷಿತ ಜೀವನದ ಅಂಗವಾದ ಹಿಂಸಾ ಸಂಸ್ಕೃತಿ ಇವೆಲ್ಲವೂ ಯಾರಾದರೂ ಸ್ವಲ್ಪ ಕುಮ್ಮಕ್ಕು ಕೊಟ್ಟರೆ ಭುಗಿಲೆದ್ದು ಆಸ್ಫೋಟಿಸಲು ತಕ್ಕವಾಗಿದ್ದವು. ನಮ್ಮ ಮೂರನೆಯ ಜಗತ್ತಿನ ನಗರೀಕರಣದಲ್ಲಿ ಸಾಂಪ್ರದಾಯಿಕ ಬಂಧಗಳಾದ ಜಾತಿ, ಧರ್ಮ, ಪ್ರಾದೇಶಿಕತೆ ಹಾಗೂ ರಕ್ತಸಂಬಂಧ ಇವೆಲ್ಲವುಗಳಿಗೆ ಈ ರೀತಿಯ ಗಾಳಿಸುದ್ದಿಗಳು, ಭೀತಿಮನೋಸ್ಥಿತಿಗಳು ಹೊಸ ದಿಕ್ಕುಗಳನ್ನು ನೀಡಬಲ್ಲವು. ವಾಸ್ತವಿಕವಾಗಿ ಜಗತ್ತಿನ ಯಾವುದೇ ಭಾಗದಲ್ಲಾದರೂ 'ಎಲ್ಲಾ ಗಟ್ಟಿಗಳೂ ಕರಗುವಂಥ' ಆಧುನೀಕರಣವಾಗಿದೆಯೆ ಎಂಬುದು ಸಂದೇಹಾಸ್ಪದವೇ. ಆರ್.ಎಸ್.ಎಸ್. ಗಲಭೆಗಳನ್ನು ತೀರ ಬುದ್ಧಿವಂತಿಕೆಯಿಂದ ಕೆರಳಿಸಲು ಪ್ರಾರಂಭಿಸಿತು. ಅವರು ಸಂಘಟನಾತ್ಮಕವಾಗಿ ಹಿಂದೂ ಕೋಮುವಾದದ ಹಾಗೂ ನಗರ ಗಲಭೆಗಳ ಸಡಿಲ ಅಂಶಗಳನ್ನು ತಮ್ಮ ಆಳ್ವಿಕೆಗೆ ತರಲು ಶಕ್ತರಾಗಿದ್ದರು. ಈ ಮನೋಭಾವನೆಗೆ ಒಂದು ಖಚಿತತೆ ಹಾಗೂ ಸಾಂಸ್ಥಿಕ ಶಾಸ್ವತತೆಯನ್ನು ನೀಡಲು ಅವರಿಗಷ್ಟೇ ಶಕ್ಯವಿತ್ತು. ಸೈದ್ಧಾಂತಿಕವಾಗಿ ಇಂಥ ದೃಷ್ಟಾಂತಗಳನ್ನು ದೇಶದ ಇತರ ಭಾಗಗಳಲ್ಲಿ ಅವಮಾನಕಾರೀ ಸಂಗತಿಗಳಾಗಿ ಅಥವಾ ವೀರಗಾಥೆಗಳಾಗಿ ಬಿತ್ತರಿಸಿಕೊಂಡು ಹೋಗಬಹುದಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಮತ್ತಷ್ಟು ಗಲಭೆಗಳಿಗೆ ಹಳೆಯ ಗಲಭೆಗಳೇ ಕಚ್ಚಾ ಸಾಮಗ್ರಿಗಳು. ಈ ಅವಧಿಯಲ್ಲಿ ಆರ್. ಎಸ್. ಎಸ್. ತನ್ನ ಕೋಮುವಾದವನ್ನು ಮುಚ್ಚಿಟ್ಟುಕೊಳ್ಳುವ ತೊಂದರೆ ತೆಗೆದುಕೊಳ್ಳಲಿಲ್ಲ. ಅದಕ್ಕೆ ಈಗ ಮುಗುಳುನಗೆಯ ಮುಖವಾಡವೂ, ಮಖಮಲ್ಲಿನ ಕೈಗವುಸುಗಳೂ ಇರಲಿಲ್ಲ.

---

20) ಇಂಡಿಯನೈಸೇಶನ್‌ಪುಟ 75.

21) ಬಂಚ್ ಆಫ್ ಥಾಟ್, ಪುಟ 107.

ಗೋಳ್ವಲಕರರು ಬರೆಯುತಾರೆ. ''ನಮ್ಮ ಸಮಾಜವನ್ನು ಪ್ರತ್ಯೇಕಿಸುವ ಮತ್ತೊಂದು ಮುಖ್ಯ ಲಕ್ಷಣ ಎಂದರೆ ವರ್ಣ ವ್ಯವಸ್ಥೆ. ಆದರೆ ಇಂದು ಅದನ್ನು ಜಾತಿವಾದ ಎಂದು ಹಣೆಪಟ್ಟಿ ಅಂಟಿಸಿ ಅಪಹಾಸ್ಯ ಮಾಡಲಾಗುತ್ತಿದೆ. ನಮ್ಮ ಜನರು ಕೇವಲ ವರ್ಣವ್ಯವಸ್ಥೆಯ ಉಲ್ಲೇಖವೆಂದರೆ ಸಾಮಾಜಿಕ ಅಸಮಾನತೆಯ ಸಂಕೇತ ಎಂದು ನಂಬುವ ಮಟ್ಟಿಗೆ ತಯಾರಾಗಿದ್ದಾರೆ.''[22] ಕೆಳಹಂತದವರ ಪ್ರತಿಭಟನೆಯ ಭೀತಿ ಹಾಗೂ ಸನಾತನಧರ್ಮದ ನಿಯಮಗಳು ಏರುಪೇರಾಗುವ ಹೆದರಿಕೆಯೇ ಆರ್.ಎಸ್.ಎಸ್. ಹಾಕಿಕೊಂಡ ಯುಕ್ತಿಯ ಹಿಂದಿರಬಹುದಾದ ಮೂರನೆಯ ಭ್ರಾಂತಿ. ಇದಕ್ಕೂ ಆರ್. ಎಸ್. ಎಸ್. ನ ಹುಟ್ಟು ಪ್ರದೇಶವಾದ ಮಹಾರಾಷ್ಟ್ರಕ್ಕೂ ಸಂಬಂಧವಿದೆ. ಆರ್.ಎಸ್.ಎಸ್.ನ ಸ್ಥಾಪಕರು ಹಾಗೂ ಅದರ ಗಣನೀಯ ಪ್ರಮಾಣದ ಮುಂದಾಳುಗಳು ಮರಾಠಾ ಬ್ರಾಹ್ಮಣ ಸಮಾಜದವರು. ಈ ಪ್ರಬಲ ಸಮುದಾಯದ ಒಂದು ಜೀರ್ಣಿಸಿಕೊಳ್ಳಲಾಗದ ಅನುಭವವೆಂದರೆ ಈ ರಾಜ್ಯದಲ್ಲಿ ಒಂದರ ನಂತರ ಮತ್ತೊಂದಾಗಿ ನಡೆದ ಬ್ರಾಹ್ಮಣೇತರ ಚಳುವಳಿ ಹಾಗೂ ದಲಿತ ಚಳುವಳಿಗಳು. ತಮ್ಮ ವರ್ಗ ಹಾಗೂ ಜಾತಿಯ ಭಾವನೆಗಳಿಗೆ ತಕ್ಕಂತೇ ಅವರು ಹಿಂದುತ್ವವನ್ನು ಸವರ್ಣನೀತಿಗಳು ಹಾಗೂ ಆಧುನಿಕ ಧರ್ಮದ ಮಿಶ್ರಣದಲ್ಲಿ ವ್ಯಾಖ್ಯಾನಿಸಲು ಬಯಸಿದರು. ಮತ್ತೆ ಗೋಳ್ವಲಕರರನ್ನು ಉದ್ಧರಿಸುವುದಾದರೆ, ''ವರ್ಣವ್ಯವಸ್ಥೆಯೇ ಶತಮಾನಗಳ ನಮ್ಮ ಅವನತಿಗೆ ಕಾರಣ ಎಂದು ಪ್ರಚಾರಮಾಡಿ ಬೇಸರವೇ ಬರದ ಕೆಲವರಿದ್ದಾರೆ. ಆದರೆ ಇಂಥ ನಿರೂಪಣೆ ಐತಿಹಾಸಿಕ ಸತ್ಯಗಳನ್ನು ಎದುರಿಸಿ ನಿಲ್ಲುವುದೇ? ಪ್ರಾಚೀನ ಕಾಲದಿಂದಲೂ ಜಾತಿಗಳಿದ್ದವು. ನಮ್ಮ ವೈಭವಪೂರ್ಣ ರಾಷ್ಟ್ರ ಜೀವನದಲ್ಲಿ ಸಾವಿರಾರು ವರ್ಷ ಅವು ಉಳಿದುಬಂದವು. ಎಲ್ಲೂ ಕೂಡ ಅದು ಯಾವುದೇ ಕಾರ್ಯವನ್ನು ನಿಲ್ಲಿಸಿದ ಅಥವಾ ಸಾಮಾಜಿಕ ಐಕ್ಯತೆಯನ್ನು ಒಡೆದ ದೃಷ್ಟಾಂತಗಳಿಲ್ಲ. ಬದಲಾಗಿ ಅದು ನಿಜವಾಗಿಯೂ ಸಾಮಾಜಿಕ ಸಮನ್ವಯಕ್ಕೆ ಮಹತ್ವದ ಬಂಧವಾಗಿತ್ತು.''[23] ಮೇಲೆ ವ್ಯಾಖ್ಯಾನಕ್ಕೆ ಒಳಪಟ್ಟ ಹಿಂದೂಧರ್ಮದ ಲಕ್ಷಣಗಳಿಗೆ ಮೂರು ಹಂತಗಳಿವೆ ಹಾಗೂ ಜನಸಾಮಾನ್ಯರ ಧಾರ್ಮಿಕ ಸಂಪ್ರದಾಯಗಳನ್ನು ಹಾಗೂ ಆಚರಣೆಗಳನ್ನು 'ಶಿಷ್ಟ'ರು ಒಳಗೊಳ್ಳುವ ರೀತಿಗಾಗಿ ಅವು ಆಸಕ್ತಿಪೂರ್ಣವಾಗಿವೆ.

ಮೊದಲನೆಯದಾಗಿ, ಅದು ನಿಮ್ನ ಜಾತಿಯವರ ಧರ್ಮ ಹಾಗೂ ಅವರ ಮೌಖಿಕ ಸಂಪ್ರದಾಯ, ಆಚರಣೆಗಳು, ಪೌರಾಣಿಕ ಕಥೆಗಳು ಕಟ್ಟಿಕೊಡುವ ಶ್ರೀಮಂತ ಹಾಗೂ ವೈವಿಧ್ಯಪೂರ್ಣ ಧರ್ಮವನ್ನು ಕಡೆಗಣಿಸಿ ತಮ್ಮ ಬ್ರಾಹ್ಮಣ ಸವರ್ಣ ಸಂಪ್ರದಾಯವನ್ನು ಎಲ್ಲರಿಗೂ ಸಾಮಾನ್ಯೀಕರಿಸಿತು. ಹಾಗೂ ಇದರಿಂದಲೇ ತಮ್ಮ ಧಾರ್ಮಿಕ ಸಂಪ್ರದಾಯಗಳನ್ನು ಆಯ್ದುಕೊಂಡಿತು. ಈ ಏಕಮುಖೀ ವ್ಯಾಖ್ಯೆಯನ್ನು ಸೈದ್ಧಾಂತಿಕ ದಮನ ನೀತಿಯಿಂದ, ಇಲ್ಲಿಯದನ್ನೂ ಅಲ್ಲಿ ಸೇರಿಸಿ ಹಾಗೂ ಇಲ್ಲಿ ವಿವರಿಸಲು ಸಾಧ್ಯವಾಗದಷ್ಟು ಸಂಕೀರ್ಣವಾದ ಸಂಗತಿಗಳನ್ನು ಸಂಕ್ಷಿಪ್ತಗೊಳಿಸುವಿಕೆಯಿಂದ ಸಾಧಿಸಲಾಯಿತು. ಕೆಳಜಾತಿಗಳಿಗೆ ಇವು ಆಕರ್ಷಕವಾಗುವಂತೆ ಮಾಡಲು ಹಾಕಿಕೊಂಡ 'ಸಾಂತ್ವನಪರ ವಿವರಣೆ'ಗಳ ಕುರಿತು ನಾವು ಮುಂದೆ ಬೇರೆ ಜಾಗದಲ್ಲಿ ವಿವರಿಸಲು ಪ್ರಯತ್ನಿಸುತ್ತೇವೆ.

ಎರಡನೆಯದಾಗಿ, ಭೌಗೋಲಿಕವಾಗಿ ಈ ರೀತಿಯ ಆಯ್ಕೆಗೆ ಪರಿಗಣಿಸಲ್ಪಟ್ಟ ಧಾರ್ಮಿಕ ವಿಧಿಗಳು ಕೆಲಭಾಗಗಳಲ್ಲಿ ಮಾತ್ರ ಪ್ರಚಲಿತದಲ್ಲಿದ್ದವು; ಮುಖ್ಯವಾಗಿ ಮಹಾರಾಷ್ಟ್ರದಲ್ಲಿದ್ದವು. ಅಷ್ಟರ ನಂತರ ಆರ್. ಎಸ್. ಎಸ್. ನ ಹಿಂದೂ

---

22) ಅದೇ, ಪುಟ 108, ಇಂಡಿಯನ್ನೆಸೇಶನ್ ಪುಟ 45.

23) ಅದೇ, VII - 2.

ಧರ್ಮದ ಸೀಮೆ ಅಲ್ಪ ಸ್ವಲ್ಪ ಪ್ರಾದೇಶಿಕ ಪ್ರಾತಿನಿಧ್ಯವನ್ನು ಹೊಂದಿ ಹಿಗ್ಗಲಿಸಿದೆ. ಆರ್. ಎಸ್. ಎಸ್. ಹಿಂದೂ ಧರ್ಮ ಎಂದರೆ ಈ ಹಂತದಲ್ಲಿ ಮಹಾರಾಷ್ಟ್ರೀ ಬ್ರಾಹ್ಮಣರ ಹಿಂದೂಧರ್ಮವಾಗಿದೆ. ಏಕೆ ಆರ್. ಎಸ್. ಎಸ್. ಭಾರತದ ದಕ್ಷಿಣದ ತುದಿಯಲ್ಲಿ ಹಾಗೂ ಪೂರ್ವದ ತುದಿಯಲ್ಲಿ ಬಹಳ ಪ್ರಚೋದಕವಾಗಿಲ್ಲ ಎಂಬುದನ್ನು ಇದು ವಿವರಿಸುತ್ತದೆ.

ಮೂರನೆಯದಾಗಿ, ಇದಕ್ಕೆ ಸಂಬಂಧಿಸಿದ ಸೈದ್ಧಾಂತಿಕ ಹಂತದ ಮತ್ತೊಂದು ತಂತ್ರವೆಂದರೆ ರಾಜಕೀಯ ಇತಿಹಾಸ, ಅದರಲ್ಲೂ ಮಧ್ಯಕಾಲೀನ ಇತಿಹಾಸವನ್ನು, ಧಾರ್ಮಿಕ ಪ್ರಭಾವಲಯದಲ್ಲಿ ತರುವುದು. ಕೋಮುವಾದೀ ವಾಗ್ವಾದದಿಂದ ಅದರ ಮೇಲೊಂದು ತೀವ್ರತೆಯನ್ನು ಮುದ್ರಿಸುವುದು. ಇಲ್ಲಿ ನಾನು ಕೇವಲ ಒಳ್ಳೆ ಹಿಂದೂಗಳು ಹಾಗೂ ಕೆಟ್ಟ ಮುಸ್ಲಿಮರ ಮಧ್ಯೆ ನಡೆದ ಹೋರಾಟದ ರೂಪದಲ್ಲಿ ಮಧ್ಯಕಾಲೀನ ಹೋರಾಟವನ್ನು ತಿರುಚುವ ವಸ್ತುನಿಷ್ಠ ತಪ್ಪುಗಳನ್ನಷ್ಟೇ ಸೂಚಿಸುತ್ತಿಲ್ಲ. ಅದಕ್ಕೂ ಆಳವಾದ ಹಾನಿಯೆಂದರೆ ಕಥನ ಕ್ರಮವನ್ನೇ ಕೋಮುವಾದೀ ದೃಷ್ಟಿಯ ಬಣ್ಣಗಳಿಂದ ತುಂಬುವ ಪ್ರಯತ್ನದಿಂದುಂಟಾಗಿದೆ. ಈ ರೀತಿ ಮೂಲಭೂತವಾಗಿ ಮಧ್ಯಕಾಲೀನ ಇತಿಹಾಸ ರಾಷ್ಟ್ರೀಯ ಚಳುವಳಿಗಿಂತಲೂ ಸಮಕಾಲೀನತೆಗೆ ಹತ್ತಿರ ಬಂದಿತು. ಹೀಗಾಗಿ ಜನರಿಗೆ ಭಾವನಾತ್ಮಕವಾಗಿ ಆತ್ಮಾಹುತಿ ಮಾಡುಕೊಳ್ಳುವುದು, ಶಿವಾಜಿ, ರಾಮ, ರಾಣಾಪ್ರತಾಪರಿಗಾಗಿ ಕೊಲೆಯಲ್ಲಿ ನಿರತರಾಗುವುದು ಮುಂದಿನ ಹೆಜ್ಜೆಯಾಗಿ ಕಾಣಿಸಿತು.

ಇದಕ್ಕೆ ಪರ್ಯಾಯವಾಗಿ ರಾಷ್ಟ್ರೀಯ ಚಳುವಳಿಯ ಬಗ್ಗೆ ಚರ್ಚೆ ನಡೆದದ್ದೇ ಅಪರೂಪ; ಅದು ಭಾವೋದ್ರೇಕದ ವಾಗ್ವಾದಗಳಲ್ಲಿ ಮಧ್ಯಕಾಲದಂತೆ ಸ್ಥಾನ ಪಡೆಯಲಿಲ್ಲ. ಅದಕ್ಕೂ ಮಿಗಿಲಾಗಿ ಭಾರತಕ್ಕೆ ವರದಾನವೋ ಎಂಬಂತೇ ಎರಡು ಪ್ರತ್ಯೇಕ ಮಧ್ಯಕಾಲಗಳಿವೆ. ಇದನ್ನು ಮೇಲಿನ ವಾದವನ್ನು ಪುಷ್ಟೀಕರಿಸಲು ಬಳಸಲಾಯಿತು. ಇದನ್ನು ಸಾಧಿಸಿದ ವಿಧಾನವೆಂದರೆ, ಮಧ್ಯಯುಗದ ಮೊದಲನೆಯ ಹಂತದ ಊಳಿಗಮಾನ್ಯ ವ್ಯವಸ್ಥೆಯ ಕಾಲವನ್ನು (4ನೇ ಶತಮಾನದಿಂದ 12ನೇ ಶತಮಾನದವರೆಗೆ)ವೈಭವೀಕರಿಸಿ, ಮುಸ್ಲಿಂ ಪ್ರತಿಷ್ಠಿತ ವರ್ಗಗಳು ಪ್ರಧಾನವಾಗಿದ್ದ ಎರಡನೆಯ ಹಂತವನ್ನು (12ನೆಯ ಶತಮಾನದಿಂದ 18ನೆಯ ಶತಮಾನದವರೆಗೆ) ತುಚ್ಛೀಕರಿಸುವುದು. ಆಸಕ್ತಿಯ ವಿಷಯವೆಂದರೆ ಮುಸ್ಲಿಂ ಕೋಮುವಾದಿಗಳೂ ಈ ರೀತಿಯ ವಿವರಣೆಯನ್ನು ಹಿಂದು–ಮುಂದು ಮಾಡಿ ಪ್ರತಿಪಾದಿಸಿದರು, ಆದರೆ ಹಿಂದೂ ಕೋಮುವಾದಿಗಳ ಚೌಕಟ್ಟಿನ ಮಿತಿಯಲ್ಲಿ ಸಿಲುಕಿಕೊಂಡರು.

ಈ ಕಾಲದಲ್ಲಿ 'ಹಿಂದೂ ಸಮಾಜ'ವನ್ನು ಕಲ್ಪಿಸಲಿಕ್ಕೆ ನಡೆದ ಪ್ರಯತ್ನದ ಕುರಿತು ಸ್ವಲ್ಪ ವಿಶ್ಲೇಷಣೆ ಅಗತ್ಯ. ಇದು ವಸಾಹತುಶಾಹಿ ಕಾಲದ ಸಾಮಾಜಿಕ ಚಳುವಳಿಗಳಿಂದ ಹಾಗೂ ಪುನರುತ್ಥಾನವಾದೀ ಚಳುವಳಿಗಳಿಂದ ಗುಣಾತ್ಮಕವಾಗಿ ಬೇರೆಯಾಗಿದೆ. ಈಗಿನವುಗಳಷ್ಟು ವಿಶಾಲವಲ್ಲದ ಹಾಗೂ ಪೂರ್ವಯೋಜಿತವಲ್ಲದ ಆರ್ಯಸಮಾಜದ ಶುದ್ಧಿಕರ್ಮಗಳನ್ನು ಬಿಟ್ಟು ಉಳಿದವುಗಳು ಕೆಲ ಸಾರ್ವತ್ರಿಕ ನಡಾವಳಿಗಳನ್ನು ಹೊಂದಿದ ಒಂದು ವಿಶಾಲ ಅರ್ಥದ ತಾತ್ವಿಕ ಪಂಥಗಳನ್ನು ನಿರ್ಮಿಸುವ ಪ್ರಯತ್ನಗಳಾಗಿದ್ದವು. ಇವುಗಳನ್ನು ಸಾಂಪ್ರದಾಯಿಕ ಹಿಂದೂ ಧರ್ಮದ ಚೌಕಟ್ಟಿನೊಳಗೆ ಸೇರಿಸಿಕೊಳ್ಳುತ್ತಿರಲಿಲ್ಲ ಅಥವಾ ಅದರ ವಿಶಿಷ್ಟವಾದ ಬದಲಾವಣೆಯ ಹಾದಿಯಲ್ಲಿ ಅವು ಸೇರುತ್ತಿರಲಿಲ್ಲ. ಅವು ಸಾಂಪ್ರದಾಯಿಕ ಧರ್ಮದ ತಾತ್ವಿಕ ಸಮನ್ವಯದಿಂದ ಹೊರತಾಗುವ ಪ್ರಶ್ನೆಯೇ ಇರಲಿಲ್ಲ. ಏಕೆಂದರೆ ಅವು ಸಾಂಪ್ರದಾಯಿಕ ಧರ್ಮವನ್ನು ಒಂದು ಕೇಂದ್ರಕ್ಕೆ ಕಟ್ಟಿದ ಜಡ ಧರ್ಮವನ್ನಾಗಿ ಗ್ರಹಿಸದೇ ಚಲನಶೀಲ ಧರ್ಮವನ್ನಾಗಿ ಕಲ್ಪಿಸಿದ್ದವು. ಆರ್. ಎಸ್. ಎಸ್.ನ ಪ್ರಯತ್ನ ಎಷ್ಟು ತೀವ್ರವಾಗಿ ಹೊಸದಾಗಿತ್ತೆಂದರೆ ಅದನ್ನು ಆಚರಿಸುವವರು ಹಾಗೂ ಟೀಕಿಸುವವರು ಅದನ್ನೊಂದು ಹಳೆಯ ಧರ್ಮವೆಂದು ಅಪಾರ್ಥ ಮಾಡಿಕೊಂಡರು.ಈ ಹೊಸ ಧರ್ಮವನ್ನು ಕೆಳಗಿನ ಪರಿಭಾಷೆಯಲ್ಲಿ ವ್ಯಾಖ್ಯಾನಿಸಬಹುದು: ಅದು ಭೂತಕಾಲದಿಂದ ಬಲವಂತವಾಗಿ

ದಕ್ಷಿಣ ಕನ್ನಡ ಜಿಲ್ಲೆಯ ಆಗುಹೋಗುಗಳ ಕುರಿತು ಕೆಲವು ಟೀಕೆ ಟಿಪ್ಪಣಿಗಳು

ಡಾ| ವಲೇರಿಯನ್ ರೊಡ್ರಿಗಸ್

ದಕ್ಷಿಣ ಕನ್ನಡ ಜಿಲ್ಲೆಯ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಆಗುಹೋಗುಗಳ ಬಗೆಗಿನ ವಲೆರಿಯನ್ ರಾಡ್ರಿಗಸ್ ಅವರ ಈ ಲೇಖನವನ್ನು ಅರಿವುಬರಹ ಕೆಲವು ವಿಶೇಷ ಕಾರಣಗಳಿಗಾಗಿ ಪ್ರಕಟಿಸುತ್ತಿದೆ. ಭಾರತದ ವಿಶ್ವವಿದ್ಯಾನಿಲಯ ಹಾಗೂ ಸಂಶೋಧನಾ ಕೇಂದ್ರಗಳೆನ್ನುವ ಆಧುನಿಕ ಕಾರ್ಖಾನೆಗಳಲ್ಲಿ ವಸ್ತುಗಳ ಹಾಗೆ ಕ್ಷಿಪ್ರಗತಿಯಲ್ಲಿ ಉತ್ಪಾದಿತಗೊಳ್ಳುವ ಪ್ರದೇಶಗಳ ಬಗೆಗಿನ ಅಧ್ಯಯನಗಳು ತಾವು ಅಭ್ಯಸಿಸುವ ಪ್ರದೇಶಗಳನ್ನು ಒಂದೋ 'ಸ್ವಯಂಭೂ' ಎಂದೋ ಅಥವಾ ರಾಷ್ಟ್ರೀಯ ಚರಿತ್ರೆಯ ನಕಲುಗಳೆಂದೋ ಗುರುತಿಸುತ್ತವೆ. ಈ ಬಗೆಯ ಅವಿಮಾರ್ಶಾತ್ಮಕವಾದ ಅಧ್ಯಯನಗಳು ಪ್ರಾದೇಶಿಕ ಚರಿತ್ರೆಯ ಏರುಪೇರುಗಳನ್ನು ತಟ್ಟಿ ಸರಿಮಾಡಿ, ಓರೆಕೋರೆಗಳನ್ನು ತಿದ್ದಿ ತೀಡಿ ಉಪಯೋಗಿಸಬಹುದಾದ ಚರಿತ್ರೆಯೊಂದನ್ನು ಅವುಗಳ ಬಗೆಗೆ ನಮಗೆ ಕಟ್ಟಿಕೊಡುತ್ತವೆ.

ದಕ್ಷಿಣ ಕನ್ನಡ ಎನ್ನುವ ಭೌಗೋಲಿಕ ಸಾಮಾಜಿಕ ಅವಕಾಶವನ್ನು ಅದರ ಒಳಹೊರಗುಗಳ ತುಲನಾತ್ಮಕ ವಿಶ್ಲೇಷಣೆಯಲ್ಲಿ ಪರೀಕ್ಷಿಸುವ ಪ್ರಸ್ತುತ ಲೇಖನ, ಪ್ರದೇಶಗಳ ಚರಿತ್ರೆಯನ್ನು ನಾವು ಹೇಗೆ ನೋಡಬಹುದು ಎನ್ನುವ ದಿಸೆಯಲ್ಲಿ ಕೆಲವು ಮಹತ್ವದ ಸೂಚನೆಗಳನ್ನು ಒದಗಿಸುತ್ತದೆ. ದಕ್ಷಿಣಕನ್ನಡ ಜಿಲ್ಲೆಯನ್ನು ಒಂದು ಸಮುದಾಯವಾಗಿ ಪರಿಭಾವಿಸುವ ರಾಡ್ರಿಗಸ್ ಅವರ ಈ ಲೇಖನ ದಕ್ಷಿಣ ಕನ್ನಡದ ರೂಪುರೇಷೆಗಳನ್ನು ಗುರುತಿಸುತ್ತದೆ ಮಾತ್ರವಲ್ಲದೆ ಅವುಗಳ ಕುರಿತು ತನ್ನ ವಿಮರ್ಶೆಯನ್ನು ಒದಗಿಸುತ್ತದೆ.

ದಕ್ಷಿಣಕನ್ನಡ ಜಿಲ್ಲೆಯು ಪ್ರಗತಿಪಥದಲ್ಲಿದೆ ಮತ್ತು ಈ ಶತಮಾನದ ಅಂತ್ಯದೊಳಗೆ ಅದರ ಆರ್ಥಿಕ ನಕಾಶೆಯಲ್ಲಿ ಬಹಳಷ್ಟು ಬದಲಾವಣೆಯಾಗಲಿದೆ ಎಂಬ ವಿಚಾರಗಳು ಇತ್ತೀಚೆಗೆ ಹಲವಾರು ವೇದಿಕೆಗಳಿಂದ ಮತ್ತು ಪ್ರಶಸ್ತ ಮೂಲಗಳಿಂದ ನಮಗೆ ಕೇಳಿಬರುತ್ತಲಿವೆ. ಈ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಪ್ರಗತಿ ಮತ್ತು ಅಭಿವೃದ್ಧಿ ಎಂದರೆ ಔದ್ಯೋಗೀಕರಣ ಮತ್ತು ಅದಕ್ಕೆ ಬುನಾದಿಯಾಗಿರುವ ಸಾಧನಗಳ ಬೆಳವಣಿಗೆ ಎನ್ನುವ ಪೂರ್ವಗ್ರಹಿಕೆಯೇ ಇರುತ್ತದೆ. ಅವನ್ನು ಬಹುಮುಖೀಯ ಆರ್ಥಿಕ ಮತ್ತು ಸಾಮಾಜಿಕ ಪ್ರವೃತ್ತಿಗಳೆಂದು ತಿಳಿದು ವಿಶ್ಲೇಷಿಸುವ ಅಥವಾ ಅವುಗಳ ವೈರುಧ್ಯಗಳನ್ನು ಗುರುತಿಸಿ ವಿಕಲ್ಪಗಳನ್ನು ಮುಂದಿಡುವ ವೈಚಾರಿಕತೆ ಅಥವಾ ಚರ್ಚೆಗಳು ಕೇಳಿಬರುವುದು ಬಹಳ ಕಡಿಮೆ. ನಮ್ಮದೊಂದು ಬಹುರೂಪಿಯ ಸಂಸ್ಕೃತಿ, ನೆಲೆ ಎಂದು ಅನಂತಮೂರ್ತಿಯಂಥವರು ಎಷ್ಟೆಲ್ಲ ಒತ್ತಾಯಿಸಿದರೂ, ಏಕರೂಪೀ ಪ್ರಜ್ಞೆಯೇ ನಮ್ಮಲ್ಲಿ ಯಾಜಮಾನ್ಯ ವಹಿಸಿದೆ ಎಂದೆನಿಸುತ್ತದೆ. ಕೊಂಕಣ ರೈಲ್ವೇ ಅಥವಾ ಮಂಗಳೂರು ತೈಲಗಾರ ಯೋಜನೆಗಳಿಂದಾಗಿ ಸ್ಥಳೀಯ ಅನುಭೋಗಿಗಳು ಮನೆ, ಭೂಮಿ, ವೇಳೆ ಮತ್ತು ಜೀವನಶೈಲಿಯನ್ನು ಕಳೆದುಕೊಂಡು ಸಂತ್ರಸ್ತರಾಗಿ ನಿರುಪಾಯಿಗಳಾಗಿದ್ದಾರೆ. ಹೊಸ ಜೀವನ ಕ್ರಮಗಳು ಅವರ ಮೇಲೆ ಹೇರಲ್ಪಟ್ಟರೂ ಅವರ ಸಮಸ್ಯೆಯನ್ನು 'ದನಪರಿಹಾರ' ಮತ್ತು 'ಮನೆಯೊಳಗೇ ವೃತಿ' ಇವೆರಡರಲ್ಲಿಯೇ ನಾವು ಸೀಮಿತಗೊಳಿಸಿದ್ದೇವೆ. ಆಧುನಿಕ ಪ್ರಬುದ್ಧ ಜೀವನ ಶೈಲಿಯ ಹೊರತಾಗಿ ಬೇರೆ ಔಚಿತ್ಯ ಪೂರ್ಣವೆನಿಸುವ ಜೀವನಶೈಲಿಗಳೂ ಇರಲು ಸಾಧ್ಯ. ಆದರೆ, ಆಧುನೀಕರಣವನ್ನು ಸಾಪೇಕ್ಷಗೊಳಿಸಿ ಅದರೊಂದಿಗೆ ಜೀವನದ ಇತರ ಅಂಶ, ತತ್ವಗಳನ್ನು ಸೇರಿಸಿ, ಸಮಜಾಯಿಸಿ ಭವಿಷ್ಯದ ಜೀವನದೃಷ್ಟಿಯನ್ನು ರೂಪಿಸಬೇಕೆಂಬ ಪ್ರಮೇಯಗಳು ಕೇಳಿಬರುವುದೇ ಇಲ್ಲ. ಪ್ರಗತಿಯನ್ನು ಪ್ರೋತ್ಸಾಹಿಸುವವರಲ್ಲಿಯೂ ಅಥವಾ ಅದನ್ನು ಕಾತರದಿಂದ

ನಿರೀಕ್ಷಿಸುವವರಲ್ಲಿಯೂ ಜಿಲ್ಲೆಯ ಬದಲಾಗುತ್ತಿರುವ ಸಾಮಾಜಿಕ ಅಥವಾ ಚಾರಿತ್ರಿಕ ಪರಿಸ್ಥಿತಿಯ ಪೂರ್ಣ ಅರಿವು ಇದೆಯೆಂದು ಹೇಳುವುದು ಕಷ್ಟ. ಈ ಪಾರ್ಶ್ವಗಳನ್ನು ಹೊರತುಪಡಿಸಿ ಕೇವಲ ಪ್ರಬಲ ಹಿತಾಸಕ್ತಿಗಳಿಗೆ ಮತ್ತು ಧೋರಣೆಗಳಿಗೆ ಓಗೊಡುವ ಪ್ರಜ್ಞೆ ಮತ್ತು ಅದರಿಂದ ಹೊರಹೊಮ್ಮುವ ಸತರ್ಕವಾದ ಕಾರ್ಯಪ್ರವೃತ್ತಿಗಳು ಜೀವನದ ಏಕರೂಪವನ್ನಷ್ಟೇ ಪ್ರದರ್ಶಿಸುತ್ತವೆ ಮಾತ್ರವಲ್ಲ, ಅದನ್ನು ಸಾರ್ವಜನಿಕಗೊಳಿಸಬಲ್ಲವು ಕೂಡ.

ಈ ಲೇಖನದಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಬದಲಾಗುತ್ತಿರುವ ಪರಿಸ್ಥಿತಿಯನ್ನು ಕೆಲವು ಪಾರ್ಶ್ವಗಳಿಂದ, ಉದಯೋನ್ಮುಖ ಧೋರಣೆಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ ಮತ್ತು ಆ ಮೂಲಕ ಸಮಾಜಕ್ಕೆ ಯಾವ ರೂಪರೇಖೆಗಳನ್ನು ನಾವು ನೀಡಬಹುದು ಎನ್ನುವುದರ ಬಗ್ಗೆ ಕೆಲವು ವಿಚಾರಗಳನ್ನು ಮಂಡಿಸಲಾಗಿದೆ. ಈ ಯುಗದಲ್ಲಿ ಯಾವುದೇ ಪ್ರದೇಶದ ವಿಶ್ಲೇಷಣೆಯನ್ನು ಬಾಹ್ಯ ಪ್ರಭಾವ ಮತ್ತು ಪಾರಸ್ಪರಿಕ ಚಲನವಲನಗಳಿಂದ ಹೊರತುಪಡಿಸಿ ಮಾಡುವುದು ಕಷ್ಟ. ಆದರೂ ಮೂರು ಮುಖ್ಯ ಕಾರಣಗಳಿಗಾಗಿ ಅಂತಹ ವಿಶ್ಲೇಷಣೆ ದಕ್ಷಿಣಕನ್ನಡದ ಸಂದರ್ಭದಲ್ಲಿ ಉಚಿತವೆಂದು ನನಗನಿಸುತ್ತದೆ. ಮೊದಲನೆಯದಾಗಿ, ದಕ್ಷಿಣಕನ್ನಡ ಜಿಲ್ಲೆಗೆ ಒಂದು ಐತಿಹಾಸಿಕ ಮತ್ತು ಚಾರಿತ್ರಿಕ ನಿರ್ದಿಷ್ಟತೆ ಇದೆ. ಎರಡನೆಯದಾಗಿ, ಈ ಪ್ರದೇಶದಲ್ಲಿ ಆರ್ಥಿಕ ಮತ್ತು ಸಾಮಾಜಿಕವಾಗಿ ಪ್ರಬಲವಾದ ಬೆಳವಣಿಗೆಗಳು ಕಂಡುಬರುತ್ತವೆ. ಮೂರನೆಯದಾಗಿ, ಇತ್ತೀಚಿನ ರಾಜಕೀಯ ಆಡಳಿತದ ವಿಕೇಂದ್ರೀಕರಣದಿಂದಾಗಿ ಇಲ್ಲಿನ ಜನತೆಗೆ ತಮ್ಮ ಈ ಸ್ಥಳೀಯ ಸಮಾಜವನ್ನು ರೂಪಿಸುವ ಅವಕಾಶಗಳು ಹೆಚ್ಚಿವೆ. ಸಮಾಜ ಎಂಬುದನ್ನು ತಾತ್ವಿಕವಾಗಿ ಶ್ರೇಣೀಕೃತ ವ್ಯವಸ್ಥೆ ಎಂದು ನಾವು ತಿಳಿದುಕೊಂಡರೆ ನಮ್ಮ ಈ ಸ್ಥಳ ಅದರಲ್ಲಿನ ಒಂದು ಅಂತಸ್ತು. ಇಲ್ಲಿನ ಜವಾಬ್ದಾರಿಯನ್ನೇ ನಾವು ಅಲ್ಲಗಳೆದರೆ ಇತರೆಡೆಯ ನಮ್ಮ ಬಯಕೆಗಳು ಟೊಳ್ಳು ಆಶ್ವಾಸನೆಗಳಷ್ಟೇ ಆಗಬಲ್ಲವು. ನಿರ್ದಿಷ್ಟತೆಗೆ ಹಲವಾರು ಆಯಾಮಗಳಿವೆ. ಅದು ಒಂದು ಪ್ರದೇಶದಲ್ಲಿ ಬಲವಾದರೆ ಇಡೀ ಸಮಾಜವನ್ನು ವ್ಯಾಪಿಸಬಹುದಾಗಿದೆ.

1991ರ ಜನಗಣತಿಯ ಪ್ರಕಾರ ನೋಡಿದರೆ ನಗರೀಕರಣ ಎನ್ನುವುದು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕಡಿಮೆ;ಕರ್ನಾಟಕದ ಮಟ್ಟಕ್ಕೆ ಹೋಲಿಸಿದರಂತೂ ಅದು ತೀರ ಕಡಿಮೆಯೇ. ನಗರೀಕರಣ ಎನ್ನುವುದೇ ಆಧುನೀಕರಣ ಎಂದು ಅರ್ಥಮಾಡಿಕೊಂಡು ಅದನ್ನು ಒಂದು ಭೌಗೋಳಿಕ ಕ್ಷೇತ್ರಕ್ಕಷ್ಟೇ ಸೀಮಿತಗೊಳಿಸುವ ಜಿಲ್ಲೆಯ ಪ್ರೇಮಿಗಳಿಗೆ ಇದೊಂದು ನುಂಗಲಾರದ ತುತ್ತು. ಇಡೀ ಕರ್ನಾಟಕದಲ್ಲಿ ಸುಮಾರು 31% ಜನ ಪಟ್ಟಣವಾಸಿಗಳಾದರೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಅಂಥವರ ಸಂಖ್ಯೆ 28% ಮಾತ್ರ.ಈ ಜಿಲ್ಲೆಯನ್ನು ಪ್ರಗತಿಹೊಂದಿದ ಜಿಲ್ಲೆ ಎಂದು ಪರಿಗಣಿಸುವುದಾದರೆ ಅದನ್ನು ನಗರೀಕರಣದ ಮಾನದಂಡದಿಂದ ಅಳೆಯುವುದು ಸೂಕ್ತವಾಗುವುದಿಲ್ಲ.

ಅಧಿಕೃತವಾಗಿ ಈ ಜಿಲ್ಲೆಯ ಸುಮಾರು 72% ಜನ ಹಳ್ಳಿಗರು; ಆದರದಿಂದ ಹೇಳುವುದಾದರೆ ಗ್ರಾಮವಾಸಿಗರು. ಸಾಮಾನ್ಯವಾಗಿ ಹಳ್ಳಿಗರು ಎಂದರೆ ರೈತರು, ಕೃಷಿ ಕಾರ್ಮಿಕರು ಅಥವಾ ಕೃಷಿಯನ್ನು ಅವಲಂಬಿಸಿಕೊಂಡಿರುವವರು ಎಂಬ ಕಲ್ಪನೆ ಇದೆ. ಆದರೆ ಈ ಕಲ್ಪನೆ ದಕ್ಷಿಣಕನ್ನಡ ಮಟ್ಟಿಗೆ ಸರಿಹೊಂದಲಾರದು ಮಾತ್ರವಲ್ಲ, ತದ್ವಿರುದ್ಧವೇ ಆಗಿದೆ. ಕರ್ನಾಟಕದೊಡನೆ ತುಲನೆ ಮಾಡಿದರೆ ಈ ಸಾಮಾನ್ಯ ಕಲ್ಪನೆ ಬುಡಮೇಲಾಗುತ್ತದೆ.

ಕರ್ನಾಟಕದ ಒಟ್ಟು ಜನಸಂಖ್ಯೆಯ 42% ಜನ ಒಂದಲ್ಲ ಒಂದು ಕಸುಬಿನಲ್ಲಿ ತೊಡಗಿರುವವರಾಗಿದ್ದಾರೆ. ಜನಗಣತಿಯ ಪ್ರಕಾರ ಅವರನ್ನು ಸಾಮಾನ್ಯವಾಗಿ ಗದ್ದೆಯಾಳುಗಳು, ರೈತರು, ಗೃಹೋದ್ಯೋಗಿಗಳು ಮತ್ತು ಇತರ ಕಾರ್ಮಿಕರೆಂದು ನಾಲ್ಕು ಗುಂಪುಗಳಲ್ಲಿ ವರ್ಗೀಕರಿಸಲಾಗುತ್ತದೆ. ಈ ವಿಭಜನೆ ನಿಖರತೆಯ ದೃಷ್ಟಿಯಿಂದ ಅಷ್ಟು ಸಮರ್ಪಕವಲ್ಲವಾದರೂ ಕೆಲವು ಪ್ರಮುಖ ಪ್ರವೃತ್ತಿಗಳನ್ನು ಗುರುತಿಸಲು ಇವು ಸಹಾಯಕವಾಗುತ್ತವೆ. ಭಾರತದ

ಎಲ್ಲ ಕಸುಬುದಾರರನ್ನು ಲೆಕ್ಕಿಸಿದರೆ 1961-71ನೇ ದಶಕದಲ್ಲಿ ಗದ್ದೆಯಾಳುಗಳ ಪ್ರಮಾಣ ಗಮನಾರ್ಹವಾಗಿ ಬೆಳೆಯಿತು. ಇದು 1971-81ರಲ್ಲಿ ಸ್ವಲ್ಪಮಟ್ಟಿಗೆ ಕುಸಿಯಿತು. ಆದರೆ 1981-1991ರ ಹೊತ್ತಿಗೆ ಈ ಪ್ರಮಾಣ ಮತ್ತೆ ಏರಿದ್ದನ್ನು ನಾವು ಕಾಣಬಹುದು. ಕರ್ನಾಟಕದಲ್ಲಿ ಈ ಪ್ರಮಾಣ 7.5%ನಷ್ಟು ಏರಿ ಈಗ ಇಡೀ ಕಸುಬುದಾರರಲ್ಲಿ 29%ನಷ್ಟು ಮಂದಿ ಗದ್ದೆಯಾಳುಗಳಾಗಿದ್ದಾರೆ. ಆದರೆ ಅದೇ ದಶಕದಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಗದ್ದೆಯಾಳುಗಳ ಪ್ರಮಾಣ ಬೆಳೆಯುವ ಬದಲು ಕುಸಿದಿದೆ. 1981ರಲ್ಲಿ ಅವರ ಪ್ರಮಾಣ ಒಟ್ಟು ಕಸುಬುದಾರರಲ್ಲಿ 18% ಇದ್ದರೆ, 1991ರಲ್ಲಿ ಅದು ಕೇವಲ 16% ಮಾತ್ರ. ಬೆಂಗಳೂರನ್ನು ಹೊರತುಪಡಿಸಿದರೆ ಗದ್ದೆಯಾಳುಗಳ ಪ್ರಮಾಣ ಇಲ್ಲಿ ಇಡೀ ಕರ್ನಾಟಕದ ಉಳಿದ ಕಡೆಗಳಿಗಿಂತ ಕಮ್ಮಿ. ಇದಕ್ಕೆ ಈ ಕೆಳಗಿನ ಮೂರು ಕಾರಣಗಳನ್ನು ಕೊಡಬಹುದು.

1. ಗದ್ದೆಕೂಲಿಗಳು ಭೂಮಾಲಿಕರಾಗುವುದು. ಇದು ಸ್ವಲ್ಪಮಟ್ಟಿಗೆ ಸಾಧ್ಯವೂ ಹೌದು. ಕರ್ನಾಟಕದ ಭೂಸುಧಾರಣಾ ಕಾಯ್ದೆ 1974ರ ಪ್ರಕಾರ ಹಲವಾರು ಗದ್ದೆಕೂಲಿಗಳು ತಾವು ಗೇಣಿ ಒಕ್ಕಲು ಎಂದು ಅರ್ಜಿ ಸಲ್ಲಿಸಿದ್ದವರಲ್ಲಿ ಕೆಲವರು ತಮ್ಮ ಪರವಾಗಿ ತೀರ್ಪನ್ನು ಪಡೆದುಕೊಂಡಿರಬಹುದು. ಆದರೆ ಅವರ ಸಂಖ್ಯೆ ತೀರ ಕಡಿಮೆ ಮಾತ್ರವಲ್ಲ, ಅವರ ವಶದಲ್ಲಿರುವ ಭೂಮಿ ಆರ್ಥಿಕ ಸ್ವಾಯತ್ತತೆಯನ್ನು ಗಳಿಸಿಕೊಡುವಂತಹದಲ್ಲ. ಈ ಕಾಯ್ದೆಗೆ 1979ರಲ್ಲಿ ಮಾಡಿದ ತಿದ್ದುಪಡಿಯ ಪ್ರಕಾರ ಗದ್ದೆಕೂಲಿಗಳು 5 ಸೆಂಟ್ಸ್ ಮನೆ ನಿವೇಶನಕ್ಕೆ ಅರ್ಜಿ ಸಲ್ಲಿಸಿದರೂ ಅದರಿಂದಲೇ ಅವರು ಭೂಮಾಲಿಕರಾಗುವಂತಿಲ್ಲ. ಗದ್ದೆಕೂಲಿಗಳು ಇತರ ರೈತರಿಂದ ಭೂಮಿಯನ್ನು ಖರೀದಿಸಿ ಭೂ ಒಡೆಯರಾದ ಉದಾಹರಣೆಗಳೂ ಅತ್ಯಲ್ಪ.

2. ಗದ್ದೆಕೂಲಿಗಳು ಇತರ ಗ್ರಾಮ ಉದ್ದಿಮೆಯಲ್ಲಿ ತೊಡಗುವುದು. ಆದರೆ ದಕ್ಷಿಣಕನ್ನಡದಲ್ಲಿ ಗೃಹ ಉದ್ದಿಮೆ ವಿಪರೀತ ಕುಸಿದಿದೆ. ಬೀಡಿ ಕಾರ್ಮಿಕರ ಸಂಖ್ಯೆ ವಿಶೇಷವಾಗಿ ವೃದ್ಧಿಸಲಿಲ್ಲ ಮತ್ತು1979-80ರಿಂದ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕಟ್ಟುವ ಬೀಡಿಗಳ ಸಂಖ್ಯೆಯೂ ಕಡಿಮೆಯಾಗಿದೆ.

3. ಗದ್ದೆಕೂಲಿಗಳು ಇತರ ಕಸುಬುಗಳಲ್ಲಿ ತೊಡಗುವುದು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಆದ ಒಂದು ಮುಖ್ಯ ಬೆಳವಣಿಗೆ. ಈ ಜಿಲ್ಲೆಯಲ್ಲಿ ಕೆಲವರು ಇತರ ಕಸುಬುಗಳಲ್ಲಿ ತೊಡಗಿದ್ದು ಮತ್ತು ಕೆಲವರು ಬೆಂಗಳೂರು, ಬೊಂಬಾಯಿ ಮತ್ತು ಇತರ ಪಟ್ಟಣಗಳಿಗೆ ಹಾಗೂ ಇನ್ನು ಕೆಲವರು ಕೊಲ್ಲಿ ರಾಷ್ಟ್ರಗಳಿಗೆ ಕೂಡಾ ತೆರಳಿ ಇತರ ಕೆಲಸಗಳಲ್ಲಿ ತೊಡಗಿರುವುದು ಇಲ್ಲಿ ಗಮನಿಸಬೇಕಾದ ಅಂಶವಾಗಿದೆ. 1981-91ರ ದಶಕದಲ್ಲಿ ಒಟ್ಟಾರೆ ಜನಸಂಖ್ಯಾ ಪ್ರಮಾಣದಲ್ಲಿ ಏರಿಕೆಯಾಗಿದ್ದು ಕರ್ನಾಟಕದಲ್ಲಿ ಇದು 20.66% ಇದ್ದರೆ ದಕ್ಷಿಣಕನ್ನಡದಲ್ಲಿ ಕೇವಲ 13.2% ಇದೆ. ಅದರಲ್ಲೂ ಗ್ರಾಮ್ಯಪ್ರದೇಶದಲ್ಲಿ ಇದು 7.52% ಮಾತ್ರ. ಇದೇ ದಶಕದಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇಡೀ ಕಸುಬುದಾರರಿಗೆ ಹೋಲಿಸಿದರೆ ಗದ್ದೆ ಕೂಲಿಗಳ ಪ್ರಮಾಣ 17.64%ನಷ್ಟು ಇಳಿಯಿತು. ಒಟ್ಟಿನಲ್ಲಿ ಕೇವಲ ಶೇಕಡಾವಾರು ಪ್ರಮಾಣದಲ್ಲಿ ಮಾತ್ರವಲ್ಲದೆ ವಾಸ್ತವಿಕವಾಗಿ ಕೂಡಾ ಗದ್ದೆ ಕೂಲಿಗಳ ಸಂಖ್ಯೆ ಇಳಿಮುಖವಾಗಿದೆ.

ಗದ್ದೆಕೂಲಿಗಳ ಪ್ರಮಾಣದಲ್ಲಿ ಮಾತ್ರವಲ್ಲ, ಕಳೆದ ದಶಕದಲ್ಲಿ ಅವರ ಕೂಲಿಯಲ್ಲಿ ಮತ್ತು ಪರಿಶ್ರಮದ ಶರತ್ತುಗಳಲ್ಲಿ ಕೂಡಾ ಹಲವಾರು ಬದಲಾವಣೆಗಳಾಗಿ ಇವನ್ನು ನಿರ್ಧರಿಸುವ ಎಷ್ಟೋ ಪಾರಂಪರಿಕ ಕಟ್ಟುಕಟ್ಟಲೆಗಳು ಬದಿಗೊತ್ತಲ್ಪಟ್ಟಿವೆ. ನೈಜ ಮೌಲ್ಯದಲ್ಲಿ ಕೂಲಿ ಕಳೆದ ದಶಕದಲ್ಲಿ 50%ನಿಂದ 100%ವರೆಗೆ ಏರಿದೆ. ಇಲ್ಲಿ ಪ್ರಾದೇಶಿಕ ಏರುಪೇರುಗಳು ಕೂಡಾ ನಮಗೆ ಕಾಣಸಿಗುತ್ತವೆ. ಗದ್ದೆಯಾಳುಗಳ ಕೂಲಿ ರೂ. 30ರಿಂದ 50 ರ ತನಕ ಚಾಲ್ತಿಯಲ್ಲಿದೆ. ಜಿಲ್ಲೆಯ ಕೆಲವು ಪ್ರಮುಖ ಗ್ರಾಮ್ಯ ಉದ್ದಿಮೆಗಳಿಗೆ ಹೋಲಿಸಿದರೆ ಈಗ ಗದ್ದೆಕೂಲಿಯ ಮಜೂರಿ ಜಾಸ್ತಿ ಎಂದೇ

ಹೇಳಬಹುದು. ಬೀಡಿ ಕಾರ್ಮಿಕನ ಸರಾಸರಿ ಮಜೂರಿಗಿಂತ ಇದು ಸುಮಾರು 30% ಹೆಚ್ಚು. ಕೆಲಸದ ವೇಳೆ ಕೂಡಾ ಈ ದಶಕದಲ್ಲಿ ಸಾಧಾರಣ ಅರ್ಧ ಘಂಟೆಯಿಂದ ಒಂದು ಘಂಟೆಯಷ್ಟು ಇಳಿದಿದೆ. ದಿನಕೂಲಿಯ ಕೆಲಸದಾಳುಗಳಿಗೆ ಚಾ, ಕಾಫಿ, ತಿಂಡಿ, ಊಟೋಪಚಾರಗಳೂ ಈಗ ಸರ್ವೇಸಾಮಾನ್ಯ. ಅವನ್ನು ಕೊಡದಿದ್ದರೆ ಸಾಪೇಕ್ಷವಾಗಿ ಹೆಚ್ಚಿನ ಕೂಲಿ ಕೊಡಬೇಕಾಗುತ್ತದೆ. ಇದರ ತಾತ್ಪರ್ಯ ಗದ್ದೆಕೂಲಿಗಳಿಗೆ ಸಿಗುವ ಕೂಲಿ ಜಾಸ್ತಿ ಎಂದೇನೂ ಅಲ್ಲ. ಆದರೆ ತಮ್ಮ ಒಟ್ಟಾರೆ ಆದಾಯದಲ್ಲಿ ಏರಿಕೆಯಾಗಿರುವುದರಿಂದ ಗದ್ದೆ ಕೂಲಿಗಳು ತಮ್ಮ ಇತರ ಮೂಲ ಅವಶ್ಯಕತೆಗಳಿಗೆ ಈ ಸಂಪಾದನೆಯ ಅಧಿಕ ಅಂಶವನ್ನು ವಿನಿಯೋಗಿಸುವುದು ಸಾಧ್ಯವಾಗಿರಬಹುದು. ಇದರಿಂದ ಅವರಿಗೆ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡುವುದೂ ಸಾಧ್ಯವಾಗಿ ಅವರನ್ನು ಇತರ ಕಸುಬುಗಳಿಗೆ ಕಳುಹಿಸುವ ಅವಕಾಶಗಳೂ ಅಧಿಕವಾಗಿರಬಹುದು. ಹೀಗಿದ್ದೂ ಇತರ ಕಸುಬುಗಳಲ್ಲಿನ ಆದಾಯ ಕಡಿಮೆ ಇದ್ದರೂ ಅಂತಹ ಕಸುಬುಗಳು ಆಕರ್ಷಣೀಯವಾಗಿದ್ದರೆ ಕೆಲವೊಮ್ಮೆ ಆ ಕಸುಬುಗಳಿಗೆ ತೆರಳುವವರೂ ಇದ್ದಾರೆ. ಇದರ ಅರ್ಥವೇನೆಂದರೆ ಜೀವನದ ಗುರಿ ಧೋರಣೆಗಳು ಕೂಡಾ ಗ್ರಾಮ್ಯ ಪ್ರದೇಶದಲ್ಲಿ ಅತ್ಯಂತ ಕೆಳ ಸ್ತರಗಳಿಂದಲೇ ಬದಲಾವಣೆಯಾಗುತ್ತಿವೆ.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇತರ ಕಸುಬುಗಳಿಗೆ ಇರುವ ಮೆಚ್ಚುಗೆ ಕೂಲಿ ಕೆಲಸದ ಅಭಾವದಿಂದ ಉಂಟಾದದ್ದು ಎಂದು ಹೇಳಲು ಸಾಧ್ಯವಿಲ್ಲ. ಸರ್ವೇಸಾಮಾನ್ಯ ನಮ್ಮ ದೇಶದಲ್ಲಿ ಗದ್ದೆಕೂಲಿಗಳಿಗೆ ಸಿಗುವ ಕೆಲಸ ವರ್ಷದಲ್ಲಿ 180 ದಿವಸ ಮಾತ್ರ. ನೀರಾವರಿ, ಕೃಷಿ ಉತ್ಪನ್ನ ಮತ್ತು ವಿಧಾನಗಳನ್ನು ಹೊಂದಿಕೊಂಡು ಅದರಲ್ಲಿ ಏರಿಳಿತಗಳು ಸಾಧ್ಯವಿದೆ. ಕೃಷಿಯೇತರ ಕೆಲಸಗಳಿಲ್ಲದಿದ್ದರೆ ಕೂಲಿಕಾರ್ಮಿಕನು ವರ್ಷದ ಅರ್ಧಾಂಶ ಕಾಲದಷ್ಟು ನಿರುದ್ಯೋಗಿಯಾಗಿರುತ್ತಾನೆ. ಆದರೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇಂತಹ ವ್ಯವಸ್ಥಿತ ನಿರುದ್ಯೋಗ ಬಹಳಷ್ಟು ಕಡಿಮೆ. ಬೆಂಗಳೂರು ನಗರವನ್ನು ಬಿಟ್ಟು ಈ ಜಿಲ್ಲೆಯಲ್ಲಿ ಇದು ಅತ್ಯಲ್ಪ. ಕೆಲಸವನ್ನು ಬಯಸಿದರೂ ಅವರು ವರ್ಷದಲ್ಲಿ 6 ತಿಂಗಳಿನಷ್ಟು ಕಾಲ ನಿರುದ್ಯೋಗಿಗಳಾಗಿರುತ್ತಾರೆ. ಅದರಲ್ಲಿ ಗಂಡಸರು 0.74% ಮತ್ತು ಹೆಂಗಸರು 2.85%. ಕೆಲಸ ಇಚ್ಛಿಸುವವರು ಕೂಡಾ ಗದ್ದೆಕೂಲಿ ಕೆಲಸಕ್ಕೆ ಒಪ್ಪುತ್ತಾರೆಂದು ಇದರ ಅರ್ಥವಲ್ಲ. ಇದರಿಂದ ನಾವು ತಲುಪಬಹುದಾದ ನಿರ್ಣಯವೆಂದರೆ ದಕ್ಷಿಣಕನ್ನಡ ಜಿಲ್ಲೆಯ ಗದ್ದೆಕೂಲಿಗಳಲ್ಲಿ ನಿರುದ್ಯೋಗದ ಪ್ರಮಾಣ ತೀರ ಕಡಿಮೆ.

ಅಭಾದಿತವಾಗಿ ಯುವಕ ಯುವತಿಯರು ಗದ್ದೆಕೂಲಿಗಳಾಗಿ ತೊಡಗಿರುವುದು ಈ ಜಿಲ್ಲೆಯಲ್ಲಿ ಕಷ್ಟಕರವಾಗುತ್ತಿದೆ. ಇದ್ದರೂ ಅದು 'ಸೀಜನಲ್' ತಾನೆ. ಯುವಕರು ಅಲ್ಲಲ್ಲಿ ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ಪೇಟೆ ಪಟ್ಟಣಗಳಲ್ಲಿ ಇತರ ಉದ್ಯೋಗಗಳಲ್ಲಿ ತೊಡಗಿರುತ್ತಾರೆ. ಕಟ್ಟಡ ಇತ್ಯಾದಿ ನಿರ್ಮಾಣ ಕೆಲಸಗಳಲ್ಲಿ ಈಗ ಈ ಯುವಕರು ದಿನ ಮಜೂರಿ ಅಥವಾ ಗುತ್ತಿಗೆ ಕೆಲಸದಲ್ಲಿ ತೊಡಗಿರುವುದು ಕಾಣಸಿಗುತ್ತದೆ. ಇತರ ಪ್ರದೇಶಗಳಲ್ಲಿ ಮುಖ್ಯವಾಗಿ ಹೋಟೆಲ್ ವ್ಯವಹಾರದಲ್ಲಿ ಬಿಟ್ಟಿ ಕೆಲಸಕ್ಕೆ ಸೇರುವ ಹುಡುಗರು ಹಲವಾರು. 'ಶ್ರಮದ ರಫ್ತು' ದಕ್ಷಿಣಕನ್ನಡದ ಒಂದು ವೈಶಿಷ್ಟ್ಯವೆನ್ನಬೇಕು. ಇದರ ವಿಧಾನಗಳು ಕಾಲಕಾಲಕ್ಕೆ ಭಿನ್ನವಿರಬಹುದಾದರೂ ಈಗಲೂ ಅದು ಮುಂದುವರಿಯುತ್ತಿರುವುದನ್ನು ನಾವು ಕಾಣುತ್ತೇವೆ. ಇದರಿಂದಾಗಿ ಇವರ ಸಂಪಾದನೆ ಜಿಲ್ಲೆಗೆ ಅಲ್ಪಸ್ವಲ್ಪ ಸೇರಿತು ಮಾತ್ರವಲ್ಲ, ಅವರು ಪರವೂರಿನಲ್ಲಿ ತಮ್ಮ ಅಸ್ತಿತ್ವದ ಅಭಿವ್ಯಕ್ತಿಗಾಗಿ ಊರಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಿದರು. ಇಂತಹ ಬೀಳ್ಕೊಡುಗೆ ಸಾಮಾಜಿಕ ವೈರುದ್ಧ್ಯಗಳನ್ನು ಹತೋಟಿಯಲ್ಲಿಟ್ಟುಕೊಂಡು ಈ ಜಿಲ್ಲೆಯ ಸುರಕ್ಷಾ ಕವಚವಾಗಿಯೂ ಬೆಳೆಯಿತು. ಇದು ಇಂದೂ ವಾಸ್ತವಿಕ.

ಕುಸಿಯುತ್ತಿರುವ ಗದ್ದೆಕೂಲಿಗಳ ಸಂಖ್ಯೆ ಮತ್ತು ಏರುತ್ತಿರುವ ಮಜೂರಿಯ ಪರಿಣಾಮವು ಕೃಷಿಕ್ಷೇತ್ರದಲ್ಲಿ ದೊಡ್ಡ ರೀತಿಯಲ್ಲಿ ಕಂಡುಬರುತ್ತದೆ. ಜಿಲ್ಲೆಯಲ್ಲಿ ಅಡಿಕೆ, ತೆಂಗು, ರಬ್ಬರ್, ಗೇರುಬೀಜವನ್ನೊಳಗೊಂಡ ತೋಟಗಾರಿಕೆಯ ದೊಡ್ಡ ಬೆಳವಣಿಗೆಯನ್ನು ನಾವು ಕಾಣುತ್ತೇವೆ. ಇದರಲ್ಲೂ ಬಂಡವಾಳ ಹೂಡುವಿಕೆಯ ಪ್ರಮಾಣ

ವಿಶೇಷವಾಗಿ ಬೆಳೆದಿದೆ. ಕೊಳವೆ ಬಾವಿ ಪಂಪ್‌ಸೆಟ್ಟು, ಸ್ಪ್ರಿಂಕ್ಲರ್ಸ್ ಮುಂತಾದ ಸೌಕರ್ಯಗಳನ್ನು ಹೊಂದುವುದು ಮಧ್ಯಮ ವರ್ಗದ ರೈತರಿಗೆ ಅನಿವಾರ್ಯವೆನಿಸಿಕೊಂಡಿದೆ. ಎಷ್ಟೋ ರೈತರಿಗೆ ಈಗ ಇದೊಂದು ಘನತೆಯ ವಿಷಯ ಕೂಡಾ. ಆದರೆ ಜಿಲ್ಲೆಯ ಬಹುಪಾಲು ಹಿಡುವಳಿಗಳು ತುಂಬಾ ಚಿಕ್ಕದಿರುವಾಗ ಈ ಪ್ರಮಾಣದ ಬಂಡವಾಳದ ಹೂಡುವಿಕೆಯಿಂದ ಎಷ್ಟು ಆದಾಯ ಗಳಿಸಬಹುದೆಂದು ಪರಿಶೀಲಿಸಿ ನೋಡಿದವರು ಕಡಿಮೆ ಎಂದು ಹೇಳಬಹುದು.

ಕಡಿಮೆಯಾಗುವ ಕೂಲಿಯಾಳುಗಳಿಂದಾಗಿ ಆದ ಇನ್ನೊಂದು ಬೆಳವಣಿಗೆಯೆಂದರೆ ಕರ್ನಾಟಕದ ಇತರ ಭಾಗಗಳಿಂದ ಮುಖ್ಯವಾಗಿ ಬಯಲುಸೀಮೆ ಪ್ರದೇಶದಿಂದ ಜನರು ಕೂಲಿಗೆ ಇಲ್ಲಿ ವಲಸೆ ಬರತೊಡಗಿರುವುದು. ಇಷ್ಟರವರೆಗೆ ಅವರು ಜಿಲ್ಲೆಯ ಪ್ರಮುಖ ಪಟ್ಟಣ ಪ್ರದೇಶಗಳಲ್ಲಿ ಮುಖ್ಯವಾಗಿ ನಿರ್ಮಾಣ ಕೆಲಸಗಳಲ್ಲಿ ಬಿಡಿಯಾಳುಗಳಾಗಿ ಸೇರಿಕೊಳ್ಳುವುದು ಸಾಮಾನ್ಯವಾಗಿತ್ತು. ಈಗ ಕೃಷಿಗೆ ಸಂಬಂಧಪಟ್ಟ ಹಲವಾರು ಚಟುವಟಿಕೆಗಳಲ್ಲಿ, ಪ್ರಮುಖವಾಗಿ ಗುತ್ತಿಗೆ ಕೂಲಿ ಕೆಲಸ ರೂಪದಲ್ಲಿ ಅವರು ನಮಗೆ ಕಾಣಸಿಗುತ್ತಾರೆ. ಚಿತ್ರದುರ್ಗ, ಬಿಜಾಪುರದ ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣಾಳಿಗೆ ರೂ.10ರಿಂದ 12 ಮತ್ತು ಗಂಡಾಳಿಗೆ ರೂ.13ರಿಂದ 15 ಮಜೂರಿ ಇರುವುದರಿಂದ ಇಲ್ಲಿಯ ಕೂಲಿ ಅವರಿಗೆ ತುಂಬಾ ಆಕರ್ಷಣೀಯವೆನಿಸಿದೆ. ಆದರೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಪ್ರಚಲಿತ ಕೃಷಿ ಉತ್ಪನ್ನಗಳಾದ ಭತ್ತ, ಅಡಿಕೆ, ತೆಂಗು, ರಬ್ಬರ್ ಇತ್ಯಾದಿಗಳು ಅವರ ಅನುಭವಗಳಿಗೆ ಸುಲಭದಲ್ಲಿ ಎಟಕುವುದಿಲ್ಲ. ಹೀಗಾಗಿ ಪಂಜಾಬಿನಲ್ಲಿ ಬಿಹಾರದ ಗದ್ದೆಕೂಲಿಗಳು ಕೆಲವು ಕ್ಷೇತ್ರಗಳಲ್ಲಿ ಸ್ಥಳೀಯ ಕೂಲಿಯಾಳುಗಳನ್ನು ಸಂಪೂರ್ಣ ಹತ್ತಿಕ್ಕಿದಂಥ ಪರಿಸ್ಥಿತಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸದ್ಯಕ್ಕೆ ಬರಲಾರದು.

ಸಂಪಾದನೆ ಸ್ವಲ್ಪಮಟ್ಟಿಗೆ ವೃದ್ಧಿಯಾಗಿದೆಯಾದರೂ ದಕ್ಷಿಣಕನ್ನಡದ ಕೂಲಿಯಾಳುಗಳದು ಕ್ಷೀಣಿಸುತ್ತಿರುವ ಮತ್ತು ದಯನೀಯವಾದ ಸ್ಥಿತಿ ಎನ್ನಬಹುದು. ಅವರ ಸಂಖ್ಯೆ ಕಡಿಮೆಯಾಗುತ್ತಿದೆ ಮಾತ್ರವಲ್ಲ, ಯುವ ಪ್ರೇರಣೆ ಮತ್ತು ಮುಂದಾಳತ್ವ ಅವರಲ್ಲಿ ಕುಸಿಯುತ್ತಿದೆ. ಸಾಮಾಜಿಕವಾಗಿ ಜಾತಿ ಪಂಗಡಗಳಲ್ಲಿ ಮತ್ತು ಇತ್ತೀಚೆಗೆ ವಲಸೆ ಬಂದವರಲ್ಲಿ ವಿಭಜಿತವಾಗಿರುವ ಕೂಲಿಯಾಳುಗಳ ಈ ಪಂಗಡ ತನ್ನದೇ ಬಲದಿಂದ ಒಂದು ರಾಜಕೀಯ ಶಕ್ತಿಯಾಗಿ ಬೆಳೆಯುವುದು ಕಷ್ಟಕರ. ಅವರು ವಿಭಿನ್ನ ಅಭಿವೃದ್ಧಿ ನೆಪದಲ್ಲಿ ಅಧಿಕಾರಶಾಹಿಯ, ಜಾತಿ ಮತ್ತು ಧಾರ್ಮಿಕ ಪಂಗಡಗಳ, ಸರಕಾರಿಯೇತರ ಸಂಘಟನೆಯ ಕಾಳಜಿಯಾಗಿ ಅಥವಾ ದೊಡ್ಡ ಭೂಮಾಲಿಕರ ಕೈಗೊಂಬೆಯಾಗಿ ಇನ್ನೂ ಕೆಲವು ಕಾಲ ಮುಂದುವರಿಯಲಿದ್ದಾರೆ. ಅವರ ವಿಮೋಚನೆಯನ್ನು ಅವರು ರೂಪಿಸಲಾರರು. ಅದನ್ನು ರೂಪಿಸುವೆವು ಎಂದು ಹೇಳುವರು ಹಲವರು. ಆದರೆ ಇಡೀ ಸಮಾಜವು ಈ ಬಗ್ಗೆ ಕಾಳಜಿ ವಹಿಸಲು ಮುಂದೆ ಬಂದಿಲ್ಲ. ಈ ಗದ್ದೆಕೂಲಿಗಳು ಇನ್ನೂ ಪೂರ್ತಿ ಬೀದಿಪಾಲಾಗಿಲ್ಲ ಎಂದು ನಾವಂದುಕೊಂಡರೂ ಮಂಗಳೂರು ನಗರದಲ್ಲಿಯೇ ಭಿಕ್ಷುಕರ ಸಂಖ್ಯೆ ಏರುತ್ತಿದೆ ಎನ್ನುವುದರಲ್ಲಿ ಅನುಮಾನವಿಲ್ಲ.

* * * * *

ದಕ್ಷಿಣಕನ್ನಡ ಜಿಲ್ಲೆಯ ರೈತ ಪಂಗಡದಲ್ಲಿ ಆದ ಬದಲಾವಣೆಗಳಲ್ಲಿ ಹಲವಾರು ವೈಶಿಷ್ಟ್ಯಗಳನ್ನು ನಾವು ಗಮನಿಸಬಹುದು. ಪುನಃ ಇಡೀ ಕರ್ನಾಟಕ ರಾಜ್ಯದೊಟ್ಟಿಗೆ ತುಲನೆಮಾಡಿ ಇವಲ್ಲಿ ಕೆಲವನ್ನು ನಾವು ಸ್ಪಷ್ಟೀಕರಿಸಬಹುದು. ಕರ್ನಾಟಕದಲ್ಲಿ ರೈತರ ಪ್ರಮಾಣ ಕಳೆದೊಂದು ದಶಕದಲ್ಲಿ ತುಂಬಾ ಇಳಿಮುಖವಾಗಿದೆ. ಒಟ್ಟು ಕಸುಬುದಾರರಲ್ಲಿ ಈಗ ಅವರಿರುವುದು ಕೇವಲ 34% ಮಾತ್ರ. 1981ರಲ್ಲಿ ಈ ಪ್ರಮಾಣ ಸುಮಾರು 44% ಆಗಿತ್ತು. ರೈತರ ಪ್ರಮಾಣ ಇಳಿದು ಸಾಧಾರಣ ಅಷ್ಟೇ ಮಟ್ಟದಲ್ಲಿ ಗದ್ದೆಕೂಲಿಗಳ ಪ್ರಮಾಣ ಏರಿದ್ದು ಕರ್ನಾಟಕದಲ್ಲಿ ಗ್ರಾಮ್ಯ ಪ್ರದೇಶಗಳಲ್ಲಿ ಈ ದಶಕದಲ್ಲಿ ಆದ ಒಂದು ಪ್ರಮುಖ ಬೆಳವಣಿಗೆ. ಇದರ ಪರಿಣಾಮ ಸಾಮಾಜಿಕವಾಗಿ

ಮತ್ತು ರಾಜಕೀಯವಾಗಿ ದೂರಗಾಮಿಯಾಗಬಹುದು. ಇದರಿಂದಾಗಿ ಗ್ರಾಮೀಣ ಆಗು ಹೋಗುಗಳಲ್ಲಿ ಮತ್ತು ಬೇಡಿಕೆಗಳಲ್ಲಿ ಗಂಭೀರ ಪರಿವರ್ತನೆ ಆಗುವ ಸಾಧ್ಯತೆ ಇದೆ.

ಕರ್ನಾಟಕದೊಟ್ಟಿಗೆ ಹೋಲಿಸಿದರೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕೃಷಿಕೂಲಿಗಳ ಪ್ರಮಾಣ ಇಳಿಮುಖವಾಗಿರುವುದು ಮಾತ್ರವಲ್ಲ, ರೈತರ ಪ್ರಮಾಣ ಕೂಡಾ ಕುಸಿದಿದೆ. ಇಲ್ಲಿ ಇಡೀ ಕಸುಬುದಾರರಲ್ಲಿ ರೈತರೆನಿಸಿಕೊಳ್ಳುವವರು 20%ಕ್ಕಿಂತ ಕಡಿಮೆ. 1981ರಲ್ಲಿ ಅವರ ಪ್ರಮಾಣ 40% ಇತ್ತು.

ರೈತಪಂಗಡದ ಪ್ರಮಾಣದಲ್ಲಿನ ತೀರಾ ಕುಸಿಯುವಿಕೆಯಿಂದ ಕೃಷಿಭೂಮಿಯ ಕೇಂದ್ರೀಕರಣವಾಗುತ್ತದೆಂದು ವಾದಿಸಬಹುದಾದರೂ, ದಕ್ಷಿಣಕನ್ನಡ ಜಿಲ್ಲೆಯ ಪರಿಸ್ಥಿತಿಗೆ ಅದು ಪೂರ್ಣವಾಗಿ ಉಚಿತವೆನಿಸುವುದಿಲ್ಲ. ಒಟ್ಟು ಹಿಡುವಳಿಗಳಲ್ಲಿ ಮತ್ತು ವಿವಿಧ ಗಾತ್ರಗಳ ಹಿಡುವಳಿಗಳ ಸಂಖ್ಯೆಯಲ್ಲಿ ಕಳೆದೊಂದು ದಶಕದಲ್ಲಿ ಇಲ್ಲಿ ಮೂಲಭೂತ ಪರಿವರ್ತನೆಯೇನೂ ಕಂಡುಬರುವುದಿಲ್ಲ. ಅದಲ್ಲದೆ ದೊಡ್ಡ ರೈತರ ಸಂಖ್ಯೆ ಮತ್ತು ಅವರ ಒಟ್ಟು ಹಿಡುವಳಿಯಲ್ಲಿ ಇಳಿಮುಖವಾಗಿದೆಯೇ ಹೊರತು ವೃದ್ಧಿ ಕಂಡುಬಂದಿಲ್ಲ. ರೈತರ ಪ್ರಮಾಣ ಇಷ್ಟೊಂದು ಕುಂದಿರುವುದಕ್ಕೆ ನಾವು ಬೇರೆ ಕಾರಣಗಳನ್ನು ಹುಡುಕಬೇಕಾಗಿದೆ.ಈ ಕಾರಣಗಳನ್ನು ಸ್ಪಷ್ಟಪಡಿಸಲು ದಕ್ಷಿಣ ಕನ್ನಡ ಜಿಲ್ಲೆಯ ಪ್ರಚಲಿತ ಕೃಷಿ ಸಂಬಂಧಗಳ ವಿಶ್ಲೇಷಣೆ ಪ್ರಯೋಜನಕಾರಿಯಾಗಬಹುದು. ಇಲ್ಲಿ ಅತಿಸಣ್ಣ ಮತ್ತು ಸಣ್ಣ ಹಿಡುವಳಿದಾರರು ಅಧಿಕ. 1991ರಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಒಟ್ಟು 2,68,000 ಹಿಡುವಳಿದಾರರಿದ್ದರು. ಅವರ ವಶದಲ್ಲಿದ್ದ ಒಟ್ಟು ಕೃಷಿಭೂಮಿ 3,14,000 ಹೆಕ್ಟೇರ್. ಒಟ್ಟು ಹಿಡುವಳಿದಾರರಲ್ಲಿ ಅತಿ ಸಣ್ಣ ಹಿಡುವಳಿದಾರರ ಸಂಖ್ಯೆ 2,27,000 ಮತ್ತು ಹಿಡುವಳಿದಾರರಲ್ಲಿ ಅವರ ಪ್ರಮಾಣ 84.7%. ಅವರ ಕೃಷಿಭೂಮಿ 1,35,000ಹೆಕ್ಟೇರ್ ಮತ್ತು ಇದು ಜಿಲ್ಲೆಯ ಒಟ್ಟು ಕೃಷಿಭೂಮಿಯ 43% ಆಗಿರುತ್ತದೆ.

ರೈತ ಪರಿವಾರಗಳಿಂದ, ಅದರಲ್ಲೂ ಸಣ್ಣ ಮತ್ತು ಅತಿಸಣ್ಣ ಹಿಡುವಳಿದಾರರ ಮನೆಗಳಿಂದ ಉದ್ಯೋಗ ಪ್ರಾಯಸ್ಥರಾದವರಲ್ಲಿ ಬಹುಪಾಲು ಮಂದಿ ಕೃಷಿಯನ್ನು ಪ್ರಮುಖ ಕಸುಬೆಂದು ಎಣಿಸದೆ ಕೃಷಿಯೇತರ ಕಸುಬುಗಳಲ್ಲಿ ತೊಡಗುವುದು ಜಿಲ್ಲೆಯಲ್ಲಿ ಈ ದಶಕದಲ್ಲಿ ಆದ ಒಂದು ಪ್ರಮುಖ ಬೆಳವಣಿಗೆ. ಕೆಲವು ಅತಿಸಣ್ಣ ಮತ್ತು ಸಣ್ಣ ಹಿಡುವಳಿದಾರರು ಕೃಷಿಯೇತರ ಕಸುಬುಗಳನ್ನು ತಮ್ಮ ಪ್ರಮುಖ ಕಸುಬು ಮಾಡಿಕೊಂಡಿದ್ದಾರೆ. ಗದ್ದೆಕೂಲಿ ಮಾತ್ರ ಅವರ ಜೀವನೋಪಾಯದ ಮುಖ್ಯ ಪರ್ಯಾಯವಲ್ಲ. ಹಲವೆಡೆ, ಬೆಳೆಯುತ್ತಿರುವ ಪಟ್ಟಣ ಪ್ರದೇಶಗಳ ಸುತ್ತಮುತ್ತ ಇರುವ ಕೆಲವು ಸಣ್ಣ ಹಿಡುವಳಿದಾರರು ತಮ್ಮ ಭೂಮಿಯನ್ನು ಮಾರಿ ಅಥವಾ ಅದರ ಹಕ್ಕನ್ನು ತಕ್ಕ ಮೌಲ್ಯಕ್ಕೆ ಇತರರಿಗೆ ಒಪ್ಪಿಸಿ ಇತರ ಉದ್ಯೋಗಗಳಲ್ಲಿ ತೊಡಗಿರುವುದನ್ನು ನಾವು ಕಾಣಬಹುದು. ಆದರೆ ಯಾವುದೇ ಕಾರಣಕ್ಕಾದರೂ ಭೂಮಿಯ ಪರಕೀಯತೆ ಬಡರೈತರಲ್ಲಿ ಒಂದು ಪ್ರಮುಖ ಪ್ರವೃತ್ತಿಯಾಗಿ ಇಷ್ಟರವರೆಗೆ ಕಂಡುಬಂದಿಲ್ಲ. ಬದಲಾಗಿ, ಒಂದು ಕುಟುಂಬದಲ್ಲಿಯೇ ಶ್ರಮದ ವಿಭಜನೆ ಬೆಳೆದು ಬಂದದ್ದು ನಮಗೆ ಕಂಡುಬರುತ್ತದೆ. ಒಂದೇ ಕುಟುಂಬದ ಕೆಲವರು ಕೃಷಿಯೇತರ ಕಸುಬಿನಲ್ಲಿ ತೊಡಗಿದ್ದರೆ ಇತರರು ಕೃಷಿಯಲ್ಲಿ ತೊಡಗಿರುತ್ತಾರೆ.

ರೈತ ಪರಿವಾರಗಳಲ್ಲಿ ಬೆಳೆದು ಬರುವ ಶ್ರಮದ ವಿಭಜನೆಯ ಕ್ರಮ ಗ್ರಾಮ್ಯ ಪ್ರದೇಶಗಳಲ್ಲಿ ಕೃಷಿಯನ್ನವಲಂಬಿಸಿದ ಶ್ರಮಿಕರಿಂದ ಹೆಚ್ಚು ಸ್ಪಷ್ಟವಾಗುತ್ತದೆ. ದಕ್ಷಿಣಕನ್ನಡ ಜಿಲ್ಲೆಯ ಗ್ರಾಮೀಣ ಪ್ರದೇಶಗಳ ಎಲ್ಲಾ ಕಸುಬುದಾರರಲ್ಲಿ ರೈತರ ಪ್ರಮಾಣ ಕೇವಲ 25% ಮಾತ್ರ. ಗದ್ದೆಕೂಲಿಗಳನ್ನು ಸೇರಿಸಿ ಕೃಷಿಯನ್ನು ಹೊಂದಿಕೊಂಡಿರುವವರು ಕೇವಲ 35% ಮಾತ್ರ. ಇದರರ್ಥ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕೂಡಾ

ಬಹುಪಾಲು ಕಸುಬುದಾರರು ಕೃಷಿಯೇತರ ವೃತ್ತಿಯಲ್ಲಿದ್ದಾರೆ. ಇದನ್ನು ಅಭಿವೃದ್ಧಿಹೊಂದಿದ ರಾಷ್ಟ್ರಗಳೊಡನೆ ನಾವು ಹೋಲಿಸಬಹುದಾಗಿದೆ.

ಸಾಪೇಕ್ಷವಾಗಿ ಕೃಷಿಭೂಮಿ ಕೇಂದ್ರೀಕೃತವಾಗದಿದ್ದರೂ ಕೃಷಿಯಲ್ಲಿ ದೊಡ್ಡ ಮತ್ತು ಮಧ್ಯಮ ರೈತರ ಪಾತ್ರ ಮುಂಬರುವ ವರ್ಷಗಳಲ್ಲಿ ಇನ್ನೂ ಪ್ರಬಲವಾಗುವ ಸಾಧ್ಯತೆ ಇದೆ. ವ್ಯಕ್ತಿಗತ ಅಥವಾ ಸಾಂಸ್ಥಿಕ ಬಂಡವಾಳದ ಕೊರತೆ ಅವರಲ್ಲಿ ಇಲ್ಲದಿರುವುದರಿಂದ ಕೃಷಿಯಲ್ಲಿ ಹೂಡುವ ಬಂಡವಾಳದ ಪ್ರಮಾಣ ಇನ್ನೂ ಅಧಿಕವಾಗುವ ಸಾಧ್ಯತೆಯೂ ಇದೆ. ಬದಲಾಗುತ್ತಿರುವ ಮಾರುಕಟ್ಟೆಗೆ ಹೊಂದುವ ಕೃಷಿ ಉತ್ಪನ್ನಗಳು, ಪ್ರಮುಖವಾಗಿ ತೋಟಗಾರಿಕಾ ಕೃಷ್ಯೋತ್ಪನ್ನಗಳು ಇಲ್ಲಿ ವ್ಯಾಪಕವಾಗಿ ಬೆಳೆದು ಬರಬಹುದು. ಇಂಥಲ್ಲಿ ಬಂಡವಾಳ ಹೂಡುವಿಕೆಯ ಸಾಧ್ಯತೆಗಳು ಹೆಚ್ಚು ಮತ್ತು ಸಂಪೂರ್ಣವಾಗಿ ಕೂಲಿಗಳ ಮೇಲೆ ಅವಲಂಬಿಸಬೇಕಾದ ಪರಿಸ್ಥಿತಿ ಇರುವುದಿಲ್ಲ.

ಕೆಲವು ಸಂದರ್ಭಗಳಲ್ಲಿ ಸಣ್ಣ ರೈತರು ಬಡಪಾಯಿಗಳಾಗುತ್ತ ಒಂದಲ್ಲ ಒಂದು ಕಾರಣಕ್ಕೆ ಅವರ ಹಿಡುವಳಿ ಕೈಬಿಟ್ಟು ದೊಡ್ಡರೈತರ ಪಾಲಾಗುತ್ತದೆ ಎಂಬ ವಾದವನ್ನು ಕೆಲವರು ಮಂಡಿಸಿದ್ದುಂಟು. ಈ ಜಿಲ್ಲೆಯಲ್ಲಿ ಅಂತಹ ಬೆಳವಣಿಗೆ ಕಂಡುಬರುವುದಿಲ್ಲ. ಇಲ್ಲಿ ಸಣ್ಣರೈತ ಪರಿವಾರಗಳ ಸದಸ್ಯರು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿರುವುದರಿಂದ, ತಮ್ಮ ಮೂಲ ಅವಶ್ಯಕತೆಗಳಿಗೆ ಮಿಗಿಲಾದ ಸಂಪಾದನೆಯ ಒಂದಷ್ಟು ಪಾಲನ್ನು ಅವರು ಭೂಮಿಯಲ್ಲಿ ಹೂಡುವ ಸಾಧ್ಯತೆ ಜಾಸ್ತಿ ಇದೆ. ಧರ್ಮಸ್ಥಳ ಮತ್ತು ಮಣಿಪಾಲದ ಗ್ರಾಮ್ಯ ಅಭಿವೃದ್ಧಿ ಯೋಜನೆಗಳು, ಕೆನರಾ ಅಭಿವೃದ್ಧಿ ಮತ್ತು ಶಾಂತಿ ಪ್ರತಿಷ್ಠಾನ ಮತ್ತು ಇತರ ಸರಕಾರಿಯೇತರ ಸಂಘಟನೆಗಳ ಕಾರ್ಯಚಟುವಟಿಕೆಗಳು ಜಿಲ್ಲೆಯಲ್ಲಿ ಸಣ್ಣರೈತರ ಹಿಡುವಳಿಗಳನ್ನುಅಭಿವೃದ್ಧಿಗೊಳಿಸಲು ತಮ್ಮದೇ ಯೋಗದಾನವನ್ನು ನೀಡಿದ್ದಾವೆ. ಇದರಿಂದಾಗಿ ಸಣ್ಣ ಹಿಡುವಳಿಗಳು ಅಸ್ಥಾಯಿ ಎಂದು ಹೇಳಲಾಗದಿದ್ದರೂ ಪಂಜಾಬಿನಲ್ಲಾದಂತಹ ಕೆಲವು ಬೆಳವಣಿಗೆಗಳು ಇಲ್ಲಿ ಅಸಾಧ್ಯವೇನಲ್ಲ. ತಮ್ಮ ಹಿಡುವಳಿಗಳನ್ನು ಸ್ವತಃ ಕೃಷಿಮಾಡುವುದು ಲಾಭಕರವಲ್ಲವೆನಿಸಿ, ದೊಡ್ಡರೈತರಿಗೆ ಗೇಣಿಗೆ ಕೊಡುವ ಅಲ್ಲಿನ ಪ್ರವೃತ್ತಿ ಸಣ್ಣ ರೈತರಲ್ಲಿ ಬಲವಾಗುತ್ತಲಿವೆ. ಕೃಷಿಯೇತರ ಕಸುಬು, ಭೂಮಿಯಲ್ಲಿ ಬಂಡವಾಳದ ಹೂಡುವಿಕೆಯ ಏರಿಕೆ, ಕೃಷಿಕ್ಷೇತ್ರಗಳ ಅಕ್ಕಪಕ್ಕದಲ್ಲಿ ಮೇಲೇಳುತ್ತಿರುವ ಪಟ್ಟಣಗಳು, ಅನಿವಾಸಿ ಬಂಧುಗಳು ತಮ್ಮ ಮನೆಯ ಕ್ಷೇತ್ರದಲ್ಲಿ ಎದ್ದು ಕಾಣುವ ನಿವೇಶನಗಳನ್ನು ಎಬ್ಬಿಸಲು ಆಸಕ್ತಿ ತೋರಿಸುತ್ತಿರುವುದು, ಕೊಂಕಣ ರೈಲ್ವೇ ಕೃಷಿಭೂಮಿಯನ್ನು ವಶೀಕರಿಸಿರುವುದು,ಮಂಗಳೂರು ತೈಲಾಗಾರದಂತಹ ಯೋಜನೆಗಳು - ಇವೆಲ್ಲವುಗಳಿಂದಾಗಿ ಜಿಲ್ಲೆಯಲ್ಲಿ ಭೂಮಿಯ ಬೆಲೆ ವಿಶೇಷವಾಗಿ ಏರಿದೆ. ಮಾತ್ರವಲ್ಲ, ಅದು ಇನ್ನೂ ಏರುವ ಸಾಧ್ಯತೆಗಳು ಬಲವಾಗಿವೆ. ದೊಡ್ಡ ರೈತರು ಇಂತಹ ಸಾಧ್ಯತೆಗಳನ್ನು ಅಡಿಪಾಯವಾಗಿಟ್ಟುಕೊಂಡು ಭೂಬೆಲೆಗಳ ಸಾಧ್ಯತೆ-ಭಾದ್ಯತೆಗಳನ್ನು ಊಹಿಸಿ ಇನ್ನೂ ಹೆಚ್ಚಿನ ಬಂಡವಾಳವನ್ನು ಕಲ್ಪಿಸುವ ಸಂದರ್ಭಗಳನ್ನು ಅಲ್ಲಗಳೆಯುವಂತಿಲ್ಲ.

ಜಿಲ್ಲೆಯಲ್ಲಿ ರೈತರ ಪ್ರಮಾಣದ ಕುಸಿತಕ್ಕೆ ಮುಖ್ಯ ಕಾರಣ ಸಣ್ಣ ಚಿಕ್ಕ ರೈತರು ಮತ್ತು ಅವರ ಕುಟುಂಬದ ಸದಸ್ಯರು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿರುವುದು ಎಂಬ ನಮ್ಮ ಅನುಮಾನವನ್ನು ಒಪ್ಪಿದರೆ ಈ ಬೆಳವಣಿಗೆಯ ಕೆಲವು ಗುಣಲಕ್ಷಣಗಳನ್ನು ನಾವು ಸೂಚಿಸಬಹುದಾಗಿದೆ. ಇಂತಹ ಬಹುಪಾಲು ರೈತ ಪರಿವಾರಗಳು ಹಿಂದುಳಿದ ಜಾತಿ ಮತ್ತು ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದವುಗಳು. ಅಲ್ಪಸಂಖ್ಯಾತರಲ್ಲೂ ಪ್ರಮುಖವಾಗಿ ಕೃಷಿಯನ್ನು ಹೊಂದಿಕೊಂಡವರಲ್ಲಿ ಕ್ರಿಶ್ಚಿಯನರ ಪ್ರಮಾಣ ಅಧಿಕ. ಈ ಪಂಗಡಗಳು ಇತ್ತೀಚೆಗೆ ದೊಡ್ಡ ಪ್ರಮಾಣದಲ್ಲಿ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿ ವ್ಯಾಪಾರ, ಕೈಗಾರಿಕೆ ಮತ್ತು ವೃತ್ತಿಪರ ಚಟುವಟಿಕೆಗಳಿಗೆ ಲಗ್ಗೆ ಹಾಕಿರುವುದು ಮಾತ್ರವಲ್ಲ, ಗ್ರಾಮ್ಯ ಪ್ರದೇಶದ ಸಾಮಾಜಿಕ ಸಂಬಂಧಗಳನ್ನು ಕೂಡಾ ತೀವ್ರವಾಗಿ

ಮಾರ್ಪಾಡುಗೊಳಿಸಿದ್ದಾರೆ. ಸಾಮಾನ್ಯವಾಗಿ ಪರಂಪರಾಗತ ಸಾಮಾಜಿಕ ಜೀವನದ ವರ್ತುಲದಲ್ಲಿದ್ದ ಇವರು ದೊಡ್ಡ ಪ್ರಮಾಣದಲ್ಲಿ ಆಧಿನೀಕರಣ ಮತ್ತು ನಗರೀಕರಣದ ಪ್ರಬಾವಗಳಿಗೆ ಒಳಗಾಗಿದ್ದಾರೆ. ಇದರಿಂದಾಗಿ ದಕ್ಷಿಣಕನ್ನಡ ಜಿಲ್ಲೆಯ ಹಳ್ಳಿಗಳು ಕೂಡ ಪ್ರಮುಖ ಮಾರುಕಟ್ಟೆಗಳಾಗಿ ಮಾರ್ಪಾಟಾಗಿವೆ. ಹಳ್ಳಿ ಪ್ರದೇಶಗಳ ಕೆಲವು ಕೇಂದ್ರಬಿಂದುಗಳಲ್ಲಿ, 15-20 ವರ್ಷದ ಹಿಂದೆ'ನೊಣಗಳನ್ನು ಓಡಿಸುತ್ತಾ ಇದ್ದ' ಪುಟ್ಟ ವ್ಯಾಪಾರಿಗಳು ಇಂದು ಬಿರುಸಿನ ವ್ಯವಹಾರ ನಡೆಸುತ್ತಾ ಇದ್ದಾರೆ. ಈ ಬೆಳವಣಿಗೆಗಳಿಂದ ಮೇಲಿನ ಪಂಗಡಗಳಿಗೆ ಒಂದು ವಿಸ್ತೃತ ಜಗತ್ತು ತ್ವರಿತವಾಗಿ ತೆರೆದಂತಾಗಿದೆ. ಆಧುನಿಕತೆಯ ತಾತ್ವಿಕ ನೆಲೆ ಅಥವಾ ರಾಷ್ಟ್ರೀಯ ಸಂಸ್ಕೃತಿಯ ವಿಭಿನ್ನ ಪ್ರಭಾವಗಳಿಂದ ಮತ್ತು ಪ್ರಮುಖ ಧೋರಣೆಗಳಿಂದ ಇಷ್ಟರವರೆಗೆ ಬಹುಪಾಲು ವಂಚಿತರಾದ ಮತ್ತು ಉಚ್ಚ ಶಿಕ್ಷಣದಲ್ಲಿ ಇನ್ನೂ ಅತ್ಯಲ್ಪ ಪ್ರತಿನಿಧಿತ್ವ ಇರುವ ಈ ಜನಸಮುದಾಯ ಒಂದೋ ತನ್ನ ಕೈವಶದಲ್ಲಿರುವ ಸಂಸ್ಕೃತಿ ಮತ್ತು ಮೌಲ್ಯಗಳನ್ನು ಸಾರ್ವಜನಿಕಗೊಳಿಸಲು ಪ್ರಯತ್ನಿಸುತ್ತಲಿದೆ ಅಥವಾ ಇತರ ಧೋರಣೆಗಳ ಒತ್ತಡಗಳಿಗೆ ಸಿಲುಕಿದೆ. ಇಲ್ಲಿ ಒಮ್ಮಿಂದೊಮ್ಮೆಗೇ ಧರ್ಮಶ್ರದ್ಧೆ, ಪರಂಪರೆ, ಜಾತಿ ಕಟ್ಟಲೆಗಳು, ಕೋಮುಭಾವನೆಗಳು, ಜನಾಂಗೀಯತೆ ಮತ್ತು ಆಧುನಿಕತೆ ತಾಂಡವವಾಡುತ್ತಿವೆ. ಇಂದಿಗೂ ಗ್ರಾಮ್ಯಪ್ರದೇಶದಲ್ಲಿ ನೆಲೆಯೂರಿರುವುದರಿಂದ ಮತ್ತು ಪರಂಪರೆಯೊಡನೆ ನೇರ ಸಂಪರ್ಕವಿರುವುದರಿಂದ ಈ ಜನಸಮುದಾಯವು ಎದುರಿಸುತ್ತಿರುವ ಅಲ್ಲೋಲ ಕಲ್ಲೋಲಗಳು ಇನ್ನೂ ಸ್ಪಷ್ಟವಾಗಿ ಮುಂದೆ ಬಂದಿಲ್ಲ. ಬದಲಾಗಿ ಜಿಲ್ಲೆಯಲ್ಲಿ ತೀವ್ರಗತಿಯಲ್ಲಿ ಬೆಳೆದು ಬಂದ ವಿವಿಧ ಸಂಘಟನೆಗಳು ಮತ್ತು ಶಿಕ್ಷಣ ಸಂಸ್ಥೆಗಳು ಇವರನ್ನು ಸ್ವಲ್ಪಮಟ್ಟಿಗೆ ಸರಿಪಡಿಸಿ ಸಂಘಟಿಸಿಕೊಂಡು ಹೋಗಿವೆ. ಆದರೂ ಅಲ್ಲಲ್ಲಿ ಬಿರುಕುಗಳು ಎದ್ದು ಕಿಡಿಕಾರುವುದನ್ನು ನಾವು ನೋಡಬಹುದು. ಜಿಲ್ಲೆಯಲ್ಲಿ ಇತ್ತೀಚೆಗೆ ಬೆಳೆದುಬಂದ ಸಣ್ಣಪುಟ್ಟ ಪಟ್ಟಣಗಳ ಹೊರನೋಟದ ಸ್ಥಿರತೆ ನಿಜವಾದದ್ದಲ್ಲ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಕೋಮುಗಲಭೆ ಈ ಕೆಲವು ಪುಟ್ಟ ಪ್ರದೇಶಗಳಲ್ಲಿ ಎದ್ದು ಕಂಡಿತ್ತು. ಇಲ್ಲಿನ ಬಾರುಗಳು ಬಿರುಸಿನ ವ್ಯಾಪಾರದಲ್ಲಿ ತೊಡಗಿಕೊಂಡಿವೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಅಧಿಕೃತ ಶರಾಬು ಸೇವನೆ ಬೆಂಗಳೂರು ನಗರಕ್ಕಿಂತ ಸ್ವಲ್ಪಮಾತ್ರ ಕಡಿಮೆ ಮತ್ತು ಇತರ ಜಿಲ್ಲೆಗಳಿಗೆ ಹೋಲಿಸಿದರೆ ಬಹಳಷ್ಟು ಹೆಚ್ಚು. ಹಿಂದುಳಿದ ಜಾತಿ ಸಮುದಾಯಗಳಲ್ಲಿ ವರದಕ್ಷಿಣೆ ಬಹಳಷ್ಟು ಏರುತ್ತಲಿದೆ. ಇಷ್ಟರವರೆಗಿನ ಸ್ವೀಕೃತ ಮೌಲ್ಯಗಳು ಮತ್ತು ಆಧಾರಸ್ತಂಭಗಳು ತ್ವರಿತವಾಗಿ ವಿಘಟನೆಯಾಗುತ್ತಲಿವೆ. ಪರ್ಯಾಯಗಳು ಮುಂಬರುತ್ತಲಿಲ್ಲವೆಂದಲ್ಲ. ಆದರೆ ಅಂತಹ ಪರ್ಯಾಯಗಳಿಗೆ ಇಡೀ ಸಮಾಜದ ಒಡಂಬಡಿಕೆ ಎಷ್ಟಿದೆಯೆಂದು ಹೇಳುವುದು ಕಷ್ಟ. ಕೆಲವು ಪರ್ಯಾಯಗಳು ಏಕಪಕ್ಷೀಯವೆಂದು ಪರಿಗಣಿಸಲ್ಪಡುತ್ತದೆ. ಉಚ್ಚ ಶಿಕ್ಷಣ, ಇಚ್ಚಿತ ನೌಕರಿ ಎಲ್ಲರ ಕೈತಲುಪುವಂತಿಲ್ಲ

.

* * * * *

ದಕ್ಷಿಣ ಕನ್ನಡ ಜಿಲ್ಲೆ ಕುಲಕಸುಬುಗಳಿಗೆ ಮತ್ತು ಈ ಶತಮಾನದಲ್ಲಿ ಬೀಡಿ ಕೈಗಾರಿಕೆಯ ಬೆಳವಣಿಗೆಗೆ ಹೆಸರುವಾಸಿ. ಈ ಕಸುಬುಗಳನ್ನು ಪರಸ್ಪರ ಜೋಡಿಸುವ ಆಂತರಿಕ ಸಂಬಂಧ ಮೇಲ್ನೋಟಕ್ಕೆ ಸ್ಪಷ್ಟವಿಲ್ಲ. ಆದರೂ ಈ ಕಸುಬುಗಳನ್ನು ಸಂಘಟಿಸುವ ವಿಧಿವಿಧಾನಗಳು ಮತ್ತು ಅವುಗಳಲ್ಲಿ ಪ್ರಚಲಿತವಿರುವ ಆರ್ಥಿಕ ಮತ್ತು ಸಾಮಾಜಿಕ ಸಂಬಂಧಗಳು ಆಧುನಿಕ ಕೈಗಾರಿಕಾ ಸಂಘಟನೆಗಳಿಗಿಂತ ಎಷ್ಟೋ ವಿಷಯದಲ್ಲಿ ಭಿನ್ನವಾಗಿವೆ. ಬೀಡಿ ಕೈಗಾರಿಕೆಯನ್ನು ಸೇರಿಸಿ ಈ ಎಲ್ಲಾ ವೃತ್ತಿಗಳಲ್ಲೂ ಸಂಬಂಧ ಮತ್ತು ಸಂಘಟನೆಗೆ ಸಂಬಂಧಿಸಿದಂತೆ ಬಂಡವಾಳಯೇತರ ವ್ಯವಸ್ಥೆಯ ಹಲವಾರು ಅಂಶಗಳು ಸೇರಿಕೊಂಡಿವೆ. ಈ ಎಲ್ಲಾ ಕಸುಬುಗಳಲ್ಲಿ ಕುಟುಂಬವೊಂದು ಘಟಕವಾಗಿ ನೇರ ಪಾತ್ರ ವಹಿಸುತ್ತದೆ. ಜಿಲ್ಲೆಯಲ್ಲಿ ಈ ಎಲ್ಲಾ ಕಸುಬುಗಳು ಇತ್ತೀಚೆಗೆ ಇಳಿಮುಖವಾಗುತ್ತಲಿದ್ದು ಹೊಸ ಸಾಮಾಜಿಕ ಜವಾಬ್ದಾರಿಗಳನ್ನು ಮುಂದೊಡ್ಡಿವೆ.

ಜಿಲ್ಲೆಯಲ್ಲಿ 1981–1990ರ ಅವಧಿಯಲ್ಲಿ ಗೃಹಕಸುಬುದಾರರ ಪ್ರಮಾಣದಲ್ಲಿ ಆದ ಇಳಿತ ದಂಗುಬಡಿಸುವಂತಹದ್ದು. 1981ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ 16.14% ಕಸುಬುದಾರರು ಗೃಹಕಸುಬುಗಳಲ್ಲಿ ತೊಡಗಿದ್ದರು. 1991ರ ಜನಗಣತಿಯ ಪ್ರಕಾರ ಅವರ ಪ್ರಮಾಣ 2% ಮಾತ್ರ. ಈ ಇಳಿತ ಜಿಲ್ಲೆಯ ಹಳ್ಳಿಗಳಲ್ಲೂ ಪಟ್ಟಣ ಪ್ರದೇಶಗಳಲ್ಲೂ ಸಾಧಾರಣ ಸರಿಸಮಾನವಾಗಿ ಕಂಡುಬರುತ್ತದೆ. ಇಡೀ ಕರ್ನಾಟಕಕ್ಕೆ ಹೋಲಿಸಿದರೆ ಇಷ್ಟೊಂದು ಇಳಿಮುಖ ಬೇರೆ ಜಿಲ್ಲೆಗಳಲ್ಲಿಲ್ಲ.

ಇಷ್ಟೊಂದು ದೊಡ್ಡ ಪ್ರಮಾಣದ ಕ್ಷತಿ ಬಹುಶಃ ಸಾಂಖ್ಯಿಕವಾದದ್ದು. ಜನಗಣತಿಯವರು ಹೊಸ ಸಾಮಾಜಿಕ ಮಾಪಕಗಳನ್ನು ಮುಂದೊಡ್ಡುವುದು ಏನೂ ವಿಶೇಷವಲ್ಲ. ಮಾಪಕ ದಂಡಗಳನ್ನು ಮಾರ್ಪಾಡುಗೊಳಿಸಿ ವರ್ಗೀಕರಣವನ್ನು ಪುನರೂಪಿಸಿವುದು ಸಾಮಾನ್ಯವಾಗಿ ನಡೆದುಬಂದ ಪದ್ಧತಿ.1981ರಲ್ಲಿ ಬಹುಶಃ ಒಂದು ಮುಖ್ಯಪಾಲು ಬೀಡಿಕಾರ್ಮಿಕರನ್ನು ಗೃಹಕಸುಬುದಾರರೆಂದು ಅಂಕಿಸಲಾಗಿತ್ತು. 1991ರಲ್ಲಿ, ಪ್ರಾಯಶಃ ಅವರನ್ನು ಇತರ ಕಸುಬುದಾರರೆಂದು ಪರಿಗಣಿಸಲಾಗಿದೆ. ಜಿಲ್ಲೆಯ ಹಳ್ಳಿಗಳಲ್ಲೂ, ಪಟ್ಟಣ ಪ್ರದೇಶಗಳಲ್ಲೂ, ಬೀಡಿ ಕಟ್ಟುವವರು ದೊಡ್ಡ ಪ್ರಮಾಣದಲ್ಲಿ ಇರುವುದರಿಂದ ಗೃಹ ಕಸುಬುಗಳಿಂದ ಅವರನ್ನು ಹೊರತು ಪಡಿಸಿದರೆ ಒಟ್ಟು ಪ್ರಮಾಣದಲ್ಲಿ ಇಳಿಮುಖವಾಗುವುದು ಸ್ವಾಭಾವಿಕ. 1991ರ ಜನಗಣತಿಯ ಎಲ್ಲಾ ಅಂಕೆ ಸಂಖ್ಯೆಗಳು ಪ್ರಕಾಶನಗೊಂಡಾಗ ಮಾತ್ರ ಇದು ನಮಗೆ ಸ್ಪಷ್ಟವಾಗಬಹುದು.

ಜನಗಣತಿಯ ಒಲವು ಮತ್ತು ಮಾಪಕ ದಂಡಗಳನ್ನು ಹೊರತುಪಡಿಸಿದರೂ, ದಕ್ಷಿಣಕನ್ನಡ ಜಿಲ್ಲೆಯ ಬೀಡಿ ಮತ್ತು ಗೃಹ ಕಸುಬುಗಳಲ್ಲಿ ಕಳೆದ ದಶಕದಲ್ಲಿ ಬಹಳಷ್ಟು ಇಳಿಮುಖವಾಗಿದೆಯೆಂಬುದರಲ್ಲಂತೂ ಸಂಶಯವಿಲ್ಲ. ಸಂಘಟಿತ ಬೀಡಿ ಉದ್ದಿಮೆ ಈ ಶತಮಾನದ ಮೊದಲನೇ ದಶಕದಲ್ಲಿಯೇ ಪುತ್ತು ವೈಕುಂಠ ಶೇಟ್‌ರವರಂತಹ ಮಹನೀಯರ ಸೌಜನ್ಯದಲ್ಲಿ ಬೆಳೆದುಬಂದರೂ ಅದೊಂದು ಜನಪ್ರಿಯ ಕಸುಬಾಗಿ ಮಾರ್ಪಟ್ಟಿದ್ದು 1950ರ ಉತ್ತರಾರ್ಧದಲ್ಲಿ; ಅದು ಕೂಡಾ ಕಂಟ್ರಾಕ್ಟ್ ಪದ್ಧತಿಯನ್ನು ಅಳವಡಿಸುವ ಮೂಲಕ. 1970ರಲ್ಲಿ ಅದು ಸಣ್ಣ ಉದ್ದಿಮೆದಾರರನ್ನು ಕಬಳಿಸಿ ಕೆಲವು ದೊಡ್ಡ ಉದ್ದಿಮೆದಾರರ ಕೈಯಲ್ಲಿ ಕೇಂದ್ರೀಕೃತವಾಯ್ತು.1980ರ ಪೂರ್ವಾರ್ಧದಲ್ಲಿ ಜಿಲ್ಲೆಯಲ್ಲಿ ಸುಮಾರು 75,000 ಜನರು ಗಣೇಶ ಬೀಡಿಯ ವಿವಿಧ ಘಟಕಗಳಲ್ಲಿಯೂ, ಸುಮಾರು 60,000 ಜನರು ಭಾರತ್ ಬೀಡೀಸ್ ಕಂಪೆನಿಯಲ್ಲಿಯೂ ನೌಕರಿಯಲ್ಲಿದ್ದರು. ಆವಾಗ ಜಿಲ್ಲೆಯಲ್ಲಿ 3 ಲಕ್ಷಕ್ಕೂ ಮಿಕ್ಕಿದ ಬೀಡಿ ಕಾರ್ಮಿಕರಿದ್ದರು. ಇದರರ್ಥ, ಪ್ರತಿ ಮೂರು ಕಸುಬುದಾರರಲ್ಲಿ ಒಬ್ಬನು ಬೀಡಿ ಕಾರ್ಮಿಕನಾಗಿದ್ದನು. ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರ ಯೂನಿಯನ್‌ಗಳು ಪ್ರಬಲಗೊಂಡು ದೊಡ್ಡ ಪ್ರಮಾಣದಲ್ಲಿ ಜನ ಬೆಂಬಲಗಳಿಸಿದ್ದು ಎಪ್ಪತ್ತರ ದಶಕದಲ್ಲಿ. ಈ ವೇಳೆಯಲ್ಲಿ ಹಳ್ಳಿಪ್ರದೇಶಗಳಲ್ಲಿ ಯುವ ಬೀಡಿಕಾರ್ಮಿಕರು ತಮ್ಮ ಹೊಸ್ತಿಲಿನ ಅಕ್ಕಪಕ್ಕದ ಗ್ರಾಮಗಳಲ್ಲಿ ಯುವಕ ಯುವತಿಯರ ಸಂಘಟನೆಗಳನ್ನು ಕಟ್ಟಲು ಮಾಡಿದ ಪ್ರಯತ್ನ ಸಣ್ಣದೇನಲ್ಲ. ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ವ್ಯಾಪಾರ ವಹಿವಾಟು ಮತ್ತು ಸಂಚಾರ ಸೌಕರ್ಯಗಳು ಬೆಳೆಯಲು ಈ ಉದ್ದಿಮೆ ನೀಡಿದ ಕೊಡುಗೆ ಬಹಳಷ್ಟು. ತಮ್ಮ ಎಳೆಯ ತಮ್ಮ ತಂಗಿಯರ ಶೈಕ್ಷಣಿಕ ಅಭಿವೃದ್ಧಿಗೆ ಯೌವನದ ಮೆಟ್ಟಲನ್ನು ಇನ್ನೂ ಹತ್ತದ ಬೀಡಿ ಕಾರ್ಮಿಕರು, ಅವರಲ್ಲೂ ಹುಡುಗಿಯರು, ಕೊಟ್ಟ ಸಹಕಾರವನ್ನು ಯಾರೂ ಅಲ್ಲಗಳೆಯುವಂತಿಲ್ಲ. 1973ರಲ್ಲಿ ಸರ್ವೋಚ್ಛ ನ್ಯಾಯಾಲಯವು ಬೀಡಿ ಉದ್ದಿಮೆಯಲ್ಲಿ ಕಂಟ್ರಾಕ್ಟ್ ಪದ್ಧತಿಯಡಿಯಲ್ಲಿರುವ ಬೀಡಿಕಾರ್ಮಿಕರಿಗೆ ಕೂಡಾ ಸಂಘಟಿತ ಕೈಗಾರಿಕಾ ಉದ್ದಿಮೆಗಳ ಕಾರ್ಮಿಕರಿಗೆ ಲಭ್ಯವಿರುವ ಎಲ್ಲಾ ಹಕ್ಕುಗಳು ಸಿಗಬೇಕೆಂದು ಸಾರಿ ಈ ಉದ್ದಿಮೆಯನ್ನು ಸಾರ್ವಜನಿಕ ಕಾನೂನಡಿ ತರುವ ಶ್ಲಾಘನೀಯ ಪ್ರಯತ್ನವನ್ನೂ ಮಾಡಿತ್ತು.

1980ರ ಉತ್ತರಾರ್ಧದಲ್ಲಿ ಜಿಲ್ಲೆಯಲ್ಲಿ ಬೀಡಿ ಉದ್ದಿಮೆ ಇಳಿಮುಖ ಕಂಡಿತು. ಈ ಅವನತಿಗೆ ಅದರ ಸ್ವರೂಪಕ್ಕೆ ಒಳಪಟ್ಟ ಕೆಲವು ಕಾರಣಗಳೂ ಮತ್ತು ಕೆಲವು ಸಾಂದರ್ಭಿಕ ಕಾರಣಗಳೂ ಇವೆ. ಜಿಲ್ಲೆಯಲ್ಲಿ ಬೀಡಿಕಾರ್ಮಿಕನ ಸರಾಸರಿ ದಿನಂಪ್ರತಿ ಉತ್ಪಾದನೆ 700 ಬೀಡಿಗಿಂತ ಕಡಿಮೆ. ಕೇರಳದ ಸಹಕಾರಿ ಕ್ಷೇತ್ರದಲ್ಲಿರುವ ದಿನೇಶ್ ಬೀಡಿಗೆ ಹೋಲಿಸಿದರೆ ಇದು 30% ಕಡಿಮೆ. ಬೋನಸ್ ಮತ್ತು ಇತರ ಸೌಕರ್ಯಗಳನ್ನು ಗಮನಕ್ಕೆ ತಕ್ಕೊಂಡರೂ ಒಬ್ಬ ಬೀಡಿ ಕಾರ್ಮಿಕನ ದಿವಸದ ಸರಾಸರಿ ಸಂಪಾದನೆ25ರೂಪಾಯಿಗಿಂತ ಕಡಿಮೆ. ಈಗ ಜಿಲ್ಲೆಯಲ್ಲಿ ಪ್ರಚಲಿತವಿರುವ ಗದ್ದೆಕೂಲಿಗಳ ಕೂಲಿ ಇದಕ್ಕಿಂತ ಬಹಳಷ್ಟು ಹೆಚ್ಚು.

1970ರ ಪೂರ್ವಾರ್ಧದಲ್ಲಿ ಬೀಡಿಕಾರ್ಮಿಕರ ಕೂಲಿ ಜಿಲ್ಲೆಯಲ್ಲಿ ಗದ್ದೆ ಕೂಲಿಗಳಿಗಿಂತ ಅಧಿಕವಿದ್ದು ಹೊಸ ಪೀಳಿಗೆಯನ್ನು ಅದು ಈ ಉದ್ಯೋಗದತ್ತ ಆಕರ್ಷಿಸಿತು. ಈ ವೇಳೆ ತ್ವರಿತಗತಿಯಲ್ಲಿ ಬೆಳವಣಿಗೆಯಾದ ಈ ಉದ್ದಿಮೆಯಲ್ಲಿ ಇಲ್ಲಿಯ ಸೌಲಭ್ಯ ಮತ್ತು ಅನಾನುಕೂಲತೆಗಳ ಬಗ್ಗೆ ವಿವರಿಸುವ ಅನುಭವಸ್ಥ ಕಾರ್ಮಿಕರಿದ್ದುದು ಕಡಿಮೆ. ಹೊಸತಾಗಿ ಈ ಉದ್ದಿಮೆ ಪ್ರವೇಶಿಸಿದ ಪ್ರತಿಯೊಬ್ಬ ಯುವಕ ಯುವತಿ ತನ್ನ ಅನುಭವದಿಂದಲೇ ಇದನ್ನು ಬಹುಪಾಲು ಕಲಿಯಬೇಕಾಯ್ತು. ಪ್ರಕೃತಿಯ ಮಡಿಲಲ್ಲಿ ಬೆಳೆಯುವ ಮನುಷ್ಯನ ಶಾರೀರಿಕ ಮತ್ತು ಸಾಮಾಜಿಕ ವಿಕಾಸವನ್ನು ಗಮನಿಸಿದರೆ,ವ್ಯಾಪಕವಾಗಿ ಪ್ರಚಲಿತದಲ್ಲಿರುವ ಬೀಡಿ ಕಟ್ಟುವ ಕೆಲಸ ಈ ಶಾರೀರಿಕ ಹೊಂದಾಣಿಕೆಯನ್ನು ಬಹಳಷ್ಟು ಅಲ್ಲಗಳೆಯುತ್ತದೆ. ಕಾಲು ಅಡ್ಡಹಾಕಿ, ಬೆನ್ನೆಲುಬನ್ನು ಆಧಾರವಾಗಿರಿಸಿ, ಕುತ್ತಿಗೆಯನ್ನು ಬಿಲ್ಲಿನಂತೆ ಬಗ್ಗಿಸಿ, ತಗ್ಗಿಬಗ್ಗಿ, ತಾಸುಗಟ್ಟಲೆ ಕೂತು, ಕಣ್ಣುಗಳನ್ನು ಒಂದೇ ಬಿಂದುವಿನ ಮೇಲೆ ಕೇಂದ್ರೀಕರಿಸಿ, ಬೆರಳುಗಳನ್ನು ತ್ವರಿತಗತಿಯಲ್ಲಿ ನಡೆಸಿ ಬೀಡಿಯ ಬುಡತುದಿಗಳಿಗೆ ರೂಪ ಕೊಡುವುದು ಮಕ್ಕಳಾಟವಲ್ಲ. 15-18 ವರ್ಷ ಪ್ರಾಯದಲ್ಲಿ ಬೀಡಿಕಟ್ಟುವ ವೃತ್ತಿಗೆ ತೊಡಗಿ ಈ ವೃತ್ತಿಯಲ್ಲಿ ಮುಂದುವರಿಯಬಹುದಾದ ವರ್ಷಗಳು 20-25 ಮಾತ್ರ. ಇತರ ಕಸುಬುಗಳಿಗಿಂತ ಇಲ್ಲಿ ದುಡಿಯುವ ಆಯಸ್ಸು ಕಡಿಮೆ. 40 ವರ್ಷ ಪ್ರಾಯದ ನಂತರವಂತೂ ಬೀಡಿ ಕಟ್ಟುವುದು ತುಂಬಾ ಪ್ರಯಾಸಕರ. ಬೀಡಿಕಟ್ಟುವ ವೃತ್ತಿಗೂ ಅನಾರೋಗ್ಯಕ್ಕೂ ನೇರ ಸಂಬಂಧವಿದೆಯೆಂಬುದನ್ನು ನಾವು ಅಲ್ಲಗಳೆದರೂ, ಶರೀರವನ್ನು ಒಂದೇ ರೂಪದಲ್ಲಿ ದಿನಂಪ್ರತಿ ತಾಸುಗಟ್ಟಲೆ ಮುದುಡಿಸಿಕೊಂಡು ಇಡಬೇಕಾಗುತ್ತಾದ್ದರಿಂದ ಬೆನ್ನು ನೋವು, ಗಂಟುನೋವು ಇತ್ಯಾದಿ ದೂರುಗಳು ಬೀಡಿ ಕಾರ್ಮಿಕರಲ್ಲಿ ಸರ್ವೇಸಾಮಾನ್ಯ. ಆದರೂ 1960ನೇ ಮತ್ತು 1970ನೇ ದಶಕದಲ್ಲಿ ಹೊಸತಾಗಿ ಈ ಕಸುಬನ್ನು ಅವಲಂಬಿಸಲು ಮುಂದುವರಿದ ಹುರುಪಿನ ಯುವಕ ಯುವತಿಯರಿಗೆ ಇದೊಂದು ಘಂಟಾನಾದವಾಗಿ ಕೇಳಿಸಿರಲಿಲ್ಲ. ಪ್ರಾಯಶಃ ಅವರಿಗೆ ಪರ್ಯಾಯಗಳೂ ಇರಲಿಲ್ಲ. ಒಂದು ಬಾರಿ ಈ ಕಸುಬಿನಲ್ಲಿ ಕೆಲವು ವರ್ಷ ಕಳೆದ ನಂತರ ಬಹುಪಾಲು ಬೀಡಿ ಕಾರ್ಮಿಕರು ಇತರ ಉದ್ಯೋಗಾವಕಾಶಗಳಿಗೆ ಪ್ರಯತ್ನಿಸಲೂ ಇಲ್ಲ. ಅವರ ಭೂತಕಾಲವು ಅವರ ಭವಿಷ್ಯದ ಮೇಲೆ ಕಡಿವಾಣವನ್ನು ಹಾಕಿತ್ತು.

ಈ ಅನುಭವಗಳಿಂದ ಹೊರಬಂದ ಹೆತ್ತವರು ಮತ್ತು ಹಿರಿಯರು ಮಾತ್ರ ಪರ್ಯಾಯ ಒದಗಿದಂತೆಲ್ಲಾ ಬೀಡಿ ಕಟ್ಟುವ ಉದ್ಯೋಗದಿಂದ ತಮ್ಮ ಮಕ್ಕಳನ್ನು ದೂರವಿರಿಸಲು ಪ್ರಯತ್ನಿಸಿದ್ದಾರೆ.1980ನೇ ದಶಕದಲ್ಲಿ ಇದಂತೂ ಸುಸ್ಪಷ್ಟ. ಈಗಂತೂ ವರ್ಷಗಟ್ಟಲೆ ಈ ವೃತ್ತಿಯಲ್ಲಿ ಸವೆದವರನ್ನು ಬಿಟ್ಟರೆ, ಇತರ ಉದ್ಯೋಗಾವಕಾಶ ಇಲ್ಲದವರು, ಬೇರೆ ಆರ್ಥಿಕ ನೆಲೆ ಇಲ್ಲದೆ ಚಿಕ್ಕ ಮಕ್ಕಳ ಜವಾಬ್ದಾರಿ ಹೊತ್ತವರು, ಇತರ ವೃತ್ತಿಗಳಿಗೆ ಕಾಯ್ದು ತತ್ಕಾಲಕ್ಕೆ ಏನೂ ಬೇರೆ ಅವಕಾಶ ಇಲ್ಲದವರು, ತಮ್ಮ–ತಂಗಿಯರ ವಿದ್ಯಾಭ್ಯಾಸಕ್ಕಾಗಿ ಎಳೆವಯಸ್ಸಿನಲ್ಲಿಯೇ ಮನೆಯ ಜವಾಬ್ದಾರಿಯನ್ನು ಅನಿವಾರ್ಯವಾಗಿ ಹೊರಬೇಕಾದವರು ಮಾತ್ರ ಈ ಕಸುಬಿನೆಡೆ ಆಕರ್ಷಿತರಾಗುತ್ತಾರೆ. ಈಗ ಈ ಉದ್ದಿಮೆಯಲ್ಲಿರುವ ಬಡ ಯುವಕ ಯುವತಿಯರು ಅವರಾಗಿ ಅದನ್ನು ಆರಿಸಿಕೊಂಡದ್ದಲ್ಲ. ತಮ್ಮ ಜೀವನದ

ಅಭಿವ್ಯಕ್ತಿಗೆ ಅದೊಂದು ಕೇವಲ ಸಂಕುಚಿತ ಕ್ಷೇತ್ರವೆಂದೂ ಮಾತ್ರವಲ್ಲ, ತೃಪ್ತಿಕರವಾದದ್ದೂ ಅಲ್ಲ ಎಂದೂ ಅವರು ಎಣಿಸಿದ್ದಾರೆ.

ಬೀಡಿ ಉದ್ದಿಮೆಯ ಬಗ್ಗೆ ಇಳಿಮುಖವಾಗುತ್ತಿರುವ ಒಲವು ಮಾತ್ರ ಈ ಕಸುಬಿನ ಅವನತಿಗೆ ಕಾರಣವಲ್ಲ. ಕರ್ನಾಟಕದಲ್ಲಿ ಪ್ರಚಲಿತವಿರುವ ವಿಕ್ರಯಕರ, ಉದ್ದಿಮೆಗೆ ಬೇಕಾದ ಕಚ್ಚಾ ಸಾಮಗ್ರಿಗಳನ್ನು ಇಲ್ಲಿಗೆ ರವಾನಿಸಲು ಇರುವ ದೂರ, ರವಾನೆಗೆ ತಗಲುವ ವೆಚ್ಚ, ತಂಬಾಕು ಮತ್ತು ಇತರ ಕಚ್ಚಾ ಸಾಮಗ್ರಿಗಳ ಮುಕ್ತ ಮಾರುಕಟ್ಟೆ, 1980ನೇ ದಶಕದ ಉತ್ತರಾರ್ಧದಲ್ಲಿ ಸಣ್ಣ ಬೀಡಿ ಉದ್ದಿಮೆದಾರರ ತ್ವರಿತ ಬೆಳವಣಿಗೆ, ಲೇಬಲ್ ಇಲ್ಲದ ಬೀಡಿಗಳಿಗೆ ಸಿಗುವ ಕರ ವಿನಾಯಿತಿ, ಖೋಟಾ ಲೇಬಲ್ ಬೀಡಿಗಳು ಪ್ರಚಲಿತದಲ್ಲಿರುವುದು, ಕಡಿಮೆ ದರದ ಸಿಗರೇಟುಗಳು - ಇವೆಲ್ಲವೂ ಇದರಲ್ಲಿ ಸಹಕಾರವನ್ನು ಒಡ್ಡಿವೆ. ಜಿಲ್ಲೆಯ ಯೂನಿಯನ್‌ಗಳ ಬೇಡಿಕೆಗಳು ಇಳಿಮುಖಕ್ಕೆ ಒಂದು ಮುಖ್ಯ ಕಾರಣವೆಂದು ಬೀಡಿ ಉದ್ಯಮಿಗಳು ಹೇಳುತ್ತಿದ್ದರೂ ಅದೇನೂ ಅಷ್ಟೊಂದು ಸೂಕ್ತ ಕಾರಣವಲ್ಲ. ಈ ಹಂತದಲ್ಲಿ ಯೂನಿಯನ್‌ಗಳ ಬಲ ಕುಂಠಿತಗೊಂಡಿದ್ದರಿಂದ ಬೇಡಿಕೆಗಳ ಈಡೇರಿಕೆಗೆ ಬೇಕಾದ ಜನಾಂದೋಲನವನ್ನು ಕಟ್ಟುವ ಸಾಮರ್ಥ್ಯ ಅವರಲ್ಲಿರಲಿಲ್ಲ. 1980ರ ಉತ್ತರಾರ್ಧದಲ್ಲಿ ಬೀಡಿ ಉದ್ದಿಮೆ ದಕ್ಷಿಣ ಕನ್ನಡ ಜಿಲ್ಲೆಯಿಂದ ದೊಡ್ಡ ಪ್ರಮಾಣದಲ್ಲಿ ತಮಿಳುನಾಡು ಮತ್ತು ಮಧ್ಯಪ್ರದೇಶಗಳಿಗೆ ವರ್ಗಾಯಿಸಲ್ಪಟ್ಟಿದ್ದು ನಮಗೆ ಕಾಣಸಿಗುತ್ತದೆ.

ಈಗ ಬೀಡಿ ಉದ್ದಿಮೆ ಅವನತಿಯಲ್ಲಿದ್ದರೂ ದಕ್ಷಿಣ ಕನ್ನಡ ಜಿಲ್ಲೆಯ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಅದರ ಕೊಡುಗೆ ಉಲ್ಲೇಖನೀಯವಾಗಿದೆ. ಜಿಲ್ಲೆಯ ಹಳ್ಳಿಗಳನ್ನು ಪಟ್ಟಣ ಪ್ರದೇಶಗಳೊಂದಿಗೆ ಜೋಡಿಸಿ ಸಂಪರ್ಕ, ಸಂಚಾರ, ರಸ್ತೆನಿರ್ಮಾಣ ಇತ್ಯಾದಿಗಳನ್ನು ಬೆಳೆಸುವಲ್ಲಿ ಅದು ಪ್ರಮುಖ ಪಾತ್ರ ವಹಿಸಿದೆ. ಬೀಡಿಯ ಮೇಲೇರಿದ ವಿಶೇಷ ಕರದಿಂದ ಆಯೋಜಿಸಿದ ನಿರ್ದಿಷ್ಟ ಕಲ್ಯಾಣ ಯೋಜನೆಗಳು ಬಹುಪಾಲು ಬೀಡಿಕಾರ್ಮಿಕರಿಗೆ ಇನ್ನೂ ಲಭ್ಯವಿಲ್ಲದಿದ್ದರೂ ಒಂದಂಶ ಬೀಡಿಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿವೇತನ, ಪಠ್ಯಸಾಮಗ್ರಿಗಳ ರೂಪದಲ್ಲಿ ಮತ್ತು ಕೆಲವು ಬೀಡಿ ಕಾರ್ಮಿಕರಿಗೆ ಮನೆ ವಸತಿಗಳಿಗೆ ಪೂರಕ ಸಹಾಯದ ರೂಪದಲ್ಲಿ ಒದಗಿವೆ. ಕೆಲವರು ಬೀಡಿ ಕಾರ್ಮಿಕರಿಗಾಗಿ ತೆರೆಯಲ್ಪಟ್ಟ ಆರೋಗ್ಯ ಘಟಕಗಳಿಂದ ಪ್ರಯೋಜನವನ್ನು ಪಡೆದಿದ್ದಾರೆ. ಅದಲ್ಲದೆ ಕಾರ್ಮಿಕರಿಗೆ ಸಿಗುವ ಕ್ಷೇಮನಿಧಿ, ಬೋನಸ್, ಮಾತೃತ್ವನಿಧಿಗಳಿಂದಾಗಿ ಹಲವಾರು ಪರಿವಾರಗಳು ಹಲವು ಕಠಿಣ ಪರಿಸ್ಥಿತಿಗಳಿಂದ ಪಾರಾಗುವುದು ಸಾಧ್ಯವಾಗಿದೆ. ಇದಲ್ಲದೇ, ಕೆಲವು ಆಸಕ್ತ ಬೀಡಿ ಉದ್ದಿಮೆದಾರರು ತಾವೇ ಮುಂಬಂದು ತಮ್ಮ ಕಾರ್ಮಿಕರಿಗೆ ಕೆಲವು ವಿಶೇಷ ಸವಲತ್ತುಗಳನ್ನು ಒದಗಿಸಿದ್ದಾರೆ. ಇದರಿಂದಾಗಿ ಎಷ್ಟೋ ಬೀಡಿಕಾರ್ಮಿಕರ ಮಕ್ಕಳಿಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಪಡೆಯುವ ಅವಕಾಶಗಳು ದೊರಕಿವೆ. 1980ರ ಶುರುವಿಗೆ ದಕ್ಷಿಣಕನ್ನಡ ಜಿಲ್ಲೆಯ ಬೀಡಿಕಟ್ಟುವ ಪರಿವಾರಗಳಲ್ಲಿ ಸಾಕ್ಷರತೆಯ ಪ್ರಮಾಣ ಜಿಲ್ಲೆಯ ಸರಾಸರಿ ಸಾಕ್ಷರತೆಗಿಂತ ಅಧಿಕವಿತ್ತು. ಇದರಲ್ಲಿ ಈ ಉದ್ದಿಮೆಯ ಯೋಗದಾನವನ್ನು ಅಲ್ಲಗಳೆಯುವಂತಿಲ್ಲ. ಉಚ್ಚ ಶಿಕ್ಷಣದಲ್ಲಿ ಬೀಡಿ ಕಾರ್ಮಿಕರ ಮಕ್ಕಳಿಗೆ ದೊಡ್ಡ ಪ್ರಮಾಣದ ಅವಕಾಶಗಳು ಸಿಗದಿದ್ದರೂ ಅವರಿಗೆ ಸಿಕ್ಕಿದ ಶಿಕ್ಷಣದಿಂದಾಗಿ ಇತರ ಉದ್ಯೋಗಾವಕಾಶಗಳನ್ನು ಹುಡುಕುವ ಪ್ರೇರಣೆ ಸಿಕ್ಕಿದಂತಾಗಿದೆ.

ದಕ್ಷಿಣಕನ್ನಡ ಜಿಲ್ಲೆಯಲ್ಲಿ 80% ಬೀಡಿ ಕಾರ್ಮಿಕರು ಹಳ್ಳಿಗರು ಮತ್ತು ಪ್ರಮುಖವಾಗಿ ಹಿಂದುಳಿದ, ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಂದ ಬಂದವರು. ಅಲ್ಪಸಂಖ್ಯಾತರಲ್ಲಿ ಮುಸ್ಲಿಂ ಸಮುದಾಯದಲ್ಲಿ ಈ ಕಸುಬು ಬಹಳಷ್ಟು ವ್ಯಾಪಕವಾಗಿದೆ. ಲೇಬಲ್ ಹಚ್ಚುವುದರಲ್ಲಿ ಮಾತ್ರ ಬಹುಪಾಲು ಕಾರ್ಮಿಕರು ಮೇಲುಜಾತಿಗೆ ಸೇರಿದ ಬಡವರಾಗಿದ್ದಾರೆ. ಇವರೆಲ್ಲರಲ್ಲಿ 80% ಮಹಿಳೆಯರು. ಈ ಉದ್ದಿಮೆಯ ಇಳಿತ ಮತ್ತು ಅವನತಿಯಿಂದ ಎಷ್ಟೋ ವೈರುಧ್ಯಮಯ ಪರಿಣಾಮಗಳು ಜಿಲ್ಲೆಯಲ್ಲಿ ಕಾಣಸಿಕೊಳ್ಳಬಹುದು. ನಿರುದ್ಯೋಗ ಮತ್ತು ಸಮಾಜದ ದುರ್ಬಲ

ಪಂಗಡಗಳಿಗೆ ಉದ್ಯೋಗಾವಕಾಶಗಳು ಕಮ್ಮಿಯಾಗಬಹುದು. ಈಗ ಈ ಉದ್ದಿಮೆಯನ್ನು ಅವಲಂಬಿಸಿದ ಪರಿವಾರಗಳಿಂದ ಬಂದ ಬಹಳಷ್ಟು ಯುವಕ ಯುವತಿಯರು ಇತರ ಉದ್ಯೋಗಾವಕಾಶಗಳ ಹುಡುಕಾಟಕ್ಕೆ ತೊಡಗುತ್ತಾರೆ. ಕೈಗಾರಿಕೆಯಲ್ಲೂ ಅಂತಹ ಇತರ ಉದ್ಯೋಗಗಳು ಅಷ್ಟೊಂದು ತ್ವರಿತಗತಿಯಲ್ಲಿ ಬೆಳೆಯುತ್ತಿಲ್ಲದಿರುವುದರಿಂದ ವಿವಿಧ ಸೇವಾವೃತ್ತಿಗಳಲ್ಲಿ ಸಿಗುವ ಸಂಪಾದನೆಯೂ ಬಹಳಷ್ಟು ಕಡಿಮೆ ಇರುತ್ತದೆ. ಎಷ್ಟೆಂದರೆ ಈ ವೃತ್ತಿಗಳಿಂದ ಸಿಗುವ ದಿನಂಪ್ರತಿ ಸಂಪಾದನೆ ಕೂಲಿಯಾಳುವಿನ ಮಜೂರಿಗಿಂತ ಕಡಿಮೆಯಾಗಿರುತ್ತದೆ. ಬಟ್ಟೆ, ಸಂಚಾರ ಇತ್ಯಾದಿ ಅವಶ್ಯಕತೆಗಳಿಗೆ ತಗಲುವ ವೆಚ್ಚವೇ ಬಹಳಷ್ಟು ಜಾಸ್ತಿಯಿರುತ್ತದೆ. ಕೆಲಸದ ಭದ್ರತೆ ಮತ್ತು ಭವಿಷ್ಯದ ಕಾಳಜಿ ಇವರನ್ನು ಯಾವಾಗಲೂ ಕಾಡುತ್ತವೆ. ಬೀಡಿ ಕಸುಬನ್ನು ಹಿಂದೆ ಬಿಟ್ಟು ಭವಿಷ್ಯವನ್ನು ರೂಪಿಸಲು ಮುನ್ನುಗ್ಗುತ್ತಿರುವ ಈ ವಿಶಾಲ ಜನವರ್ಗಕ್ಕೆ ಅಲ್ಲೂ ಇಲ್ಲ, ಇಲ್ಲೂ ಇಲ್ಲ ಎಂಬ ಹೊಂಬಾಗಿಲಿನ ಪರಿಸ್ಥಿತಿ ಮೂಡಿಬಂದಿದೆ.

ಸಾಮಾನ್ಯವಾಗಿ ಬೀಡಿ ಉದ್ದಿಮೆ ಅವನತಿಗೊಳ್ಳುತ್ತಿದ್ದರೂ ಸಣ್ಣ ಉದ್ದಿಮೆದಾರರ ವಿಶೇಷ ಬೆಳವಣಿಗೆ 1980ರಲ್ಲಿ ನಮಗೆ ಕಾಣಸಿಗುತ್ತದೆ. ಈ ಬೆಳವಣಿಗೆಯಲ್ಲಿ ಸರಕಾರದ ಕೆಲವು ನೀತಿ ಧೋರಣೆಗಳ ಪ್ರಭಾವವೂ ಇದೆ. ಜಿಲ್ಲೆಯಲ್ಲಿ ಬೀಡಿಯ ದೊಡ್ಡ ಉದ್ದಿಮೆದಾರರು ಪರಂಪರಾಗತ ವ್ಯಾಪಾರಸ್ಥ ಪಂಗಡಗಳಿಂದ ಬಂದ ಮೇಲ್ಜಾತಿಯವರಾದರೆ ಇತ್ತೀಚೆಗಿನ ಸಣ್ಣ ಉದ್ದಿಮೆದಾರರು ಹಿಂದುಳಿದ ಜಾತಿಗಳಿಂದ ಮತ್ತು ಮುಸ್ಲಿಂ ಸಮುದಾಯಗಳಿಂದ ಬಂದವರು. ಕೆಲವರು ಲೇಬಲ್ ಇದ್ದ ಬೀಡಿಗಳನ್ನು ತಯಾರಿಸುತ್ತಾರಾದರೆ ಇನ್ನು ಹಲವರು ಲೇಬಲ್ ಇಲ್ಲದವುಗಳನ್ನು ತಯಾರಿಸುತ್ತಾರೆ. ಸ್ಥಳೀಯ ಮತ್ತು ಅತಿ ಹತ್ತಿರದ ಮಾರುಕಟ್ಟೆಯನ್ನಷ್ಟೇ ಅವರು ಅವಲಂಬಿಸಿರುತ್ತಾರೆ. ದೊಡ್ಡ ಉದ್ದಿಮೆದಾರರ ಬೃಹತ್ ಸಂಪರ್ಕ ಜಾಲಗಳು ಅವರಿಗೆ ಸುಲಭದಲ್ಲಿ ಎಟಕುವಂತಿಲ್ಲ. ಆದರೆ ಅವರ ಕೈಕೆಳಗೆ ಕೆಲಸ ಮಾಡುವ ಬೀಡಿ ಕಾರ್ಮಿಕರು ಬಹುಪಾಲು ಅವರೊಡನೆ ಕೌಟುಂಬಿಕ, ಜಾತಿಯ ಅಥವಾ ನೆರೆಕೆರೆಯ ಸಂಬಂಧವುಳ್ಳವರು. ಕೆಲವೊಮ್ಮೆ ಈ ಸಣ್ಣ ಉದ್ದಿಮೆದಾರರು ಅಥವಾ ಅವರ ಪರಿವಾರದ ಸದಸ್ಯರು ದೊಡ್ಡ ಉದ್ದಿಮೆಗಳ ಕಂಟ್ರಾಕ್ಟ್‌ದಾರರಾಗಿ ಅಥವಾ ಯೂನಿಯನ್‌ಗಳ ಸ್ಥಳೀಯ ಪುಢಾರಿಗಳಾಗಿ ಸಕ್ರಿಯರಾಗಿರುತ್ತಾರೆ. ಇವೆಲ್ಲಾ ಕಾರಣಗಳಿಂದಾಗಿ ಇವರಿಗೆ ತಮ್ಮ ಕಾರ್ಮಿಕರ ಮೇಲೆ ನಿಗಾ ಇಡಲು, ಉತ್ಪಾದನೆಯ ಗುಣಮಟ್ಟವನ್ನು ರಕ್ಷಿಸಲು ಮತ್ತು ಅವರನ್ನು ಯೂನಿಯನ್‌ನಂತಹ ಸಂಘಸಂಸ್ಥೆಗಳಿಂದ ದೂರವಿಡಲು ಸುಲಭವಾಗಿದೆ. ಇತ್ತೀಚೆಗೆ ಜಿಲ್ಲೆಯ ಮತ್ತು ಅದರ ಅಕ್ಕಪಕ್ಕದ ತಾಲೂಕುಗಳಲ್ಲಿ ಈ ಸಣ್ಣ ಉದ್ದಿಮೆದಾರರು ಪಡೆಯುತ್ತಿರುವ ಪ್ರಾಬಲ್ಯ ಗಮನಾರ್ಹ. ಗುಣಮಟ್ಟಕ್ಕೆ ಸಂಬಂಧಿಸಿದಂತೆ ತಮ್ಮ ಕೈಕೆಳಗಿನ ಕಾರ್ಮಿಕರ ಶ್ರಮವನ್ನು ಹಿಡಿತದಲ್ಲಿಡಲು ಸಾಧ್ಯವಿರುವುದರಿಂದ ಗಾತ್ರಕ್ಕೆ ಅನುಗುಣವಾಗಿ ಇವರ ಸಂಪಾದನೆಯೂ ಸಾಕಷ್ಟಿದೆ. ಇದರಿಂದಾಗಿ ಸ್ಥಳೀಯತೆ ಮತ್ತು ಸಂಕೀರ್ಣ ವಿಚಾರಗಳಿಂದ ಹೊರಬರಲು ಬೀಡಿಕಾರ್ಮಿಕರಿಗೆ ಕಷ್ಟವಾಗಿದೆ. ಬೀಡಿ ವೃತ್ತಿ-ತಯಾರಿಕೆಯಲ್ಲಿ ನಿರತವಾಗಿರುವ ಮುಸ್ಲಿಂ ಜನಸಮುದಾಯದಲ್ಲಿ ಈ ಬೆಳವಣಿಗೆಯ ಪ್ರಭಾವ ತುಂಬಾ ಗಾಢವಾದದ್ದು. ಜಿಲ್ಲೆಯಲ್ಲಿ 60ನೇ ಹಾಗೂ 70ನೇ ದಶಕಗಳಲ್ಲಿ ಬೀಡಿ ಉದ್ದಿಮೆ ದೊಡ್ಡಮಟ್ಟದಲ್ಲಿ ಬೆಳೆದುಬಂದಾಗ ಕೃಷಿ ಕಸುಬಿನಲ್ಲಿದ್ದ ಮುಸ್ಲಿಂ ಮಹಿಳೆಯರು ಬೀಡಿ ಕಸುಬನ್ನು ಅವಲಂಬಿಸಿದರು. ಇದರಿಂದಾಗಿ 'ಪರ್ದಾಗೋಶ' ಇತ್ಯಾದಿ ಇನ್ನೂ ಬಲವಾಯ್ತು. ತಮ್ಮದೇ ಮತ ಪಂಗಡದ ಸಣ್ಣ ಉದ್ದಿಮೆದಾರರ ಕೈಕೆಳಗಷ್ಟೇ ಅವರು ಕೆಲಸ ಮಾಡಬೇಕಾಗಿ ಬಂದರೆ ಸ್ಥಳೀಯತೆ ಮತ್ತು ತಮ್ಮ ಮತದ ಹೊರಗಿರುವ ಸಮಾಜದೊಡನೆ ಅವರ ಸಂಬಂಧ ಇನ್ನೂ ಕಡಿಮೆಯಾಗಬಹುದು. ತುಮಕೂರು ಮತ್ತು ದಾವಣಗೆರೆಯಂತಹ ಪ್ರದೇಶಗಳಲ್ಲಿ ಮುಸ್ಲಿಂ ಬೀಡಿಕಾರ್ಮಿಕರ ಮಹಿಳೆಯರಲ್ಲಿ ಯೂನಿಯನ್ ಮತ್ತು ಅದರ ನೇತೃತ್ವ ಬಹಳಷ್ಟು ವೃದ್ಧಿಯಾಗಿದೆಯಾದರೂ ಈ ಪ್ರಕ್ರಿಯೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ವಿಕಸಿತವಾದದ್ದು ಬಹಳ ಕಡಿಮೆ.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಬೀಡಿಕಾರ್ಮಿಕರ ಸಂಘಟಿತ ಚಳುವಳಿಗೆ ದೊಡ್ಡದೊಂದು ಹಿನ್ನೆಲೆಯಿದೆ. 60ನೇ ದಶಕದ ಉತ್ತರಾರ್ಧದಲ್ಲಿ ಮತ್ತು 70ನೇ ದಶಕದಲ್ಲಿ ಬೀಡಿಕಾರ್ಮಿಕರ ಚಳುವಳಿ ಇಲ್ಲಿ ಸಾಕಷ್ಟು ಬೆಳವಣಿಗೆ ಕಂಡುದಲ್ಲದೆ, ಎಐಟಿಯುಸಿ, ಸಿಐಟಿಯು ಮತ್ತು ಬಿಎಮ್‌ಎಸ್ ಮುಂತಾದ ಕೇಂದ್ರಿಯ ಕಾರ್ಮಿಕ ಸಂಘಟನೆಗಳು ಬೇರೂರಿದವು. ಆದರೂ ಇವರ ಕಾರ್ಯಚಟುವಟಿಕೆ, ಸದಸ್ಯತನ ಮತ್ತು ಬೇಡಿಕೆಗಳು ಕೇವಲ ಪಟ್ಟಣ ಪ್ರದೇಶಗಳಿಗೆ ಮತ್ತು ಅವುಗಳ ಅಕ್ಕಪಕ್ಕದ ಗ್ರಾಮಪ್ರದೇಶಗಳಿಗೆ ಮಾತ್ರ ಸೀಮಿತವಾಗಿದ್ದವು. ಹಳ್ಳಿಯ ಬೀಡಿ ಕಾರ್ಮಿಕರ ಸಂಘಟನೆಯಲ್ಲಿ ಅವರ ಪಾತ್ರ ಅಷ್ಟು ಕಾಣಿಸುವುದಿಲ್ಲ. 1970ರ ಕೊನೆಗೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸುಮಾರು 3 ಲಕ್ಷ ಬೀಡಿಕಾರ್ಮಿಕರಿದ್ದರೂ ಎಲ್ಲಾ ಯೂನಿಯನ್‌ಗಳಲ್ಲಿ ಲೆಕ್ಕ ಹಾಕಿದರೂ ಬೀಡಿ ಕಾರ್ಮಿಕರ ಸಂಖ್ಯೆ20,000ಕ್ಕಿಂತ ಮೇಲ್ಪಟ್ಟಿರಲಿಲ್ಲ. ತಮ್ಮ ಸಂಘಟಿತ ಚಳುವಳಿಯಿಂದ ಬೀಡಿಕಾರ್ಮಿಕರು ಈ ಜಿಲ್ಲೆಯಲ್ಲಿ ಒಂದು ವಿಶಿಷ್ಟ ಸೈದ್ಧಾಂತಿಕ ಧೋರಣೆಗಳನ್ನು ಅಥವಾ ಜೀವನದೃಷ್ಟಿಯನ್ನು ರೂಪಿಸಿದರೆಂದು ಹೇಳುವುದು ಕಷ್ಟ. ಅವು ಭೂತಪೂರ್ವ ಸಮಾಜವಾದಿ ಮತ್ತು ಕಮ್ಯೂನಿಸ್ಟ್ ನೇತೃತ್ವದ ಚಳುವಳಿಗಳು ಮುಂದೊಡ್ಡಿದ ಬಲಾಢ್ಯರು ಮತ್ತು ಬಲವಿಲ್ಲದವರು ಎಂಬ ಅನಿಸಿಕೆಗಳನ್ನು ಬಲಪಡಿಸಿದವೇ ಹೊರತು ಒಂದು ಉದ್ದಂಡ ಕಾರ್ಮಿಕ ಸಂಸ್ಕೃತಿಯನ್ನು ನೆಲೆಗೊಳಿಸಲಿಲ್ಲ.

ಜಿಲ್ಲೆಯಲ್ಲಿ ಬೀಡಿ ಉದ್ದಿಮೆ ಪರಂಪರಾಗತ ಶ್ರಮ ವಿಭಜನೆಯನ್ನು ಕ್ಷೀಣಗೊಳಿಸಿತು. ಆದರೆ ಅದನ್ನು ಸಂಘಟಿಸಿ ಪ್ರಬುದ್ಧಗೊಳಿಸಿದ ಸಾಮಾಜಿಕ ರಚನೆಗಳಿಗೆ ಮತ್ತು ಕಟ್ಟಲೆಗಳಿಗೆ ಪರ್ಯಾಯವನ್ನು ಒಡ್ಡಲಿಲ್ಲ. ಜಿಲ್ಲೆಯಲ್ಲಿ ಇಷ್ಟೊಂದು ವ್ಯಾಪಕವಾದ ಬೀಡಿ ಉದ್ದಿಮೆ ತನ್ನದೇ ಆದ ಒಂದು ಜಾನಪದ ಸಂಸ್ಕೃತಿಯನ್ನು ರೂಪಿಸಲು ಅಸಮರ್ಥವಾಯ್ತು. ಬೀಡಿಕಸುಬನ್ನು ತೊರೆಯುತ್ತಿರುವ ಯುವಪೀಳಿಗೆಯಲ್ಲಿ ತಮ್ಮ ಹಿನ್ನೆಲೆಯ ಕಾರ್ಮಿಕ ಸಂಸ್ಕೃತಿಯ ಪ್ರಭಾವ ತುಂಬ ಕಡಿಮೆ. ತಮ್ಮ ಹಿನ್ನೆಲೆಯ ಬಗ್ಗೆ ಅವರಿಗಿರುವ ಪರಿಜ್ಞಾನ ಶಿಕ್ಷಿತ ಚಿಕ್ಕ ಮತ್ತು ಸಣ್ಣ ರೈತರ ಮಕ್ಕಳಲ್ಲಿ ಇರುವುದಕ್ಕಿಂತ ಕಡಿಮೆ. ಪ್ರಾಯಃ ತಮ್ಮ ತಾಯಂದಿರ ಬಗ್ಗೆ ಪ್ರೀತಿ ಮತ್ತು ಅಭಿಮಾನ ಅವರಲ್ಲಿ ಬಲವಾಗಿದೆ. ಅವರು ತಾನೇ ಬೀಡಿಕಟ್ಟಿ ಇವರನ್ನು ಸಾಕಿದವರು. ಕೇವಲ ಮಾತೃಪ್ರೇಮ ಜೀವನದೃಷ್ಟಿ ಮತ್ತು ಮೌಲ್ಯಗಳನ್ನು ನಿರ್ಮಿಸಲು ಶಕ್ತವಾಗಲಾರದು. ಇದರಿಂದಾಗಿ ಬೀಡಿ ಉದ್ದಿಮೆಯನ್ನು ತ್ಯಜಿಸಿ ಹೊಸ ಉದ್ಯೋಗಾವಕಾಶಗಳನ್ನು ಹುಡುಕುವ ಒಂದು ವಿಶಾಲ ಯುವಪೀಳಿಗೆ ಎಲ್ಲೋ ನಡುವಿನಲ್ಲಿ ಸಿಲುಕಿಕೊಂಡಿದೆ. ಚಿಕ್ಕ ಮತ್ತು ಸಣ್ಣ ರೈತ ಪರಿವಾರಗಳಿಂದ ಬಂದ ಯುವಕ ಯುವತಿಯರಲ್ಲಿ ಕಂಡುಬರುವ ವಿಡಂಬನೆ ಮತ್ತು ಒತ್ತಡಗಳು ಇಲ್ಲೂ ನಮಗೆ ಕಂಡು ಬರುತ್ತವೆ.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇನ್ನಿತರ ಗೃಹ ಕಸುಬುಗಳಲ್ಲಿ ಮತ್ತು ಕುಲಕಸುಬುಗಳಲ್ಲಿ ತೊಡಗಿದವರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದು ಉಚಿತ. ಈ ಜಿಲ್ಲೆಯಲ್ಲಿ ಸುಮಾರು 4.7% ಜನರು ವಿವಿಧ ಬೆಸ್ತಸಮುದಾಯಗಳಿಗೆ ಸೇರಿದವರು. 1960ರ ಉತ್ತರಾರ್ಧದಿಂದ ಮೀನುಗಾರಿಕೆಯಲ್ಲಿ ವಿಪರೀತವಾಗಿ ಬೆಳೆದುಬಂದ ಯಾಂತ್ರೀಕರಣ ಈ ಸಮುದಾಯಗಳ ಮೇಲೆ ಗಾಢ ಪ್ರಭಾವವನ್ನು ಬೀರಿದೆ. ಮೀನು ಹಿಡಿಯಲು ಮತ್ತು ಅದರ ಮಾರಾಟಕ್ಕಾಗಿ ನಿರ್ಮಾಣಗೊಂಡ ಸಹಕಾರಿ ಸಂಘಗಳು ಇನ್ನೂ ಪರಂಪರಾಗತ ಶಕ್ತಿಗಳಿಂದ ಮತ್ತು ಲಾಭವನ್ನೇ ಮುಂಚೂಣಿಯಲ್ಲಿಡುವ ಹಿತಾಸಕ್ತಿಗಳಿಂದ ದೂರಸರಿದು ಸ್ವಯಂ ನಿರ್ಧಾರದ ಸಂಘಟನೆಗಳಾಗಿ ಇನ್ನೂ ಬೆಳೆದಿಲ್ಲ, ಕಡಲಿನ ಏರಿಳಿತಗಳೊಡನೆ ಜೂಜಾಡಿ ಅದರ ಬದಲಾಗುತ್ತಿರುವ ಲಯರೂಪದೊಡನೆ ತಮ್ಮ ಸಂಸ್ಕೃತಿ ಮತ್ತು ಜೀವನಾವಕಾಶಗಳನ್ನು ರೂಪಿಸಿಕೊಂಡಿದ್ದ ಬಹುಮಂದಿ ಮೀನುಗಾರರು ಈಗ ಕೇವಲ ಕೆಲಸದಾಳುಗಳಾಗಿದ್ದಾರೆ. ಈ ಸಮುದಾಯದ ಕೆಲವು ಸದಸ್ಯರು ಮೀನು ಉದ್ದಿಮೆದಾರರಾಗಿ ಬೆಳೆದರೂ ಇತರ ಜಾತಿ ಪಂಗಡಗಳಿಂದ ಬಂದ ಉದ್ದಿಮೆದಾರರೊಡನೆ ತೀವ್ರ ಪೈಪೋಟಿ ಅನುಭವಿಸುತ್ತಲೇ ಇದ್ದಾರೆ. ಮೀನು ವೃತ್ತಿಯಲ್ಲಿ ನಿರತ ಕೆಲಸದಾಳುಗಳಿಗೂ ಪರಂಪರಾಗತ ಕೌಶಲ್ಯಗಳೊಟ್ಟಿಗೆ ವೈಜ್ಞಾನಿಕ ತರಬೇತಿಗಳೂ ಅವಶ್ಯಕವಾಗಿವೆ. ಈ ಎಲ್ಲಾ

ಪ್ರಭಾವಗಳಿಂದ ಈ ಸಮುದಾಯಗಳಲ್ಲಿ ಕೇವಲ ವರ್ಗವಿಭಜನೆ ಮಾತ್ರವಲ್ಲ ಸಾಮಾಜಿಕ ರಚನೆ ಕೂಡಾ ಶಿಥಿಲಗೊಂಡಿದೆ. ಅವರೊಂದು ಪ್ರಕೃತಿ ಸೀಮೆಯಲ್ಲಿ ಕೇಂದ್ರೀಕೃತರಾಗಿದ್ದುದರಿಂದ ಮತ್ತು ಅವರ ನಡೆನುಡಿಗಳು ಬಯಲುಸೀಮೆಯ ಪ್ರದೇಶಗಳಿಂದ ಇಂದಿಗೂ ಭಿನ್ನವಾಗಿರುವುದರಿಂದ ಅವರಲ್ಲಿ ಆದ ದೊಡ್ಡ ಸಾಮಾಜಿಕ ಬದಲಾವಣೆಗಳು ಇನ್ನೂ ಸಾರ್ವಜನಿಕ ಅರಿವಿಗೆ ಬಂದಿಲ್ಲ. ಕಳೆದೆರೆಡು ದಶಕಗಳಲ್ಲಿ ಸಾಕ್ಷರತೆ ಮಾತ್ರವಲ್ಲ ಉಚ್ಚ ಶಿಕ್ಷಣ ಕೂಡ ಇವರಲ್ಲಿ ಪ್ರಚಲಿತವಾಗುತ್ತಲಿದೆ. ಕರಾವಳಿ ಪ್ರದೇಶದಲ್ಲಿ ಮೀನುಗಾರಿಕೆಯ ಕಸುಬು ವೃದ್ಧಿಯಾದರೂ ಅದು ಕೇವಲ ಬೆಸ್ತ ಸಮುದಾಯಗಳಿಗೆ ಮಾತ್ರ ಸೀಮಿತವಾಗಲಾರದು.

ಕುಂಬಾರ ಜಾತಿ ಸಮುದಾಯಕ್ಕೆ ಸೇರಿದವರು ದಕ್ಷಿಣಕನ್ನಡ ಜಿಲ್ಲೆಯಲ್ಲಿರುವುದು ಸುಮಾರು 3.5%. ಪರ್ಯಾಯ ಸಾಮಗ್ರಿಗಳು ಬೆಳೆದು ಕುಂಬಾರವೃತ್ತಿಗೆ ಕೊಡಲಿಯೇಟು ಬಿದ್ದು ಹಲವು ದಶಕಗಳು ಕಳೆದಿವೆ. ಆವೆಮಣ್ಣಿನ ಕೊರತೆ, ಕಟ್ಟಿಗೆಯ ಬೆಲೆ ಏರಿಕೆ ಇತ್ಯಾದಿ ಕಾರಣಗಳಿಂದ ಈ ವೃತ್ತಿಯಲ್ಲಿ ಮುಂದುವರಿಯುವುದು ಬಹಳ ದುರ್ಭರವಾಗಿದೆ. ಈ ವೃತ್ತಿಯಲ್ಲಿರುವವರ ಸಹಕಾರಿ ಸಂಘಗಳು ಚಿಗುರಿವಿಕಸಿತವಾದದ್ದು ಕಡಿಮೆ. ಅಧಿಕಾಂಶ ಕುಂಬಾರರು ಈಗ ಒಂದೋ ಕೃಷಿಯಲ್ಲಿ ಅಥವಾ ಇತರ ಕಸುಬುಗಳಲ್ಲಿ ತೊಡಗಿದ್ದಾರೆ. ಈ ವೃತ್ತಿಯನ್ನು ಒಂದು ಕಲೆಯನ್ನಾಗಿ ವಿಕಸಿತಗೊಳಿಸಿ ವಿಸ್ತೃತ ಮಾರುಕಟ್ಟೆಗೆ ಅನ್ವಯಿಸಬಹುದಾದರೂ ಈ ಪ್ರೇರಣೆ ಕಸುಬುದಾರರ ಒಳಗಿನಿಂದ ಹೊರಚಿಮ್ಮುವುದು ಕಷ್ಟವೇ. ಜಿಲ್ಲೆಯಲ್ಲಿ ಬೆಳೆದುಬಂದ, ಜಗತ್ತಿನಾದ್ಯಂತ ಪ್ರಸಿದ್ಧಗೊಂಡ ಹಂಚು ಉತ್ಪಾದನೆಯೊಡನೆ ಈ ಪರಂಪರಾಗತ ವೃತ್ತಿಯನ್ನು ಜೋಡಿಸಬಹುದಿತ್ತು. ಈ ಅವಕಾಶ ಐತಿಹಾಸಿಕವಾಗಿ ತಪ್ಪಿಹೋಯ್ತು. ಜಿಲ್ಲೆಯಲ್ಲಿ ಮಧ್ಯಮವರ್ಗದವರಲ್ಲಿ ಕಾಣಿಸಿಕೊಂಡಿರುವ ಹೂಗಿಡ ಮತ್ತು ಶೃಂಗಾರಪಟ್ಟಿಗಳ ಬೇಡಿಕೆಯಿಂದ ಈ ಕಸುಬಿಗೆ ಇನ್ನೂ ಜೀವಸಿಗುವ ಸಾಧ್ಯತೆ ಇದೆ. ಮಣ್ಣಿನ ಪಾತ್ರೆಗಳಲ್ಲಿ ತಯಾರಿಸಲ್ಪಟ್ಟ ಸ್ಥಳೀಯ ತಿಂಡಿತಿನಿಸುಗಳು ಜಾಸ್ತಿ ಸ್ವಾದಕರವೆಂದು ಎಣಿಸುವ ಇನ್ನೂ ಹಲವಾರು ಮಂದಿ ಇದ್ದಾರೆ. ಆದರೆ ಇದಕ್ಕಾಗಿ ಹೊಸ ಪ್ರೇರಣೆ ಮತ್ತು ಕೌಶಲ್ಯಗಳನ್ನು ಈ ಪರಂಪರಾಗತ ವೃತ್ತಿಯಲ್ಲಿ ಅಳವಡಿಸುವ ಆಸಕ್ತಿ ಇರುವವರು ಮುಂಬರಬೇಕಾಗುತ್ತದೆ.

ಜಾತಿ ಪ್ರಮಾಣದಲ್ಲಿ ಬಿಲ್ಲವರು ಜಿಲ್ಲೆಯ ಅತೀ ದೊಡ್ಡಪಂಗಡ. ಜನಸಂಖ್ಯೆಯಲ್ಲಿ ಅವರು 18% ಇದ್ದಾರೆ. ಅವರ ಪರಂಪರಾಗತ ವೃತ್ತಿಯಲ್ಲಿ ಶೇಂದಿ ಉತ್ಪನ್ನ ಒಂದಾಗಿದೆ. ಸಿಹಿ ಶೇಂದಿಯಿಂದ ಬೆಲ್ಲವನ್ನು ಉತ್ಪಾದಿಸುವುದು ಜಿಲ್ಲೆಯ ಒಂದು ಪ್ರಮುಖ ಕಸುಬಾಗಿತ್ತು. ಆದರೆ ಹಲವಾರು ಕರನಿಯಮಗಳಿಗೆ ಒಳಪಟ್ಟ ಈ ವೃತ್ತಿ ಕಳೆದ ಒಂದೆರಡು ವರ್ಷಗಳಿಂದ ಶೇಂದಿ ಉತ್ಪನ್ನ ಮಾಡುವವನೇ ಅದರ ಮೂಲಕ ಎಂಬ ಒಪ್ಪಿಗೆ ಪಡೆಯುವ ಹಂತದಲ್ಲಿದೆ. ಆದರೆ ಬಹುಪಾಲು ತಾಳೆಮರಗಳು ಮತ್ತು ತೆಂಗಿನಮರಗಳು ಇತರರ ಸಂಪತ್ತು. ಅಲ್ಲದೆ ತಾಳೆಮರಗಳಿಂದ ಉತ್ಪಾದಿಸುವ ಶೇಂದಿಯ ಉತ್ಪಾದನೆ ವರ್ಷದಲ್ಲಿ 6 ತಿಂಗಳು ಮಾತ್ರ. ಜಿಲ್ಲೆಯಲ್ಲಿ ತಾಳೆ ಮರಗಳು ಹಲವಾರು ಕಾರಣಗಳಿಂದ ನಾಶವಾಗುತ್ತಿವೆ. ಈ ಕೆಲಸ ಶಾರೀರಿಕ ಬಲ ಮತ್ತು ಮರಗಳ ಕೊಂಬುಗಳನ್ನು ಕೆತ್ತುವ, ಕೊಚ್ಚುವ ಕೌಶಲ್ಯದ ಮೇಲೂ ಹೊಂದಿಕೊಂಡಿದೆ. ಬೆಲ್ಲ ಬೇಯಿಸಲು ಬೇಕಾದ ಕಟ್ಟಿಗೆ ಸಿಗುವುದೂ ಸುಲಭವೇನಲ್ಲ. ಅದಕ್ಕಾಗಿ ಈ ಜಾತಿ ಪಂಗಡದ ಯುವ ಜನಾಂಗ, ಅದರಲ್ಲೂ ಮುಖ್ಯವಾಗಿ ಶಿಕ್ಷಿತರು, ಈ ವೃತ್ತಿಯ ಕಡೆ ಒಲವು ತೋರಿಸುವುದು ಕಮ್ಮಿಯಾಗಿದೆ. ಶೇಂದಿ ಉತ್ಪನ್ನದಲ್ಲಿ ನಿರತರ ಸಂಖ್ಯೆ ಬರಬರುತ್ತಾ ಕ್ಷೀಣವಾಗುತ್ತಿದೆ. ಈಗ ಜಿಲ್ಲೆಯಲ್ಲಿ ಈ ಕಸುಬನ್ನು ಮುಖ್ಯ ಜೀವನೋಪಾಯವಾಗಿಟ್ಟುಕೊಂಡವರು ಕೆಲವು ಸಾವಿರ ಮಾತ್ರ.

ಕೈಮಗ್ಗದ ಬಟ್ಟೆ ನೇಯುವುದು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಬಹಳ ಪ್ರಸಿದ್ಧವಾದ ಮತ್ತು ಪ್ರಚಲಿತವಾದ ವೃತ್ತಿಯಾಗಿತ್ತು. 1930ನೇ ಮತ್ತು 1940ನೇ ದಶಕಗಳಲ್ಲಿ ನೇಕಾರರು ಯೂನಿಯನ್ ಚಟುವಟಿಕೆಗಳಲ್ಲೂ ತಮ್ಮ

ಬೇಡಿಕೆಗಳ ಚಲುವಳಿಗಳಲ್ಲೂ ಮುಂಚೂಣಿಯಲ್ಲಿದ್ದರು. ಕೆಲವು ಜಾತಿ ಪಂಗಡಗಳು ಈ ವೃತ್ತಿಯನ್ನು ಪ್ರಮುಖವಾಗಿಟ್ಟುಕೊಂಡಿದ್ದರೂ ಇದು ಯಾವುದೇ ಜಾತಿ ಸಮೂಹಕ್ಕೂ ಸೀಮಿತವಾಗಿರಲಿಲ್ಲ. ಹಲವಾರು ಕ್ರೈಸ್ತ ಮತ್ತು ಮುಸ್ಲಿಂ ಪರಿವಾರಗಳು ನೇಕಾರರ ವೃತ್ತಿಯಿಂದ ಜೀವಿಸುತ್ತಿದ್ದರು. ಈಗಲೂ ಈ ವೃತ್ತಿ ಜಿಲ್ಲೆಯಲ್ಲಿ ಪೂರ್ಣವಾಗಿ ಅವಶೇಷಗೊಳ್ಳದಿದ್ದರೂ ಈ ವೃತ್ತಿಯನ್ನೇ ಅವಲಂಬಿಸಿಕೊಂಡಿರುವ ಮನೆಗಳು ಅತ್ಯಲ್ಪ. ಅಂತಹ ಮನೆಗಳಲ್ಲೂ ಇದೊಂದು ಇಡೀ ಪರಿವಾರದ ಕಸುಬಾಗಿ ಉಳಿದಿಲ್ಲ. ಈ ಒಂದು ಬೆಳವಣಿಗೆ ತುಂಬಾ ದುರದೃಷ್ಟಕರ. ಯಾಕೆಂದರೆ ಸಿದ್ಧ ಉಡುಪುಗಳು, ಅದರಲ್ಲೂ ಕೈಮಗ್ಗದ ಬಟ್ಟೆಗಳು, ಈಗ ಭಾರತದ ಒಂದು ಪ್ರಮುಖ ನಿರ್ಯಾತ ಸಾಮಗ್ರಿಯಾಗಿ ಬೆಳೆದಿದೆ. ಕೈಮಗ್ಗದ ಬಟ್ಟೆಗಳಿಗೆ ಆಂತರಿಕ ಮಾರುಕಟ್ಟೆಯೂ ಸಾಕಷ್ಟಿದೆ. ಆದರೆ ಜಿಲ್ಲೆಯಲ್ಲಿ ಈ ವೃತ್ತಿಯಲ್ಲಿ ಪಳಗಿದ ಕೈಕೌಶಲ್ಯ ಮಾತ್ರ ದುರ್ಲಭವಾಗಿದೆ.

ಒಟ್ಟಿನಲ್ಲಿ ಬೀಡಿ ಉದ್ದಿಮೆಯನ್ನು ಬಿಟ್ಟು ಇತರ ಗೃಹಕಸುಬುಗಳು ಮತ್ತು ಕುಲಕಸುಬುಗಳು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ಕ್ಷೀಣವಾಗಿವೆ. ಅವುಗಳನ್ನು ನೆಚ್ಚಿಕೊಂಡಿರುವ ಪರಿವಾರಗಳು ಕಾಲಕ್ರಮೇಣ ಕಡಿಮೆಯಾಗುತ್ತಲಿದೆ. ವಿಶೇಷತಃ ಯುವಜನಾಂಗಕ್ಕೆ ಅವೊಂದು ಭವಿಷ್ಯವೆನಿಸುತ್ತಿಲ್ಲ. ಇದರಿಂದಾಗಿ ಪರಿವಾರಗಳಲ್ಲಿ ಶ್ರಮವಿಭಜನೆ ಬಲಗೊಳ್ಳುತ್ತಿದೆ ಮಾತ್ರವಲ್ಲ ಹೊಸ ಯುವಜನಾಂಗ ಈ ಕಸುಬುಗಳೇತರ ಕೃಷಿಯೇತರ ಉದ್ಯೋಗವಕಾಶಗಳನ್ನು ಹುಡುಕುತ್ತಲಿದೆ. ಈ ಕಸುಬುಗಳು ಸಮಾಜದ ಒಂದು ಕಟ್ಟುಕಟ್ಟಲೆಯಲ್ಲಿ ನೆಲೆಯೂರಿದ್ದವು. ತಕ್ಕ ಮಟ್ಟಿಗೆ ಇದು ಬೀಡಿಕಸುಬಿಗೂ ಅನ್ವಯವಾಗುತ್ತದೆ. ಈ ಕಸುಬುಗಳನ್ನು ತ್ಯಜಿಸುವುದರಿಂದ ಪರಂಪರೆಗೆ ಜನರನ್ನು ಸಮಾಜದಲ್ಲಿ ಅಳವಡಿಸುವ ಶಕ್ತಿಯೂ ಕ್ಷೀಣಗೊಂಡಿದೆ. ಮೇಲೆ ವಿವರಿಸಿದ ಕಸುಬುಗಳನ್ನು ಪೂರ್ವಾಧಾರವಾಗಿಟ್ಟುಕೊಂಡಿರುವ ಒಂದು ದೊಡ್ಡ ಜನಸಮುದಾಯ ಈಗ ಇತರ ಆಧುನಿಕ ವೃತ್ತಿಗಳ ಕಡೆ ಒಲವು ತೋರಿಸಿದೆ. ಆದರೂ ಜಿಲ್ಲೆಯಲ್ಲಿ ಕೌಟುಂಬಿಕ ಜೀವನ ಇನ್ನೂ ಬಲವಾಗಿರುವುದರಿಂದ ಮತ್ತು ವೃತ್ತಿ ಅವಕಾಶಗಳು ಜಿಲ್ಲೆಯಲ್ಲಲ್ಲದಿದ್ದರೂ ಇತರೆಡೆ ಸ್ವಲ್ಪಮಟ್ಟಿಗಾದರೂ ದೊರಕುತ್ತಿರುವುದರಿಂದ ಮೇಲ್ಸೂಚಿಸಿದ ಬದಲಾವಣೆಗಳು ಕ್ರಾಂತಿಕಾರಕವೆಂದು ನಮಗನಿಸುವುದಿಲ್ಲ. ಆದರೆ ಅವು ಕಳುಹಿಸುವ ಸಂದೇಶವು ಬಹಳ ಸ್ಪಷ್ಟವಾದದ್ದು. ಈ ಸಮಾಜವು ಮುಂದುವರಿಯಬೇಕಾದರೆ ನಾವು ನಮ್ಮ ಸಾಮಾಜಿಕ ಮತ್ತು ಆರ್ಥಿಕ ನೆಲೆಯನ್ನು ಪುನರೂಪಿಸಬೇಕಾಗಿದೆ.

* * * *

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕೃಷಿ, ಗೃಹಕಸುಬು ಮತ್ತು ಬೀಡಿ ಉದ್ದಿಮೆಯಲ್ಲಿ ಉದ್ಯೋಗಾವಕಾಶಗಳು ಕ್ಷೀಣಗೊಂಡು ಅವುಗಳ ಆಕರ್ಷಣೆಯೂ ಕಮ್ಮಿಯಾಗಿರುವುದರಿಂದ ಇತರ ಅವಕಾಶಗಳು ಅನಿವಾರ್ಯವೆನಿಸಿವೆ. ಕೃಷಿಯೇತರ ಮತ್ತು ಗೃಹಕಸುಬುಯೇತರ ಉದ್ಯೋಗಗಳಲ್ಲಿ ತೊಡಗಿದವರ ಪ್ರಮಾಣ ಜಿಲ್ಲೆಯಲ್ಲಿ ಕಳೆದೊಂದು ದಶಕದಲ್ಲಿ ನಾಟಕೀಯರೂಪದಲ್ಲಿ ಬೆಳೆದಿದೆ. 1991ರಲ್ಲಿ ಅದರ ಪ್ರಮಾಣ 62.23% ಕ್ಕೆ ಏರಿತ್ತು. ಆ ವೇಳೆಯಲ್ಲಿ ಇಡೀ ಕರ್ನಾಟಕದಲ್ಲಿ ಈ ಕಸುಬುಗಳಲ್ಲಿ ತೊಡಗಿದವರ ಪ್ರಮಾಣ ಕೇವಲ 34.08% ಮಾತ್ರ. ಬೆಂಗಳೂರು ನಗರ ಮತ್ತು ಕೊಡಗು ಜಿಲ್ಲೆಗಳಲ್ಲಿ ಮಾತ್ರ ಈ ಕಸುಬುಗಳನ್ನು ಅವಲಂಬಿಸಿದವರ ಪ್ರಮಾಣ ಅಧಿಕ. ಅದಕ್ಕೆ ಕಾರಣಗಳನ್ನು ಹುಡುಕಬೇಕೆಂದಿಲ್ಲ. ಬೆಂಗಳೂರು ನಗರದಲ್ಲಿ ಕೃಷಿ ಕಸುಬುದಾರರು ಬಹುಕಡಿಮೆ ಮತ್ತು ಕೊಡಗು ಜಿಲ್ಲೆಯಲ್ಲಿ ಬಹುದೊಡ್ಡ ಪಾಲು ಕಸುಬುದಾರರು ಕಾಫಿ ಉತ್ಪಾದನೆಯಲ್ಲಿ ನಿರತರಾಗಿದ್ದಾರೆ.

ಮೇಲ್ಕಾಣಿಸಿದ ಕೃಷಿಯೇತರ ಮತ್ತು ಗೃಹ ಕಸುಬುಯೇತರ ಕಸುಬುದಾರರನ್ನು ಉತ್ಪಾದನಾರಂಗ ಮತ್ತು ಸೇವಾರಂಗ ಎಂಬೆರಡು ವಿಭಾಗದಲ್ಲಿ ವರ್ಗೀಕರಿಸಿದರೆ ಅವರ ಪ್ರಮಾಣ ಅನುಕ್ರಮವಾಗಿ ಸುಮಾರು 28% ಮತ್ತು

34% ಇದೆ. ಉತ್ಪಾದನಾರಂಗದಲ್ಲಿ ನಿರತ ಕಾರ್ಮಿಕರ ಪ್ರಮಾಣದಲ್ಲಿ ವಿಶೇಷ ಬೆಳವಣಿಗೆಯಾದದ್ದನ್ನು ಜನಗಣತಿಯವರ ಅಂಕಿಸಂಖ್ಯೆಗಳಿಂದ ತಿಳಿಯಲಾಗುವುದಿಲ್ಲ. ಅವರ ಪ್ರಕಾರ ಅದು ಸ್ವಲ್ಪ ಮಟ್ಟಿಗೆ ಇಳಿಮುಖವಾಗಿದೆ ಮತ್ತು ಸಾಪೇಕ್ಷವಾಗಿ ಸೇವಾರಂಗವು ಬಹಳಷ್ಟು ಬೆಳೆದಿದೆ. ಸೇವಾರಂಗದ ಬೆಳವಣಿಗೆಯನ್ನು ಅಲ್ಲಗಳೆಯುವಂತಿಲ್ಲ. ಆದರೆ ಜಿಲ್ಲೆಯಲ್ಲಿ ಉತ್ಪಾದನಾರಂಗದಲ್ಲಿ ಕಸುಬುದಾರರು ಇಳಿಮುಖವಾಗಿದ್ದಾರೆ ಎನಿಸುವುದಿಲ್ಲ. ಸಂಘಟಿತ ಉತ್ಪಾದನಾ ಘಟಕಗಳಲ್ಲಿ ಕಸುಬುದಾರರ ಪ್ರಮಾಣ ಬಹಳಷ್ಟು ಬೆಳೆದಿಲ್ಲದಿರಬಹುದು. ಆದರೂ ಅಸಂಘಟಿತ ಉತ್ಪಾದನಾರಂಗವು ಜಿಲ್ಲೆಯಲ್ಲಿ ಕಳೆದ ದಶಕದಲ್ಲಿ ತ್ವರಿತಗತಿಯಲ್ಲಿ ಬೆಳೆದಿದೆ. ಹಪ್ಪಳ, ಉಪ್ಪಿಟ್ಟು, ಲಕೋಟೆ, ಸಿದ್ಧಉಡುಪು ಮುಂತಾದ ಉದ್ದಿಮೆಗಳಿಂದ ಹಿಡಿದು ಕಲ್ಲು ಕಡಿಯುವುದು, ಇಟ್ಟಿಗೆ ತಯಾರು ಮಾಡುವುದು ಇತ್ಯಾದಿ ಕೆಲಸಗಳಲ್ಲಿ ತೊಡಗಿದವರ ಪ್ರಮಾಣ ಈ ಅವಧಿಯಲ್ಲಿ ಬಹಳಷ್ಟು ವೃದ್ಧಿಯಾಗಿದೆ. ಈ ಕಸುಬುದಾರರು ಸುಲಭದಲ್ಲಿ ಅಂಕಿಸಂಖ್ಯೆಯವರ ಜಾಲದಲ್ಲಿ ಬೀಳುವುದಿಲ್ಲ. ಅವರನ್ನು ಯಾವುದೋ ಒಂದು ಪರಂಪರಾಗತ ವೃತ್ತಿಯಲ್ಲಿ ಸಿಲುಕಿಸಿ ಅಂಕಿಸಂಖ್ಯೆ ಅನ್ವೇಷಿಗಳು ನಿಟ್ಟುಸಿರು ಬಿಡುವುದು ಸ್ವಾಭಾವಿಕ. ಇದರಲ್ಲಿ ಎಷ್ಟೋ ಸಣ್ಣಪುಟ್ಟ ಎಂಜಿನಿಯರಿಂಗ್ ಮತ್ತು ಇಲೆಕ್ಟ್ರಿಕ್ ಘಟಕಗಳೂ ಸೇರಿವೆ. ಕಳೆದ ದಶಕದಲ್ಲಿ ಬ್ಯಾಂಕಿಂಗ್ ಮತ್ತು ಇತರ ಹಣಕಾಸು ಸಂಸ್ಥೆಗಳು ಸಣ್ಣ ಕೈಗಾರಿಕಾ ಘಟಕಗಳಿಗೆ ವಿತರಿಸಿದ ಬಂಡವಾಳ ಬಹಳಷ್ಟು ಏರಿದೆ. ಅದರ ಹೊರತು ಎಲ್ಲಾ ಉದ್ದಿಮೆಗಳನ್ನು ಉತ್ಪಾದನಾರಂಗ ಮತ್ತು ಸೇವಾರಂಗವೆಂದು ನಿರ್ದಿಷ್ಟ ಘಟಕಗಳಲ್ಲಿ ವಿಭಜಿಸುವುದು ಈ ಕಾಲದಲ್ಲಂತೂ ಬಹಳ ಕಷ್ಟಕರ. ಈ ವಿಭಜನೆಯು ಸ್ವಲ್ಪಮಟ್ಟಿಗೆ ಮಾತ್ರ ಯೋಗ್ಯವೆನಿಸುತ್ತದೆ. ಮಾನವ ಸಂಪನ್ಮೂಲಗಳನ್ನು ರೂಪಿಸುವುದು ಮತ್ತು ಸಂವಹರಿಸುವುದು ಒಂದು ಪ್ರಮುಖ ಉದ್ದಿಮೆಯಾಗಿ ಬೆಳೆದ ನಮ್ಮ ಯುಗದಲ್ಲಿ ಇದಕ್ಕೆ ಸಂಬಂಧಪಟ್ಟ ಬಹಳಷ್ಟು ಉದ್ದಿಮೆಗಳನ್ನು ಸೇವಾರಂಗದಲ್ಲಿ ಅಳವಡಿಸುವುದೋ ಅಥವಾ ಉತ್ಪಾದನಾ ರಂಗದಲ್ಲಿ ಅಳವಡಿಸುವುದೋ ಎಂದು ಹೇಳುವುದು ಕಷ್ಟವೇ.

ಈ ವಿಭಜನೆಯು ಪೂರ್ಣವಾಗಿ ಉಚಿತವಲ್ಲವೆನಿಸಿದರೂ ಜಿಲ್ಲೆಯಲ್ಲಿ ಕಳೆದ ದಶಕದಲ್ಲಿ ಆದ ಒಂದು ಪ್ರಬುದ್ಧ ಬೆಳವಣಿಗೆಯೆಂದರೆ ಸೇವಾರಂಗವೆಂದು ಹೇಳಬಹುದು. ಅದು ಜಿಲ್ಲೆಯಾದ್ಯಂತ ಕಚ್ಚಾವಸ್ತುಗಳಿಗೆ ಮತ್ತು ಸಿದ್ಧವಸ್ತುಗಳಿಗೆ ಒಂದು ಸಾಮಾನ್ಯ ಮಾರುಕಟ್ಟೆಯನ್ನು ನಿರ್ಮಾಣಮಾಡಿದ್ದು ಮಾತ್ರವಲ್ಲ, ತನ್ನ ಗಾತ್ರದಲ್ಲಿಯೂ, ವಿನಿಮಯ ಪ್ರಮಾಣದಲ್ಲಿಯೂ ಬಹಳಷ್ಟು ವೃದ್ಧಿ ಸಾಧಿಸಿದೆ. ಹೀಗಾಗಿ ಜಿಲ್ಲೆಯಲ್ಲಿ ಹಿಂದುಳಿದ ಮತ್ತು ಅಭಿವೃದ್ಧಿಗೊಂಡ ಕ್ಷೇತ್ರಗಳನ್ನು ನಿರ್ದಿಷ್ಟಪಡಿಸುವುದು ಕಷ್ಟಕರ. ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿ ಯೋಜನೆಗಳು ತೀವ್ರಗತಿಯಲ್ಲಿ ಆವರಿಸಲು ಸಾಧ್ಯವಿದೆ.

ದಕ್ಷಿಣಕನ್ನಡ ಜಿಲ್ಲೆಯ ಒಂದು ಪ್ರಮುಖ ವೈಶಿಷ್ಟ್ಯವೆಂದರೆ ಇಲ್ಲಿ ಕೃಷಿಯೇತರ ಮತ್ತು ಗೃಹಕಸುಬುಯೇತರ ವೃತ್ತಿಯನ್ನು ಅವಲಂಬಿಸಿದವರ ಪ್ರಮಾಣ ಗ್ರಾಮ್ಯ ಪ್ರದೇಶದಲ್ಲಿ ಈಗ 53%ಇದೆ. ಕಳೆದ ದಶಕದಲ್ಲಿ ಈ ಪ್ರಮಾಣ ಇಮ್ಮಡಿಯಾಗಿದೆ. ಈ ಬೆಳವಣಿಗೆ ಕರ್ನಾಟಕದಲ್ಲಿ ಇನ್ನೆಲ್ಲೂ ನಮಗೆ ಕಾಣಸಿಗುವುದಿಲ್ಲ. ಇದರಿಂದಾಗಿ ಪಟ್ಟಣಗಳಿಗೂ ಹಳ್ಳಿಗಳಿಗೂ ಇತರೆಡೆ ಇರುವ ವೈರುದ್ಧ್ಯಗಳು ಇಲ್ಲಿ ಎದ್ದು ಕಾಣುವುದಿಲ್ಲ. ಕೇವಲ ಜನಸಾಂದ್ರತೆಯಲ್ಲಿರುವ ವ್ಯತ್ಯಾಸ ಮಾತ್ರ ಸ್ಪಷ್ಟವಾಗಿ ಗೋಚರವಾಗುತ್ತದೆ. ಸಂಚಾರ, ಸಂಪರ್ಕಸಾಧನೆಗಳು, ಸಮೂಹ ಮಾಧ್ಯಮಗಳು, ನೀರಿನ ಪೂರೈಕೆ, ಶಾಲಾಕಾಲೇಜುಗಳು ಮುಂತಾದ ಸೌಲಭ್ಯಗಳು ಗ್ರಾಮಜೀವನಕ್ಕೂ ಸಿಗುತ್ತಲಿದೆ, ಇಲ್ಲ ಸಿಗಲಿವೆ. ನಗರೀಕರಣ ಸಾಮಾನ್ಯವಾಗಿ ಆಧುನೀಕರಣದ ಕೆಲವು ಮೌಲ್ಯಗಳನ್ನು, ಜೀವನದ ದೃಷ್ಟಿಯನ್ನು ಮತ್ತು ಅದರಿಂದ ಹೊರ ಹೊಮ್ಮುವ ಸಾಮಾಜಿಕ ಸಂಬಂಧಗಳನ್ನು ಒಂದುಗೂಡಿಸಿಕೊಂಡು ಹೋಗುತ್ತಿದೆ. ಆದರೆ ಇದು ಸಾಪೇಕ್ಷವಾಗಿ ಮಾತ್ರ. ಪರಂಪರಾಗತ ಕೌಟುಂಬಿಕ ಮತ್ತು ಜನಾಂಗೀಯ ಮೌಲ್ಯಗಳು ಮತ್ತು ಜೀವನಶೈಲಿ ನಗರೀಕರಣದಿಂದ ಪೂರ್ಣವಾಗಿ ಮೂಲೆಪಾಲಾಗುತ್ತಿದೆ ಎಂದು ಹೇಳುವಂತಿಲ್ಲ. ಅವು ಬಹಳಷ್ಟು ನಗರೀಕರಣದೊಟ್ಟಿಗೆ ಪುನಃ

ಸಂಘಟಿತಗೊಳ್ಳುತ್ತವೆ. ಹಾಗಾದರೆ ಮಾತ್ರ ಜೀವನಕ್ಕೆ ವಿವಿಧ ಆಯಾಮಗಳು ಒದಗುತ್ತವೆಂದು ಅನೇಕರು ನಂಬುತ್ತಾರೆ. ಆಧುನೀಕರಣದ ಮೌಲ್ಯಗಳ ಗಾಢ ಪ್ರಭಾವ ಜಿಲ್ಲೆಯ ಗ್ರಾಮ್ಯ ಜೀವನವನ್ನು ಆವರಿಸಿದೆಯೆಂಬುದರಲ್ಲಂತೂ ಸಂಶಯವಿಲ್ಲ. ಆದರೆ ಅದು ಎಷ್ಟರಮಟ್ಟಿಗೆ ಪರಂಪರಾಗತ ಜೀವನದೃಷ್ಟಿಯನ್ನು ಬದಿಗೊತ್ತಿದೆ ಎಂಬುದನ್ನಾಗಲೀ ಆಧುನೀಕರಣದೊಡನೆ ಸಮ್ಮಿಶ್ರಗೊಂಡು ಉದ್ಭವಿಸಿದ ಅದರ ಗುಣಲಕ್ಷಣಗಳು ಯಾವುವು ಎಂಬುದನ್ನಾಗಲೀ ಹೇಳುವುದಂತೂ ಕಷ್ಟಕರ. ಆದರೂ ಪರಂಪರಾಗತ ಜೀವನದಲ್ಲೂ ಅದನ್ನು ಸಂಘಟಿಸಿ ಪುನರೂಜ್ಜೀವನಗೊಳಿಸುವ ಮೌಲ್ಯಗಳಲ್ಲೂ ಬಿರುಕು ಬಿದ್ದಿದೆಯೆಂಬುದು ಬಹುಶಃ ಸರ್ವವಿದಿತ. ಈ ಸೈದ್ಧಾಂತಿಕ ಬೆಳವಣಿಗೆಗಳು ಜನಜೀವನವನ್ನು, ಅದರಲ್ಲೂ ಯುವಪೀಳಿಗೆಯನ್ನೂ, ಸಾಮಾಜಿಕ ಮತ್ತು ನೈತಿಕ ನೆಲೆಯಲ್ಲಿ ಅಡವಳಿಸುವಲ್ಲಿ ಸಫಲಗೊಂಡಿಲ್ಲ.

ಸಾಮಾನ್ಯವಾಗಿ ಸಾಮಾಜಿಕ ಮತ್ತು ನೈತಿಕ ನೆಲೆಗಳನ್ನು ಎರಡು ವಿಧಾನಗಳಿಂದ ರೂಪಿಸಬಹುದು. ಮೊದಲನೆಯದಾಗಿ, ಸಾಮಾಜಿಕ ಪರಿವರ್ತನೆಗಳನ್ನು ಅರ್ಥೈಸಿ ಬದಲಾವಣೆಗಳಿಗೆ ಅನುಗುಣವಾದ ಹೊಸ ಸಾಮಾಜಿಕ ಮತ್ತು ನೈತಿಕ ಸಾಮಂಜಸ್ಯವನ್ನು ನಿರ್ಮಿಸುವುದು. ಇಂತಹ ಸಾಮಂಜಸ್ಯದ ಅಂಶಗಳು ಹಲವಾರು ಮೂಲೆಗಳಿಂದ ಮುಂಬರಬಹುದು ಮತ್ತು ಪ್ರಗತಿಶೀಲ ಜನವರ್ಗಗಳು ಅವನ್ನು ಕ್ರೋಡೀಕರಿಸಿ ಹೊಸ ಸಾಮಂಜಸ್ಯಕ್ಕೆ ಬೇಕಾದ ಯೋಜನೆಗಳನ್ನು ಸಾರ್ವತ್ರಿಕವಾಗಿ ಮಂಡಿಸಿ ಕಾರ್ಯಗತಗೊಳಿಸಬಹುದು. 1980ನೇ ದಶಕದಲ್ಲಿ ಅಂತಹ ಧೋರಣೆಗಳು ಅಥವಾ ಅವಕ್ಕೆ ಸಂಬಂಧಪಟ್ಟ ಯೋಜನೆಗಳು ಜಿಲ್ಲೆಯಲ್ಲಿ ಮೂಡಿ ಬಂದದ್ದು ಬಹಳ ವಿರಳ. ಎರಡನೆಯದಾಗಿ, ಪರಂಪರಾಗತ ಸಾಮಾಜಿಕ ಮತ್ತು ನೈತಿಕ ನೆಲೆಗಳು ತಮ್ಮನ್ನು ಪುನರ್‌ವ್ಯಾಖ್ಯಾನಿಸಿಕೊಂಡು ಪರಿವರ್ತನೆಯೊಡನೆ ಹೊಂದಿಕೊಂಡು ಅದಕ್ಕೊಂದು ದಿಸೆ ಕೊಡಲು ಪ್ರಯತ್ನಿಸಬಹುದು. ಆದರೆ ಈ ವಿಧಾನವನ್ನೊಳಗೊಂಡ ಪ್ರಯತ್ನಗಳು ಇನ್ನೂ ವಿಘಟನಕಾರಿಯಾಗಿವೆಯೇ ಹೊರತು ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಸಾಮಾಜಿಕ ಒಡಂಬಡಿಕೆಯ ಹೊಸ ರೂಪರೇಖೆಗಳೆಂದು ಕಾಣಿಸಿಕೊಂಡಿಲ್ಲ. ಇವನ್ನು ಪರಂಪರೆಯನ್ನೊಳಗೊಂಡ ಸ್ಥಳೀಯ ಪ್ರಜ್ಞೆ ಜಾತಿ ವ್ಯವಸ್ಥೆ ಮತ್ತು ಸ್ಥಾನಕಾಲಗಳ ಪುನರೂಪನೆಗಳಿಂದ ನಾವು ನೋಡಬಹುದಾಗಿದೆ.

ಈ ಜಿಲ್ಲೆಯಲ್ಲಿ ಸ್ಥಳೀಯ ಪ್ರಜ್ಞೆ ಪ್ರಮುಖವಾದದ್ದು ಮಾತ್ರವಲ್ಲ ಆದರಣೀಯವೂ ಆಗಿದೆ. ಎಷ್ಟೋ ಸಲ ಇದು ರೂಪಿಸುವ ಆತ್ಮೀಯತೆ ಹಲವಾರು ಸಂಬಂಧಗಳನ್ನು ನಿಮ್ನಗೊಳಿಸಬಹುದು. ಇದರ ವರ್ತುಲಗಳು ಹಲವಾರು. ಒಬ್ಬನ ಸ್ಥಳೀಯತೆ ಇನ್ನೊಬ್ಬನಿಗೆ ತುಂಬಾ ಸಂಕುಚಿತವೆನಿಸಬಹುದು. ಈ ಪ್ರಜ್ಞೆ ಅಧಿಕೃತ ಗ್ರಾಮ ಅಥವಾ ಮಂಡಳಗಳ ಪರಿಮಿತಿಗಳೊಳಗೇ ಇರಬೇಕೆಂದಿಲ್ಲ. ಎಷ್ಟೋ ಬಾರಿ ಇದು ಯಾರು ಯಾರೊಡನೆ ಸಂಪರ್ಕವನ್ನಿಟ್ಟುಕೊಂಡಿರುತ್ತಾರೋ ಅದರ ಮೇಲೆ ಹೊಂದಿಕೊಂಡಿದೆ. ಒಬ್ಬ ಕ್ರಿಶ್ಚಿಯನ್ ಇನ್ನೊಬ್ಬ ಸ್ವಧರ್ಮ ಅನುಯಾಯಿಯೊಡನೆ ಪರಿಚಯಗೊಳ್ಳುವಾಗ ಸಾಮಾನ್ಯವಾಗಿ ತನ್ನ ಕ್ಷೇತ್ರದ ಇಗರ್ಜಿಯ ವರ್ತುಲದಿಂದ ತನ್ನನ್ನು ಗುರುತಿಸಿಕೊಂಡಿರುತ್ತಾನೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಇತರ ಗುರುತು ವರ್ತುಲಗಳನ್ನು ಪ್ರಯೋಗಿಸುತ್ತಾನೆ. ಕೆಲವು ಮನೆತನಗಳಿಗೆ ತಮ್ಮ ಸ್ಥಳೀಯತೆಯನ್ನು ನಮೂದಿಸಲು ಐತಿಹಾಸಿಕ ಕುರುಹುಗಳು, ವಿಶಿಷ್ಟ ಸಾಂಸ್ಕೃತಿಕ ಹಿನ್ನೆಲೆ, ಮಠ ಅಥವಾ ದೇವಸ್ಥಾನಗಳೊಂದಿಗಿನ ಸಂಬಂಧ ಇತ್ಯಾದಿ ಪ್ರಮುಖವಾಗಬಹುದು. ಒಟ್ಟಾರೆ ಸ್ಥಳೀಯತೆಯಲ್ಲಿ ಎಷ್ಟೋ ಪ್ರಜ್ಞಾಧಾರಿತ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವರ್ತುಲಗಳ ಸಂಗಮ, ವಿಹಂಗಮಗೊಂಡು ತಮ್ಮ ಛಾಪಿನಲ್ಲಿ ಮೂಡಿಸುತ್ತವೆ.

ಸ್ಥಳೀಯತೆಯ ಪ್ರಜ್ಞೆಯು ಅಸ್ತಿತ್ವಕ್ಕೆ ಅನೇಕ ಆಯಾಮಗಳನ್ನು ನೀಡಿ ಅವುಗಳ ಮುಖಾಂತರ ವ್ಯಕ್ತಿಯನ್ನು ಬಾಹ್ಯ ಸಮಾಜಕ್ಕೂ, ಅಖಂಡ ಬ್ರಹ್ಮಾಂಡಕ್ಕೂ ಜೋಡಿಸುತ್ತಿತ್ತು. ಇತ್ತೀಚೆಗೆ ಜಿಲ್ಲೆಯಲ್ಲಿ ಈ ಸ್ಥಳೀಯ ಪ್ರಜ್ಞೆ ಬಹಳಷ್ಟು ಮಾರ್ಪಾಡುಗೊಳ್ಳುತ್ತಲಿದೆ. ಇದರರ್ಥ ಅದು ಮಾಯವಾಗುತ್ತಲಿದೆಯೆಂದಲ್ಲ. ಸ್ಥಳೀಯತೆ ಮಾಯವಾಗಲು ಸಾಧ್ಯವಿಲ್ಲ. ಯಾಕೆಂದರೆ ಅದು ವ್ಯಕ್ತಿತ್ವದ ಮತ್ತು ಅಸ್ಥಿತ್ವದ ಆಧಾರ ಸ್ತಂಭ; ಒಂದು ದೃಷ್ಟಿಯಿಂದ ಅದರ ಸೀಮಾರೇಖೆ. ಈ ಮಾರ್ಪಾಡು ಗುಣಾತ್ಮಕವಾದದ್ದು ಮಾತ್ರವಲ್ಲ, ವೈರುಧ್ಯಗಳಿಂದ ಕೂಡಿದ್ದಾಗಿದೆ. ಇತ್ತೀಚೆಗೆ ಸ್ಥಳೀಯತೆಯಲ್ಲಿ ಪರಂಪರೆಯಿಂದ ಕೂಡಿದ ಎಷ್ಟೋ ಆಯಾಮಗಳನ್ನು ನಾವು ಕಳಚಿ ಹಾಕಿ ಕೆಲವನ್ನು ಮಾತ್ರ ಇಟ್ಟುಕೊಂಡಿದ್ದೇವೆ. ಗೌಪ್ಯವಾದವುಗಳನ್ನು ಸ್ಪಷ್ಟಗೊಳಿಸಿದ್ದೇವೆ ಮತ್ತು ಪ್ರಮುಖವಾದವುಗಳನ್ನು ಬದಿಗೊತ್ತಿದ್ದೇವೆ. ಎಷ್ಟೋ ಹೊಸ ಆಯಾಮಗಳನ್ನು ಕೂಡಿಹಾಕುತ್ತಾ ಇದ್ದೇವೆ. ಇಂತಹ ಕೂಡಲ್ಪಡುವಿಕೆ ಸ್ಥಳೀಯತೆಗೆ ಹೊರತೇನೂ ಅಲ್ಲ. ಆದರೆ ಈಗ ಕೂಡಿಸಲೆತ್ನಿಸುವ ಆಯಾಮಗಳು ಸಮ್ಮಿಶ್ರಗೊಳ್ಳುತ್ತವೋ ಇಲ್ಲವೋ ಎಂಬುದರ ಬಗ್ಗೆ ನಾವು ಕಾಳಜಿ ವಹಿಸುವುದು ಕಡಿಮೆಯಾಗಿದೆ. ಈಗ ಮೂಡಿಬರುತ್ತಿರುವ ಹೊಸ ಸ್ಥಳೀಯತೆಯ ಒಂದು ಪ್ರಮುಖ ವೈರುಧ್ಯವೆಂದರೆ ಅದು ಇಷ್ಟರವರೆಗೆ ಸ್ಥಳೀಯತೆಯನ್ನು ಒಟ್ಟುಗೂಡಿಸುವಲ್ಲಿ ಮಧ್ಯಸ್ಥಿಕೆ ವಹಿಸುತ್ತಿದ್ದ ಎಷ್ಟೋ ವರ್ತುಲಗಳನ್ನು ತಿರಸ್ಕರಿಸಿ ಒಂದೇ ಸ್ಥಳೀಯತೆಯನ್ನು ಜಗತ್ತು ಅಥವಾ ಜಗತ್ತನ್ನೇ ಸ್ಥಳೀಯತೆ ಎಂದು ಹೇಳುವಂತಿದೆ. ಇದು ಜಿಲ್ಲೆಯ ಸಣ್ಣಪುಟ್ಟ ಗ್ರಾಮಗಳಲ್ಲಿ ಕೂಡಾ ಸ್ಪಷ್ಟವಾಗುತ್ತದೆ. ಪುಂಚಮೆಯೆಂಬ ಊರುಂಟು ಎಂದುಕೊಳ್ಳಿ. ಈ ಊರಿನ ಹೋಟೆಲಿನ ಎದುರಿನ ಹಳೆ ಗುರುತು ಫಲಕಗಳನ್ನು ಗಮನಿಸಿದರೆ ಅದರಲ್ಲಿ ಸಾಮಾನ್ಯವಾಗಿ ಲಕ್ಷ್ಮೀವಿಲಾಸ, ಪುಂಚಮೆ, ಕುಂದಾಪುರ ತಾಲೂಕು, ದ.ಕ. (ಜಿಲ್ಲೆ) ಎಂದು ಬರೆದಿರುತ್ತಿತ್ತು. ಈಗ ಅಲ್ಲಿ ಕೇವಲ ಲಕ್ಷ್ಮೀವಿಲಾಸ, ಪುಂಚಮೆ-576212 ಸಿಗಬಹುದು. ಆ ಪಿನ್‌ಕೋಡ್ ಮೈಲುಗಲ್ಲಿನ ಸಂಖ್ಯೆಯ ಹಾಗೆ ಕಂಡುಬರುತ್ತದೆ. ಬಹುಶಃ ಇದರರ್ಥ, ನನ್ನ ಹಳ್ಳಿಯೇ ಬ್ರಹ್ಮಾಂಡ ಅಥವಾ ಕೆಲವು ಸಂಖ್ಯೆಗಳನ್ನು ಪಾರು ಮಾಡಿದರೆ ಬ್ರಹ್ಮಾಂಡದ ಕೇಂದ್ರಬಿಂದುವನ್ನು ನಾವು ಹಾಯಾಗಿ ಮುಟ್ಟಬಹುದೆನಿಸುತ್ತದೆ. ವೈರುಧ್ಯದ ಈ ಅಂಶವನ್ನು ಕೆಲವರು ಗರ್ವದಿಂದ ಎತ್ತಿಹಿಡಿಯಬಹುದು. ಆದರೆ ನಮ್ಮ ಪುಂಚಮೆಯನ್ನು ಸ್ವಲ್ಪ ಹತ್ತಿರದಿಂದ ನೋಡಿ. ಅಲ್ಲಿ ಕಾಣಿಸುವ ಘೋಷಣೆಗಳು, ಭಿತ್ತಿಫಲಕಗಳು, ಸಿಗುವ ಸಾಮಗ್ರಿಗಳು ಜಗತ್ತಿನ ಎಲ್ಲಾ ಮೂಲೆಗಳಿಂದ ಕಲೆಹಾಕಿದವು. ಅಲ್ಲಿಯ ಚಿತ್ರಪಟಗಳು, ಬಳಸಿದ ಭಾಷೆ ಮತ್ತು ಘೋಷಣೆಗಳು, ವಿತರಿಸಲ್ಪಡುವ ಸಾಮಗ್ರಿಗಳು ದೇಶದ ಅಥವಾ ಜಗತ್ತಿನ ಇತರ ಪಟ್ಟಣಗಳಲ್ಲೂ ನಮಗೆ ಕಾಣಸಿಗಬಹುದು. ಸ್ಥಳೀಯ ಉತ್ಪಾದನೆಗಳಾದ ತಿಂಡಿತಿನಿಸುಗಳನ್ನು, ಹಣ್ಣುಹಂಪಲುಗಳನ್ನು ಮತ್ತು ಇತರ ಸಾಮಗ್ರಿಗಳನ್ನು ಮಾರುವ ಅಂಗಡಿಗಳು ನಾಮಫಲಕವಿಲ್ಲದಾಗಿವೆ, ಬದಿಗೊತ್ತಲ್ಪಟ್ಟಿವೆ. ಸ್ಥಳೀಯತೆ ಅಲ್ಲೆಲ್ಲೂ ಎದ್ದು ಕಾಣುವುದಿಲ್ಲ. ಎದ್ದು ಕಾಣಬೇಕಾದರೆ ಸ್ಥಳೀಯತೆಯನ್ನೇ ಸಾಮಗ್ರಿಯಾಗಿ ಮಾರುವ ಊರಿನಲ್ಲಿ ಮಾತ್ರ ಕಾಣಸಿಗಬಹುದು. ಜಿಲ್ಲೆಯಲ್ಲಿ ಪರ್ಯಟನ ಉದ್ದಿಮೆ ಇನ್ನೂ ಅಷ್ಟೊಂದು ಬೆಳೆದಿಲ್ಲವಾದ್ದರಿಂದ ಇಂತಹ ಪ್ರಸಂಗಗಳು ಕಡಿಮೆ. ಇದರರ್ಥ ನಮ್ಮ ಸ್ಥಳೀಯತೆ ಹೆಚ್ಚು ಕಡಿಮೆ ಶೂನ್ಯವಾದದ್ದು. ಅದರಲ್ಲೇನೂ ಶಕ್ತಿಯಿಲ್ಲ. ಬರೀ ಡೊಂಬರಾಟ. ಈಗ ಜಿಲ್ಲೆಯಲ್ಲಿ ಎಷ್ಟೋ ಸರ್ತಿ ಸ್ಥಳೀಯತೆಯ ಸೋಗು ಆ ಸ್ಥಳೀಯತೆಯ ಮುಖ್ಯ ಲಕ್ಷಣವಾಗಿದೆ.

ಅಸ್ಥಿತ್ವಕ್ಕೆ ರೂಪು ಕೊಡುವ ಸ್ಥಳೀಯತೆ ಕೇವಲ ಬರೀ ಮೇಲ್ಮೈ ಕವಚವಾಗಿ ಜಿಲ್ಲೆಯ ಇತರ ಸಾಮಾಜಿಕ ಬದಲಾವಣೆಗಳಿಗೆ ಪೂರಕವಾಗಿ ಪರಿಚಿತ ಸಾಮಾಜಿಕ ನೆಲೆಯನ್ನು ಕುಗ್ಗಿಸುವಲ್ಲಿ ತನ್ನದೇ ಯೋಗದಾನವನ್ನು ನೀಡಿದೆ.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಜಾತಿ ಸಂಘಟನೆ ಮತ್ತು ಜಾತಿಕಟ್ಟಲೆಗಳ ವಿರುದ್ಧ ನೇರ ಸಂಘರ್ಷಗಳು ಅತಿ ಕಡಿಮೆ. ಕೇವಲ ಪರೋಕ್ಷವಾದ ಸಂಘರ್ಷಗಳು ಮಾತ್ರ ನಮಗೆ ಕೇಳಸಿಗುತ್ತದೆ. ವಸಾಹತುಶಾಯಿಯೋತ್ತರ ಬೆಳವಣಿಗೆಗಳನ್ನು ನಾವು ಸ್ಥೂಲವಾಗಿ ವೀಕ್ಷಿಸಿದರೆ ಹಲವಾರು ಕಾರಣಗಳಿಂದಾಗಿ, ವಿಶೇಷವಾಗಿ ಉದ್ಯೋಗವಕಾಶ ಮತ್ತು ಶಿಕ್ಷಣ

ಇವುಗಳಿಂದಾಗಿ, ಪರಿಶಿಷ್ಟ ಜಾತಿ ಮತ್ತು ವರ್ಗಗಳನ್ನು ಬಿಟ್ಟು ಇತರ ಜಾತಿಪಂಗಡಗಳಿಗೆ ಮತ್ತು ಧಾರ್ಮಿಕ ಸಮುದಾಯಗಳಿಗೆ ಸೇರಿದ ಆರ್ಥಿಕ ಮತ್ತು ಸಾಂಸ್ಕೃತಿಕ ಗಣ್ಯರು ಒಂದು ಒಡಂಬಡಿಕೆಯ ವಿನಿಮಯವನ್ನು ಕಟ್ಟಿಕೊಂಡದ್ದು ನಮಗೆ ಕಾಣಸಿಗುತ್ತದೆ. ಹಿಂದುಳಿದ ಜಾತಿ ಸಮುದಾಯಗಳಿಗೆ ಸೇರಿದ ಗಣ್ಯರ ಪ್ರಮಾಣ ಅವರ ಅಂಕೆ ಸಂಖ್ಯೆಗಳಿಗೆ ಹೋಲುತ್ತಿರಲಿಲ್ಲವೆಂಬುದಂತೂ ನಿಜ; ಆದರೆ ದೇಶದ ಇತರ ಹಲವಾರು ಭಾಗಗಳಲ್ಲಿ ಇದ್ದ ಹಾಗೆ ಇದು ನಗಣ್ಯವಾಗಿರಲಿಲ್ಲ. ಈ ವಿನಿಮಯ ಸಾಮಾಜಿಕ ಸಮಾನತೆಯ ಸಿದ್ಧಾಂತವನ್ನು ಎತ್ತಿಹಿಡಿಯಲಿಲ್ಲ ಮತ್ತು ಅದರ ವಿಸ್ತಾರ ಬಹಳ ಸೀಮಿತವಾಗಿತ್ತು. ಅದು ಸಾರ್ವಜನಿಕ ಜೀವನದ ಕೆಲವು ನೆಲೆಗಳನ್ನು ಮಾತ್ರ ಆವರಿಸಿದ್ದಿತ್ತು. ಎಷ್ಟೋ ಸರ್ತಿ ಈ ವಿನಿಮಯದ ಗಾತ್ರ ಮತ್ತು ಮಟ್ಟ ಗಣ್ಯಸ್ಥಿಕೆಯ ಸೂಚಕವಾಗಿತ್ತು.

ಜಾತಿವ್ಯವಸ್ಥೆಯ ಕೆಲವು ಗುಣಲಕ್ಷಣಗಳು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸೈದ್ಧಾಂತಿಕವಾಗಿ ಮತ್ತು ಬಹುಪಾಲು ವ್ಯಾವಹಾರಿಕವಾಗಿ ಶಿಥಿಲಗೊಂಡು ಹಲವಾರು ದಶಕಗಳು ಕಳೆದವು. ಜಾತಿ ಸಂಘಟನೆಗಳು ಇಲ್ಲಿ ಬೆಳೆದರೂ ಅವುಗಳ ಜನಬೆಂಬಲ ಮತ್ತು ಜಾತಿಯ ಕಟ್ಟುಕಟ್ಟಲೆಗಳನ್ನು ಆ ಪಂಗಡದ ಸದಸ್ಯರ ಮೇಲೆ ಹೇರುವ ಅದರ ಸಾಮರ್ಥ್ಯ ಬಹಳ ಸೀಮಿತವಾಗಿತ್ತು. ಜಾತಿ ನಿರ್ಧಾರಿತ ಶ್ರಮವಿಭಜನೆ, ಸಾರ್ವಜನಿಕ ನೆಲೆಯಲ್ಲಿ ಶುದ್ಧಾಶುದ್ಧತೆಯ ಪರಿಗಣನೆ ಇತ್ಯಾದಿಗಳ ಪ್ರಾಶಸ್ತ್ಯ ಪುನರ್‌ಸಂಘಟನೆಗೊಳ್ಳಲಿಲ್ಲ. ಜಾತಿಯು ಪ್ರಮುಖವಾಗಿ ಕ್ಷೇತ್ರ ಸೀಮಿತವಾಗಿ ಕೌಟುಂಬಿಕ ಆಚರಣೆ ಕಟ್ಟಲೆಗಳನ್ನು ನಿಯಂತ್ರಿಸಿ, ಚರ್ಮದ ಕೆಲಸ, ತೋಟಿ ಕೆಲಸ ಇತ್ಯಾದಿ ಪಾರಂಪರಿಕ ಅಸ್ಪೃಶ್ಯ ವೃತ್ತಿಗಳನ್ನು ಕಡೆಗಣಿಸಿ ಉಳಿದಿತ್ತು. ಆದರೆ ಬಹುಪಾಲು ಸಾಮಾಜಿಕ ಮತ್ತು ಆರ್ಥಿಕ ವ್ಯವಹಾರಗಳು ಜಾತಿ ನಿರ್ಬಂಧಿತವಾಗಿಲ್ಲದಿದ್ದರೂ ಜಾತಿ ಹಿನ್ನೆಲೆ ಇದ್ದವುಗಳು. ಸಾಮಾಜಿಕ ವ್ಯವಹಾರ, ವಿನಿಮಯ ಮತ್ತುಸಂಪನ್ಮೂಲಗಳ ಹಿಡಿತ ಪ್ರಮುಖವಾಗಿ ಈ ಹಿನ್ನೆಲೆಯನ್ನು ಆವರಿಸಿತ್ತು. ಜಿಲ್ಲೆಯಲ್ಲಿ ರಾಜಕೀಯ ಚಟುವಟಿಕೆಗಳ ವ್ಯಾಪ್ತಿ ಈ ಹಿನ್ನೆಲೆಯನ್ನು ಅಲ್ಲಗಳೆಯುವಂತಿರಲಿಲ್ಲ. ಆದರೆ ರಾಷ್ಟ್ರೀಯ ಜಾಗೃತಿಯಲ್ಲಿ ಹಿನ್ನೆಲೆಯ ಪಾತ್ರಧಾರಿಯಾಗಿದ್ದ ಜಾತಿ ವ್ಯವಸ್ಥೆ, ಪ್ರಜಾಸತ್ತೆಯಲ್ಲಿ ಪಕ್ಷ ಮತ್ತು ಚುನಾವಣಾರಂಗದ ರಾಜಕೀಯದ ಪ್ರಚೋದನೆಗಳನ್ನು ಒಳಗೊಂಡು ರಂಗಮಂಟಪವನ್ನೇರಿತು. 1960ರ ಉತ್ತರಾರ್ಧ ಮತ್ತು 1970ನೇ ದಶಕದ ನಂತರ ಜಿಲ್ಲೆಯ ಸಾಮಾಜಿಕ ಮತ್ತು ರಾಜಕೀಯ ನೆಲೆಯಲ್ಲಿ ಗಣ್ಯರ ಪಾತ್ರ ಕಮ್ಮಿಗೊಂಡು ಜನಸಾಮಾನ್ಯರ ಪ್ರಭಾವ ಬಲಗೊಂಡಾಗ ಜಾತಿ ವ್ಯವಸ್ಥೆಯ ಕೆಲವು ಮುಖ್ಯ ವೈರುದ್ಧ್ಯಗಳು ಮುಂಬಂದುವು. ಈ ವೇಳೆಗೆ ಶಿಕ್ಷಿತ ಮತ್ತು ಅಶಿಕ್ಷಿತ ಜನಸಾಮಾನ್ಯರು ಬಹಿರಂಗವಾಗಿ ಜಾತಿಯನ್ನು ಖಂಡಿಸಿದರಾದರೂ ಪರೋಕ್ಷವಾಗಿ ಮತ್ತು ಕ್ರಮಬದ್ಧವಾಗಿ ಜಾತಿ ನೆಲೆಯನ್ನು ಸಂಘಟಿಸಿ ಬಲಪಡಿಸಿದರು. ಅಂದರೆ ಜಾತಿ ವ್ಯವಸ್ಥೆ ಸೈದ್ಧಾಂತಿಕವಾಗಿ ತನ್ನ ಪ್ರಾಶಸ್ತ್ಯವನ್ನು ಕಳಕೊಂಡರೂ ವ್ಯವಹಾರಿಕವಾಗಿ ಅದು ಪ್ರಾಮುಖ್ಯತೆಯನ್ನು ಗಳಿಸಿತು. ಈ ವ್ಯಾವಹಾರಿಕ ಪ್ರಾಮುಖ್ಯತೆ ಕೇವಲ ರಾಜಕೀಯಕ್ಕೆ ಸೀಮಿತವಾಗಿರಲಿಲ್ಲ. ತಮ್ಮ ಅಚಲ ಸೀಮೆಯಿಂದ ಹೊರಬಂದ ಯುವಕ ಯುವತಿಯರಿಗೆ ಹೊರಗಿನ ಜಗತ್ತಿನಲ್ಲಿ ನೆಲೆಯೂರಲು ಅದೊಂದು ಪ್ರಮುಖ ಸಾಧನವಾಯ್ತು. ಶಕ್ತಿ ಸಂಪನ್ಮೂಲಗಳು ರಾಜ್ಯದಲ್ಲಿ ಕೇಂದ್ರೀಕೃತಗೊಂಡಂತೆ, ಅವನ್ನು ಪಡೆಯಬೇಕಾದರೆ ಜಾತಿ ಆಧಾರಿತ ಸಂಬಂಧಗಳು ಪ್ರಮುಖ ಸಾಧನಗಳಾದವು. ಸಾಮಾಜಿಕ ಸಮಾನತೆಯನ್ನು ಧ್ಯೇಯವಾಗಿಟ್ಟ ಮೀಸಲಾತಿ ಧೋರಣೆಯಿಂದ ಜಾತಿ ಪಂಗಡಗಳು ಪುನರ್‌ಸಂಘಟಿತವಾದವು ಮಾತ್ರವಲ್ಲ, ಅವು ಆಡಳಿತಾತ್ಮಕವಾಗಿ ಕಡ್ಡಾಯವಾದವು. ಸಾರ್ವಜನಿಕ ಸಂಪನ್ಮೂಲಗಳ ವಿತರಣೆಗೆ ಸರಕಾರ ಕೆಲವು ಜಾತಿ ಪಂಗಡಗಳನ್ನು ನಿರ್ಮಾಣ ಮಾಡಿದರೆ ಅದರಿಂದ ವಂಚಿತರಾದವರು, ಅದರಲ್ಲೂ, ಸಾಮಾಜಿಕವಾಗಿ ಪ್ರಮುಖವಾದ ಜಾತಿ ಸಮುದಾಯಗಳು, ತಮ್ಮದೇ ಜಾತಿ ಸಂಘಟನೆಗಳನ್ನು ಕಟ್ಟಿದರು ಅಥವಾ ಅವನ್ನು ಬಲಪಡಿಸಿದರು. ಜಿಲ್ಲೆಯಲ್ಲಿ 1980ರಲ್ಲಿ ಈ ಎಲ್ಲಾ ವೈರುದ್ಧ್ಯಗಳು ಮೇಲೇರಿ ಬಂದು ಸಾಮಾಜಿಕ ಮಾನಸಪಟಲದಲ್ಲಿ ಗಂಭೀರವಾದ ಸೈದ್ಧಾಂತಿಕ ಪರಿವರ್ತನೆಗಳು ಮೂಡಿಬರುವುದು ನಮಗೆ ಕಂಡುಬರುತ್ತದೆ.

ಸ್ಥಾನಸೂಚಕಗಳಾದ ತೋಡು, ಕೆರೆ, ನದಿ, ಬೆಟ್ಟ, ಗುಡ್ಡ, ಗಿರಿ, ಗುಂಡಿ. ಬಯಲು, ಮಜಲು, ಕುಮೇರಿ; ಬೌಗೋಲಿಕವಾಗಿ ಮಾತ್ರವಲ್ಲ ಜೀವನಸಂಘಟನೆಯ ದಿಕ್ಸೂಚಿಗಳಾದ ತೆಂಕು-ಬಡಗು, ಮೂಡು-ಪಡು;ಸಮಯಸೂಚಕಗಳಾದ ಕಾಲಭೇದಗಳ ಮೂಲಕ ದೈನಂದಿನ ಚಟುವಟಿಕೆಗಳ ಸಂಘಟನೆ ಇವು ಜಿಲ್ಲೆಯ ಜನಜೀವನದಲ್ಲಿ ಹಾಸುಹೊಕ್ಕಾಗಿವೆ. ಜಿಲ್ಲೆಯ ಎಷ್ಟೋ ಸ್ಥಳನಾಮಗಳು ಈ ಸ್ಥಾನ ಮತ್ತು ಸಮಯದ ಚೈತನ್ಯವನ್ನು ಅಳವಡಿಸಿಕೊಂಡಿವೆ. ಆದರೆ ಈ ಸ್ಥಾನ ಮತ್ತು ವೇಳೆಯ ಪರಿಕಲ್ಪನೆಗಳು ಜಿಲ್ಲೆಯಲ್ಲಿ ತೀವ್ರಗತಿಯಲ್ಲಿ ಮಾರ್ಪಾಡುಗೊಳ್ಳುತ್ತಲಿವೆ. ಮತ್ತು ಅವುಗಳ ಅಡಿಪಾಯವಾಗಿರುವ ಸಿದ್ಧಾಂತಗಳು ಮತ್ತು ತತ್ವಗಳು ಮೂಲೆ ಪಾಲಾಗಿವೆ. ಈ ಬಗೆಗಿನ ಪ್ರಾಯೋಗಿಕಸೂಚಿಗಳು ಹಲವಾರು. ಜಿಲ್ಲೆಯಲ್ಲಿ ಪ್ರಚಲಿತವಾದ ಒಂದು ಬೌಗೋಳಿಕ ವಿಭಜನೆಯೆಂದರೆ ಗುಡ್ಡೆ/ಪದವು ಮತ್ತು ಬಯಲು. ಗುಡ್ಡೆ ಪದವು ಎತ್ತರದ ಪ್ರದೇಶ; ಬಯಲು ಸಾಮಾನ್ಯವಾಗಿ ತಗ್ಗು, ಸಮತಟ್ಟು ಕ್ಷೇತ್ರ; ಈ ಪದಗಳು ಕೇವಲ ಬೌಗೋಲಿಕ ಸೂಚಕಗಳಾಗಿರಲಿಲ್ಲ. ಜನಜೀವನದ ಹಲವಾರು ಮೌಲಿಕ ಆಯಾಮಗಳನ್ನು ತಮ್ಮೊಳಗೆ ಅಳವಡಿಸಿಕೊಂಡಿದ್ದವು. ಉತ್ಪತ್ತಿ, ಸಂಸ್ಕೃತಿ, ಸಾಮಾಜಿಕ ಸಂಘಟನೆ, ಶಿಸ್ತು, ಕ್ರಮ ಇವುಗಳ ವಾಸ್ತವ್ಯ ಬಯಲಿನಲ್ಲಿದ್ದರೆ, ಪುಂಡಾಟಿಕೆ, ಪೋಲಿತನ, ಭಯ, ಅಭದ್ರತೆ, ಸ್ವೇಚ್ಛೆ, ಭೂತ-ಪ್ರೇತಗಳು, ಅಮಾನವೀಯ ಶಕ್ತಿಗಳ ಪ್ರದರ್ಶನ ಗುಡ್ಡೆ ಪದವುಗಳಲ್ಲಿತ್ತು. ಆದರೆ ಕಳೆದ 2–3 ದಶಕಗಳಲ್ಲಿ ಜಿಲ್ಲೆಯಲ್ಲಿ ಆದ ಪರಿವರ್ತನೆಗಳನ್ನು ನಾವು ವೀಕ್ಷಿಸಿದರೆ ಪದವು ಗುಡ್ಡೆಗಳು ಆದರಣೀಯವೂ, ಸಂಸ್ಕೃತಿ ಸಭ್ಯತೆಯ ಪ್ರತೀಕವೂ ಆಗಿಬಿಟ್ಟಿವೆ. ಸಾಪೇಕ್ಷವಾಗಿ ಬಯಲು ಪ್ರದೇಶದ ಸ್ಥಾನಮಾನ ಕುಗ್ಗಿದೆ. ಈಗ ಗುಡ್ಡೆ ಪದವು ಪ್ರದೇಶಗಳಿಗೆ ಬೇಡಿಕೆ ಅಧಿಕ ಮತ್ತು ಕ್ರಯ ಜಾಸ್ತಿ. ಉತ್ಪಾದನೆ ಅಲ್ಲಿ ಜರಗುವುದಿಲ್ಲವಾದರೂ ಅದು ಪರಿಸರವನ್ನು ದೇಶ ವಿದೇಶಗಳಿಗೆ ನೇರವಾಗಿ ಜೋಡಿಸುತ್ತದೆ. ಈಗ ಸೀಮೆಗಳ ಮೌಲ್ಯಾಧಾರಗಳು ಮತ್ತು ಅವುಗಳ ಮಾಪಕದಂಡಗಳು ಅವುಗಳ ಹಿಂಬದಿಯ ಬಯಲು ಪ್ರದೇಶಗಳಿಂದ ಹೊರಚಿಮ್ಮುವುದಿಲ್ಲ. ಬದಲು ಒಂದು ನಾಮಕಾಲರಹಿತ ನಾಗರೀಕತೆಯ ಏರುಪೇರುಗಳೊಂದಿಗೆ ಸೇರಿಕೊಂಡಿವೆ.

ಕಾಲಸ್ಥಾನಗಳ ಪ್ರಜ್ಞೆ ಮತ್ತು ಜನಜೀವನದಲ್ಲಿ ಅದರ ಅಳವಡಿಕೆಯಲ್ಲಿ ಆದ ಬದಲಾವಣೆಗೆ ಇದೊಂದು ನಿದರ್ಶನವಷ್ಟೇ. ನಾವು ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಪರಂಪರಾಗತ ಕಾಲಸ್ಥಾನಗಳ ಸಂಘಟವನೆಯಲ್ಲಿ ಸೈದ್ಧಾಂತಿಕ ನೆಲೆಯಿತ್ತು ಮತ್ತು ಅದು ಉತ್ಪತ್ತಿ, ಪರಿಸರ ಮತ್ತು ಸಾಮಾಜಿಕ ಸಂಘಟನೆಯೊಂದಿಗೆ ಕೂಡಿಕೊಂಡಿತ್ತು. ಇತ್ತೀಚೆಗೆ ಅದರಲ್ಲಿ ಕಂಡು ಬಂದ ಬದಲಾವಣೆಗಳಿಗೆ ಸೈದ್ಧಾಂತಿಕ ನೆಲೆಯಿಲ್ಲವೆಂದರ್ಥವಲ್ಲ. ಆದರೆ ಆ ನೆಲೆ ಎಲ್ಲೋ ಇದೆ. ಅದನ್ನು ರೂಪಿಸಿ ತಮ್ಮ ಹಿಡಿತದಲ್ಲಿಡುವವರು ಯಾರೋ ಇತರರು, ಪರಕೀಯರು. ಉತ್ಪತ್ತಿಯ ಅವಕಾಶಗಳು ಮತ್ತು ಪರಿಶ್ರಮದ ಬೇಡಿಕೆಗಳು ಅಭದ್ರವಾಗಿವೆ. ಅದಕ್ಕಾಗಿ ಪ್ರಾಶಸ್ತ್ಯ ಮತ್ತು ಗೌರವ ಬಯಲು ಪ್ರದೇಶದಿಂದ ಪದವು/ಗುಡ್ಡೆಗಳಿಗೆ ವರ್ಗಾಯಿಸಲ್ಪಟ್ಟಿದ್ದರೂ ಅದರಿಂದ ಭಯವಿಲ್ಲದ ಸ್ಥಿತಿ ಮತ್ತು ಭದ್ರತೆ ಬಲಗೊಳ್ಳದೆ ತದ್ವಿರುದ್ಧ ಧೋರಣೆಗಳು ಬೆಳೆದಿವೆ.

ಕಳೆದ 2–3 ದಶಕಗಳಲ್ಲಿ ಜಿಲ್ಲೆಯ ಎತ್ತರ ಪ್ರದೇಶಗಳ ಮತ್ತು ಮರಳು ಸೀಮೆಯ ಪರಿವರ್ತನೆ ಈ ಜಿಲ್ಲೆಯ ಇತರ ಬದಲಾವಣೆಗಳಿಗೆ ಪೂರಕವಾಗಿವೆ. ಮಾತ್ರವಲ್ಲ, ಆ ಪರಿವರ್ತನೆಗಳಿಗೆ ಗುಣಾತ್ಮಕ ಯೋಗದಾನವನ್ನೂ ನೀಡಿದೆ.

ಒಟ್ಟಾರೆ, ಕಳೆದ ಒಂದೆರಡು ದಶಕಗಳಲ್ಲಿ ವೃತ್ತಿ ಮತ್ತು ಕಸುಬುರಂಗಗಳಲ್ಲಿ ಗುಣಾತ್ಮಕ ಪರಿವರ್ತನೆ ಆಗಿದ್ದರೂ ಮತ್ತು ಈ ಪರಿವರ್ತನೆಗಳಲ್ಲಿ ಗ್ರಾಮ್ಯ ಪ್ರದೇಶಗಳೂ ಪಾಲುದಾರರಾಗಿದ್ದರೂ ಈ ಬದಲಾವಣೆಯೊಂದಿಗೇ ಸಾಮಾಜಿಕ ಸಾಮರಸ್ಯವನ್ನು ಪುನಃ ಸಂಘಟಿಸುವ ಶಕ್ತಿ ಸಂಘಟನೆಗಳು ಮಾತ್ರ ಬೆಳೆದು ಬಂದದ್ದು ಕಡಿಮೆಯೇ. ಪರಂಪರಾಗತ ಸಾಮಾಜಿಕ ಪ್ರಜ್ಞೆಯೂ ತನ್ನನ್ನು ಪುನಃ ಸಂಘಟಿಸುವಾಗ ಪರಕೀಯತೆ, ಏಕರೂಪತೆ ಮತ್ತು ವಿದ್ವಿಗ್ನ

ಪ್ರಶ್ನೆಯನ್ನು ಮುಂದೂಡಿದೆ.ಇದರಿಂದಾಗಿ ಒಂದೆಡೆಯಿಂದ ಸಾಮಾಜಿಕ ವಿಘಟನೆ ಮತ್ತೊಂದೆಡೆಯಿಂದ ಮೇಲಿನಿಂದ ಹೇರಲ್ಪಟ್ಟ ಸಾಮಾಜಿಕ ಒಕ್ಕೂಟದ ವಿಕೃತಿರೂಪಗಳು ಚಾಲ್ತಿಗೆ ಬರುವುದು ತೀರಾ ಸ್ವಾಭಾವಿಕ.

* * * * *

ನಗರಗಳು ಆಧುನಿಕ ಸಂಸ್ಕೃತಿ ಮತ್ತು ಸಭ್ಯತೆಯ ನೆಲೆವೀಡು. ಇದರಿಂದಾಗಿ ಐತಿಹಾಸಿಕ ಪಟ್ಟಣಗಳು ಮತ್ತು ಪರಂಪರಾಗತ ಧಾರ್ಮಿಕ ಕ್ಷೇತ್ರಗಳು ಕೂಡಾ ತಮ್ಮ ಬಾಳ್ವಿಕೆಗಾಗಿ ಮತ್ತು ತಮ್ಮ ಯುಕ್ತಾಯುಕ್ತತೆಯ ಪುರಾವೆಯಾಗಿ ಆಧುನೀಕರಣವನ್ನು ಒಳಪಡಿಸಿ, ಅದನ್ನು ಪ್ರದರ್ಶಿಸಿ ಅಥವಾ ಸ್ಥಳೀಯವಾಗಿ ಆದರೂ ಆಂಶಿಕ ರೂಪದಲ್ಲಿ ಅದನ್ನು ಬೆಳೆಸುವ ಅನಿವಾರ್ಯತೆಯನ್ನು ಹೊಂದಿವೆ. ಅದರ ಹೊರತು ತಾವು ನಿಷ್ಕ್ರೀಯರಾಗಬಹುದು. ಅಥವಾ ಒಂದು ಪ್ರಬಲ ಜನವರ್ಗಕ್ಕೆ ಅನಾಕರ್ಷಣೀಯವಾಗಬಹುದೆಂಬ ಭಯ ಅದರ ಸಂರಕ್ಷಕರಿಗೆ ಯಾವಾಗಲೂ ಕಾಡುತ್ತಾ ಇರುತ್ತದೆ. ಜಗತ್ತಿನಾದ್ಯಂತ ಪಟ್ಟಣ ಪ್ರದೇಶಗಳು ಆಧುನಿಕ ರಾಜಕೀಯದ ಕೇಂದ್ರಬಿಂದುಗಳು. ಭಾರತದಲ್ಲಿ ಗಾಂಧೀಜಿ, ಚೀನಾದಲ್ಲಿ ಮಾವೋ-ತ್ಸೆ-ತುಂಗ್ ಇವರಂತಹ ಇತಿಹಾಸ ಪುರುಷರು ರಾಜಕೀಯದ ತಳಹದಿಯನ್ನು ನಗರಗಳಿಂದ ಬೇರ್ಪಡಿಸಿ ಹಳ್ಳಿಗಳೊಂದಿಗೆ ಸಮಜಾಯಿಸಲು ದಿಟ್ಟ ಪ್ರಯಾಸ ಕೈಗೊಂಡರೂ ಅದರಲ್ಲಿ ಅವರು ಪೂರ್ತಿಯಾಗಿ ಸಫಲರಾಗಲಿಲ್ಲ. ಆಧುನಿಕ ಆರ್ಥಿಕತೆಯ ಕೇಂದ್ರಸ್ಥಾನ ಮತ್ತು ಅದರ ಸಂಯೋಜನೆಯ ಕೂಡುವಿಕೆ ನಗರಗಳಾಗಿವೆ. ಈ ಸಂಯೋಗದಲ್ಲಿ ಪ್ರಗತಿಶೀಲ ಬಂಡವಾಳ ವ್ಯವಸ್ಥೆ ಇತ್ತೀಚೆಗಿನ ದಿನಗಳಲ್ಲಿ ಅನೇಕ ಬದಲಾವಣೆಗಳನ್ನು ರೂಪಿಸಿದರೂ, ಸಾಮಾನ್ಯ ತಿಳುವಳಿಕೆಯಲ್ಲಿ ಆಧುನಿಕ ನಗರಗಳು ಕೈಗಾರೀಕರಣದ ಪರ್ಯಾಯವಾಚಿಯಾಗಿ ಇನ್ನೂ ಉಳಿದಿವೆ. ಆಧುನಿಕ ಆರ್ಥಿಕತೆಯ ಒಂದು ಪ್ರಮುಖ ಬೆಳವಣಿಗೆಯಾದ ಸೇವಾವೃತ್ತಿ ಇನ್ನೂ ನಗರಾಭಿಮುಖವಾಗಿಯೇ ಇದೆ. ನಗರಗಳು ಕೇವಲ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಕೇಂದ್ರಬಿಂದುಗಳು ಮಾತ್ರವಲ್ಲ, ಅವು ಒಂದು ಜೀವನದೃಷ್ಟಿ ಮತ್ತು ಸಾಮಾಜಿಕ ಮೌಲ್ಯಗಳೂ ಆಗಿವೆ. ಈ ಎಲ್ಲಾ ಕಾರಣಗಳಿಂದಾಗಿ ಪಟ್ಟಣಗಳು ಹಳ್ಳಿಗಳ ಮೇಲೆ ತಮ್ಮ ಅಧಿಪತ್ಯವನ್ನು ನಿರಂತರವಾಗಿ ಉಳಿಸಿಕೊಂಡು ಬಂದಿವೆ. ಪಟ್ಟಣಗಳು ಬೆಳೆದಾಗಲಿಂದ ಅವು ಸಾಮಾನ್ಯ ಜನರನ್ನು ಅದರಲ್ಲೂ ಹಳ್ಳಿಯ ನಿವಾಸಿಗಳನ್ನು ತಿಳಿಗೇಡಿ ಬೊಮ್ಮರೆಂದು ಗುರುತಿಸಿವೆ. ಔದ್ಯೋಗಿಕರಣದ ಬೆಳವಣಿಗೆ ಈ ಭಾವನೆಗಳನ್ನು ಕಿತ್ತೊಗೆಯದೆ ಅವನ್ನು ಪುನರ್‌ಸಂಘಟಿಸಿ ಅವುಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಒಬ್ಬ ಕನಿಷ್ಠ ನಗರವಾಸಿಯೂ ಸಾಮಾನ್ಯ ಹಳ್ಳಿಗನಿಗಿಂತ ತನ್ನನ್ನು ಸುಸಂಸ್ಕೃತನೆಂದು ತಿಳಿಯುತ್ತಾನೆ. ಈ ಹಿನ್ನೆಲೆಯಲ್ಲಿ ನಾವು ದಕ್ಷಿಣಕನ್ನಡ ಜಿಲ್ಲೆಯ ನಾಗರೀಕ ಬೆಳವಣಿಗೆಯನ್ನು ಪರಿಶೀಲಿಸಬಹುದಾಗಿದೆ.

ದಕ್ಷಿಣಕನ್ನಡ ಜಿಲ್ಲೆಯ ಇತ್ತೀಚೆಗಿನ ನಗರ ಮತ್ತು ಪಟ್ಟಣಗಳ ಬೆಳವಣಿಗೆಗಳನ್ನು ನಾವು ಕರ್ನಾಟಕದೊಡನೆ ಹೋಲಿಸಿದರೆ ಕೆಲವು ಸಾದೃಶ್ಯ ವೈದೃಶ್ಯಗಳು ಸ್ಪಷ್ಟವಾಗುತ್ತವೆ.1981ರಲ್ಲಿ ಕರ್ನಾಟಕದಲ್ಲಿ 28.89% ಜನರು ನಗರವಾಸಿಗಳಾಗಿದ್ದರೆ 1991ರಲ್ಲಿ ಇದು 30.9% ಆಗಿದೆ. ಇಡೀ ರಾಷ್ಟ್ರಮಟ್ಟದಲ್ಲಿ ಕಂಡುಬರುವಂತೆಯೇ ಕರ್ನಾಟಕದಲ್ಲೂ ಜನಸಂಖ್ಯೆಯು ಪಟ್ಟಣಗಳೆಡೆ ಓಲುತ್ತಾ ಇದೆ. ಕರ್ನಾಟಕದಲ್ಲಿ ನಗರಗಳ ಜನಸಂಖ್ಯೆ ಕಳೆದ ದಶಕದಲ್ಲಿ 29.09% ಏರಿದರೆ ಗ್ರಾಮ್ಯಪ್ರದೇಶದಲ್ಲಿ ಅದು ಕೇವಲ 17.23% ಮಾತ್ರ ಏರಿದೆ. ಈ ಬೆಳವಣಿಗೆಯನ್ನು ದಕ್ಷಿಣಕನ್ನಡ ಜಿಲ್ಲೆಗೆ ಅಳವಡಿಸಿದರೆ 1981ರಲ್ಲಿ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ 24.47% ಇದ್ದ ನಗರವಾಸಿಗಳ ಪ್ರಮಾಣ 1991ರಲ್ಲಿ 28.31%ಕ್ಕೆ ಏರಿದೆ. ಇಡೀ ಕರ್ನಾಟಕಕ್ಕೆ ಹೋಲಿಸಿದರೆ, ನಗರವಾಸಿಗಳ ಪ್ರಮಾಣ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕಡಿಮೆ ಇದ್ದರೂ ನಗರವಾಸಿಗಳ ಬೆಳವಣಿಗೆಯ ದಿಶೆಯನ್ನು ಸ್ಪಷ್ಟೀಕರಿಸಲು ಜಿಲ್ಲೆಯ ಜನಸಂಖ್ಯೆಯಲ್ಲಿ ಆದ ಬದಲಾವಣೆಗಳನ್ನು ನೋಡುವುದು ಅವಶ್ಯಕವಾಗಿದೆ. 1981-1991ನೇ ದಶಕದಲ್ಲಿ ಇಡೀ ಕರ್ನಾಟಕದಲ್ಲಿಯೇ ದಕ್ಷಿಣಕನ್ನಡ ಜಿಲ್ಲೆ ಜನಸಂಖ್ಯೆಯಲ್ಲಿ ಅತ್ಯಲ್ಪ ವೃದ್ಧಿಕೊಂಡ ಜಿಲ್ಲೆಗಳಲ್ಲೊಂದಾಗಿದೆ. ಈ

ದಶಕದಲ್ಲಿ ಕರ್ನಾಟಕದ ಜನಸಂಖ್ಯೆಯ ವೃದ್ಧಿ 20.66% ಆದರೆ ಜಿಲ್ಲೆಯಲ್ಲಿ ಅದು ಕೇವಲ 13.27% ಮಾತ್ರ. ಈ ಅಂತರದಲ್ಲಿ ಜಿಲ್ಲೆಯ ನಗರಗಳ ಜನಸಂಖ್ಯೆಯ ಬೆಳವಣಿಗೆ 31.03% ಇದ್ದರೆ ಹಳ್ಳಿಗಳಲ್ಲಿ ಇದು ಕೇವಲ 7.50% ಇದೆ. ಕೇವಲ ಜನಸಂಖ್ಯೆಯ ಬೆಳವಣಿಗೆಯ ಪ್ರಮಾಣವನ್ನು ನಾವು ಹೋಲಿಸಿದರೆ ಜಿಲ್ಲೆಯ ನಗರವಾಸಿಗಳ ಬೆಳವಣಿಗೆ ಹಳ್ಳಿಗಳಿಗಿಂತ ನಾಲ್ಕು ಪಾಲು ಜಾಸ್ತಿ ಇದೆ. ಸದ್ಯಕ್ಕೆ ಈ ಬೆಳವಣಿಗೆ ಇನ್ನೂ ಬಲಗೊಳ್ಳುತ್ತದೆಯೇ ಹೊರತು ಕ್ಷೀಣಿಸುವುದಿಲ್ಲ.

ಭೌಗೋಲಿಕವಾಗಿ ಜಿಲ್ಲೆಯ ನಗರೀಕರಣದ ಬೆಳವಣಿಗೆಯ ಮೂರು ಮುಖ್ಯ ಲಕ್ಷಣಗಳು ನಮಗೆ ಕಾಣಸಿಗುತ್ತವೆ.

ಮೊದಲನೆಯದಾಗಿ, ಇಲ್ಲಿ ನಗರೀಕರಣದ ಒಂದೇ ಸೀಮೆಯಲ್ಲಿ ಕೇಂದ್ರೀಕೃತವಾಗಿಲ್ಲ. ಹಲವಾರು ಮಧ್ಯಮ ಮತ್ತು ಸಣ್ಣ ಪಟ್ಟಣಗಳು ಜಿಲ್ಲೆಯಾದ್ಯಂತ ಪ್ರಮುಖವಾಗಿ ಹೆದ್ದಾರಿಗಳ ಅಕ್ಕಪಕ್ಕಗಳಲ್ಲಿ ಬೆಳೆದಿವೆ. ಎರಡನೇಯದಾಗಿ, ಜಿಲ್ಲೆಯ ಎರಡು ನಗರ ಪ್ರದೇಶಗಳಾದ ಮಂಗಳೂರು ಮತ್ತು ಉಡುಪಿ -ಕಳೆದ ದಶಕದಲ್ಲಿ ತೀವ್ರ ಬೆಳವಣಿಗೆಯನ್ನು ಕಂಡಿವೆ. ಈ ಎರಡನೇ ಬೆಳವಣಿಗೆ ಮೊದಲನೆಯ ಬೆಳವಣಿಗೆಯನ್ನು ಕುಂಠಿತಗೊಳಿಸುವಷ್ಟು ಇನ್ನೂ ಪ್ರಭಾವಶಾಲಿಯಾಗಿಲ್ಲ. ಮೂರನೇಯದಾಗಿ, ನಗರಗಳ ಸಾಮಾಜಿಕ ನೆಲೆ ಕೇವಲ ತಮ್ಮ ಭೌಗೋಲಿಕ ವರ್ತುಲಕ್ಕೆ ಸೀಮಿತವಾಗಿಲ್ಲ. ಹಳ್ಳಿಯ ಒಂದು ಗಣನೀಯ ಪಾಲು ಜನರು ಮತ್ತು ದೇಶ-ವಿದೇಶಗಳಲ್ಲಿ ನೆಲೆಸಿರುವ ಈ ಜಿಲ್ಲೆಯ ಹುಟ್ಟೂರಿನವರು ಇಲ್ಲಿಯ ನಗರಗಳೊಂದಿಗೆ ಆರ್ಥಿಕವಾಗಿಯೂ, ಸಾಂಸ್ಕೃತಿಕವಾಗಿಯೂ ಸ್ಪಂದಿಸಿ ಅವುಗಳ ನಡಳಿಕೆಯಲ್ಲಿ ಮುಖ್ಯ ಪಾಲು ವಹಿಸುತ್ತಾ ಬಂದಿದ್ದಾರೆ.ಮಂಗಳೂರು ಮತ್ತು ಉಡುಪಿ ನಗರಪ್ರದೇಶಗಳನ್ನು ಹೊರತುಪಡಿಸಿದರೆ, ಜಿಲ್ಲೆಯ ತಾಲೂಕು ಕೇಂದ್ರಗಳು ಮುಖ್ಯವಾದ ಪಟ್ಟಣಗಳಾಗಿವೆ. ಅವುಗಳಲ್ಲಿ ಬೆಳ್ತಂಗಡಿ ಮತ್ತು ಸುಳ್ಯಗಳನ್ನು ಪಟ್ಟಣ ಪ್ರದೇಶಗಳೆಂದು ಗುರುತಿಸಲಾಗುವುದಿಲ್ಲ. ಉಳಿದವುಗಳ ಜನಸಂಖ್ಯೆ ಸುಮಾರು 25,000ದಿಂದ30,000ದ ವರೆಗಿದೆ. ಉಳಿದ ಮುಖ್ಯ ಪಟ್ಟಣಗಳೆಂದರೆ ಬೈಂದೂರು, ಗಂಗೊಳ್ಳಿ, ಮೂಲ್ಕಿ ಮತ್ತು ಸಾಲಿಗ್ರಾಮ. ಮಂಗಳೂರು ತಾಲೂಕಿನಲ್ಲಿ 65% ಜನರು ನಗರವಾಸಿಗಳಾದರೆ, ಉಡುಪಿಯಲ್ಲಿ ಅವರ ಪ್ರಮಾಣ 30Ž%.ಉಳಿದ ತಾಲೂಕುಗಳಲ್ಲಿ ಇದು 20%ಕ್ಕಿಂತ ಕಡಿಮೆ.

ಕಳೆದ ದಶಕದಲ್ಲಿ ಈ ಪಟ್ಟಣಗಳ ಚಟುವಟಿಕೆಗಳು ಕೇವಲ ವ್ಯಾಪಾರ ಮತ್ತು ವಾಣಿಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲ. ಇಲ್ಲಿ ಹಲವಾರು ವಿವಿಧ ಮಟ್ಟದ ಕೈಗಾರಿಕಾ ಘಟಕಗಳು ಮುಂಬಂದಿವೆ. ಇವು ತಮ್ಮ ಅಕ್ಕಪಕ್ಕದ ಹಳ್ಳಿಗಳ ಅವಶ್ಯಕತೆಗಳನ್ನು ಈಡೇರಿಸುವುದು ಮಾತ್ರವಲ್ಲ, ಅವುಗಳ ಆರ್ಥಿಕತೆಯನ್ನು ಸಂಯೋಜಿಸುವ ಸಾಮರ್ಥ್ಯವುಳ್ಳವುಗಳಾಗಿವೆ. ತಮ್ಮ ನೆರೆಯ ಹಳ್ಳಿಗಳಲ್ಲಿ ಕೃಷಿಯೇತರ ಮತ್ತು ಗೃಹ ಕಸುಬುಯೇತರ ಉದ್ಯೋಗಗಳಲ್ಲಿ ತೊಡಗಿದವರ ಜೀವನಾಕಾಂಕ್ಷೆಗಳು ಈ ಪಟ್ಟಣಗಳ ಉತ್ಪ್ರೇಕ್ಷೆಗಳೊಂದಿಗೆ ಒಡಗೂಡಿವೆ. ಹಳ್ಳಿಯ ಯುವಪೀಳಿಗೆಯ ಆದರ್ಶಗಳನ್ನು ಮತ್ತು ಜೀವನಶೈಲಿಯನ್ನು ರೂಪಿಸುವಲ್ಲಿ ಇವು ಪ್ರಮುಖ ಪಾತ್ರ ವಹಿಸುತ್ತವೆ. ಈ ಪಟ್ಟಣಗಳಲ್ಲಿ ಹಲವಾರು ಸಂಘ ಸಂಸ್ಥೆಗಳು, ಶಾಲಾ ಕಾಲೇಜುಗಳು, ಸಾಂಸ್ಕೃತಿಕ ಸಂಘಟನೆಗಳು ತಳವೂರಿ ತಮ್ಮ ಅಕ್ಕಪಕ್ಕದ ಪ್ರದೇಶಗಳ ಮಾನವೀಯ ಅವಶ್ಯಕತೆಗಳನ್ನು, ಮಾತ್ರವಲ್ಲ ಅವುಗಳ ಬೆಳವಣಿಗೆಯನ್ನು ಮತ್ತು ಸಂಯೋಜನೆಯನ್ನು ನೆರವೇರಿಸುತ್ತಾ ಇವೆ.

ಮೇಲ್ಮೈ ನೋಟಕ್ಕೆ ಈ ಪಟ್ಟಣಗಳು ಪಾರಂಪರಿಕ ಸಮುದಾಯರೂಢ ಕಾಳಜಿ ಮತ್ತು ಸಂವೇದನೆಗಳನ್ನು ಅಳವಡಿಸಿ ಆಧುನಿಕ ಆರ್ಥಿಕತೆ ಮತ್ತು ಜೀವನಶೈಲಿಯನ್ನು ಅದರೊಡನೆ ಮೇಳೈಸಿ ಒಂದು ಸುಸಂಘಟಿತ ಸಂಯಮಬದ್ಧ ಜೀವನವನ್ನು ರೂಪಿಸುವ ವೇದಿಕೆಗಳೆಂದು ಕಾಣಿಸಬಹುದು. ಆದರೆ ಸ್ವಲ್ಪ ಸೂಕ್ಷ್ಮವಾಗಿ

ಪರಿಶೀಲಿಸಿದರೆ ಇಂತಹ ನಿರ್ಣಯವು ವಾಸ್ತವಿಕತೆಯಿಂದ ದೂರವಿದೆ. ಹಲವಾರು ವೈರುಧ್ಯಗಳು ಈ ಪಟ್ಟಣಗಳಲ್ಲಿ ಎದ್ದು ಕಾಣುತ್ತವೆ. ಅವು ಒಂದು ಕಡೆಯಿಂದ ಪರಂಪರೆ ಮತ್ತು ಸ್ಥಳೀಯತೆಯನ್ನು ಸದೆಬಡಿದು ತಮ್ಮನ್ನು ತಾವೇ ಅದರ ಜೀವನಾಡಿಗಳೆಂದು ಘೋಷಿಸುತ್ತಾ ಇವೆ. ಇನ್ನೊಂದೆಡೆ ತಮ್ಮ ಸ್ಥೂಲ, ನಿರಾಳವಾದ ಆಧುನಿಕತೆಯನ್ನು ಮಾದರಿಯೆಂಬಂತೆ ಸಾರುತ್ತಾ ಇವೆ. ಇದರಿಂದಾಗಿ ಈ ಪಟ್ಟಣಗಳು ಅಲ್ಲೂ ಇಲ್ಲ, ಇಲ್ಲೂ ಇಲ್ಲಎಂಬಂತಿವೆ. ಇದರ ಮೇಲ್ಮೈ ನೋಟವನ್ನು ಸತ್ಯ ಎಂದು ಎಣಿಸುವವರಿಗೆ ಇದೊಂದು ಭದ್ರತೆಯನ್ನು ನೀಡಬಹುದು. ಆದರೆ ಇನ್ನೊಂದೆಡೆ ನಿಸ್ಸಾರವಾದ ತಮ್ಮನ್ನು ತಾವೇ ಮಾಪಕದಂಡವೆಂದು ಸಾರುವ ಈ ಪಟ್ಟಣ ಪ್ರದೇಶಗಳು ಜೀವನಕ್ಕೆ ಒಂದು ದಿಶೆ ಮತ್ತು ಆಳವನ್ನು ಕೊಡಲು ಅಸಮರ್ಥವಾಗಿವೆ. ಅಲ್ಲಿಯ ಆರ್ಥಿಕತೆ, ಮೇಲೇರಿ ಬರುವ ಕಟ್ಟಡ ಕಛೇರಿಗಳು, ಅಂಗಡಿಗಳಲ್ಲಿ ಸಿಗುವ ಸಾಮಾನುಗಳು, ಬುದ್ಧಿಜೀವಿಗಳ ವಿಚಾರ ಚಿಂತನೆಗಳು, ಯುವಕ ಯುವತಿಯರ ಉಡುಪು ಶೃಂಗಾರಗಳು, ನಡೆನುಡಿಗಳು, ಇತ್ತೀಚೆಗಿನ ಮನೆ ವಸತಿಗಳನ್ನು ರೂಪಿಸುವ ಕ್ರಮ ವಿಧಾನಗಳು ಅನುಕರಣೀಯವಾಗಿವೆ. ಅವು ದೊಡ್ಡ ನಗರಗಳ ಆಧುನಿಕತೆಯ ಜೀವನಶೈಲಿಯನ್ನು ಆದರ್ಶಗಳನ್ನು ಆದಷ್ಟು ಅಳವಡಿಸಿ ಅದರ ಸರಳೀಕೃತ ಅನುಸರಣೆಯ ಪ್ರಯೋಗಗಳಾಗಿವೆ. ಅವು ಸಾಧಾರಣ ಗೈಡ್‌ಬುಕ್‌ಗಳಂತೆ ಅಥವಾ ನಕಲು ಕಾಪಿಗಳಂತೆ ಕಂಡುಬರುತ್ತವೆ ಅಥವಾ ಕಾಣಲು ಪ್ರಯತ್ನಿಸುತ್ತವೆ. ಅಲ್ಲಿ ಬೌದ್ಧಿಕ ಮತ್ತು ಸಾಮಾಜಿಕ ಸೃಜನಾತ್ಮಕತೆ ಇಲ್ಲವೆಂದಲ್ಲ. ಆದರೆ ಸೃಜನಾತ್ಮಕತೆಗೆ ಓಗೊಡುವವರು ಅಲ್ಲಿ ವಿರಳವಾಗಿದ್ದಾರೆ ಅಥವಾ ಆಗುತ್ತಾ ಇದ್ದಾರೆ. ಪರಂಪರೆಯ ಬಗ್ಗೆ ಈ ಪಟ್ಟಣಗಳಿಗಿರುವ ಕಾಳಜಿ, ಸಾಮುದಾಯಿಕ ಸಂಬಂಧಗಳ ಬಗ್ಗೆ ಅವರು ತೋರಿಸುವ ಆಸಕ್ತಿ ತಾತ್ಕಾಲಿಕವಾದುದು. ಅದೊಂದು ಪರ್ಯಾಯವಿಲ್ಲದಿರುವ ನಿರ್ಭರತೆಯಾಗಿದೆ. ಅದು ಪರಾಮರ್ಶೆಯಿಂದ ಹೊರ ಚಿಮ್ಮುವುದಿಲ್ಲ. ಸದ್ಯದ ಒಡಂಬಡಿಕೆಯಲ್ಲಿ ಈ ಪಟ್ಟಣ ಪ್ರದೇಶಗಳ ಪರಂಪರೆಯ ಬಗೆಗಿನ ಒಲವು ಸೀಮಿತ ಅವಧಿಯದ್ದು. ಆಧುನಿಕತೆಯನ್ನು ಅಲ್ಲಿಯ ಜನ ತಮ್ಮ ಭವಿಷ್ಯವೆಂದುಕೊಂಡಿದ್ದಾರೆ. ಆಧುನಿಕತೆಯ ಹೋಮಕುಂಡದಲ್ಲಿ ಅವರು ಪರಂಪರೆಯನ್ನು ಆಹುತಿ ಕೊಡಲು ಸಿದ್ಧರಾಗಿರುವುದು ಮಾತ್ರವಲ್ಲ, ಪ್ರಯೋಜನಕಾರಿಯೆಂದೆನಿಸಿದರೆ ಪರಂಪರೆಯನ್ನು ಛಿದ್ರ ವಿಚ್ಛಿದ್ರಗೊಳಿಸಿ ಅದರ ಕೆಲವು ನರತಂತುಗಳನ್ನು ಆಧುನಿಕತೆಯೊಡನೆ ಬಲವಾಗಿ ಜೋಡಿಸಲೂ ಸಿದ್ಧರಿದ್ದಾರೆ. ಈ ಪಟ್ಟಣ ವಲಯಗಳಿಂದ ಹೊರನಡೆದು ಶ್ರೀಮಂತರಾದವರು ಈ ಪ್ರವೃತ್ತಿಗಳನ್ನು ಇನ್ನೂ ಬಲಪಡಿಸುತ್ತಾ ಇದ್ದಾರೆ. ಬಹುಪಾಲು ಇಂತಹ ಶ್ರೀಮಂತರು ಪರಂಪರೆಯಲ್ಲಿ ನೆಲೆಯಿಲ್ಲದವರು ಅಥವಾ ಸ್ಥಾನಮಾನ ಇಲ್ಲದವರು. ಇತ್ತೀಚೆಗೆ ತಾವು ಸಾಧಿಸಿದ ಸ್ಥಾನಮಾನಗಳ ಮಾನ್ಯತೆಯನ್ನು ಗಳಿಸುವುದಕ್ಕೋಸ್ಕರ ಅವರು ತಮ್ಮ ಹುಟ್ಟೂರಿನ ಅಕ್ಕಪಕ್ಕದಲ್ಲಿರುವ ಪಟ್ಟಣಪ್ರದೇಶಗಳಲ್ಲಿ ದೊಡ್ಡ ಮಹಲು ಮತ್ತು ಬಂಗಲೆಗಳನ್ನು ಕಟ್ಟಲಾರಂಬಿಸಿದ್ದಾರೆ. ಅವರದೊಂದು ಬಹುಪಾಲು ಶೂನ್ಯತೆಯ, ಆರ್ಥಿಕ ತಾಕತ್ತಿನಲ್ಲಿ ನೆಲೆಯೂರಿದ ಆಧುನಿಕತೆ. ಹಣದಿಂದ ಎಲ್ಲವನ್ನೂ ಪಡೆಯಬಹುದೆಂಬುದರಿಂದ ಹುಟ್ಟಿದ ಪ್ರತ್ಯೇಕತೆ. ಅವರು ಜಗತ್ತಿನಾದ್ಯಂತ ತಮಗೆ ಎಟಕುವ ವಸ್ತುಗಳನ್ನು ತಮ್ಮ ಬಂಗಲೆಯಲ್ಲಿ ಕೂಡಿಹಾಕಿ, ಊರಲ್ಲಿ ಪ್ರದರ್ಶಿಸಿ, ಈ ಪಟ್ಟಣಪ್ರದೇಶಗಳ ಪ್ರತಿಷ್ಠಿತರೆನಿಸಿಕೊಳ್ಳಲು ಪ್ರಯತ್ನಪಡುತ್ತಾ ಇದ್ದಾರೆ. ಈ ಪಟ್ಟಣ ಪ್ರದೇಶಗಳ ಎಷ್ಟೋ ಯುವಕರು, ಯುವತಿಯರು ಇಂತಹ ಜನರ ಆರ್ಥಿಕ ಸಫಲತೆಯನ್ನು ಕಂಡು, ಅವರಿಗೆ ಒಲಿದ ಲಕ್ಷ್ಮಿ ತಮಗೂ ಮಂಗಳಹಾರವನ್ನು ಹಾಕಬಹುದೆಂಬ ಪ್ರತೀಕ್ಷೆಯಲ್ಲಿದ್ದಾರೆ. ಆರ್ಥಿಕ ಸಫಲತೆಯು ಸಾಮಾಜಿಕ ಸಂಬಂಧಗಳ ಪರಿಣಾಮವಲ್ಲ ಅಥವಾ ಪ್ರಯತ್ನದ ಫಲವಲ್ಲ ಬದಲು ಲಕ್ಷ್ಮಿಯ ಒಲವು ಎಂದುಕೊಂಡಿದ್ದಾರೆ.

ಈ ಪಟ್ಟಣ ಪ್ರದೇಶಗಳ ಅನುಸರಣೆಯ ರೂಪಗಳಿಂದ, ಸರಳೀಕೃತ ತಿಳುವಳಿಕೆಯಿಂದ, ಹಲವಾರು ಸಾಮಾಜಿಕ ವಿಕೃತ ರೂಪಗಳು ತ್ವರಿತ ಗತಿಯಲ್ಲಿ ಈ ಪಟ್ಟಣಗಳಲ್ಲಿ ಬೆಳೆದು ಬಂದಿವೆ. ಕೋಮುವಾದ, ಜಾತೀಯತೆ, ಮೂಢನಂಬಿಕೆಗಳು, ಆರ್ಥಿಕ ಊಹಾಪೋಹಗಳು ಕಳೆದ ದಶಕದಲ್ಲಿ ಇಲ್ಲಿ ತುಂಬಾ ಬಲವಾಗಿವೆ. ಪರಂಪರೆಯು ಅನಿವಾರ್ಯವೇ ಹೊರತು ಇಲ್ಲಿ ಅದೊಂದು ಜೀವನ ಮೌಲ್ಯವಲ್ಲ. ಆಧುನಿಕತೆಯ ಮೇರುಶಿಖರ ಎಲ್ಲೋ

ದೂರದಲ್ಲಿದೆ. ಅದೊಂದು ಅತೀತ ಮೌಲ್ಯ. ಅದಕ್ಕಾಗಿ ತಮ್ಮನ್ನು ತಾವೇ ಆಧುನಿಕತೆಯ ಮೂರ್ತೀಕೃತ ರೂಪವೆಂದು ಎಣಿಸಿ ತಮ್ಮ ಭದ್ರತೆಯನ್ನು ಅದರಲ್ಲಿ ಕಲ್ಪಿಸಿದ್ದಾರೆ ಎನ್ನುವುದು ಅತಿಶಯೋಕ್ತಿ ಎನಿಸುವುದಿಲ್ಲ. ಮಂಗಳೂರು ಮತ್ತು ಉಡುಪಿಯ ಬೆಳವಣಿಗೆ ಮತ್ತು ಅಲ್ಲಿ ಕಂಡುಬರುವ ಪ್ರವೃತ್ತಿಗಳು ಈ ಪಟ್ಟಣ ಪ್ರದೇಶಗಳಿಗಿಂತ ಭಿನ್ನವಿರುವುದರಿಂದ ಅವನ್ನು ಸ್ವಲ್ಪ ಸವಿಸ್ತಾರವಾಗಿ ಚರ್ಚಿಸುವುದು ಸೂಕ್ತವೆನಿಸುತ್ತದೆ.

ಒಂದು ಸ್ಥಳನಾಮವಾಗಿ ಮಂಗಳೂರಿಗೆ ಹಲವಾರು ಶತಮಾನಗಳ ಇತಿಹಾಸವಿದೆ. ಆದರೆ ಇಲ್ಲಿಯ ವಾಣಿಜ್ಯ ಪ್ರೇಮ ಐತಿಹಾಸಿಕ ಪ್ರಜ್ಞೆಗಿಂತ ಮಿಗಿಲಾದದ್ದು. ಬ್ರಿಟಿಷ್ ವಸಾಹತುಶಾಹಿಗೆ ಒಳಪಡುವ ಮೊದಲೇ ಇಲ್ಲಿಯ ಕೆಲವು ಗುರುತುರೇಖೆಗಳು ಪ್ರಸಿದ್ಧವಾದವು. ಮಂಗಳೂರು ದಕ್ಷಿಣಭಾರತದ ಪಶ್ಚಿಮ ಕರಾವಳಿಯ ಒಂದು ಪ್ರಮುಖ ವ್ಯಾಪಾರ ಕೇಂದ್ರವಾಗಿ ಬೆಳೆಯಿತು. ಇದರಲ್ಲಿ ಅರಬ್, ಅರ್ಮೇನೀಯ ಮತ್ತು ಯಹೂದಿ ವ್ಯಾಪಾರಿಗಳು ತಮ್ಮದೇ ಕೊಡುಗೆಯನ್ನು ನೀಡಿದ್ದಾರೆ. ಕಳೆದ ಐದು ಶತಮಾನಗಳಲ್ಲಿ ಗೌಡ ಸಾರಸ್ವತರು ಇಲ್ಲಿಯ ಪ್ರಮುಖ ವ್ಯಾಪಾರಿ ಪಂಗಡವಾಗಿ ಬೆಳೆದರು. ಪೋರ್ಚುಗೀಸರು, ಆನಂತರ ಟಿಪ್ಪು ಸುಲ್ತಾನ, ಈ ವಾಣಿಜ್ಯ ಕೇಂದ್ರಕ್ಕಾಗಿ ಸೆಣಸಾಡಿದರು. ಇಲ್ಲಿಯ ಆರ್ಥಿಕ ಆಶೆ ಅಭಿಲಾಷೆಗಳು ಸ್ಥಳೀಯ ಬಂಧನದಲ್ಲಿ ಸೀಮಿತಗೊಳ್ಳಲಿಲ್ಲ.

ಮಂಗಳೂರು, ದೇಶದ ಒಂದು ಪ್ರಮುಖ ಶೈವ ಶಾಕ್ತ ಕ್ಷೇತ್ರ. ಮಂಗಳೂರಿನ ಕದ್ರಿ ಮತ್ತು ಮಂಗಳಾದೇವಿ ದೇವಸ್ಥಾನಗಳು ಮತ್ತು ಅಕ್ಕಪಕ್ಕದ ನೂರಾರು ಕ್ಷೇತ್ರಗಳು ಇದರ ಸಾಕ್ಷಿಯಾಗಿ ಇನ್ನೂ ಉಳಿದಿವೆ. ಇಲ್ಲಿಯ ಸ್ಥಳೀಯ ದೈವ ದೇವತೆಗಳು, ಆಚಾರ ವಿಚಾರಗಳು, ಸಾಂಸ್ಕೃತಿಕ ಮತ್ತು ಧಾರ್ಮಿಕ ಚಲನವಲನಗಳು ತಮ್ಮ ಹೊರವಲಯದ ಪ್ರಭಾವಗಳನ್ನು ಮೈಗೂಡಿಸಿ ಹೋದದ್ದಕ್ಕೆ ಸಾಕಷ್ಟು ಪುರಾವೆಗಳಿವೆ. ಸ್ಥಳೀಯ ಮನಪಟಲದಲ್ಲಿ ಪಾಂಡವರ ಗುಹೆ, ಪರಶುರಾಮ ಸೃಷ್ಟಿ ಇತ್ಯಾದಿ ಬೃಹತ್ ಪರಂಪರೆಯ ಅಂಶಗಳು ಸ್ಪಂದಿಸುತ್ತವೆ. ಎಂಟನೇ ಶತಮಾನದಿಂದೀಚೆಗೆ ಮುಸ್ಲಿಂ ಶರೀಫ್ ಸಂತರು ಈ ಕ್ಷೇತ್ರದ ಮೇಲೆ ಬೀರಿದ ಪ್ರಭಾವಗಳನ್ನು ಇಲ್ಲಿಯ ಅನೇಕ ದರ್ಗಗಳನ್ನು ಕಂಡು, ವಾರ್ಷಿಕ ಉರೂಸುಗಳನ್ನು ನೋಡಿ ಮನವರಿಯಬಹುದು. 16ನೇ ಶತಮಾನದಿಂದ ಪೋರ್ಚುಗೀಸರ ಜತೆಗೂಡಿ ಬಂದ ಕೆಥೋಲಿಕ್ ಕ್ರೈಸ್ತರು ಪೋರ್ಚುಗೀಸರ ರಾಜಕೀಯ ಮತ್ತು ಸಾಂಸ್ಕೃತಿಕ ಪ್ರಭಾವದಿಂದ ಸಾಪೇಕ್ಷವಾಗಿ ದೂರವಿದ್ದು ತಮ್ಮ ಧಾರ್ಮಿಕ ಸ್ಪಂದನದೊಂದಿಗೆ ವಿಸ್ತೃತ ಸ್ಥಾನಿಕ ಸಂಸ್ಕೃತಿಯನ್ನೊಳಗೊಂಡ ಜನಾಂಗೀಯ ಕಲ್ಪನೆಯನ್ನು ರೂಪಿಸಿದರು. ಆದರೆ ದೇಶಕಾಲದ ವಿವಿಧ ಆಯಾಮಗಳಿಂದ ಪ್ರಚೋದಿಸಲ್ಪಟ್ಟ ಈ ಐತಿಹಾಸಿಕ ಗುರುತು ರೇಖೆಗಳು ಒಂದು ವೈಚಾರಿಕ ಮತ್ತು ಸಾಂಸ್ಕೃತಿಕ ಒಮ್ಮತವನ್ನು ರೂಪಿಸಿದವು ಎಂದು ಹೇಳಲಾಗುವುದಿಲ್ಲ.

ಈಸ್ಟ್ ಇಂಡಿಯಾ ಕಂಪೆನಿ ಮಂಗಳೂರನ್ನು ಕಬಳಿಸಿದ ನಂತರ ಕೆಲವು ನಿರ್ದಿಷ್ಟ ಸಾಮಾಜಿಕ ಆರ್ಥಿಕ ಪಂಗಡಗಳು ಮಂಗಳೂರಿನಲ್ಲಿ ನೆಲೆಯೂರಿ ಅದನ್ನು ಸಂಘಟಿಸಿದವು. ಗೌಡಸಾರಸ್ವತ ಮತ್ತು ಮುಸ್ಲಿಂರನ್ನೊಳಗೊಂಡ ವರ್ತಕರು ಮತ್ತು ಕಂಪೆನಿಯ ಅಧಿಕಾರಿ ಪಂಗಡ ಕ್ರಮೇಣವಾಗಿ ಮಾರ್ಕೆಟಿನ ಅಕ್ಕಪಕ್ಕದಲ್ಲಿಯೂ, ಬಲ್ಮಠದಲ್ಲಿಯೂ ಭದ್ರಗೊಂಡರು. 19ನೇ ಶತಮಾನದ ಪೂರ್ವಾರ್ಧದಲ್ಲಿ ಇಲ್ಲಿಗಾಗಮಿಸಿದ ಬಾಸೆಲ್ ಮಿಶನರಿಯವರು ಬಲ್ಮಠದಲ್ಲಿ ನೆಲೆಯೂರಿದರು. ಆದರೆ ದೇಶದ ಹಲವಾರು ಬ್ರಿಟಿಷ್ ವಸಾಹತು ಕೇಂದ್ರಗಳಲ್ಲಿ ನಡೆದಂತೆ ಇಲ್ಲಿ ಪಟ್ಟಣವು ಸಿವಿಲ್ ಲೈನ್ಸ್ ಮತ್ತು ಪೇಟೆ ಎಂಬ ಎರಡು ಭಾಗಗಳಾಗಿ ಹೋಳಾಗುವುದಿಲ್ಲ. ಮಂಗಳೂರಿನ ಕರಾವಳಿಯುದ್ದಕ್ಕೂ ಹಲವಾರು ಹಂಚು ಕಾರ್ಖಾನೆಗಳು ಮುಂಬಂದವು. ಮಧ್ಯಭಾಗದಲ್ಲಿ ಆಸ್ಪತ್ರೆ ಮತ್ತು ಕ್ರಮೇಣ ಶಾಲಾ ಕಾಲೇಜುಗಳು ತೆರೆಯಲ್ಪಟ್ಟವು. ಶಿಕ್ಷಣ ಮತ್ತು ಉದ್ಯೋಗದ ಮಹತ್ವವನ್ನರಿತು ಕೆಥೋಲಿಕ್ ಕ್ರೈಸ್ತರೂ, ಬಾಸೆಲ್ ಮಿಶನರಿಯವರೂ ಹಲವಾರು ಶಿಕ್ಷಣ ಸಂಸ್ಥೆಗಳನ್ನು, ಸಣ್ಣಪುಟ್ಟ ಕೈಗಾರಿಕಾ ಘಟಕಗಳನ್ನೂ, ಆಸ್ಪತ್ರೆಗಳನ್ನೂ ಇಲ್ಲಿ ಸ್ಥಾಪಿಸಿದರು. ಗೌಡ ಸಾರಸ್ವತ ಮತ್ತು ಬ್ರಾಹ್ಮಣರ ಪ್ರತಿನಿಧಿತ್ವವನ್ನೊಳಗೊಂಡ ಸಂಘಸಂಸ್ಥೆಗಳು 19ನೇ ಶತಮಾನದಲ್ಲಿ ಮೇಲೇರಿ,

ತಮ್ಮ ಪ್ರಮುಖ ವಾಸಸ್ಥಾನವಾದ ರಥಬೀದಿಯ ಹೊರವಲಯದಲ್ಲಿ ಅನೇಕ ಶೈಕ್ಷಣಿಕ ಮತ್ತು ಸಾಂಸ್ಕೃಕ ಸಂಘಟನೆಗಳನ್ನು ಸ್ಥಾಪಿಸುವಲ್ಲಿ ಪ್ರೇರಕ ಶಕ್ತಿಯಾದರು. ಗೇರು ಬೀಜದ ಗಿರಣಿಗಳು ಮತ್ತು ನಂತರ ಸ್ಥಾಪಿಸಲ್ಪಟ್ಟ ಹಂಚಿನ ಕಾರ್ಖಾನೆಗಳು ದೂರದ ಪದವು ಪ್ರದೇಶದಲ್ಲಿ ನಿರ್ಮಾಣಗೊಂಡವು. ಕುದ್ರೋಳಿ ಅಂದು ನಗರದ ಹೊರವಲಯ. ಜಾಗ್ರತ ಬಿಲ್ಲವರು ತಮ್ಮದೇ ದೇವಸ್ಥಾನದ ರಚನೆಗೆ ಹೊರಟು ಗುರು ನಾರಾಯಣ ಸ್ವಾಮಿಯವರನ್ನು ಕರೆತಂದು ಅಲ್ಲಿ ತಮ್ಮ ದೇವಸ್ಥಾನಕ್ಕೆ ಶಿಲಾನ್ಯಾಸ ಮಾಡಬೇಕಾಯ್ತು. ಇದೊಂದು ಹೊರಗಿದ್ದವರು ಒಳ ಪ್ರವೇಶಿಸಲು ಬಾಗಿಲು ತಟ್ಟಿದಂತಾಯ್ತು. ಆದರೆ ಅದರ ನಂತರ ತೆರೆಯಲ್ಪಟ್ಟು, ಕ್ರಮೇಣ ದೊಡ್ಡ ಬ್ಯಾಂಕುಗಳ ನಿರ್ಮಾಣಕ್ಕೆ ಕಾರಣಕರ್ತವಾದ ಸಹಕಾರಿ ಸಂಸ್ಥೆಗಳು ಪೇಟೆಯ ಅಕ್ಕಪಕ್ಕದಲ್ಲಿಯೇ ಮೇಲೇರುತ್ತಲಿವೆ. ಪಶ್ಚಿಮ ಘಟ್ಟದಲ್ಲಿ 19ನೇ ಶತಮಾನದಲ್ಲಿ ಕಾಫಿ ತೋಟಗಳು ತೆರೆಯಲ್ಪಟ್ಟು ಹಲವಾರು ದೊಡ್ಡ ಕಾಫಿ ಮಾಲಿಕರು ಮಂಗಳೂರನ್ನು ತಮ್ಮ ವಾಸಸ್ಥಾನವಾಗಿ ಮಾಡಿಕೊಂಡರು. ಅವರ ವಸತಿಗಳು ಪ್ರಮುಖವಾಗಿ ಮಂಗಳೂರಿನ ದಕ್ಷಿಣ ವಲಯದಲ್ಲಿದ್ದು ಬಲ್ಮಠದ ಹಿಂಭಾಗದಲ್ಲಿದ್ದವು. ಈ ಶತಮಾನದ ಶುರುವಿನಿಂದ ಇಲ್ಲಿ ಮೇಲೇರಿದ ಬೀಡಿ ಕೈಗಾರಿಕೆ ಪೇಟೆಯಲ್ಲಿ ಮತ್ತು ಅದರ ಅಕ್ಕಪಕ್ಕದಲ್ಲಿ, ಸಣ್ಣ ಅಂಗಣಗಳಲ್ಲಿ ಶುರುವಿಗೆ ನೆಲೆಯೂರಿತ್ತು. ಪೇಟೆ ಮತ್ತು ಎತ್ತರ ಪ್ರದೇಶದಲ್ಲಿ ಬೆಳೆದು ಬಂದ ನಗರವನ್ನು ಬಿಟ್ಟು ಪಟ್ಟಣದ ಮಧ್ಯಭಾಗವು ಮತ್ತು ಹೊರವಲಯವು ಕೃಷಿಯನ್ನೊಳಗೊಂಡಿತ್ತು. ಅವು ಕೆಲವು ಪ್ರಮುಖ ಗುತ್ತು ಮನೆತನಗಳ ಕ್ಷೇತ್ರವಾಗಿತ್ತು; ಬೋಳಾರ್ ಮತ್ತು ಉಳ್ಳಾಲದಲ್ಲಿ ಮುಸ್ಲಿಮರೂ, ಬೇಂಗ್ರೆ ಬಂದಲ್ ಮತ್ತು ಕರಾವಳಿಯ ಇತರ ಕೇಂದ್ರಗಳಲ್ಲಿ ಮೊಗವೀರರೂ ಅಧಿಕ ಸಂಖ್ಯೆಯಲ್ಲಿ ವಾಸಿಸುತ್ತಿದ್ದರು. ಮಂಗಳೂರು ನಗರದಲ್ಲಿ ಸಾಮಾಜಿಕ ಧಾರ್ಮಿಕ ಪಂಗಡಗಳು ನಿರ್ದಿಷ್ಟ ಭೌಗೋಲಿಕ ಕ್ಷೇತ್ರಕ್ಕೆ ಸೀಮಿತವಾಗಿಲ್ಲದಿದ್ದರೂ ಅವರು ಕೆಲವು ಕ್ಷೇತ್ರಗಳಲ್ಲಿ ಕೇಂದ್ರೀಕೃತರಾಗಿದ್ದರು. ಆಧುನಿಕತೆಯು ಹಲವು ಶ್ರೋತೃಗಳಿಂದ ಮುಂಬರುತ್ತಿತ್ತು; ಮತ್ತು ಅದು ಏಕಮುಖಿಯಾಗಿರಲಿಲ್ಲ. ಆದರೂ ಭೌಗೋಲಿಕವಾಗಿಯೂ, ಸಾಮಾಜಿಕವಾಗಿಯೂ ನಗರದ ದಕ್ಷಿಣಭಾಗ ಮತ್ತು ಎತ್ತರ ಪ್ರದೇಶಗಳಲ್ಲಿ ನೆಲೆಸಿದ ಕ್ರೈಸ್ತರು, ಕಾಫಿ ತೋಟಗಾರರು, ಹಂಚು ಮತ್ತು ಗೇರು ಬೀಜ ಗಿರಣಿ ಮಾಲಿಕರು ಅಧಿಕವಾಗಿ ಪಾಶ್ಚಾತ್ಯ ಪ್ರಭಾವಕ್ಕೆ ಒಳಪಟ್ಟವರಾಗಿದ್ದರು. ರಥಬೀದಿಯಲ್ಲಿ ಮತ್ತು ಮಾರ್ಕೆಟಿನ ಅಕ್ಕಪಕ್ಕದಲ್ಲಿ ಗೌಡಸಾರಸ್ವತರ ಪ್ರಾಬಲ್ಯವಿತ್ತು. ಕೆಲವು ಬ್ರಾಹ್ಮಣ ಪರಿವಾರಗಳೂ ಇದೇ ಕ್ಷೇತ್ರದಲ್ಲಿ ತಂಗಿದ್ದರು. ಆದರೆ ಅವರು ರೂಪಿಸಿದ ಅಥವಾ ಪ್ರೇರೇಪಿಸಿದ ಆಧುನಿಕತೆಯನ್ನೊಳಗೊಂಡ ಹಲವಾರು ಸಂಘಸಂಸ್ಥೆಗಳು ಈ ಕ್ಷೇತ್ರದ ಹೊರವಲಯದಲ್ಲಿ ಚಾಚಿ ಪಾಶ್ಚಾತ್ಯ ಪ್ರಭಾವಕ್ಕೆ ಒಳಪಟ್ಟು ಕ್ಷೇತ್ರವನ್ನು ಚುಂಬಿಸುತ್ತಿದ್ದವು. ಉಳಿದಜಾತಿ ಸಮುದಾಯಗಳು ಪ್ರಮುಖವಾಗಿ ನಗರದ ಹೊರವಲಯದಲ್ಲಿದ್ದವು. ವ್ಯಾಪಾರ, ಉದ್ದಿಮೆ, ಸ್ವಾತಂತ್ರ್ಯ ಸಂಗ್ರಾಮ, ಶಿಕ್ಷಣ, ಕ್ಲಬ್ ಸಂಸ್ಥೆಗಳು ಈ ಬಿರುಕುಗಳನ್ನು ಸ್ವಲ್ಪ ಮಟ್ಟಿಗೆ ತುಂಬಿಸಿದರೂ ಸಾಮಾಜಿಕ ಜೀವನ ಸೀಮಿತ ವರ್ತುಲದಲ್ಲಿ ಮುಂದುವರಿಯಿತು. ಈ ಪ್ರದೇಶಗಳ ಪ್ರಾಧಾನ್ಯವನ್ನು ಈ ಜನಪಂಗಡದವರು ಇಂದಿಗೂ ಹಿಡಿದುಕೊಂಡಿದ್ದಾರೆ ಮತ್ತು ಬಹುಪಾಲು ಸಾಮಾಜಿಕ ಮತ್ತು ನಾಗರಿಕ ಜೀವನ ಈ ವರ್ತುಲಗಳಲ್ಲಿ ಸೀಮಿತವಾಗಿದೆ.

ಈ ನಗರದ ಸ್ವಾತಂತ್ರ್ಯಪೂರ್ವದ ಕೆಲವು ಸಾಮಾಜಿಕ ಮತ್ತು ರಾಜಕೀಯ ರೂಪಗಳು ಗಮನಾರ್ಹವಾಗಿವೆ. ಜಿಲ್ಲೆಯಲ್ಲಿ ಮಂಗಳೂರು ಸ್ವಾತಂತ್ರ್ಯ ಹೋರಾಟದ ಕೇಂದ್ರಬಿಂದುವಾಯ್ತು. ಕೆಲವು ರಾಷ್ಟ್ರೀಯ ಚಿಂತನೆಗಳು - ಬ್ರಹ್ಮಸಮಾಜ, ಆರ್ಯಸಮಾಜ, ಥಿಯೊಸೊಫಿಕಲ್ ಸೊಸೈಟಿ, ಇತ್ಯಾದಿ - ಇಲ್ಲಿ ಬಹಳಷ್ಟು ಬೇಗನೆ ಅನುಯಾಯಿಗಳನ್ನು ಪಡೆದವು. ಜಾತಿ ಮತ್ತು ಸಮುದಾಯಗಳ ಸಂಘಟನೆಗಳೂ ಇಲ್ಲಿ ಬೇಗನೆ ತಲೆಯೂರಿದವು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮೊತ್ತ ಮೊದಲಿನ ಶಾಖೆಗಳಲ್ಲಿ ಮಂಗಳೂರು ಒಂದಾಗಿತ್ತು. 1920ರ ಕೊನೆ ಭಾಗದಿಂದ ಕಮ್ಯೂನಿಸ್ಟರು ಇಲ್ಲಿ ಹಂಚು ಕಾರ್ಮಿಕರ, ನೇಯ್ಗೆ ಕಾರ್ಮಿಕರ, ಗೇರುಬೀಜ ಗಿರಣಿಗಳ ಕಾರ್ಮಿಕರ ಮತ್ತು 1940ರಲ್ಲಿ ಬೀಡಿ ಕಾರ್ಮಿಕರ ಪ್ರಬಲ ಮಜ್ದೂರ ಸಂಘಗಳನ್ನು ನಿರ್ಮಿಸಿದರು. ಗೇಣಿ ಒಕ್ಕಲುಗಳ

ಸಂಘಟನೆಯಲ್ಲಿ ಕಮ್ಯೂನಿಸ್ಟರು ಮತ್ತು ಸೋಶಿಯಲಿಸ್ಟರು ಪ್ರಮುಖ ಪಾತ್ರ ವಹಿಸಿದರು. ಕನ್ನಡ ಅಲ್ಪಭಾಷಿಯಾಗಿರುವ ಈ ಕ್ಷೇತ್ರ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಯೂ ಗಮನಾರ್ಹ. ಈ ಕಾರಣಗಳಿಂದಾಗಿ ಜಿಲ್ಲೆಯಲ್ಲಿ ಆಧುನಿಕ ಸಿದ್ಧಾಂತಗಳ ನೆಲೆ ಮಂಗಳೂರಾಗಿತ್ತು. ಆದರೆ ಈ ಎಲ್ಲಾ ಕಾರ್ಯ ವೈಖರಿಗಳು ಮತ್ತು ಚಟುವಟಿಕೆಗಳು ಈ ನಗರ ಪ್ರದೇಶದಲ್ಲಿ ಒಂದು ಸಂಘಟಿತ ಚಿಂತನೆ ಮತ್ತು ಅದನ್ನು ಮೂರ್ತೀಕರಿಸುವ ಸಂಘಸಂಸ್ಥೆಗಳನ್ನು ಮತ್ತು ಪ್ರವೃತ್ತಿಗಳನ್ನು ನಿರ್ಮಾಣ ಗೊಳಿಸಲು ವಿಫಲವಾಯ್ತು. ಅದರಲ್ಲಿ ತಲೆಯೆತ್ತಿದ ಧೋರಣೆಗಳು ಮತ್ತು ಅದರ ಪ್ರತಿನಿಧಿ ಪ್ರವೃತ್ತಿಗಳು ಓಗೊಟ್ಟವುಗಳು ಹೊರತು ಸ್ವನಿರ್ಮಿತವಾದವುಗಳಲ್ಲ. ಅದೊಂದು ಸ್ಪಂದನದ ವೇದಿಕೆ ಮಾತ್ರವಾಯ್ತು; ಸೃಜನಾತ್ಮಕತೆಯದ್ದಾಗಲಿಲ್ಲ. ಅದು ಹಿಂಬಾಲಿಸಿತು; ನೇತೃತ್ವ ವಹಿಸಲಿಲ್ಲ. ಅದು ಬಳಸಿತು; ನಿರ್ಮಾಣ ಮಾಡಲಿಲ್ಲ. ಮಂಗಳೂರಿನ ಯುವಕರು ಊರಲ್ಲಿಯೂ, ಇತರೆಡೆಗಳಲ್ಲೂ ಉತ್ತಮ, ದಕ್ಷ ಕಾರ್ಯಕರ್ತರಾದರು - ಮಾಲಕರಾಗಲಿಲ್ಲ; ಆಯೋಜಕರಾಗಲ್ಲ. ಇಲ್ಲಿಯ ವ್ಯಾಪಾರಿಗಳು ದೇಶದ ಇತರೆಡೆಯ ಬಂಡವಾಳಶಾಹಿಗಳ ಹಿಂಬಾಲಕರಾದರು. ಈ ನಗರ ಇತರೆಡೆ ತಯಾರಿಸಲ್ಪಟ್ಟ ವಸ್ತುಗಳನ್ನು ಸಾಕಷ್ಟು ಗಿಟ್ಟಿಸಿ ಇಲ್ಲೊಂದು ದೊಡ್ಡ ಮಾರುಕಟ್ಟೆಯನ್ನು ನಿರ್ಮಿಸಿತು; ಉದ್ಯಮಿಗಳನ್ನಲ್ಲ. ನಮ್ಮ ಶಾಲಾಕಾಲೇಜುಗಳು ಶಿಸ್ತುಬದ್ಧ, ವಿನೀತ ಯುವಪೀಳಿಗೆಯನ್ನು ನಿರ್ಮಿಸಿದವು; ದಿಟ್ಟ ಯೋಧರನ್ನಲ್ಲ; ಮೇಧಾವಿಗಳನ್ನಲ್ಲ. ಮಧ್ಯಮವರ್ಗದ ವೇತನಬದ್ಧ, ಶುದ್ಧ ಉಡುಪುಧಾರಿ ನೌಕರ ಇಲ್ಲಿಯ ಕಣ್ಮಣಿಯಾದ. ಮನೆಯಲ್ಲಿ ಎರಡೊತ್ತು ಊಟವಿಲ್ಲದಿದ್ದರೂ ಅಂಗಳದಿಂದ ರಸ್ತೆಗೆ ಇಳಿಯುವಾಗ ಶುದ್ಧ ಮುಂಡು ಮತ್ತು ಖಮೀಜು ಮತ್ತು ಬರುಬರುತ್ತಾ ಪ್ಯಾಂಟ್ ಮತ್ತು ಶರ್ಟ್ ಧರಿಸಿ, 'ನಾನಂತೂ ಯಾರಿಗೂ ಕಮ್ಮಿಯಲ್ಲ'ವೆಂದು ತೋರಿಸುವುದು ಜನಪ್ರತೀತವಾಯ್ತು. ಇಲ್ಲಿ ಪ್ರತಿಗಾಮಿ ವಿಚಾರಧಾರೆಗಳು ಕ್ಷಿಪ್ರಗತಿಯಲ್ಲಿ ಮೊಟಕುಗೊಂಡವು ಮತ್ತು ಪ್ರಗತಿಗಾಮಿ ಚಳುವಳಿಗಳು ನಿಸ್ತೇಜವಾಗಿ ಕೇವಲ ತಮ್ಮ ಅನುಯಾಯಿಗಳನ್ನು ಹಿಂಬಾಲಿಸಿದವು. ಇಲ್ಲಿಯ ಹಿಂದುಳಿದ ಜಾತಿಗಳು ಮಧ್ಯಮವರ್ಗವನ್ನು ತಮ್ಮ ಗುರುವನ್ನಾಗಿ ಪ್ರತಿಸ್ಥಾಪಿಸಿದವು. ಮಂಗಳೂರು ನಗರದೊಳಗೆ ದೊಡ್ಡ ಭೂಮಾಲಿಕರಿರಲಿಲ್ಲವೆಂದಲ್ಲ. ಭೂಮಾಲಿಕರಿದ್ದರು, ಪ್ಲಾಂಟೇಶನ್ ಮಾಲಿಕರಿದ್ದರು ಮತ್ತು ವಸಾಹತುಶಾಹಿ ವ್ಯವಸ್ಥೆಗೆ ಹೊಂದಿಕೊಂಡಿದ್ದ ಹಲವಾರು ದಲ್ಲಾಳಿಗಳಿದ್ದರು. ಅವರೆಲ್ಲೋ ತಮ್ಮ ಕ್ಲಬ್‌ಗಳಲ್ಲೋ, ಉದ್ದುದ್ದದ ವರಾಂಡಗಳನ್ನೊಳಗೊಂಡ ಹಂಚಿನ ಮಾಡುಗಳ ಬಂಗಲೆಗಳಲ್ಲೋ ತಮ್ಮನ್ನೇ ತಾವು ಕೊಂಡಾಡಿಕೊಳ್ಳುತ್ತಾ ಅಥವಾ ಪರಸ್ಪರ ಜಗಳವಾಡಿತ್ತಾ ಇದ್ದರು. ಸಾರ್ವಜನಿಕ ಕ್ಷೇತ್ರವನ್ನು ಅವರು ನಿರ್ಧರಿಸಲು ಅಸಮರ್ಥರಾಗಿದ್ದರು. ಮಂಗಳೂರನ್ನು ಅಪ್ಪಿ ಹಿಡಿದು ಮಧ್ಯಮವರ್ಗ ನಿಟ್ಟುಸಿರುಬಿಟ್ಟಂತ್ತಿತ್ತು.

ನಾಯಿ ಹಂದಿಗಳು ಹಾಯಾಗಿ ಓಡಾಡುತ್ತಿದ್ದ ಮಂಗಳೂರಲ್ಲಿ ದೊಡ್ಡ ಮಟ್ಟದ ಪರಿವರ್ತನೆಗಳು ಬಂದದ್ದು ಸ್ವಾತಂತ್ರ್ಯದ ನಂತರ. ಬ್ಯಾಂಕುಗಳು ಕ್ಷಿಪ್ರಗತಿಯಲ್ಲಿ ಬೆಳವಣಿಗೆಗೊಂಡು ಮಂಗಳೂರನ್ನು ತಮ್ಮ ಗಾಢಬಂಧನದಲ್ಲಿರಿಸಿದವು. ಮಂಗಳೂರು ಬಂದರು ಯೋಜನೆ, ಮಂಗಳೂರು – ಬೊಂಬಾಯಿ ಮತ್ತು ಮಂಗಳೂರು – ಬೆಂಗಳೂರು ಹೈವೇಗಳ ನಿರ್ಮಾಣ, ಸುರತ್ಕಲ್ ಇಂಜಿನಿಯರಿಂಗ್ ಕಾಲೇಜು ಮತ್ತು ಕಸ್ತೂರ್ಬಾ ವೈದ್ಯಕೀಯ ಕಾಲೇಜುಗಳ ನಿರ್ಮಾಣ – ಇಲ್ಲಿಯ ಸುಪ್ತಾವಸ್ಥೆಯಲ್ಲಿ ಬಿರುಕುಸಂಧಿಗಳಾದವು. ಕೆಲವು ಪರಂಪರಾಗತ ಉದ್ದಿಮೆಗಳಾದ ಬೀಡಿ, ಹಂಚು, ಗೇರುಬೀಜ ಇವುಗಳೊಂದಿಗೆ ಹೊಸ ಕಾರ್ಖಾನೆಗಳಾದ ಮಂಗಳೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್, ಕುದುರೆಮುಖ್ ಐಯರ್ನ್ ಎಂಡ್ ಸ್ಟೀಲ್, ಮಜಗಾಂವ್ ಡಾಕ್ ಇತ್ಯಾದಿ ಹೆಡೆಚಾಚಿ ನಿಂತವು. ಇಡೀ ಕರ್ನಾಟಕದ ಪ್ರಮುಖ ಉದ್ದಿಮೆದಾರರಾಗಿ ಬೆಳೆದ ಮಣಿಪಾಲದ ಪೈ ಪರಿವಾರದವರು ಮತ್ತು ಅವರಿಂದ ಪ್ರೇರಣೆ ಪಡೆದ ಹಲವಾರು ಉದ್ದಿಮೆದಾರರು ಮಂಗಳೂರಲ್ಲಿ ಬೇರುಬಿಟ್ಟರು. 1960ರಿಂದೀಚೆಗೆ ಹಲವಾರು ಜನಪಂಗಡಗಳಲ್ಲಿ ಉದ್ದಿಮೆಯ ಪ್ರವೃತ್ತಿ ತಲೆದೋರಿ ಸ್ಥಳೀಯ ಬಂಟರು, ಕ್ರೈಸ್ತರು, ಮುಸ್ಲಿಮರು ಮತ್ತು ಬಿಲ್ಲವರು ಸಫಲ ಉದ್ದಿಮೆದಾರರಾಗಿರುವುದನ್ನು ನಾವು ಕಾಣಬಹುದು. ಕೊಲ್ಲಿ ರಾಷ್ಟ್ರದಲ್ಲಿ ಸಿಕ್ಕಿದ

ಅವಕಾಶಗಳು; ಇಡೀ ರಾಷ್ಟ್ರದಲ್ಲಿ ಜಿಲ್ಲೆಯ ಜನಸಂಗಡಗಳು ರೂಪಿಸಿ ಬೆಳೆಸಿದ ಹೋಟೆಲ್ ಉದ್ಯಮ; ಕಾಫಿ ಎಸ್ಟೇಟುಗಳ ಬೆಳವಣಿಗೆ; ಜಿಲ್ಲೆಯಲ್ಲಿ ಅಕ್ಕಿ ಬೆಳೆಗಿಂತ ತೆಂಗು, ಅಡಿಕೆ. ರಬ್ಬರ್ ಗೇರುಬೀಜ ಇತ್ಯಾದಿ ತೋಟಗಾರಿಕಾ ಬೆಳೆಗಳಿಗೆ ಸಿಕ್ಕಿದ ಪ್ರಾಧಾನ್ಯ; 1960ರಿಂದೀಚೆಗೆ ಮೀನು ಉದ್ದಿಮೆ ಕಂಡ ಪ್ರಗತಿ; ಜಿಲ್ಲೆಯಲ್ಲಿ ಬೆಳೆದ ಸಂಪರ್ಕಸಾರಿಗೆಗಳು; 1960ರ ಅಂತ್ಯಾರ್ಧದ ನಂತರ ಕ್ಷಿಪ್ರಗತಿಯಲ್ಲಿ ಬೆಳೆದ ಶಾಲಾಕಾಲೇಜುಗಳು ಮತ್ತು ಇತ್ತೀಚೆಗಿನ ವೃತ್ತಿಪರ ಶಿಕ್ಷಣ ಸಂಸ್ಥೆಗಳು ಈ ಬೆಳವಣಿಗೆಗಳಿಗೆ ಪೂರಕವಾದವು ಎಂದರೆ ಅತಿಶಯೋಕ್ತಿಯಲ್ಲ. ಕಳೆದ 10 ವರ್ಷಗಳಲ್ಲಂತೂ ಮಂಗಳೂರು ದೊಡ್ಡ ಕೈಗಾರಿಕಾ ಕ್ಷೇತ್ರವಾಗಿ ಬೆಳೆಯುವ ವದಂತಿಗಳು ದಟ್ಟವಾಗಿ ಹರಡಿವೆ. ಮಂಗಳೂರು ತೈಲಾಗಾರ, ಕೊಂಕಣ ರೈಲ್ವೇ ಇತ್ಯಾದಿಗಳು ಅದಕ್ಕೆ ಸಾಕ್ಷಿಯಾಗಿವೆ. ಇಷ್ಟರವರೆಗೆ ಮಂಗಳೂರಿನ ಬೆಳವಣಿಗೆ ಪ್ರಮುಖವಾಗಿ ಸ್ಥಳೀಯ ಉದ್ದಿಮೆಗಳ ಮತ್ತು ಸರಕಾರಿ ವರ್ತುಲದ ಪ್ರಭಾವದಿಂದ ಬೆಳೆದಿತ್ತು. ಇನ್ನು ಮುಂದಿನ ಬೆಳವಣಿಗೆಯಲ್ಲಿ ದೇಶೀಯ ದೊಡ್ಡ ಮತ್ತು ಅಂತರಾಷ್ಟ್ರೀಯ ಬಂಡವಾಳವು ಪ್ರಮುಖ ಪಾತ್ರ ವಹಿಸುವ ಲಕ್ಷಣಗಳು ಎದ್ದು ಕಾಣುತ್ತವೆ.

ಒಂದು ಕಡೆಯಿಂದ ಕಳೆದ ಹಲವಾರು ದಶಕಗಳ ಬೆಳವಣಿಗೆಗಳು ಈ ಬೆಳವಣಿಗೆಗೆ ಪೂರಕವಾಗಿವೆ. ಕೈಗಾರಿಕಾ ಬೆಳವಣಿಗೆಯನ್ನು ಆದರದಿಂದ ಪ್ರತೀಕ್ಷಿಸುವ ನೆಲೆ, ವಿಪುಲ ಸ್ಥಳೀಯ ಬಂಡವಾಳ, ಯಥೇಷ್ಟವಾಗಿ ದೊರಕುವ ತಾಂತ್ರಿಕ ಮತ್ತು ಮಾನವೀಯ ಸಂಪನ್ಮೂಲಗಳು, ಅಕ್ಕಪಕ್ಕದ ಕೃಷಿ ಕ್ಷೇತ್ರದಲ್ಲಿ ಯಥೇಷ್ಟವಾಗಿ ಹೂಡಲ್ಪಟ್ಟ ಅಥವಾ ಹೂಡಲ್ಪಡುವ ಬಂಡವಾಳ ಮತ್ತು ಅನೇಕ ಸಂಘಸಂಸ್ಥೆಗಳನ್ನೊಳಗೊಂಡ ಉದ್ದಿಮೆ ಮತ್ತು ಬಂಡವಾಳ ವರ್ಗ ಯಾವ ಉದ್ದಿಮೆದಾರರಿಗೂ ಆಕರ್ಷಣೀಯವೆನಿಸಬಹುದು.

ಸ್ವಾತಂತ್ರ್ಯದ ಪೂರ್ವದಲ್ಲಿ ಮಂಗಳೂರಿನಲ್ಲಿ ಬೆಳೆದ ಕಾರ್ಮಿಕ ಸಂಘಟನೆ ಮತ್ತು ಕಾರ್ಮಿಕ ಚಳುವಳಿ ಬಗ್ಗೆ ಈಗಾಗಲೇ ಉಲ್ಲೇಖಿಸಲಾಗಿದೆ. ಸೈದ್ಧಾಂತಿಕವಾಗಿ ಮತ್ತು ಸಂಘಟನಾತ್ಮಕವಾಗಿ ಅದು ಸೃಜನಾತ್ಮಕವಲ್ಲದಿದ್ದರೂ ಅದು ಪ್ರಬಲವಾಗಿತ್ತು. ಸೋಶಿಯಲಿಸ್ಟರು ಮತ್ತು ಕಮ್ಯೂನಿಸ್ಟರು ಅದರ ಮುಖಂಡತ್ವದಲ್ಲಿದ್ದರು. ಮಂಗಳೂರಿನಲ್ಲಿ ಈಗಲೂ ಸಾಮಾನ್ಯ ಜನರಲ್ಲಿ ಕೇಳಿಬರುವ ಸಾಮಾಜಿಕ ವರ್ಗೀಕರಣಗಳಾದ 'ದೊಡ್ಡವರು', 'ಕಿರಿಯರು' 'ಮಲ್ಲಕ್ಲು' 'ಎಲ್ಯಕ್ಲು' ಈ ಚಳುವಳಿಯ ಕೊಡುಗೆಯಾಗಿದೆ.

ಸ್ವಾತಂತ್ರ್ಯದ ನಂತರ ಕಾರ್ಮಿಕರ ಮತ್ತು ಶೋಷಿತರ ಸಂಘಟನೆ ಮತ್ತು ಚಳುವಳಿಯಲ್ಲಿ ತೀವ್ರ ಮಾರ್ಪಾಡುಗಳು ತಲೆದೋರಿ ಮಧ್ಯಮ ವರ್ಗದ ಧೋರಣೆಗಳು - ಅದರ ಕುಲೀನತೆ; ವ್ಯಕ್ತಿವಾದ; ಉನ್ಮತ್ತ ಉತ್ಸಾಹ ಆದರೆ ಅಡ್ಡಿ ಆತಂಕಗಳ ಎದುರಿನ ಹತಾಶೆ; ಭದ್ರತೆಯನ್ನು ಅವಲಂಬಿಸಿದ ದೃಷ್ಟಿಕೋನ; ವರ್ಗದ ಕುರಿತ ಸೀಮಿತ ಕಲ್ಪನೆ; ಬಂಡವಾಳದ ಬಗೆಗಿನ ಹಿರಿಮೆಯ ಧೋರಣೆ - ಕಾರ್ಮಿಕ ರಂಗದಲ್ಲಿ ಬಲವಾದವು. ಜಿಲ್ಲೆಯಲ್ಲಿ ದೊಡ್ಡ ಕೈಗಾರಿಕೋದ್ಯಮಿಗಳು ಮುಂಬಂದಾಗ ಜಿಲ್ಲೆಯ ಮತ್ತು ರಾಜ್ಯದ ಹೊರಗಿನ ಹಲವಾರು ಕಾರ್ಮಿಕರು ಇಲ್ಲಿ ನೌಕರಿ ಪಡೆದು ಕಾರ್ಮಿಕರನ್ನು ಸಾಮಾಜಿಕವಾಗಿ ಒಟ್ಟುಗೂಡಿಸುವ ಜನಾಂಗೀಯತೆ ಕ್ಷೀಣವಾಯ್ತು. ಭಾಷೆ, ಸಂಸ್ಕೃತಿ, ಹಿನ್ನೆಲೆ, ಪ್ರಾದೇಶಿಕತೆ ಇತ್ಯಾದಿ ಸಾಮಾಜಿಕ ವರ್ತುಲಗಳು ಕಾರ್ಮಿಕರನ್ನು ಸೀಮಿತ ವರ್ತುಲದಲ್ಲಿ ಅಂಕಿಸಿದವು. ಬ್ಯಾಂಕಿಂಗ್ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ನಿರತ ಕಾರ್ಮಿಕರಲ್ಲಿ ತಾವು ಸಾಮಾಜಿಕ ಮೇಲ್ದರ್ಜೆಯವರು, ಉಚ್ಚ ಶಿಕ್ಷಣ ಪಡೆದವರೆಂಬ ಭಾವನೆ ಬಲವಾಗಿದ್ದು ಕಾರ್ಖಾನೆ ಮತ್ತು ಗಿರಣಿಗಳ ಕಾರ್ಮಿಕರೊಂದಿಗೆ ಅವರು ಒಂದುಗೂಡಲಿಲ್ಲ. ವ್ಯಾಪಾರ ಮತ್ತು ಸೇವಾವೃತ್ತಿಗಳು ಜಿಲ್ಲೆಯಲ್ಲಿ ಬಹಳಷ್ಟು ಬೆಳೆದುಬಂದಾಗ ಬಹುಪಾಲು ಅಶಿಕ್ಷಿತ ಆದರೂ ಕೆಳಮಧ್ಯಮ ವರ್ಗದಿಂದ ಬಂದ ಯುವಕ ಯುವತಿಯರು ಬಹಳಷ್ಟು ಕನಿಷ್ಠ ವೇತನಕ್ಕೆ ಅಲ್ಲಿ ನೌಕರಿಗೆ ಸೇರಿದರು. ಈಗಲೂ ಬಹುಮಂದಿ ಇಂತಹ ನೌಕರರ ವೇತನ ಅತ್ಯಂತ ಕನಿಷ್ಟ ಮಟ್ಟದ್ದು, ಜೀವನೋಪಾಯಕ್ಕೆ ದುಸ್ತರವಾದುದು.

ಇವರಲ್ಲಿ ಸಂಘಟನೆ ಮತ್ತು ಚಳುವಳಿ ಬೆಳೆದದ್ದು ಅತ್ಯಲ್ಪ. ಇದರ ಸಂಘಟನೆಗೆ ಪ್ರತಿಷ್ಠಿತ ಯೂನಿಯನ್‌ಗಳು ಪ್ರಯತ್ನಶೀಲರಾದದ್ದು ಬಹಳಷ್ಟು ಕಡಿಮೆ. ಇವರು ಇನ್ನೂ ಪಾರಂಪರಿಕ ಮತ್ತು ವ್ಯಕ್ತಿಗತ ಸಂಬಂಧವನ್ನು ಅಳವಡಿಸಿ ತಮ್ಮ ನೌಕರಿಯ ನೀತಿ ಸಂಹಿತೆಯನ್ನು ನಿರ್ಧರಿಸುತ್ತಾ ಇದ್ದಾರೆ. ಅವರ ಕಾಳಜಿ ಮತ್ತು ಮೌಲ್ಯಗಳು ಪಾರಂಪರಿಕವಾದವುಗಳು, ವ್ಯಕ್ತಿನಿಷ್ಠೆಯವು. ಸಾಮೂಹಿಕ ವರ್ಗನಿಷ್ಠ ಪರಿವರ್ತನೆಗಳಿಗೆ ಒಡ್ಡುವಂಥವಲ್ಲ. ಇದರೊಟ್ಟಿಗೆ ಅವರ ಜೀವನಶೈಲಿಯಿಂದಾಗಿ ಆಧುನಿಕತೆಯ ಒಲವು ಮತ್ತು ಬೇಡಿಕೆಗಳು ದಿನಂಪ್ರತಿ ಅವರನ್ನು ಕಾಡುತ್ತವೆ. ಈ ವೈವಿಧ್ಯಮಯ ನೌಕರಿ ವೃಂದವನನ್ನು ಒಂದು ಸಾಮೂಹಿಕ ವೇದಿಕೆಯಲ್ಲಿ ಒಟ್ಟುಗೂಡಿಸಿ ಅವರ ಹಿತಾಸಕ್ತಿಗಳನ್ನು ಸಂಘಟಿಸುವ ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ವೇದಿಕೆ ಮಂಗಳೂರಲ್ಲಿ ಮುಂದೆ ಬರಲಿಲ್ಲ. ಹೆಚ್ಚೆಂದರೆ ವೃತ್ತಿನಿರತ ಸಂಘಸಂಸ್ಥೆಗಳೇ ಕ್ರಿಯಾತ್ಮಕತೆಯ ರೂಪಗಳಾದವು. ವರ್ಗ ವೈಶಿಷ್ಟ್ಯದವುಗಳಲ್ಲ.

ಸಾತ್ರ್ ಮಾತಿನಲ್ಲಿ ಹೇಳುವುದಾದರೆ ಇಲ್ಲೊಂದು ಸೀರಿಯಲ್ಯಾಸ್ಟ್, ವಿಚ್ಛಿದ್ರ ಕಾರ್ಮಿಕ ಪಂಗಡ ಬೆಳೆಯಿತು; ಕಾರ್ಮಿಕ ವರ್ಗವಲ್ಲ. ಈ ವಿಚ್ಛಿದ್ರವಾದ ಚೈತನ್ಯವನ್ನು ವಿವಿಧ ಸಾಮಾಜಿಕ ಶಕ್ತಿಗಳು ಧಾರ್ಮಿಕ, ಕೋಮುವಾದಿ, ಜಾತೀಯ ನೆಲೆಯಲ್ಲಿ ಸುಲಭದಲ್ಲಿ ಸೆರೆಹಿಡಿಯಬಹುದಿತ್ತು. ಅದರ ಹೊರತು ಬಹುಪಾಲು ಕಾರ್ಮಿಕರು ಹಲವಾರು ವೈರುದ್ಧ್ಯಮಯ ಸಾಮಾಜಿಕ ಆಯಾಮಗಳಲ್ಲಿ ಒಂದು ವಿಧದ ಸಂಧಾನಮಾಡಿ ಬದುಕಲಾರಂಭಿಸಿದರು ಮತ್ತು ಇನ್ನೂ ಬದುಕುತ್ತಿದ್ದಾರೆ.

ಪರಂಪರಾಗತ ಸಾಮಾಜಿಕ ಸಂಬಂಧಗಳಲ್ಲಿ ಮತ್ತು ಕಟ್ಟುಕಟ್ಟಲೆಗಳಲ್ಲಿ ನಿರತ, ವೃತ್ತಿಬದ್ಧ ಮಜೂರ ಸಂಘಗಳಲ್ಲಿ ಸೀಮಿತವಾದ, ನಿಸ್ತೇಜವಾದ ಮತ್ತು ಬುಡರಹಿತ ಸಾಮಾಜಿಕ ವಿಶ್ಲೇಷಣೆಯನ್ನು ಸಿದ್ಧಾಂತವೆನಿಸಿಕೊಂಡ ಕಾರ್ಮಿಕ ವರ್ಗವೂ ಆರ್ಥಿಕ ಸಾಮಾಜಿಕ ವೈರುದ್ಧ್ಯಗಳಿಂದ ವಿಚಲಿತಗೊಳ್ಳಬಹುದು. ದೇಶದ ಇತರ ಭಾಗಗಳಂತೆ ಮಂಗಳೂರಿನಲ್ಲಿಯೂ ಹಲವಾರು ಸ್ಥಳೀಯ ಕಾರಣಗಳನ್ನೊಡಗೂಡಿ, 1970ನೇ ದಶಕದಲ್ಲಿ ಕಾರ್ಮಿಕ ಚಳವಳಿಯು ತನ್ನ ವರ್ತಮಾನ ವರ್ತುಲಗಳನ್ನು ತೊರೆದು ತೀವ್ರಗಾಮಿಯೂ, ಬಹುವ್ಯಾಪಿಯೂ ಆಗಿ ಚಡಪಡಿಸಿತು. 1980-83ರಲ್ಲಿ ಬಹುಶಃ ಅದು ಪರಾಕಾಷ್ಠಕ್ಕೇರಿತು. ಕಾರ್ಮಿಕ ಸಂಘಟನೆಯ ಮತ್ತು ಚಳುವಳಿಯ ಹೊಸ ಪ್ರಯೋಗಗಳೂ ಇಲ್ಲಿ ಮುಂಬಂದವು. ತದನಂತರ ಮಾತ್ರ ಅದು ಛಿದ್ರವಿಚ್ಛಿದ್ರವಾಗಿ, ಪ್ರತಿಷ್ಠಾಪಿತ ಪಾರ್ಟಿಗಳ ಮಜೂರ ಸಂಘಗಳ ಒಳಗೂಡಿ, ಬಹುಪಾಲು ವರ್ಗ ಚೇತನವನ್ನು ತೊರೆದು ಅಥವಾ ಅಲ್ಲಗಳೆದು ಸಾಮಾಜಿಕ ಮತ್ತು ರಾಜಕೀಯ ನೆಲೆಯಲ್ಲಿ ಕೇವಲ ಒಂದು ಒತ್ತಡ ಗುಂಪಾಗಿ ಮಾರ್ಪಾಟುಗೊಂಡವು.

ಇತ್ತೀಚೆಗೆ ಮಂಗಳೂರಿನಲ್ಲಿ ಮತ್ತು ಜಿಲ್ಲೆಯಲ್ಲಿ ಕೈಗಾರೀಕರಣದ ಚರ್ಚೆಯು ತೀವ್ರವಾದಾಗ ಈ ಚರ್ಚೆಯಲ್ಲಿ ಕಾರ್ಮಿಕ ವರ್ಗದ ಪಾತ್ರವು ಬಹಳ ಕ್ಷುಲ್ಲಕವಾದುದು. ಇಲ್ಲಿಯ ಕೈಗಾರೀಕರಣ ಕಾರ್ಮಿಕರನ್ನು ಕೇವಲ ಒಂದು ಸಾಧನವನ್ನೆಣಿಸಿ ಮುನ್ನಡೆಯುವಂತಾಗಿದೆ. ಅವರು ಸಹಭಾಗಿಗಳೆಂದೆಣಿಸಲೂ ಕೂಡಾ ಬಹುಶಃ ಉದ್ಯಮವು ತಯಾರಿಲ್ಲ.

ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ಮಂಗಳೂರು ಮತ್ತು ಬೆಳಗಾಂವ್ ಇವು ಕ್ರಮವಾಗಿ ಕರ್ನಾಟಕದ ಅತ್ಯಂತ ದೊಡ್ಡ ಜನಸಂಖ್ಯೆಯುಳ್ಳ ನಗರಗಳು ಮತ್ತು ನಗರ ಪ್ರದೇಶಗಳು. ಇವುಗಳಲ್ಲಿ ಬೆಂಗಳೂರನ್ನು ಹೊರತು ಪಡಿಸಿ ಮಂಗಳೂರಿನಲ್ಲಿ ಜನಸಂಖ್ಯೆ ಅತೀ ಶೀಘ್ರದಲ್ಲಿ ಬೆಳೆಯುತ್ತಲಿದೆ.1981-91ರಲ್ಲಿ ಬೆಂಗಳೂರಿನ ಜನಸಂಖ್ಯೆ 39.87% ಬೆಳೆದರೆ, ಅದೇ ಅವಧಿಯಲ್ಲಿ ಮಂಗಳೂರಿನಲ್ಲಿ ಅದು 39.11% ಬೆಳೆಯಿತು. ವಿಶೇಷವೆಂದರೆ ಉಳಿದ ನಗರಗಳ ಹೊರವಲಯಗಳು ತೀವ್ರವಾಗಿ ಬೆಳೆಯುತ್ತಲಿವೆ. ಮಂಗಳೂರಿನಲ್ಲಂತೂ ಈ

ಬೆಳವಣಿಗೆಯು ಪ್ರಮುಖವಾಗಿ ಮಹಾನಗರಪಾಲಿಕೆಯು ಕ್ಷೇತ್ರದಲ್ಲಿ ಕೇಂದ್ರೀಕೃತವಾಗಿದೆ. ಮಂಗಳೂರು ನಗರ, ಬೇಂಗ್ರೆ, ಉಲ್ಲಾಳ, ಸೋಮೇಶ್ವರ, ಪೆರಮನ್ನೂರು, ಕೋಟೆಕಾರ್, ಬಜಾಲ್, ಕಣ್ಣೂರು, ಪಣಂಬೂರು, ಬೈಕಂಪಾಡಿ, ಸುರತ್ಕಲ್ ಇವುಗಳನ್ನೊಳಗೊಂಡ ಕ್ಷೇತ್ರದ ಜನಸಂಖ್ಯೆ 1991ರಲ್ಲಿ 4,25,785 ಇತ್ತು. ಇಡೀ ಜಿಲ್ಲೆಯ ಸುಮಾರು16% ಜನಸಂಖ್ಯೆ ಇಲ್ಲಿ ಕೇಂದ್ರೀಕೃತವಾಗಿದೆ. ಅದರ ಹೊರತು ಹಗಲು ಹೊತ್ತಿನಲ್ಲಿ ನೂರಾರು ಬಸ್ಸುಗಳಲ್ಲಿ ಮತ್ತು ಸ್ವಲ್ಪಮಟ್ಟಿಗೆ ರೈಲುಗಳಲ್ಲಿ ಸಾವಿರಾರು ಮಂದಿ ಮಂಗಳೂರಿಗೆ ನೌಕರಿ, ಶಿಕ್ಷಣ, ಆರೋಗ್ಯ, ವ್ಯಾಪಾರ ವಹಿವಾಟು, ಸರಕಾರಿ ಕಛೇರಿಗಳ ಕೆಲಸ ಇತ್ಯಾದಿ ಕಾರಣಗಳಿಗಾಗಿ ಸೇರುತ್ತಾರೆ. ಕನಿಷ್ಟ ಅಂದಾಜಿನಲ್ಲಿ ಮಂಗಳೂರು ನಗರದ ಜನಸಂಖ್ಯೆ ಹಗಲು ಹೊತ್ತು 1/3 ಏರುತ್ತದೆ. 1991ರಲ್ಲಿ ನಗರದಲ್ಲಿ 1000 ಶಿಕ್ಷಿತ ಪುರುಷರಿಗೆ 880 ಶಿಕ್ಷಿತ ಮಹಿಳೆಯರಿದ್ದರು. ಕರ್ನಾಟಕದ ದೊಡ್ಡ ನಗರ ಪ್ರದೇಶಗಳಲ್ಲಿ ಇದು ಅತ್ಯಧಿಕವಾಗಿದೆ. ಶಿಕ್ಷಣದಿಂದ ಸಾರ್ವಜನಿಕ ಕ್ಷೇತ್ರಕ್ಕೆ ಪ್ರವೇಶ ವಿಪುಲವಾಗುತ್ತದೆಯೆಂದೆಣಿಸಿದರೆ ಈ ನಗರ ಪ್ರದೇಶದಲ್ಲಿ ಸಾರ್ವಜನಿಕ ವಲಯದಲ್ಲಿ ಸಕ್ರಿಯವಾಗಿರುವ ಜನಸಂಖ್ಯೆಯ ಪ್ರಮಾಣ ಇತರ ನಗರಗಳಿಗಿಂತ ಅಧಿಕ. ಮಂಗಳೂರು ಈಗ ಕೇವಲ ಜಿಲ್ಲೆ ಮಾತ್ರವಲ್ಲ ದಕ್ಷಿಣ ಭಾರತದ ಒಂದು ಪ್ರಮುಖ ವಿದ್ಯಾಕೇಂದ್ರ. ಕಳೆದೈದು ವರ್ಷಗಳಲ್ಲಿ ವೃತ್ತಿಪರ ಶಿಕ್ಷಣದ ಮುಖ್ಯ ಕೇಂದ್ರವಾಗಿಯೂ ಇದು ಬೆಳೆದಿದೆ. ಇಡೀ ಕರ್ನಾಟಕದಲ್ಲಿ ಬೆಂಗಳೂರು ಮತ್ತು ಮೈಸೂರು ನಗರಗಳನ್ನು ಹೊರತು ಪಡಿಸಿದರೆ ಮಂಗಳೂರಲ್ಲಿ ಅತ್ಯಧಿಕ ವಾಹನಗಳಿವೆ. ಜೀವನದ ರಭಸ ಇಲ್ಲಿ ಎದ್ದು ಕಾಣುತ್ತದೆ.

ಪೇಟೆ, ದೇವಸ್ಥಾನ, ಇಗರ್ಜಿ, ಕಾಲೇಜು, ಆಸ್ಪತ್ರೆ ಮತ್ತು ಸರಕಾರಿ ಕಛೇರಿಗಳ ಸಂಪರ್ಕಕ್ಕೆ ಏರ್ಪಟ್ಟ ಮಂಗಳೂರಿನ ರಸ್ತೆಗಳಿಗಂತೂ ಈ ಬೆಳವಣಿಗೆಯ ಪೂರ್ವಾಭಾಸವಿರಲಿಲ್ಲ. ಇಷ್ಟರವರೆಗಿನ ನಗರದ ಬೆಳವಣಿಗೆಯ ಪ್ರಮುಖ ಪ್ರೇರಣೆಗಳು ಆಂತರಿಕವಾಗಿರುವುದರಿಂದ ನಗರದ ಹೊರವಲಯಗಳನ್ನು ಕ್ರಮಬದ್ಧವಾಗಿ ಬೆಳೆಸಿ ಹೊಸ ಬೇಡಿಕೆಗಳಿಗೆ ಪೂರಕವಾಗುವಂತೆ ಮಾಡಿದ ಪ್ರಯತ್ನಗಳು ಕಡಿಮೆ. ಕಳೆದ ಹತ್ತು ವರ್ಷಗಳಲ್ಲಿ ನಗರದ ಪರಂಪರಾಗತ ಮಾರುಕಟ್ಟೆಯಿಂದ ಮಾರ್ಕೆಟ್ ಮತ್ತು ಹಂಪನಕಟ್ಟೆಗೆ ಹೊರತುಪಡಿಸಿ ಇತರ ಮಾರುಕಟ್ಟೆಗಳು ಬೆಳೆದರೂ ನಗರದ ಕೇಂದ್ರಸ್ಥಾನವಾದ ಹಂಪನಕಟ್ಟೆಯಲ್ಲಿ ಮತ್ತು ಅದರ ಅಕ್ಕ ಪಕ್ಕದಲ್ಲಿ ವಾಹನ ಮತ್ತು ಜನಸಂಚಾರವನ್ನು ನಿಯಂತ್ರಣದಲ್ಲಿಡಲು ಕಷ್ಟವಾಗುತ್ತಿರುವುದು ಪ್ರತಿಯೊಬ್ಬ ನಗರ ಸಂಚಾರಿಯ ಅನುಭವ. ಇದಕ್ಕೆ ಹಲವಾರು ಕಾರಣಗಳನ್ನು ಮತ್ತು ಪರ್ಯಾಯಗಳನ್ನು ಮುಂದೊಡ್ಡುವವರಿದ್ದಾರೆ. ಆದರೆ ಅದರ ಮುಖ್ಯ ಕಾರಣಗಳು ಎರಡು. ನಗರದ ವ್ಯಾಪಾರಿ ವರ್ಗದ ಸಂಕುಚಿತ ಬುದ್ಧಿ ಮತ್ತು ಸ್ಥಳೀಯ ಸಣ್ಣ ಪುಟ್ಟ ರಾಜಕಾರಣಿಗಳಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮತ್ತು ದೂರದೃಷ್ಟಿಯ ಕೊರತೆ.

ಮಂಗಳೂರಿನ ಬಹುಪಾಲು ವ್ಯಾಪಾರಿ ವರ್ಗ ಕೇಳಿದ ಮುಖ್ಯ ಪ್ರಶ್ನೆ : ನಮಗೆ ಸಕಾಲಿಕ ವಿನಿಮಯದಲ್ಲಿ ಸಿಗುವ ಲಾಭ ಏನು? ಅವರಲ್ಲಿ ಉದ್ದಿಮೆಯ ದೂರದೃಷ್ಟಿವುಳ್ಳವರು ಬರೇ ಕೆಲವರು. ಕೆಲವರು ಉದ್ದಿಮೆಯಲ್ಲಿ ತಮ್ಮ ಬಂಡವಾಳವನ್ನು ಹೂಡಿದರೂ ಕೈಗೆ ಎಟುಕುವುದನ್ನೆಲ್ಲ ಆದಷ್ಟು ಬೇಗ ಗಿಟ್ಟಿಸಬೇಕೆಂಬ ಮನೋವೃತ್ತಿಯಿಂದ ಸ್ವತಂತ್ರರಾದವರಲ್ಲ. ಒಂದೊಂದು ಅಂಗುಲ ಸ್ಥಳಕ್ಕೆ, ಸೈಲೋರ್‌ನಂತಹ ಕಟುಬುದ್ಧಿ ತೋರಿಸುತ್ತಾ, ಪುಟ್ಟ ಪುಡಾರಿಗಳನ್ನು ಕಿಸೆಯಲ್ಲಿಟ್ಟು, ಕಾನೂನುಬಾಹಿರ ಜಾಗದ ಅಕ್ಕಪಕ್ಕದಲ್ಲಿ, ಮೇಲ್ಭಾಗದಲ್ಲಿ, ಹಿಂದೆಮುಂದೆ ಆದಷ್ಟು ಸ್ಥಳಾವಕಾಶವನ್ನು ಕೈಚಾಚಿ ತಮ್ಮ ಅಧೀನದಲ್ಲಿರಿಸಿಕೊಳ್ಳುತ್ತಾ, ಬೇಲಿಕಟ್ಟಿ, ಸಂಕೋಲೆಗಳನ್ನು ಜಡಿದು, ಎತ್ತರಪಡಿಸಿಕೊಳ್ಳುತ್ತಾ ಸಮಯ ಸಾಧಕರಾಗಿರುವ ಈ ವರ್ತಕ ವರ್ಗ ಮಂಗಳೂರಿನ ನಗರ ಸಾರಿಗೆ ವ್ಯವಸ್ಥೆಯನ್ನು ಕಂಗೆಡಿಸಿದ್ದಾರೆ. ಇಂತಹ ಲೋಭದಿಂದ ತಮ್ಮ ಭವಿಷ್ಯಕ್ಕೆ ತಾವೇ ಕೊಡಲಿಏಟುಕೊಟ್ಟುಕೊಳ್ಳುತ್ತಿದ್ದೇವೆ ಎಂಬುದು ಅವರಿಗೆ ಬಹುಶಃ ಇನ್ನೂ ಸ್ಪಷ್ಟವಿಲ್ಲ. ಇತ್ತೀಚೆಗೆ ಪಕ್ಕನೆ ಎಲ್ಲಿಂದಲೋ ಪ್ರತ್ಯಕ್ಷರಾದ ಕಟ್ಟಡ ನಿರ್ಮಾಪಕರು ಕೂಡಾ ಇದೇ ವೈಚಾರಿಕ ನೆಲೆಯಲ್ಲಿ ಬೆಳೆದವರು.

ನಗರದ ಸಾರ್ವಜನಿಕ ಹಿತಾಸಕ್ತಿಗಳ ಪ್ರತಿನಿಧಿಗಳೆಂದು ಕರೆಯುವವರು ಕೂಡಾ ಈ ನಗರವನ್ನಾವಲಂಬಿಸಿದ ವಿವಿಧ ಜನಪಂಗಡಗಳನ್ನು, ಹಿತಾಸಕ್ತಿಗಳನ್ನು ಮತ್ತು ಬೇಡಿಕೆಗಳನ್ನು ಒಂದುಗೂಡಿಸಿ ಸಮಜಾಯಿಸಿ ಒಂದು ಸಮನ್ವಯಗೊಂಡ ವೇದಿಕೆಯನ್ನು, ಭವಿಷ್ಯದ ಉತ್ಪ್ರೇಕ್ಷೆಗಳನ್ನು ಪರಿಶೀಲಿಸಿ, ರಚಿಸಲು ಪ್ರಯತ್ನಿಸಲಿಲ್ಲ. ಇವರಲ್ಲಿ ಹಲವರು ಸಾರ್ವಜನಿಕ ವೇದಿಕೆಯನ್ನು ತಮ್ಮ ಸ್ವಹಿತಾಸಕ್ತಿಗಳನ್ನು ಬೆಳೆಸಲು ಉಪಯೋಗಿಸಿದರೆ ಇನ್ನಿತರರು ತಮ್ಮ ಸ್ಥಳೀಯ ವರ್ತುಲದಲ್ಲಿ ಸೀಮಿತರಾದರು.

ಮಂಗಳೂರು ನಗರದಲ್ಲಿ ಜನಸಂಖ್ಯೆಯ ಒತ್ತಡ ಏರಲು ಮತ್ತು ಸಾರ್ವಜನಿಕ ಸೌಕರ್ಯಗಳ ಮೇಲೆ ವಿಶೇಷ ಒತ್ತಡ ಬೀಳಲು ನಗರದ ಕೇಂದ್ರಬಿಂದುಗಳಲ್ಲಿ ತ್ವರಿತವಾಗಿ ಮೇಲೇರುತ್ತಿರುವ ಬಹು ಮಹಡಿ ಕಟ್ಟಡಗಳು ಒಂದು ಮುಖ್ಯ ಕಾರಣವಾಗಿವೆ. ನಿಯಂತ್ರಿತ ಬಹು ಮಹಡಿ ಕಟ್ಟಡಗಳು ಬೆಳೆಯುತ್ತಿರುವ ಯಾವುದೇ ಮಹಾನಗರಕ್ಕೆ ಅನಿವಾರ್ಯವೆನಿಸುತ್ತವೆ. ಆದರೆ ಏರುಪೇರುಗಳಿಂದ ಕೂಡಿದ ಪ್ರದೇಶ ಪಟಲದ ಮಧ್ಯೆ, ಇಕ್ಕಟ್ಟು ರಸ್ತೆಗಳ ಬದಿಯಲ್ಲಿ 150-200 ಜನರಿಗೆ ಅವಶ್ಯಕವಿರುವ ಸೌಲಭ್ಯಗಳನ್ನು ಒದಗಿಸಲು ಸಾಧ್ಯವೇ ಎಂಬ ಪ್ರಶ್ನೆಗೆ ಉತ್ತರವಿಟ್ಟು ನಿರ್ಮಾಣಕಾರ್ಯವನ್ನು ರೂಪಿಸುವ ಬಿಲ್ಡರ್ಸ್ ಬೆರಳೆಣಿಕೆಯವರು. ಸಾಮಾನ್ಯವಾಗಿ ಜಿಲ್ಲೆಯಲ್ಲಿ ಮನೆಕಟ್ಟಲು ಹೊರಟವರು ಮರ, ಗಿಡ, ಅಂಗಳ, ತುಲಸಿಕಟ್ಟೆ, ಹಬ್ಬ, ಉತ್ಸವ, ಮಳೆ, ಸೆಕೆ, ದಿಕ್ಕು, ನೋಟ, ಇತ್ಯಾದಿಗಳ ಬಗ್ಗೆ ತೋರಿಸಿದ ಕಾಳಜಿ ಇಲ್ಲಿ ಕಂಡುಬರುವುದು ದುರ್ಲಭ. ಒಂದು ಕಟ್ಟಡ ಕೇವಲ ಕಾಂಕ್ರೀಟಿನ ಭೂತಾಕಾರವಲ್ಲ; ಅದೊಂದು ಸಾಮಾಜಿಕ ವಿನ್ಯಾಸ ಎಂಬ ಪ್ರಶ್ನೆಯನ್ನು ಸಾರ್ವಜನಿಕ ಗಮನಕ್ಕೆ ತಂದವರು ಬಹಳ ಕಡಿಮೆ.

ಈ ಬಹು ಮಹಡಿ ಕಟ್ಟಡಗಳು ಅಪಹರಿಸುವ ನಗರದ ಸಾಮಾಜಿಕ ಸೊತ್ತು ಮತ್ತು ಸವಲತ್ತುಗಳು ಅಪಾರ. ಅವು ಜನನಿಬಿಡ ಕ್ಷೇತ್ರಗಳಲ್ಲಿ, ಶಾಲಾಕಾಲೇಜುಗಳ ಮತ್ತು ಮಾರುಕಟ್ಟೆಗಳ ಅಕ್ಕಪಕ್ಕದಲ್ಲಿ, ಹಲವಾರು ರಸ್ತೆಗಳ ಕೂಡುವಿಕೆಯ ಕೇಂದ್ರಗಳ ಅಕ್ಕಪಕ್ಕದಲ್ಲಿ ನಿರ್ಮಾಣಗೊಳ್ಳುತ್ತಲಿವೆ. ಜನವಿರಳ ಕ್ಷೇತ್ರಗಳಲ್ಲಿ ಸಾರ್ವಜನಿಕ ಅವಶ್ಯಕತೆಗಳನ್ನು ಪೂರೈಸಿ ಈ ಪ್ರಯತ್ನಗಳಾಗಲಿಲ್ಲ.

ಮಂಗಳೂರಿನ ಮನೆವಸತಿಗಳ ನಿರ್ಮಾಣದ ಪರಂಪರೆ ಬಹಳ ಜಟಿಲವಾದದ್ದು. ಅದರಲ್ಲಿ ಪ್ರಕೃತಿಯ ಏರುಪೇರುಗಳ ತಿಳುವಳಿಕೆಯೊಂದಿಗೆ ದೇಶ ವಿದೇಶಗಳ ಶೈಲಿಯ ಮಿಶ್ರಣವಿದೆ. ಪೋರ್ಚುಗೀಸರ ಮತ್ತು ಆಂಗ್ಲರ ಮನೆ ವಠಾರಗಳ ವಿನ್ಯಾಸದ ಪ್ರಭವಗಳು ಮಂಗಳೂರಿನ ಹಲವೆಡೆ ಎದ್ದು ಕಾಣುತ್ತವೆ. ಹಲವಾರು ಹಳೆಮನೆಗಳು ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ತಿಳುವಳಿಕೆಯನ್ನು ಒಳಗೂಡಿಸಿ ಪರಿವಾರದ ವಿಭಿನ್ನ ಸದಸ್ಯರ ಪಾತ್ರಗಳನ್ನು ಮನವರಿಕೆ ಮಾಡಿಕೊಂಡು ನಿರ್ಮಿಸಿದವುಗಳಾಗಿವೆ. ಇವನ್ನೆಲ್ಲಾ ನಾವು ಇವತ್ತು ಒಪ್ಪಿಕೊಳ್ಳಬೇಕೆಂದಿಲ್ಲ. ಆದರೆ ಪರ್ಯಾಯಗಳನ್ನು ನೆಲೆಯಲ್ಲೇ ಕಟ್ಟಬೇಕೇ ಹೊರತು ಸಮಯ ಸಾಧಕತೆಯಿಂದಲ್ಲ. ಮಂಗಳೂರಿನ ಶ್ರೀಮಂತರ ಹದಗೇಡಿತನಕ್ಕೆ ಮತ್ತು ಅವರ ಸಂಸ್ಕೃತಿಯ ಕೊರತೆಗೆ ಸಿಗುವ ಒಂದು ದೊಡ್ಡ ನಿದರ್ಶನವೆಂದರೆ ಹಣದಾಶೆಗೆ ಅವರು ಮಾರುತ್ತಿರುವ ಸುಂದರವಾದ, ಭವ್ಯವಾದ ಹಳೆಮನೆಗಳು. ಈ ಹಳೆಮನೆಗಳನ್ನು ಕೆಡಹದೇ, ಜೀರ್ಣೋದ್ಧಾರ ಮಾಡುವುದು ಒಳಿತು ಎಂಬ ಸಾರ್ವಜನಿಕ ಪ್ರಜ್ಞೆಯನ್ನು ಬಲಮಾಡಿದರೆ ಅದೊಂದು ಊಳಿಗಮಾನ್ಯ ಅಭಿಲಾಷೆಯಾಗಲಾರದು. ಇದು ನಗರದ ಕೇಂದ್ರಬಿಂದುಗಳಲ್ಲಿ ಜನನಿಬಿಡತೆಯನ್ನು ಕಡಿಮೆಗೊಳಿಸುತ್ತದೆ ನಗರದ ಸಾರ್ವಜನಿಕ ಮನಃಪಟಲದ ಐತಿಹಾಸಿಕ ಮತ್ತು ಸಾಮಾಜಿಕ ಕುರುಹುಗಳಾಗಿ ಸಾಮುದಾಯಿಕ ಮತ್ತು ಬಹುರೂಪಿ ಪ್ರಜ್ಞೆಯನ್ನು ಬಲಗೊಳಿಸಬಹುದು.

ಮೇಲ್ಸೂಚಿಸಿದ ಕೆಲವು ಬೆಳವಣಿಗೆಗಳು ಸಾಮಾನ್ಯ ನಾಗರಿಕನು ವೀಕ್ಷಿಸುವ ಅವಶ್ಯಕತೆಗಳನ್ನು ಬಹಳಷ್ಟು ಹದಗೆಡಿಸಿವೆ. ನಗರದ ತೀವ್ರ ಬೆಳವಣಿಗೆಯೊಂದಿಗೆ ಒಳಚರಂಡಿಗಳ ನಿರ್ಮಾಣ ಮತ್ತು ವಿದ್ಯುತ್ ಮತ್ತು ದೂರವಾಣಿಗಳ ಕಂಬ-ತಂತಿಗಳ ಸಮರ್ಪಕ ಸ್ಥಳಾಂತರ ಕಾಣಸಿಗುವುದಿಲ್ಲ. ಮಳೆ ಮತ್ತು ಸೆಕೆ ಇಷ್ಟೊಂದು ವಿಪರೀತವಿರುವ ನಗರದಲ್ಲಿ ಬಸ್‌ಸ್ಟಾಂಡ್ ಬಳಿಯ ಅತೀವ ಕೊಳಕು ಶೌಚಾಲಯವನ್ನು ಹೊರತುಪಡಿಸಿದರೆ ಬೇರೆಲ್ಲಿಯೂ ಒಂದು ಮೂತ್ರದೊಡ್ಡಿಯಾಗಲೀ ಅಥವಾ ನೀರು ಕುಡಿಯುವ, ಮುಖ ತೊಳೆಯುವ ಅವಕಾಶವಾಗಲೀ ಕಾಣಸಿಗುವುದಿಲ್ಲ. ಒಂದೆರಡು ಸಂಧಿಯಲ್ಲಿ ಇಂತಹ ಅವಕಾಶಗಳಿದ್ದರೂ ಅವುಗಳ ಹದಗೆಟ್ಟ ವ್ಯವಸ್ಥೆಯನ್ನು ತಿಳಿದೋ ಏನೋ ಅಲ್ಲಿ ಸೂಚನೆ ನೀಡುವ ಫಲಕಗಳೇ ಇಲ್ಲ. ನಗರಪಾಲಕರು ಮಂಗಳೂರನ್ನು ಆಕಾಶದಡಿ ಇರುವ ನಿರ್ಜನ ಹಳ್ಳಿಯೆಂದೋ ಅಥವಾ ತಾಸು-ಇಡೀ ನಗರದಲ್ಲಿ ಓಡಾಡುವ ಸಾವಿರಾರು ಜನರು ಬಹಳಷ್ಟು ನಿಯಂತ್ರಣವುಳ್ಳ ಅಥವಾ ಯಾವುದನ್ನೂ ಲೆಕ್ಕಿಸದ ಸಾಧು ಸಂತರೆಂದೋ ಎಣಿಸಿರಬೇಕು! ನಾವು ಭೌತಿಕ, ಆರ್ಥಿಕ ನೆಲೆಯಿಂದ ಜನಪಂಗಡಗಳ ಪ್ರಜ್ಞೆಯನ್ನು ವೀಕ್ಷಿಸಿದರೆ, ಕಳೆದ 10-15 ವರ್ಷಗಳಲ್ಲಿ, ಸ್ಪಷ್ಟವಾದ ಆದರೂ ಸಾರ್ವಜನಿಕ ತಿಳುವಳಿಕೆ ಇದನ್ನು ಇನ್ನೂ ಗುರುತಿಸದ ಒಂದು ಬೆಳವಣಿಗೆಯನ್ನು ಕಾಣುತ್ತೇವೆ. ಅದೆಂದರೆ ಕಾರ್ಮಿಕ ವರ್ಗದ ರಚನೆಯಲ್ಲಿ ಆದ ಸಾಮಾಜಿಕ ಬದಲಾವಣೆ. ಮಂಗಳೂರು ನಗರ ಮತ್ತು ನಗರ ಪ್ರದೇಶದಲ್ಲಿ ಶಾರೀರಿಕ ಶ್ರಮ ಒಳಗೊಂಡಲ್ಲೆಲ್ಲಾ ಜಿಲ್ಲೆಯ ಹೊರಭಾಗದಿಂದ, ಅಂದರೆ ಉತ್ತರ ಕರ್ನಾಟಕ, ಕೇರಳ ಮತ್ತು ತಮಿಳುನಾಡು ಈ ಪ್ರದೇಶಗಳಿಂದ, ಬಂದ ಕಾರ್ಮಿಕರ ಪ್ರಾಬಲ್ಯ ಹೆಚ್ಚುತ್ತಾ ಇದೆ. ಇದಕ್ಕೆ ಎರಡು ಕಾರಣಗಳಿವೆ. ಒಂದನೆಯದಾಗಿ ನಗರ ಪ್ರದೇಶದಿಂದ ಮತ್ತು ಜಿಲ್ಲೆಯ ಹೊರಭಾಗದಿಂದ ಬಹುಮಂದಿ ದೇಶ ಪರದೇಶಗಳಿಗೆ ಉದ್ಯೋಗ ಮತ್ತು ವೃತ್ತಿಯನ್ನು ಅವಲಂಬಿಸಿ ತೆರಳಿದ್ದಾರೆ ಮತ್ತು ಕೃಷಿಯೇತರ ಶಾರೀರಿಕ ಶ್ರಮವನ್ನೊಳಗೊಂಡ ಉದ್ಯೋಗಗಳು ಜಿಲ್ಲೆಯ ಇತರ ಭಾಗಗಳಲ್ಲಿ ಕೂಡ ಬಹಳಷ್ಟು ಲಭ್ಯವಿವೆ. ಇದಕ್ಕಾಗಿ ನಗರವನ್ನವಲಂಬಿಸಬೇಕಾಗಿಲ್ಲ. ಎರಡನೆಯದಾಗಿ ಮಧ್ಯಮವರ್ಗದ ಚೈತನ್ಯವು ಬಹಳಷ್ಟು ಸಾರ್ವಜನಿಕವಾಗಿರುವ ಈ ನಗರ ಪ್ರದೇಶದಲ್ಲಿ ಯುವಕ ಯುವತಿಯರು ಶಾರೀರಿಕ ಶ್ರಮವನ್ನು ಕಡೆಗಣಿಸಿ ಕಮ್ಮಿ ವೇತನದ ಮಧ್ಯಮ ವರ್ಗದ ವೃತ್ತಿಯನ್ನು ಸ್ವೀಕರಿಸಲು ಮುಂಬರುತ್ತಾರೆ. ಎಷ್ಟೋ ಸರ್ತಿ ಈ ವೇತನವು ಒಬ್ಬನ ಖರ್ಚಿಗೂ ಸಾಕಾಗುವುದಿಲ್ಲ. ಹೀಗಾಗಿ, ಈ ಯುವಕ ಯುವತಿಯರು ನಗರದ ಹೊರಗಿನ ಅವಕಾಶಗಳಿಗೆ ಕಾಯುತ್ತಾ ಇರುತ್ತಾರೆ. ಉದ್ಯಮ ಮತ್ತು ವ್ಯಾಪಾರ ಕೌಟುಂಬಿಕ ಉದ್ಯೋಗವಿಲ್ಲದ ಯುವಕ ಯುವತಿಯರಿಗೆ ಈ ನಗರ ತಮ್ಮ ಭವಿಷ್ಯವೆನಿಸುವುದಿಲ್ಲ. ಇವರಲ್ಲಿ ಬಹಳಷ್ಟು ಮಂದಿ ಇಲ್ಲಿಂದ ಪಲಾಯನಗೈಯುವ ಅವಕಾಶವನ್ನು ನಿರೀಕ್ಷಿಸುತ್ತಾ ಇರುತ್ತಾರೆ. ಹೊರಗಿನಿಂದ ಬಂದ ಕಾರ್ಮಿಕರು ಇಲ್ಲಿ ಬೇರೂರುವ ಆಧಾರಸ್ತಂಭಗಳನ್ನು ಹುಡುಕುತ್ತಾ ಇರುತ್ತಾರೆ. ಇತ್ತೀಚೆಗೆ ಇಲ್ಲಿ ಕಾರ್ಮಿಕ ಸಂಘಟನೆಗಳು ಮತ್ತು ಚಳುವಳಿ ಕ್ಷೀಣವಾಗಲು ಮುಖ್ಯ ಕಾರಣ, ಇಲ್ಲಿನ ಹಲವಾರು ಕಾರ್ಮಿಕರು ಜಾತಿ, ಕೋಮು, ಭಾಷೆ ಮುಂತಾದ ಸಾಮಾಜಿಕ ಸ್ಪಂದನಗಳಲ್ಲಿ ವಿಭಜನೆಗೊಂಡಿದ್ದಾರೆ.

ಸ್ಥಳೀಯತೆ ಇಲ್ಲಿ ಪ್ರಬಲವಾಗಿದೆ. ಈ ನಗರದ ಹೊರಗಿನಿಂದ ಬಂದು ಇಲ್ಲಿ ವಾಸಿಸುವವರಿಗೆ ಇದು ಶೀಘ್ರವಾಗಿ ಮನದಟ್ಟಾಗುವ ವಿಷಯ. ಆದರೆ ಸ್ಥಳೀಯತೆ ಕೂಡಾ ತ್ವರಿತಗತಿಯಲ್ಲಿ ಇಲ್ಲಿ ಪುನರ್ ಸಂಘಟಿತಗೊಳ್ಳುತ್ತಾ ಇದೆ. ಇದು ಉದ್ಯಮದ ಅನಿವಾರ್ಯತೆಯಿಂದಲ್ಲ. ಬದಲು ಇಲ್ಲಿಯ ಮಧ್ಯಮವರ್ಗದ ಆಶೆ ಆಕಾಂಕ್ಷೆಗಳ ನಕ್ಷೆ ಬದಲಾವಣೆಗೊಂಡಂತೆ ಮಂಗಳೂರಿನ ಎಷ್ಟೋ ಜನರಿಗೆ ಬೊಂಬಾಯಿ ಮಹಾನಗರಪಾಲಿಕೆಯಲ್ಲ. ಬೆಳಗಾಂವಿನ ಆಚೆ ಮತ್ತು ನಾಗ್ಪುರದ ಈಚೆಗಿರುವ ಯಾವುದಾದರೂ ಒಂದು ನೆಲೆ. ಬಹಳಷ್ಟು ಹತ್ತಿರವಿರುವ ಬೆಂಗಳೂರು ಜನರ ಮನಃಪಟಲದಲ್ಲಿ ಅಷ್ಟೊಂದು ಸ್ಪಂದಿಸುವುದಿಲ್ಲ. ತೀರಾ ಇತ್ತೀಚೆಗಿನ ಬಹುಪಾಲು ಗೌಡ ಸಾರಸ್ವತರು ಕ್ರೈಸ್ತರನ್ನು ಹೊರಗಿನವರೆಂದು ಎಣಿಸುತ್ತಿದ್ದರು. ಅದೇ ಪ್ರಕಾರ ಕ್ರೈಸ್ತರು ಗೌಡಸಾರಸ್ವತರನ್ನು ಪೇಟೆಯವರು, ಕಾಸುಗಳ್ಳರು ಎಂದೆಣಿಸುವವರು. ಕಳೆದ 5 ವರ್ಷಗಳಲ್ಲಿ ನಾವೆಲ್ಲ ಕೊಂಕಣಿಭಾಷಿಗರು ಎಂಬ ಭಾವನೆ ಇನ್ನೂ

ಜನಪ್ರಿಯವಾಗದಿದ್ದರೂ ಹಲವರಲ್ಲಿ ಬಲವಾಗಿದೆ. ಸ್ಥಳೀಯತೆಯೊಂದಿಗೆ ಗಂಜಿ, ದೋಸೆ, ಲಡ್ಡು, ಉಪ್ಪಿಟ್ಟು, ಹಪ್ಪಳ, ಮುಂಡು, ಧೋತಿ, ಜುಬ್ಬ, ಲಂಗ, ಸೀರೆ, ತಾಳೆ, ಹಂಚು, ಮಾಡು, ಅಡಿಕೆ, ತೆಂಗು, ಮಾವು, ಬೆಂಡೆ, ಬದನೆ, ಅಲಸಂಡೆ, ಸೌತೆ, ತೆಂಗಿನೆಣ್ಣೆ, ಕೋಳಿ, ಕೋಳಿರೊಟ್ಟಿ, ಹಂದಿಮಾಂಸ, ಸಿಟಿಬಸ್ ಕಂಡಕ್ಟರುಗಳು, ಜಾತ್ರೆ, ಸಾಂತ್‌ಮಾರಿ, ಹಂಚುಮನೆ, ವರಾಂಡಾ, ತೋಟ, ಬಸಳೆ, ಪಪ್ಪಾಯಿ,ತುಳು ಇವೆಲ್ಲವೂ ಸೇರಿಕೊಂಡಿವೆ. ಆದರೆ ಎಷ್ಟು ಕೊಂಡಾಡಿದರೂ ಈ ಸ್ಥಳೀಯತೆಯಲ್ಲಿ ಎದ್ದು ಕಾಣುವ ಕೊರತೆಗಳು ಬಹಳಷ್ಟು. ಸ್ಥಳೀಯತೆಯೊಡಗೂಡಿದ ಪರಂಪರೆ, ರೀತಿರಿವಾಜುಗಳು, ನಡವಳಿಕೆ, ಪ್ರಕೃತಿ ಸಂಬಂಧ ಇತ್ಯಾದಿ ಬಹು ಶೀಘ್ರವಾಗಿ ವಾಣಿಜ್ಯೀಕೃತಗೊಳ್ಳುತ್ತಲಿವೆ. ಇದನ್ನು ಪ್ರತಿಯೊಂದು ಉತ್ಸವ, ನೇಮ, ಪೂಜೆ, ಸಾಂತ್‌ಮಾರಿಗಳಲ್ಲಿ ನಾವು ಕಾಣಬಹುದು. ಇವತ್ತು ಸ್ಥಳೀಯತೆ ವಿಕ್ರಯಿಸಬಹುದಾದ ಸಾಮಗ್ರಿಯಾಗಿ ಬಹುಪಾಲು ಪರಿವರ್ತನೆಗೊಂಡಿದೆ. ನೆಲೆಕಾಲರಹಿತ ಆಧುನಿಕತೆಗೆ ಜಾಸ್ತಿ ಪ್ರಾಶಸ್ತ್ಯವಿದೆ. ಎಷ್ಟೋ ಸರ್ತಿ ದಿಟ್ಟವಾಗಿ ಸಾರುವ ಸ್ಥಳೀಯತೆಯಲ್ಲಿ ಉತ್ತರ ಭಾರತದ ರೀತಿರಿವಾಜುಗಳು, ಪಾಶ್ಚಾತ್ಯ ಪ್ರಭಾವಗಳು, ಅರೆಬರೆ ನಡವಳಿಕೆ, ಕೇರಳ ಮತ್ತು ತಮಿಳುನಾಡಿನ ಪ್ರಚಲಿತ ಪದ್ಧತಿಗಳು ಮಿನುಗುತ್ತವೆ.

ಮಂಗಳೂರು ನಗರದ ಸಾಂಸ್ಕೃತಿಕ ನೆಲೆ ಇನ್ನೂ ಸ್ಥಳೀಯವಾದುದು ಮತ್ತು ಅದು ಪರಿವಾರ ಮತ್ತು ಸಮುದಾಯದೊಂದಿಗೆ ಇನ್ನೂ ಗಾಢವಾದ ಮೈತ್ರಿಯನ್ನಿಟ್ಟುಕೊಂಡಿದೆ. ಇಲ್ಲಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜನಾಂಗೀಯವಾದವುಗಳು, ಸಮುದಾಯಗಳಿಗೆ ಸೀಮಿತವಾದವುಗಳು. ರಾಷ್ಟ್ರಪ್ರೇರಿತ ಸಮಾರಂಭಗಳನ್ನು ಹೊರತುಪಡಿಸಿ, ಎಲ್ಲಾ ಜನರು ಭಾಗವಹಿಸುವ ಹಬ್ಬ ಉತ್ಸವಗಳು ಇಲ್ಲಿ ನಗಣ್ಯ. ಸಾಮುದಾಯಿಕವಾಗಿ ವಿಭಜನೆಗೊಂಡ ಈ ನಗರದಲ್ಲಿ ಯಾವ ಹಬ್ಬ ಉತ್ಸವಗಳೂ ತಮ್ಮ ಸಾಮುದಾಯಿಕ ರೇಖೆಯನ್ನು ದಾಟಿ ಸಾರ್ವಜನಿಕವಾಗಿ ಜನಪ್ರಿಯಗೊಳ್ಳಲಿಲ್ಲ.

ಮಂಗಳೂರು ನಗರದಲ್ಲಿ ಅದರ ಸಾಂಸ್ಕೃತಿಕ ಹಿರಿಮೆಯನ್ನು, ಸುರುಚಿಯನ್ನು ಎತ್ತಿಕಟ್ಟುವ ಮೇರು ಕಂಬಗಳು ಇಲ್ಲವೆಂದೇ ಹೇಳಬಹುದು. ಇಲ್ಲಿ ಸಂಸ್ಕೃತಿ ಮತ್ತು ಸುರುಚಿಯ ಚಿಹ್ನೆಗಳು, ಸೂಚಕಗಳು, ಅಭಿವ್ಯಕ್ತಿಗಳು ಅಥವಾ ಪರಿವಾರಗಳು ಸಾರ್ವಜನಿಕ ಮನಃಪಟಲದಲ್ಲಿ ಅಚ್ಚಾಗಿರುವುದು ಅತ್ಯಲ್ಪ. ಇಲ್ಲೊಂದು ಯುವಪೀಳಿಗೆ ಕೂಡಿ ಗಪ್ ಹೊಡೆಯುವ, ಉದ್ಯೋಗದಿಂದ ನಿವೃತ್ತಿ ಹೊಂದಿದವರು ಕೂಡುವ ಕೇಂದ್ರಬಿಂದುಗಳಿಲ್ಲ. ಇಲ್ಲೊಂದು ಪ್ರಗತಿಪರ ಅಥವಾ ಹೋರಾಟದ ಚಳುವಳಿ ಮನೆಮಾತಾಗಿ ಬೆಳೆಯಲಿಲ್ಲ. ಇಲ್ಲಿ ವಿದ್ಯಾರ್ಥಿ ವೃಂದವು ಅಥವಾ ಯುವಪೀಳಿಗೆಯು ಐತಿಹಾಸಿಕ ಮತ್ತು ಪ್ರಬುದ್ಧ ರಾಷ್ಟ್ರೀಯ ಚೈತನ್ಯಕ್ಕೆ ಓಗೊಟ್ಟ ಪುರಾವೆಗಳು ಅತ್ಯಲ್ಪ. ಇಲ್ಲಿಯ ಸಾಮಾಜಿಕ ಚಳುವಳಿ ಜಾತಿ ಮತ್ತು ಸಮುದಾಯಗಳಿಗೆ ಸೀಮಿತವಾಗಿ ಉಳಿಯಿತು. ಸಾರ್ವಜನಿಕತೆಯನ್ನು ಎತ್ತಿಹಿಡಿಯುವ ಶಾಲಾಕಾಲೇಜುಗಳು, ಗ್ರಂಥಾಲಯಗಳು, ಸಂಘಸಂಸ್ಥೆಗಳು ಖಚಿತ ಪಂಗಡಗಳ ಕಪಿಮುಷ್ಟಿಯಲ್ಲಿ ಉಳಿದವು. ಇಲ್ಲಿಯ ಸಾರ್ವಜನಿಕತೆ ಎದ್ದು ಕಾಣುವುದು ಕೇವಲ ಸರಕಾರಿ ಆಸ್ಪತ್ರೆ, ಯುನಿವರ್ಸಿಟಿ ಕಾಲೇಜು, ಸರಕಾರಿ ಕಛೇರಿಗಳು, ರಸ್ತೆ ಮತ್ತು ಪಾರ್ಕುಗಳಲ್ಲಿ ಮತ್ತು ಸ್ವಲ್ಪ ಮಟ್ಟಿಗೆ ಲಯನ್ಸ್ ರೋಟರಿ, ಜೇಸಿಸ್ ಮುಂತಾದ ಸಂಸ್ಥೆಗಳಲ್ಲಿ. ಆದರೆ ಅವು ಜನಮನವನ್ನು ಎಷ್ಟರ ಮಟ್ಟಿಗೆ ಭಾವಪೂರ್ಣವಾಗಿ, ಹಿರಿಮೆಯ ಸಂಕೇತವಾಗಿ ಮತ್ತು ಸಾರ್ವಜನಿಕ ಹಿತಾಸಕ್ತಿಯ ಮೇರು ಶಿಖರಗಳಾಗಿ ಸ್ಪಂದಿಸುತ್ತವೆಂದು ಹೇಳುವುದು ಕಷ್ಟಕರ. ಮಂಗಳೂರಲ್ಲಿ ಏರ್ಪಡಿಸುವ ಭರ್ಜರಿ ಮದುವೆ ಸಮಾರಂಭಗಳು ಜಾತಿ-ಸಮುದಾಯಗಳ ಇತಿಮಿತಿಗಳನ್ನು ಮೀರಿ ಇತರರನ್ನು ಆಮಂತ್ರಿಸಿದರೂ ಅವರ ಪ್ರಮುಖ ನೆಲೆ ಇನ್ನೂ ಜನಾಂಗೀಯವಾಗಿಯೇ ಇದೆ. ಒಟ್ಟಾರೆ ಈ ನಗರಕ್ಕೆ ಒಂದು ಸಾಂಸ್ಕೃತಿಕ ಮತ್ತು ಬೌದ್ಧಿಕ ನೆಲೆ ಇಲ್ಲ. ಇದರಿಂದಾಗಿ ಸಾರ್ವತ್ರಿಕ ಸಂವೇದನೆ ಮತ್ತು ಭಾವಪೂರ್ಣತೆ ಇಲ್ಲಿ ಸ್ಥಳೀಯವಾಗಿಯೂ ಜನಾಂಗೀಯವಾಗಿಯೂ ಉಳಿದಿದೆಯೇ ಹೊರತು ನಗರವ್ಯಾಪಿಯಾಗಲಿಲ್ಲ. ಅವನ್ನು ಸಾಧಿಸುವ ವೈಚಾರಿಕ ಪ್ರಯೋಗಗಳೂ ನಡೆದಿಲ್ಲ.

ಇಂತಹ ಸಂಕುಚಿತ ವಾತಾವರಣದಲ್ಲಿ ಮತ್ತು ನಿರ್ವಾತ ಸಾರ್ವಜನಿಕ ನೆಲೆಯಲ್ಲಿ ಸಾಮಾಜಿಕ ವಿಕೃತರೂಪಗಳು ಸುಲಭದಲ್ಲಿ ಬೆಳೆಯಬಹುದು. ಇತ್ತೀಚೆಗೆ ನಗರದಲ್ಲಿ ಕಂಡುಬಂದ ಕೋಮುಭಾವನೆಯನ್ನು ಮತ್ತು ಅದರ ಕರಾಳ ಮತ್ತು ಪಾಶವೀ ರೂಪವನ್ನು ಈ ಸಾರ್ವಜನಿಕ ಪ್ರಜ್ಞೆಯ ಅಭಾವದಲ್ಲಿ ನಾವು ಗುರುತಿಸಬಹುದಾಗಿದೆ. ಪರಿವಾರ ಮತ್ತು ಜನಾಂಗದ ಹೊರಗಿನವರು ಪರಕೀಯರಾಗುತ್ತಾರೆ; ಶತ್ರುಗಳಾಗುತ್ತಾರೆ. ಈ ವಿಕೃತರೂಪವನ್ನು ಇತಿಮಿತಿಯಲ್ಲಿಡಲು ಟ್ಯಾಂಕುಗಳಲ್ಲಿ ನಿಂತು ಮೆಶೀನ್‌ಗನ್‌ಗಳಿಂದ ಪ್ರತಿಯೊಂದು ಪಾರ್ಶ್ವಗಳನ್ನು ಮುಖಗಳನ್ನು ಅಳೆಯುವ ಹೆಲ್ಮೆಟ್‌ಧಾರಿ ಜವಾನರು ಬೇಕಾಗುತ್ತಾರೆ.

ಮಂಗಳೂರಿನ ಇದು ಒಂದು ವಿಕೃತರೂಪ. ಆದರೆ ಇಲ್ಲಿ ಪ್ರಕೃತಿ ಇನ್ನೂ ಪೂರ್ಣವಾಗಿ ವಿಕೋಪಗೊಂಡಿಲ್ಲ. ನಗರದ ಹಸಿರುತನ ಇನ್ನೂ ಬಾಡಿ ಹೋಗಿಲ್ಲ. ಬೆಳಗ್ಗಿನ ಜಾವ ಶಾಲೆಗೆ ಹೋಗುವ ಮಕ್ಕಳ ಮುಖಗಳಲ್ಲಿ ಇನ್ನೂ ಮುಗುಳ್ನಗೆ ಇದೆ. ಜೀವನದ ಹರ್ಷೋಲ್ಲಾಸಗಳಿವೆ. ಓಡುವ ಬಸ್ಸಿನಡಿ ಬಿದ್ದು ಅವರ ಭವಿಷ್ಯ ನಿರ್ನಾಮಗೊಳ್ಳದಂತೆ ಮಾಡುವ ಜೀವನದ ಆಶೆ ಮತ್ತು ಸಾರ್ವಜನಿಕ ನೆಲೆಯನ್ನು ಮಾತ್ರ ಇಲ್ಲಿ ಇನ್ನೂ ರೂಪಿಸಬೇಕಾಗಿದೆ.

ತೀರಾ ಇತ್ತೀಚೆಗಿನವರೆಗಂತೂ ಉಡುಪಿಯು ತನ್ನದೇ ವೈಶಿಷ್ಟ್ಯವನ್ನು ಹೊಂದಿದ್ದರೂ ಎದ್ದು ಕಾಣುವ ನಗರವಾಗಿರಲಿಲ್ಲ. ಆದರ ಜನಸಂಖ್ಯೆಯು ಜಿಲ್ಲೆಯ ಇತರ ಪಟ್ಟಣಗಳಿಗೆ ಹೋಲುತ್ತಿತ್ತು. ಆದರೆ 1991ರ ಹೊತ್ತಿಗೆ ಜಿಲ್ಲೆಯ ಎರಡನೇ ದೊಡ್ಡ ನಗರ ಪ್ರದೇಶವಾಗಿ ಇದು ಬೆಳೆದು ನಿಂತಿದೆ. 1991ರಲ್ಲಿ ಉಡುಪಿ ನಗರಸಭೆ, ಶಿವಳ್ಳಿ,ಹೆರ್ಗ, ಕುತಪಾಡಿ, ಕಿದಿಯೂರು, ಅಂಬಲಪಾಡಿ ಮತ್ತು ಮೂಡನಿಡಂಬೂರು ಇವುಗಳನ್ನೊಳಗೊಂಡ ಕ್ಷೇತ್ರದ ಜನಸಂಖ್ಯೆ 1,17,744 ಇತ್ತು. ಈ ಪ್ರದೇಶದ ಅಕ್ಕಪಕ್ಕದಲ್ಲಿರುವ ಸಣ್ಣಪುಟ್ಟ ಪೇಟೆ ಪಟ್ಟಣಗಳೂ ಬಹಳಷ್ಟು ಬೆಳೆದಿವೆ. ಉಡುಪಿಯನ್ನು ಕೇಂದ್ರವನ್ನಾಗಿರಿಸಿಕೊಂಡು ಬ್ರಹ್ಮಾವರ, ಸಂತೆಕಟ್ಟೆ, ಮಲ್ಪೆ, ಕಟಪಾಡಿ, ಕಾಪು, ಮಣಿಪಾಲ, ಶಿರ್ವ ಮತ್ತು ಹಿರಿಯಡ್ಕವನ್ನೊಳಗೊಂಡ ಕ್ಷೇತ್ರ ಭವಿಷ್ಯದೊಂದು ಮಹಾನಗರ ಮತ್ತು ಸದ್ಯಕ್ಕೆ ಅನೇಕ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಗಳಿಗೆ ಒಳಗಾದ ಪ್ರದೇಶವಾಗಿದೆ.

ಉಡುಪಿ ಶ್ರೀಕೃಷ್ಣನ ನೆಲೆಯೂರು ಮತ್ತು ಮಾಧ್ವ ಸಂಪ್ರದಾಯದ ಜನ್ಮಸ್ಥಾನವೆಂಬುದು ಎಲ್ಲರಿಗೂ ತಿಳಿದ ವಿಷಯ. ಕೇವಲ ಈ ಸೆಳೆತಗಳ ಮಾತ್ರಕ್ಕೇ ಅದು ದೇಶದ ಒಂದು ಪ್ರಮುಖ ತೀರ್ಥಸ್ಥಾನ ಮತ್ತು ಪಾಠಶಾಲೆಯಾಗಬಹುದಿತ್ತು. ಆದರೆ ಅವೆಲ್ಲದರ ಜೊತೆಗೇ ಉಡುಪಿ ಜೀವನದ ಇತರ ಆಯಾಮಗಳನ್ನೂ ಕೂಡ ಕೂಡಿ ಹಾಕಿ, ಜಗತ್ತನ್ನು ಕೇವಲ ಮಿಥ್ಯೆಯೆಂದು ಸಾರದೆ ಅದರ ಸ್ವಾಯತ್ತತೆಯನ್ನು, ಜ್ಞಾನ ಮತ್ತು ಕರ್ಮದ ಮಹತ್ವವನ್ನೂ ಎತ್ತಿ ಹಿಡಿಯುತ್ತಿದೆ. ಈ ಜೋಡಣೆಗಳಿಂದ ಉಡುಪಿಯ ಬ್ರಾಹ್ಮಣತ್ವ ಮತ್ತು ಶ್ರೀಕೃಷ್ಣನ ಲೀಲೆ ಬಲಗೊಂಡಿತೇ ಹೊರತು ಕ್ಷೀಣಗೊಳ್ಳಲಿಲ್ಲ.

ಮಣಿಪಾಲವನ್ನೊಳಗೊಂಡ ಉಡುಪಿ ಇವತ್ತು ಜಿಲ್ಲೆಯ ಆಧ್ಯಾತ್ಮಿಕ, ಸಾಂಸ್ಕೃತಿಕ ಮತ್ತು ಮಾನವೀಯ ಸಂಪನ್ಮೂಲಗಳ ಕೇಂದ್ರಬಿಂದುವಾಗಿದೆ. ಇಲ್ಲಿಯ ಬೌದ್ಧಿಕತೆ ಮತ್ತು ಸಾಂಸ್ಕೃತಿಕತೆ ಮಂಗಳೂರಿನಂತೆ ಚೆಲ್ಲಾಪಿಲ್ಲಿಯಾಗಿ ಛಿದ್ರವಿಚ್ಛಿದ್ರಗೊಳ್ಳಲಿಲ್ಲ. ಅದು ಸಂಘಟಿತವಾಗಿ ಪ್ರಬುದ್ಧವಾಗಿದೆ. ಈ ಸಂಘಟನೆ ಸಾಂಸ್ಥೀಕರಣಗೊಂಡರೂ ಶಿಸ್ತುಬದ್ಧವಾದರೂ ಕೇವಲ ಅವುಗಳಲ್ಲಿ ಅದು ಸೀಮಿತಗೊಳ್ಳಲಿಲ್ಲ. ಅದು ಗಣ್ಯರ ನಡುವೆ ವ್ಯಕ್ತಗೊಂಡು ವೇದಿಕೆಯಾಗಿ, ಮಂಚವಾಗಿ, ನಾಟಕವಾಗಿ, ಲೇಖನವಾಗಿ, ರಾಗತಾಳವಾಗಿ ಹರಿಕಥೆಯಾಗಿ ಮತ್ತು ಇತ್ತೀಚೆಗಿನ ದಿನಗಳಲ್ಲಿ ಲಕ್ಷ್ಮೀಯಾಗಿ ತನ್ನ ಅನುಗ್ರಹಗಳನ್ನು ಮಂಡಿಸಿ, ತನ್ನೆಡೆಗೆ ಇತರರ ಗಮನವನ್ನೂ ಸೆಳೆದಿದೆ ಮತ್ತು ಅವರಿಗೆ ಮಣೆ ಒದಗಿಸಿದೆ. ಜಿಲ್ಲೆಯಲ್ಲಿ ಇಲ್ಲಿ ಮಾತ್ರ ಬೌದ್ಧಿಕತೆ ತನ್ನ ಪರಂಪರೆ ಮತ್ತು ಹಿತಾಸಕ್ತಿಗಳಿಗಿಂತ

ಒಂದು ಹೆಜ್ಜೆಯಾದರೂ ಮುಂದೆ ಇದ್ದು ತನ್ನ ಸ್ವಾಯತ್ತತೆಯನ್ನೂ ಮಾತ್ರವಲ್ಲ, ಸ್ಥಳೀಯ ಪರಂಪರೆಯನ್ನೂ ಹಿತಾಸಕ್ತಿಗಳನ್ನೂ ಬಹುಮಟ್ಟಿಗೆ ಕಾಪಾಡಲು ಸಮರ್ಥವಾಗಿದೆ. ಇದೊಂದು ಪ್ರಮುಖವಾದ ಬ್ರಾಹ್ಮಣ ನಗರವಾದರೂ ಹಿಂದೂತ್ವದ ನಗರವಾಗಿ ಬೆಳೆಯಲಿಲ್ಲ. ಇಲ್ಲಿಯ ಆಧ್ಯಾತ್ಮಿಕತೆ ಸಾಮಾಜಿಕ ಅವಶ್ಯಕತೆಗಳನ್ನು ಕಡೆಗಣಿಸುವಷ್ಟು ಅಲ್ಲಗಳೆಯುವಷ್ಟು ಕುರುಡಾಗಲಿಲ್ಲ. ಇದರಿಂದಾಗಿ ಅದು ಪರಂಪರೆಯನ್ನು ಕಾಪಾಡಿಕೊಳ್ಳುತ್ತಲೇ ಆಧುನಿಕತೆಯೊಡನೆ ಸಮ್ಮಿಲನಗೊಂಡಿತು. ಅವಶ್ಯಕತೆಗೋಸ್ಕರ ಕೃಷ್ಣನು ಧರಿಸುವ ರೂಪವೇಷಗಳು ಉಡುಪಿಗೂ ಒಂದು ಮಾದರಿಯಾಯ್ತು. ಐತಿಹಾಸಿಕ ಅನಿವಾರ್ಯತೆ ಎಂದುಕೊಂಡರೆ, ಮಣಿಪಾಲವು ಉಡುಪಿ ಅವಲಂಬಿಸಿದ ಧೋರಣೆಯ ನೇರ ಬೆಳವಣಿಗೆಯಾಗಿದೆ.

ಉಡುಪಿಯು ಜಿಲ್ಲೆಯ ಒಂದು ಪ್ರಮುಖ ನಗರವಾಗಿ ಬೆಳೆಯಲು ಹಲವಾರು ಕಾರಣಗಳಿವೆ. ಅವುಗಳಲ್ಲಿ ಬಹುಶಃ ಪ್ರಮುಖವಾದುದು ಮಣಿಪಾಲದ ಬೆಳವಣಿಗೆ. ಅದು ಅಕ್ಕ ಪಕ್ಕದ ಸಾವಿರಾರು ಮಂದಿಗೆ ಉದ್ಯೋಗಗಳನ್ನು ಕಲ್ಪಿಸಿ ಅವರ ಪರಂಪರೆಯ ಹಿನ್ನೆಲೆಯಲ್ಲಿ ಭವಿಷ್ಯವನ್ನು ಕಲ್ಪಿಸುವ ಸಾಧ್ಯತೆಯನ್ನು ಮಂಡಿಸಿತು. ಅದು ಮಾನವೀಯ ಸಂಪನ್ಮೂಲಗಳ ಬೆಳವಣಿಗೆಯನ್ನು ಆಶ್ರಮದಿಂದ ಉದ್ಯಮವನ್ನಾಗಿ ಮತ್ತು ಯೋಗದಿಂದ ವೃತ್ತಿಯನ್ನಾಗಿ ಪರಿವರ್ತಿಸಿತು. ಅದೊಂದು ಬ್ರಾಹ್ಮಣ ಮತ್ತುವೈಶ್ಯತ್ವದ ಸಮಾಗಮವಾಯ್ತು. ಇಲ್ಲಿ ವಿದ್ಯೆಯು ಲಕ್ಷ್ಮಿಯಾಗಿಯೂ, ಮತ್ತು ಲಕ್ಷ್ಮೀಯು ವಿದ್ಯೆಯಾಗಿಯೂ ಒಲಿದಳು. ಇದರಿಂದಾಗಿ ಲಕ್ಷ್ಮಿಸರಸ್ವತಿಯನ್ನು ಬದಿಗೊತ್ತಿದಳು ಎಂದು ವಾದಿಸುವವರಿದ್ದರೂ, ಪರಿಸ್ಥಿತಿಗನುಸಾರವಾಗಿ ವರ್ತಿಸುವನೇ ನಿಜವಾದ ವಿದ್ಯಾವಂತ ಎಂದು ವಾದಿಸುವವರಿಗೇನೂ ಕಮ್ಮಿಯಿಲ್ಲ. ಮಣಿಪಾಲದ ಪ್ರಭಾವದಿಂದ ಉಡುಪಿಯಲ್ಲೊಂದು ಶ್ವೇತಧಾರಿ ಕಾರ್ಮಿಕ ವರ್ಗವು ಸೃಷ್ಟಿಯಾಯ್ತು. ಅವರು ಪ್ರಮುಖವಾಗಿ ಬ್ರಾಹ್ಮಣ ಮತ್ತು ಉಚ್ಚಜಾತಿಯ ಹಿನ್ನೆಲೆಯಿಂದ ಬಂದವರಾಗಿದ್ದರೆ, ಪರಂಪರಾಗತ ಹಿರಿತನದೊಂದಿಗೆ ಹೊಸ ಉದ್ಯೋಗವಕಾಶಗಳ ಹಿರಿತನವನ್ನೂ ಸೇರಿಸಿಕೊಂಡರು. ಆದರೆ ಈ ಹಿರಿತನ ಎಷ್ಟೆಂದರೂ ಮಣಿಪಾಲದ ಸ್ವಾಮಿತ್ವವನ್ನು ಅಲ್ಲಗಳೆಯುವಂತಹದಲ್ಲ. ಒಂದು ಕಡೆಯಿಂದ ಕೆಳಗಿರುವ ಕೃಷ್ಣ ಅವರ ಪ್ರತಿನಿಧಿಯಾದರೆ ಮೇಲಿರುವ ಮಣಿಪಾಲ ಅವರ ಸ್ವಾಮಿಯಾದ. ಇದರಿಂದಾಗಿ ಕನಕದಾಸನ ಮಹಿಮೆ ಬೆಳೆದು, ಮಾನವೀಯತೆಯನ್ನು ಕೊಂಡಾಡುವ, ತನ್ನ ಪ್ರಗತಿಪರತೆಯನ್ನು ಬಹಿರಂಗವಾಗಿ ಪ್ರದರ್ಶಿಸುವ ಮತ್ತು ಜೊತೆಗೇ ತನ್ನ ಹಿರಿತನದ ಬಗ್ಗೆ ಚಾಚೂ ಸಂಶಯವಿಲ್ಲದ ಒಂದು ಬುದ್ಧಿಜೀವಿವರ್ಗ ಉಡುಪಿಯಲ್ಲಿ ಬೇರು ಬಿಟ್ಟಿತು. ಅವರು ಕಾರ್ಮಿಕರನ್ನು ಬಹುಜನರನ್ನು ಬೌದ್ಧಿಕವಾಗಿ ರೂಪಿಸಿ ಅವರಿಗೆ ಕಲಾತ್ಮಕ ರೂಪಗೊಟ್ಟರು. ಸಂಕೇತ ಸೂಚಕಗಳಿಂದ ಸಾವಿರಾರು ವರ್ಷದ ಸಾಮಾಜಿಕ ರಚನೆಗಳನ್ನು ಕೆಡಹಿದರು. ಮೌಖಿಕವಾಗಿ ಕೃಷ್ಣನನ್ನು ಜಾತಿ ಪರಂಪರೆಯೆನ್ನದೆ, ಪ್ರತಿಯೊಬ್ಬರ ಹೃದಯ ಪಟಲದಲ್ಲಿ ಕೂರಿಸಿದರು. ಆದರೆ ನಿಜವಾದ ಶ್ರಮಜೀವಿಗಳು ಇಲ್ಲಿ ಅಗೋಚರರು; ನಿಮ್ನರು. ಇಲ್ಲಿಯ ಶ್ರಮಜೀವಿಗಳು ಕೂಡಾ ತಾವು ಶ್ರಮಜೀವಿಗಳೆನಿಸಲು ಒಪ್ಪಲಿಲ್ಲ. ಬಂಡವಾಲದ ಕೇಂದ್ರಸ್ಥಾನವಾದ ಮಣಿಪಾಲದಲ್ಲಿ ಕೂಡಾ ಕಾಯಕ ಯೋಗಿಗಳ ಸಂಘಟನೆ ಮುಂದೆ ಬರಲಿಲ್ಲ. ಕೇವಲ ಬ್ಯಾಂಕ್ ಮತ್ತು ಇನ್ಸೂರೆನ್ಸ್ ನೌಕರರು ವಿಧೇಯತೆಯಿಂದ ಅದಕ್ಕೊಪ್ಪಿದ್ದರು ಮತ್ತು ಅದರಂತೆ ವರ್ತಿಸಿದರು. ಒಂದು ಕಡೆಯಿಂದ ನೋಡಿದರೆ ಉಡುಪಿಯ ಸಾಂಸ್ಕೃತಿಕ ಮತ್ತು ಮಾನಸಿಕ ವೇದಿಕೆಗಳು ಕನಕದಾಸರಂತೆ ಉನ್ನತ ಶ್ರಮಿಕರನ್ನು ತಮ್ಮ ಲೀಲಾಜಾಲದಲ್ಲಿ ಬಂಧಿಸಿದರೇ ಹೊರತು ಸಾತ್ವಿಕರಂತೆ ಅವರನ್ನು ಕ್ರಿಯಾತ್ಮಕಗೊಳಿಸಲಿಲ್ಲ.

ಉಡುಪಿಯ ಅಕ್ಕಪಕ್ಕದ ಪ್ರದೇಶಗಳಲ್ಲಿ ಉಡುಪಿಯ ಬೌದ್ಧಿಕತೆಯ ಹೊರತು ಅದರ ಆರ್ಥಿಕತೆ ಹಬ್ಬಿತು. 60ನೇ ದಶಕದಲ್ಲಿ ಈ ಪ್ರದೇಶದಲ್ಲಿ ನಿರ್ಮಾಣಗೊಂಡ ಹೈವೇ, ತ್ವರಿತಗತಿಯಲ್ಲಿ ನಿರ್ಮಾಣಗೊಂಡ ಶಾಲಾಕಾಲೇಜುಗಳು, ಮಲ್ಪೆ ಮೀನುಗಾರಿಕಾ ಕೇಂದ್ರ ಮತ್ತು ಕೊಲ್ಲಿ ರಾಷ್ಟ್ರದ ಸೆಳೆತ ಈ ಹಬ್ಬುವಿಕೆಗೆ ನೀರು ಎರೆಯಿತು. ಆರ್ಥಿಕ ಸಫಲತೆಯನ್ನು ಪಡೆದವರು ಕೃಷ್ಣನಿಗೆ ಮೊರೆ ಹೋದರು; ಮಕ್ಕಳನ್ನು ಮಣಿಪಾಲದ ಶಾಲೆಗೆ ಕಳುಹಿಸಿದರು. ತಮ್ಮ

ಸಂಪಾದನೆಯನ್ನು ಅಲ್ಲಿನ ಶಾಖೆಗಳಲ್ಲಿ ಠೇವಣಿ ಇಟ್ಟರು ಮತ್ತು ಉಡುಪಿಯ ಬ್ರಾಹ್ಮಣತ್ವವನ್ನು ವಂದಿಸಿದರು. ಪರಂಪರೆ ಮತ್ತು ಹಿತಾಸಕ್ತಿಗಳ ಕೂಡುವಿಕೆಗೆ ಮತ್ತು ಅವರ ಮುಂದುವರಿದ ಸಮರ್ಪಕತೆಗೆ ಇದಕ್ಕಿಂತ ಬೇರೆ ಒಳ್ಳೆಯ ಉದಾಹರಣೆ ಸಿಗಲಿಕ್ಕಿಲ್ಲ.

ಈ ಎಲ್ಲ ಬೆಳವಣಿಗೆಗಳಾದರೂ ಉಡುಪಿಯ ಗಣ್ಯತನ ಸಾಮಾನ್ಯ ಜನರಿಗೆ ಎಟಕುವಂತಹದಲ್ಲ. ಅದು ಜನಸಾಮಾನ್ಯರ ಹಿಡಿತದ ಹೊರಗಿದೆ; ಮೇಲಿದೆ; ಪಾವಿತ್ರ್ಯವುಳ್ಳದ್ದಾಗಿದೆ. ಅಲ್ಲಿ ಸಾಮಾನ್ಯ ಜನರು ತಮ್ಮ ಭವಿಷ್ಯವನ್ನು ಹುಡುಕುವಂತಿಲ್ಲ. ಎಲ್ಲೋ ಅದರ ಸಾನಿಧ್ಯವಾದರೆ ಅಲ್ಲಿಯ ಸಾಧಕರು ವಿನಯ ಪೂರ್ಣವಾಗಿ ತಮ್ಮ ಶುಭಕಾಮನೆಗಳನ್ನು ಅರ್ಪಿಸಿ ತಾವು ಮೊದಲಿನ ತಮ್ಮ ಅನ್ವೇಷಣೆಗಳಿಂದ ದೂರ ಸರಿದಿದ್ದೇವೆ, ವಿಕಸಿತವಾಗಿದ್ದೇವೆ ಎಂದು ಹೇಳಲು ಹಿಂಜರಿಯುವುದಿಲ್ಲ.

ಆತ್ಮನೇ ಪರಮಾತ್ಮ, ತಮ್ಮ ಊರೇ ವಿಶ್ವ ಎಂದು ಹೇಳುವ ಬುದ್ಧಿಜೀವಿಗಳಿಗೆ ಉಡುಪಿಯಲ್ಲೇನೂ ಕೊರತೆಯಿಲ್ಲ. ಇಷ್ಟರವರೆಗೆ ಊರಿನ ಸ್ವಾಯತ್ತತೆಯ ಹಿನ್ನೆಲೆಯಲ್ಲಿ, ಅದರ ಸಂಕುಚಿತತೆಯಲ್ಲಿ ಈ ಮಾತುಗಳನ್ನಾಡಬಹುದಿತ್ತು. ಮಣಿಪಾಲದ ಬೆಳವಣಿಗೆ ಇಲ್ಲಿಯ ಸಾಮಾಜಿಕ ಸಂಬಂಧಗಳನ್ನು ಕೆಡಹಲಿಲ್ಲ. ಆದರೆ ಕೊಂಕಣ ರೈಲ್ವೇ ಮತ್ತು ಕೊಲ್ಲಿ ರಾಷ್ಟ್ರಗಳಿಗೆ ನಿರ್ಯಾತಗೊಂಡ ಶ್ರಮಿಕರು ಇಲ್ಲಿಯ ಬಂಡವಾಳಶಾಹಿಗಳಾಗಿ ಅವತರಿಸುವಾಗ ಉಡುಪಿಯು ಯಾವ ಸಂತುಲನವನ್ನು ಏರ್ಪಡಿಸುತ್ತದೆಯೆಂದು ಕಾದು ನೋಡಬೇಕಾಗಿದೆ. ಆದರೆ ಅಷ್ಟರವರೆಗಂತೂ ಜಿಲ್ಲೆಯಲ್ಲಿ ಉಡುಪಿಯು ಒಂದು ಸಮನ್ವಯದಿಂದೊಡಗೂಡಿದ, ಸೂಕ್ಷ್ಮತೆಯನ್ನು ಮತ್ತು ಜಟಿಲತೆಯನ್ನು ಗ್ರಹಿಸುವ, ಕಾರ್ಯಗತಗೊಳಿಸದಿದ್ದರೂ ಮಾನವೀಯ ಸಂವೇದನೆಗಳುಳ್ಳ, ಜೀವನಾಕಾಂಕ್ಷೆ, ಸುರುಚಿವುಳ್ಳ ಬಹುರೂಪಿ ನಗರ. ಇಲ್ಲಿಯ ವಿದೇಶಿ ಯುವಕರ ಮೋಟಾರ್ ಬೈಕುಗಳ ನಾದ ಮತ್ತು ಉಡುಪಿ-ಮಣಿಪಾಲದುದ್ದಕ್ಕೂ ಕಾಣಸಿಗುವ ಸುಂದರ ಯುವತಿಯರ ಹಾವಭಾವಗಳು, ಇತ್ತೀಚೆಗೆ ಉಡುಪಿಯ ಬಾರುಗಳಲ್ಲಿ ಕಂಡುಬರುವ ಜನನಿಬಿಡತೆ ಮತ್ತು ಉಚ್ಚಜಾತಿಯವರು ಲೀಲಾಜಾಲವಾಗಿ ಮದ್ಯ, ಮತ್ಸ್ಯ ಮತ್ತು ಮಾಂಸದಲ್ಲಿ ತೋರಿಸುವ ಆಹ್ಲಾದ ಇವು ಯಾವುವೂ ಉಡುಪಿಯ ಹಿರಿಮೆಯನ್ನು ಕಂಗೆಡಿಸಲಾರದಾಗಿವೆ. ಅವು ನಗರದ ಬಹುರೂಪತೆಯನ್ನು ಬಲಗೊಳಿಸುತ್ತಿವೆ.

ಜಿಲ್ಲೆಯ ನಗರ ಮತ್ತು ಪಟ್ಟಣ ಪ್ರದೇಶಗಳ ಬೆಳವಣಿಗೆಯನ್ನು ಏಕಸೂತ್ರದಲ್ಲಿ ಬಂಧಿಸಲು ಅಸಾಧ್ಯ. ಆದರೆ ಎದ್ದು ಕಾಣುವ ವೈರುದ್ಧ್ಯಗಳು ಸ್ಪಷ್ಟವಾಗಿವೆ ಮತ್ತು ಸಂಕ್ಷೇಪವಾಗಿ ಮತ್ತು ಸ್ಥೂಲವಾಗಿ ಹೇಳುವುದಾದರೆ ಈ ವೈರುಧ್ಯಗಳಿಗೆ ಗುಣಾತ್ಮಕ ಮತ್ತು ಕಾರ್ಯಬದ್ಧ ಪರ್ಯಾಯದೊಂದಿಗೆ, ಬಹುಜನರ ಸಂವೇದನೆಗಳನ್ನೂ ಭಾವೋದ್ರೇಕಗಳನ್ನೂ ಕಟ್ಟಿಕೊಂಡು ವೇದಿಕೆಯೊಂದನ್ನು ಸಂಘಟಿಸುವ ಪ್ರಯತ್ನಗಳು ಆದದ್ದು ಅಪರೂಪ.

ವಿನಂತಿ

ಈ ಸಂಚಿಕೆಯೊಂದಿಗೆ ಅರಿವುಬರಹದ ಒಂದು ವರ್ಷದ ಚಂದಾ ಮುಗಿಯುತ್ತದೆ. ಆದುದರಿಂದ ನೀವು ವಾರ್ಷಿಕ ಚಂದಾದಾರರಾಗಿದ್ದಲ್ಲಿ ನಿಮ್ಮ ಚಂದಾವನ್ನು ದಯವಿಟ್ಟು ಮುಂದುವರಿಸಿ. ಅರಿವುಬರಹದ ಬಗ್ಗೆ ನಿಮ್ಮ ಸ್ನೇಹಿತರಿಗೂ ತಿಳಿಸಿ. ಅರಿವುಬರಹ ಬೆಳೆಯಲು ನಿಮ್ಮ ಸಹಕಾರ ಬಹಳ ಅಗತ್ಯ.

ಚಂದಾ ಕಳುಹಿಸಲು ಕೆಳಗಿನ ನಮೂನೆಯನ್ನು ಉಪಯೋಗಿಸಿ

ಹೆಸರು..

ವಿಳಾಸ..

ಊರು..

ಪಿನ್ ....ಜಿಲ್ಲೆ ....

ಒಂದನ್ನು ಗುರುತಿಸಿ

ವೈಯಕ್ತಿಕ ಚಂದಾ		ಸಂಘಸಂಸ್ಥೆಗಳಿಗೆ	
1 ವರ್ಷ	3 ವರ್ಷ	1 ವರ್ಷ	3 ವರ್ಷ
75/-	200/-	150/-	400/-

ಒಂದನ್ನು ಗುರುತಿಸಿ

ಎಂ.ಒ

ಡಿ.ಡಿ. ಚೆಕ್ ಡ್ರಾಫ್ಟ್

ಇವುಗಳಿಗೆ ಕಲೆಕ್ಷನ್ ಚಾರ್ಜ್ ರೂ. 5/- ಸೇರಿಸಿ.

ಅರಿವುಬರಹ ನಾಲ್ಕು ತಿಂಗಳಿಗೊಮ್ಮೆ ಹೊರಬರುವ ಪತ್ರಿಕೆ.

ಬ್ಯಾಂಕ್ ಪಾವತಿಗಳಿಗೆ 5/- ರೂ. ಕಲೆಕ್ಷನ್ ಚಾರ್ಜ್ ಸೇರಿಸಿ.

ಇಲ್ಲಿಗೆ ಕಳುಹಿಸಿ

ಕಾರ್ಯದರ್ಶಿ (ಪತ್ರಿಕೆ ವಿಭಾಗ)
ಅರಿವುಬರಹ
ಕೋಣಾಜೆ (ದ. ಕ.)
ಅಂಚೆ : ಮಂಗಳಗಂಗೋತ್ರಿ - 574 199

ಸಂಪರ್ಕಕ್ಕೆ ವಿಳಾಸ

ಕಾರ್ಯದರ್ಶಿ (ಪತ್ರಿಕೆ ವಿಭಾಗ)
ಅರಿವುಬರಹ ಟ್ರಸ್ಟ್ (ರಿ)
ಕೊಣಾಜೆ (ದ.ಕ.)
ಅಂಚೆ : ಮಂಗಳಗಂಗೋತ್ರಿ - 574 119

PRINTED AT HONNA - PADMA, UDUPI